ಸಿ. ಎನ್. ಮುಕ್ತಾ



894.814 3083
MUK N97
ಗ್ರಂಥ ಸ್ವಾಮ್ಯ ವಿಭಾಗ

# ಮನೋಲಹರಿ

(ಸಾಮಾಜಿಕ ಕಾದಂಬರಿ)

10316 1997

DEPARTMENT OF PUBLIC LIBRARIES ★ STATE CENTRAL LIBRARY, BANGALORE ★
COPY RIGHT

ಸಿ. ಎನ್. ಮುಕ್ತಾ

META ENTERED

ರಾಜಲಕ್ಷ್ಮೀ ಪ್ರಕಾಶನ
ಬಳೇಪೇಟೆ ಚೌಕ, ಬೆಂಗಳೂರು-560 053.

MANOLAHARI—a social novel by Smt. C. N. Muktha,
I Edition : January 1997; Published by Rajalakshmi
Prakashana, Balepet Square, Bangalore-53.

All rights reserved by the Authoress

Pages : 192, Price : Rs. 50/-

ಪ್ರಥಮ ಮುದ್ರಣ : ಜನವರಿ 1997

ಹಕ್ಕುಗಳು : ಲೇಖಕಿಯದು

83354 CR

ಅಧಿಕೃತ ಮಾರಾಟಗಾರರು :
894 814 3018
MUK r197
**ಗೀತಾ ಏಜನ್ಸೀಸ್**
(ಸಗಟು ಪುಸ್ತಕ ವ್ಯಾಪಾರಿಗಳು)
ಬಳೇಪೇಟೆ ಚೌಕ, ಬೆಂಗಳೂರು-53
(ದೂರವಾಣಿ : 2874226)

ಬೆಲೆ : ರೂ. 50/-

ಮುದ್ರಣ :
**ಶ್ರೀ ನಿರ್ಮಲ ಪ್ರಿಂಟರ್ಸ್**
ನಂ. 22, 2ನೇ ಅಡ್ಡರಸ್ತೆ, ಗೆಜ್ಜೆ ಬಶೆಟ್ಟಿ ಗಲ್ಲಿ
ಕಾಟನ್‌ಪೇಟೆ, ಬೆಂಗಳೂರು-560 053

## ಒಂದು ಮಾತು

ಸಂಸಾರದಲ್ಲಿ ಸಾಮರಸ್ಯವಿದ್ದಾಗ ಮಾತ್ರ ಬದುಕು ನಂದನವಾಗುತ್ತದೆ. ದಂಪತಿಗಳು ತಮ್ಮ ಜವಾಬ್ದಾರಿ ಅರಿತು ನಡೆದಾಗ ಮಾತ್ರ ಜೀವನ ಚಕ್ರ ಸುಲಲಿತವಾಗಿ ಉರುಳುತ್ತದೆ. ಅವರು ತಮ್ಮ ಕರ್ತವ್ಯ ಮರೆತಾಗ ಉದ್ಭವಿಸಬಹುದಾದ ಸಮಸ್ಯೆಗಳ ಚಿತ್ರಣ ಇಲ್ಲಿದೆ.

ಕಾದಂಬರಿಗೆ ಕಥಾವಸ್ತು ಒದಗಿಸಿದ ಆತ್ಮೀಯರುಗಳಾದ ರಾಜೇಶ್ವರಿ ಭಾರತಿಗೆ, ಹಸ್ತಪ್ರತಿ ರೂಪದಲ್ಲಿ ಓದಿ ಸಲಹೆ ನೀಡಿದ ಆತ್ಮೀಯರಾದ ಅಮ್ಮ ಮತ್ತು ಎ. ಜಯಮ್ಮ ಇವರಿಗೆ ನಾನು ಆಭಾರಿ.

ನನ್ನ ಕಾದಂಬರಿಗಳನ್ನು ಬೆಳಕಿಗೆ ತರುತ್ತಿರುವ ರಾಜಲಕ್ಷ್ಮೀ ಪ್ರಕಾಶನದ ಮಾಲೀಕರಾದ ಶ್ರೀ ಕೆ. ಆರ್. ಶ್ರೀನಿವಾಸಮೂರ್ತಿ ಇವರಿಗೆ, ನನ್ನ ಕಾದಂಬರಿಗಳ ಪ್ರಕಟಣೆಗೆ ಪ್ರೋತ್ಸಾಹ ನೀಡುತ್ತಿರುವ ಗೀತಾ ಏಜನ್ಸೀಸ್‌ನ ಶ್ರೀ ಕೆ. ರಾಮಚಂದ್ರಯ್ಯ ಇವರಿಗೆ, ಅಂದವಾಗಿ ಮುದ್ರಿಸಿರುವ ಅಚ್ಚುಕೂಟದವರಿಗೆ, ಮುದ್ದಾದ ಮುಖಚಿತ್ರ ಬರೆದಿರುವ ಕಲಾವಿದ ಶ್ರೀ ಮೋನಪ್ಪನವರಿಗೆ ನನ್ನ ಕೃತಜ್ಞತೆಗಳು.

ನನ್ನ ಕಾದಂಬರಿಗಳನ್ನು ಓದಿ, ಪ್ರೋತ್ಸಾಹಿಸುತ್ತಿರುವ ಓದುಗರಿಗೆ ನನ್ನ ನೆನಕೆಗಳು.

ಮೈಸೂರು — ನಿಮ್ಮ

28-9-1996 — ಸಿ. ಎನ್. ಮುಕ್ತಾ.

# ಮನೋಲಹರಿ

(ಸಾಮಾಜಿಕ ಕಾದಂಬರಿ)

"ಅಮೃತ, ಅವರೆಲ್ಲಾ ಬಂದ್ರು" ರೂಮ್‌ನ ಒಳಗೆ ಬಂದು ಪಿಸುಗುಟ್ಟಿದರು ವಿಜಯಮ್ಮ.

ಅಮೃತ ಕನ್ನಡಿಯಲ್ಲೊಮ್ಮೆ ತನ್ನ ಮುಖ ನೋಡಿಕೊಂಡು ಮುಂಗುರುಳು ಸರಿಮಾಡಿಕೊಂಡಳು

"ಅಕ್ಕ, ಹುಡುಗ ಚೆನ್ನಾಗಿದ್ದಾನೆ" ಓಡಿಬಂದು ಹೇಳಿದಳು ಅವಳ ಕೊನೆಯ ತಂಗಿ ಚಂದ್ರಿಕ. ಅಮೃತ ನಕ್ಕು ತಂಗಿಯ ಕೆನ್ನೆ ತಟ್ಟಿದಳು.

ಹೊರಗಡೆ ಅಮೃತಳ ತಂದೆ-ತಾಯಿ ಬಂದವರನ್ನು ಸ್ವಾಗತಿಸುವ ಸಂಭ್ರಮದಲ್ಲಿದ್ದರು. ಹುಡುಗ ಪೋಸ್ಟ್ ಆಫೀಸ್‌ನಲ್ಲಿ ಕೆಲಸದಲ್ಲಿದ್ದ ಬಿ.ಎ. ಓದಿದ್ದ. ಇರುವ ಇಬ್ಬರು ಅಕ್ಕಂದಿರಿಗೆ ಮದುವೆಯಾಗಿತ್ತು. ತಮ್ಮ ಬಿ.ಎಸ್‌ಸಿ. ಓದುತ್ತಿದ್ದ. ಹುಡುಗನ ತಂದೆ ಪೋಸ್ಟ್‌ಮಾಸ್ಟರಾಗಿದ್ದರು. ಸರ್ವೀಸ್‌ನಲ್ಲಿರುವಾಗಲೇ ಹೃದಯಾಘಾತದಿಂದ ಕಣ್ಮುಚ್ಚಿದರು. ಅದೇ ಕೆಲಸ ಮಗನಿಗೆ ದೊರಕಿತ್ತು.

ಅಮೃತ ಬಿ.ಎಸ್‌ಸಿ., ಬಿ.ಇಡಿ. ಮಾಡಿ, ಮೈಸೂರಿನ ಹತ್ತಿರವಿದ್ದ ಹಳ್ಳಿಯೊಂದರ ಸರ್ಕಾರಿ ಪ್ರೌಢಶಾಲೆಯಲ್ಲಿ ಉಪಾಧ್ಯಾಯಿನಿಯಾಗಿದ್ದಳು. ಅವಳೇ ಹಿರಿಯ ಮಗಳು. ಅವಳಿಗೆ ಇಬ್ಬರು ತಮ್ಮಂದಿರೂ, ಇಬ್ಬರು ತಂಗಿಯರೂ ಇದ್ದರು. ಅಮೃತ ಚೆಲುವೆ, ಕಾಲೇಜಿನ ದಿನಗಳಲ್ಲಿ ಶ್ರೀಮಂತ ವ್ಯಕ್ತಿಯೊಬ್ಬನ ಕೈ ಹಿಡಿಯುವ ಕನಸು ಕಂಡಿದ್ದಳು. ಆದರೆ ದಿನಕಳೆದಂತೆ ಆ ಕನಸುಗಳು ಕರಗಿಹೋಗಿದ್ದವು. ಅವಳ ತಂದೆ ಮಧ್ಯಮ ವರ್ಗದವರು.

ಆತ ಪ್ರೈವೇಟ್ ಫರ್ಮ್‌ನಲ್ಲಿ ಗುಮಾಸ್ತರಾಗಿದ್ದರು. ಬರುತ್ತಿದ್ದ ಆದಾಯ ಕಡಿಮೆ. 7 ಜನರ ಸಂಸಾರ ನಿರ್ವಹಣೆ ಕಷ್ಟವಾಗಿತ್ತು.

ಅಮೃತ ಕೆಲಸಕ್ಕೆ ಸೇರಿದ ಮೇಲೆ ಬರುತ್ತಿದ್ದ ಸಂಬಳದಲ್ಲಿ 500 ರೂಪಾಯಿ ಮನೆಗೆ ಕೊಟ್ಟು, ಉಳಿದ ಹಣದಲ್ಲಿ ಸೀರೆ, ಒಡವೆ ಸಂಗ್ರಹಿಸಿದ್ದಳು. ಎರಡು ವರ್ಷಗಳಲ್ಲಿ ಒಂದು ಜೊತೆ ಬಳೆ, ಒಂದು ಜೊತೆ ಓಲೆ, ಉಂಗುರ, ಎರಡೆಳೆಯ ಸರ ಮಾಡಿಸಿಟ್ಟುಕೊಂಡಿದ್ದಳು. ವರ್ಷದಿಂದ ಅವಳ ಮದುವೆಯ ಪ್ರಯತ್ನ ನಡೆದಿತ್ತು. ಆದರೆ ಬಂದವರ್ಯಾರೂ ಅವಳ ಮನಸ್ಸಿಗೆ ಹಿಡಿಸಿರಲಿಲ್ಲ. ಚಂದ್ರಶೇಖರನ ಪ್ರಸ್ತಾಪ ಬಂದಾಗಲೂ ಅವಳಲ್ಲಿ ಉತ್ಸಾಹ ವಿರಲಿಲ್ಲ

"ಹುಡುಗ ನಿನ್ನ ಫೋಟೋ ನೋಡಿ ಒಪ್ಪಿದ್ದಾನೆ. ಜಾತಕ ಕೂಡಿದೆ ಪೋಸ್ಟ್ ಆಫೀಸ್‌ನಲ್ಲಿ ಕೆಲಸದಲ್ಲಿದ್ದಾನೆ. ಅವನ ತಮ್ಮ ಮೈಸೂರಿನಲ್ಲೇ ಚಿಕ್ಕಪ್ಪನ ಮನೆಯಲ್ಲಿದ್ದುಕೊಂಡು ಓದುತ್ತಾ ಇದ್ದಾನೆ. ಹುಡುಗ ಚೆನ್ನಾಗಿದ್ದಾನೆ. ಹೆಚ್ಚಿನ ಜವಾಬ್ದಾರಿ ಏನೂ ಇಲ್ಲ. ಸುಮ್ಮನೆ ಒಪ್ಪಿಕೋ ಎಂದಿದ್ದರು ತಾಯಿ. ಅಮೃತಾಗೆ ಬೇಡ ಎನ್ನಲು ಕಾರಣವಿರಲಿಲ್ಲ. ಡಾಕ್ಟರ್, ಇಂಜಿನಿಯರ್ ವರಗಳಿಗೆ ಸುರಿಯುವ ಶಕ್ತಿ ತಂದೆಗಿರಲಿಲ್ಲ. ಆದ್ದರಿಂದ ಅವಳು ಶೇಖರನ ಮುಂದೆ ಕುಳಿತುಕೊಳ್ಳಲು ಒಪ್ಪಿದ್ದಳು.

ಶೇಖರನ ದೊಡ್ಡಕ್ಕ ಶಾರದಮ್ಮನಿಗೆ ಹುಡುಗಿ ತುಂಬಾ ಒಪ್ಪಿಗೆಯಾದಳು. ವಧು ಪರೀಕ್ಷೆಗೆಂದು ಆಡಂಬರದ ಅಲಂಕಾರ ಮಾಡಿಕೊಂಡಿರಲಿಲ್ಲ. ಸರಳವಾದ ಒಂದು ಸಿಂಥೆಟಿಕ್ ಸೀರೆಯುಟ್ಟು, ಒಪ್ಪುವ ಬ್ಲೌಸ್ ಹಾಕಿದ್ದಳು. ಅವಳ ಸೊಂಪು ಕೂದಲು ನಿಡುಜಡೆಯಾಗಿ ಬೆನ್ನಮೇಲೆ ಮಲಗಿತ್ತು.

"ನಿನ್ನ ಹೆಸರೇನಮ್ಮಾ ?"

"ಅಮೃತ"

"ಏನು ಓದಿದ್ದೀಯಮ್ಮಾ ?"

"ಬಿ.ಎಸ್‌ಸಿ., ಬಿ.ಇಡಿ. ಮಾಡಿ ಹೈಸ್ಕೂಲ್‌ನಲ್ಲಿ ಉಪಾಧ್ಯಾಯಿನಿಯಾಗಿದ್ದೇನೆ."

ಚಂದ್ರಶೇಖರ್ ಅಕ್ಕನ ಪ್ರಶ್ನೆಗಳನ್ನು ಕೇಳಿ ಮುಖ ಕಿವಿಚಿದ. ಹುಡುಗಿಯ ಬಗ್ಗೆ ಈ ವಿವರಗಳನ್ನೆಲ್ಲಾ ಅವನು ಈಗಾಗಲೇ ಅಕ್ಕನಿಗೆ ಹೇಳಿದ್ದ. ಅವಳು ಪುನಃ ಅವುಗಳ ಬಗ್ಗೆಯೇ ಪ್ರಶ್ನಿಸುವುದು ಅವನಿಗೆ ಇಷ್ಟವಾಗಲಿಲ್ಲ.

"ಏನೋ ಶೇಖರ, ಏನಂತೀಯಾ ?" ಭಾವ ನೇರವಾಗಿ ಪ್ರಶ್ನಿಸಿದಾಗ ಅವನಿಗೆ ಉತ್ತರ ಕೊಡಲು ಕಸಿವಿಸಿಯಾಯ್ತು.

"ನನ್ನ ಅಭಿಪ್ರಾಯ ಹೇಳುವುದಕ್ಕಿಂತ ಮೊದಲು ನಾನು ಅವರ ಅಭಿಪ್ರಾಯ ತಿಳಿದುಕೊಳ್ಳಬೇಕು.

"ನಮ್ಮ ಹುಡುಗಿ ಒಪ್ಪಿದ್ದಾಳೆ" ಮಗಳ ಬದಲು ತಾಯಿಯೇ ಉತ್ತರಿಸಿದರು.

"ನಾನು ಅವರ ಜೊತೆ ಮಾತಾಡಬೇಕು."

ವಿಜಯಮ್ಮ ಗಂಡನ ಮುಖ ನೋಡಿದರು. ಸೀತಾರಾಮಯ್ಯ ಮಗಳಿಗೆ "ಹೋಗಮ್ಮ ಅಮೃತ, ಅವರನ್ನು ಮಹಡಿ ಮೇಲಕ್ಕೆ ಕರೆದು ಕೊಂಡು ಹೋಗು" ಎಂದರು.

ಮಹಡಿಯ ಮೇಲೆ ಒಂದು ರೂಮ್, ಒಂದು ಹಾಲ್ ಇತ್ತು ಬೆಳಗ್ಗೆ ಅದನ್ನೆಲ್ಲಾ ಕ್ಲೀನ್ ಮಾಡಿದ್ದರು. ಶೇಖರ ಅಲ್ಲಿದ್ದ ಕುರ್ಚಿಯ ಮೇಲೆ ಕುಳಿತ. ಅಮೃತ ಗೋಡೆಗೆ ಒರಗಿ ನಿಂತಳು.

"ನೀವೂ ಕುಳಿತುಕೊಳ್ಳಿ."

ಅವಳು ಅಲ್ಲಿದ್ದ ಮಂಚದ ತುದಿಯಲ್ಲಿ ಕುಳಿತಳು.

"ನನ್ನನ್ನು ಮದುವೆಯಾಗಲು ನಿಮಗೆ ಒಪ್ಪಿಗೆ ಇದೆಯಾ ?"

"ನೀವು ಒಪ್ಪಿದ ಮೇಲಲ್ಲವೆ ನಾನು ಆ ಪ್ರಶ್ನೆಗೆ ಉತ್ತರಿಸಬೇಕು."

"ನೀವು ನನಗೆ ಮೆಚ್ಚುಗೆಯಾಗಿದ್ದೀರ. ಆದರೆ ನಿಮ್ಮ ಕೈ ಹಿಡಿಯಲು ನನ್ನ ಮನಸ್ಸು ಹಿಂಜರಿಯುತ್ತಿದೆ."

"ಯಾಕೆ ?"

"ನಾನು ಹೆಚ್ಚು ಓದಿಲ್ಲ. ನಿಮಗೆ ಬರುವಷ್ಟು ಸಂಬಳ ನನಗೆ ಬರುವುದಿಲ್ಲ. ನಾನು ನಿಮಗೆ ಅರ್ಹನಲ್ಲವೇನೋಂತ ಅನ್ನಿಸ್ತಿದೆ."

"ಅದನ್ನು ನಿರ್ಧರಿಸಬೇಕಾದವಳು ನಾನು...."

"ನಾನು ಶ್ರೀಮಂತನಲ್ಲ. ನನಗೆ ಯಾವ ಆಸ್ತಿ–ಪಾಸ್ತಿಯೂ ಇಲ್ಲ ಮದುವೆಯ ನಂತರ ನಮ್ಮಮ್ಮ ನನ್ನ ಜೊತೆಯೇ ಇರ್ತಾರೆ. ನನ್ನ ತಮ್ಮನಿಗೆ ಕೆಲಸ ಸಿಗುವವರೆಗೂ ಕೊಂಚ ಕಷ್ಟವಾಗಬಹುದು. ಆಮೇಲೆ....."

"ದಯವಿಟ್ಟು ನೀವು ಹಾಗೆಲ್ಲಾ ಹೇಳಬೇಡಿ. ನಿಮ್ಮ ಮನೆ ಸೇರಿದ ಮೇಲೆ ನಿಮ್ಮವರೆಲ್ಲಾ ನನ್ನವರಾಗಲ್ವಾ ? ನೀವು ಆ ಬಗ್ಗೆ ಅನುಮಾನ ಇಟ್ಟುಕೊಳ್ಳಬೇಡಿ."

ಅವಳ ಮಾತು ಕೇಳಿ ಅವನಿಗೆ ಸಮಾಧಾನವಾಯ್ತು.

"ನನಗೆ ನೀವು ಒಪ್ಪಿಗೆಯಾಗಿದ್ದೀರ. ನಾನು ಕೆಲಸದಲ್ಲಿರುವ ಹುಡುಗಿಯೇ ಬೇಕೂಂತ ಬಯಸಿ ಕೈ ಹಿಡಿಯುತ್ತಿರುವುದರಿಂದ ನಾವು ವರದಕ್ಷಿಣೆ, ವರೋಪಚಾರ ಏನೂ ಡಿಮ್ಯಾಂಡ್ ಮಾಡಲ್ಲ. ಸರಳವಾಗಿ ಮದುವೆ ಮಾಡಿಕೊಟ್ರೆ ಸಾಕು."

"ನಿಮ್ಮ ತಾಯಿ ಸುಮ್ಮನಿರ್ತಾರಾ ?"

"ಖಂಡಿತ ಸುಮ್ಮನಿರ್ತಾರೆ ನಿಮಗೆ ಆ ವಿಚಾರದಲ್ಲಿ ಸಂದೇಹವೇ ಬೇಡ."

ನಾಲ್ಕು ತಿಂಗಳಲ್ಲಿ ಅಮೃತ ಶೇಖರನ ಕೈ ಹಿಡಿದಳು. ಶೇಖರ ಇದ್ದಿದ್ದು ಬೆಂಗಳೂರಿನಲ್ಲಿ. ಆದ್ದರಿಂದ ಅಮೃತಾ ವರ್ಗಕ್ಕಾಗಿ ಒಂದು ವರ್ಷಕಾಲ ಕಾಯಬೇಕಾಯ್ತು.

ಅಮೃತ ಪತಿಗೃಹದಲ್ಲಿ ಸಂಸಾರ ಹೂಡಿದಳು. ಅವಳು ಮೊದಲಿನಿಂದಲೂ ಕೆಲಸದ ವಿಷಯದಲ್ಲಿ ಸೋಮಾರಿ. ಶಾಲೆಯಲ್ಲಿ ಒಳ್ಳೆಯ

'ಮ್ಯಾಥ್ಸ್ ಟೀಚರ್' ಎಂದು ಹೆಸರು ಗಳಿಸಿದ್ದಳು. ಆದರೆ ಮನೆಯಲ್ಲಿ ಆ ಕಡ್ಡಿ ತೆಗೆದು ಈ ಕಡೆಗೆ ಇಡುತ್ತಿರಲಿಲ್ಲ. ತವರಿನಲ್ಲಿದ್ದಾಗಲೂ ವಿಜಯಮ್ಮನೇ ಎಲ್ಲಾ ಕೆಲಸ ಮಾಡುತ್ತಿದ್ದರು. ಹಿರಿಯ ಮಗಳಾಗಿದ್ದರೂ ಅಮೃತ ತಾಯಿಗೆ ಕೆಲಸದ ವಿಚಾರದಲ್ಲಾಗಲಿ, ಮಕ್ಕಳನ್ನು ಸುಧಾರಿಸುವ ವಿಚಾರದಲ್ಲಾಗಲಿ ಸಹಾಯ ಮಾಡಿದವಳಲ್ಲ, 'ಓದುವ ಹುಡುಗಿ. ಅವಳಿಗೆ ಕೆಲಸ ಹೇಳ ಬೇಡ' 'ಪಾಪ, ಹೊರಗೆ ಹೋಗಿ ದುಡಿದು ಬರ್‍ತಾಳೆ. ಮನೆಯಲ್ಲಾದರೂ ಆರಾಮವಾಗಿರಲಿ' ಎಂದುಕೊಂಡು ತಾವೇ ಕಷ್ಟವೋ-ಸುಖವೋ ಎಲ್ಲಾ ಕೆಲಸ ಮಾಡುತ್ತಿದ್ದರು.

ಅಮೃತಳ ಅತ್ತೆ ಸರೋಜಮ್ಮ ಕೂಡ ತುಂಬಾ ಒಳ್ಳೆಯ ಹೆಂಗಸು.

"ನೀನು ಹೊರಗೆ ಹೋಗಿ ದುಡಿದು ಬರುವುದೇ ಸಾಕಮ್ಮ. ನನ್ನ ಕೈ ಕಾಲು ಗಟ್ಟಿಯಾಗಿರುವವರೆಗೂ ನಾನೇ ಮಾಡ್ತೀನಿ. ಆಮೇಲೆ ನೀನು ಮಾಡೋದು ಇದ್ದೇ ಇದೆ" ಎನ್ನುತ್ತಿದ್ದರು.

ಅಮೃತಾಗೆ ಮೊದಲಿನಿಂದಲೂ ಟ್ಯೂಷನ್ಸ್ ಹೇಳಬೇಕೆಂಬ ಆಸೆಯಿತ್ತು. ಮೈಸೂರಿನಲ್ಲಿ ಅವಳ ತಂದೆ-ತಾಯಿ ಅದಕ್ಕೆ ಅವಕಾಶ ಕೊಟ್ಟಿರಲಿಲ್ಲ. ಮನೆಯೂ ಅಷ್ಟೊಂದು ವಿಶಾಲವಾಗಿರಲಿಲ್ಲ. ಬೆಂಗಳೂರಿನಲ್ಲಿ ಶೇಖರನಿದ್ದ ಮನೆ ಹಳೆಯದಾಗಿದ್ದರೂ, ವಿಶಾಲವಾಗಿತ್ತು. ಮನೆಯಲ್ಲಿದ್ದವರ ಸಂಖ್ಯೆಯೂ ಕಡಿಮೆ ಆದ್ದರಿಂದ ಅಮೃತಾ ಮನೆಪಾಠ ಮಾಡುವ ನಿರ್ಧಾರ ಕೈಗೊಂಡಳು. ಆದರೆ ಶೇಖರ್ ಒಪ್ಪಲಿಲ್ಲ.

"ಖಂಡಿತ ಬೇಡ ಅಮೃತ. ನೀನು 'ಮನೆ ಪಾಠ' ಇಟ್ಟುಕೊಂಡರೆ ನಾನು-ನೀನು ಒಟ್ಟಿಗೆ ಇರುವುದಕ್ಕೆ ಆಗುವುದೇ ಇಲ್ಲ. ಸದ್ಯಕ್ಕೆ ನೀನು ಆ ಯೋಚನೆ ಕೈ ಬಿಡು."

"ಮನೆಪಾಠದಿಂದ ಬೇಕಾದಷ್ಟು ಸಂಪಾದಿಸಬಹುದೂರಿ."

"ನೋಡು ಅಮ್ಮು, ಹಣವೊಂದೇ ಜೀವನದಲ್ಲಿ ಪ್ರಧಾನವಲ್ಲ. ಈಗ ನಮಗೇನು ಕಡಿಮೆಯಾಗಿರೋದು ? ಶ್ರೀಮಂತ ಜೀವನ ನಮ್ಮದಲ್ಲದಿರ ಬಹುದು ಆದರೆ ನೆಮ್ಮದಿಯ ಜೀವನ ನಮ್ಮದಾಗಿಲ್ವಾ ?"

ದಾಂಪತ್ಯದ ಬಿಸಿ ಇನ್ನೂ ಆರಿರಲಿಲ್ಲವಾಗಿ ಅಮೃತ ಗಂಡನ ಪ್ರೀತಿಯ ಮಾತಿಗೆ ಮಣಿದಳು. ಸಾಮಾನ್ಯವಾಗಿ ಸಾಯಂಕಾಲ ಅವರಿಬ್ಬರೂ ತಿರುಗಾಡಲು ಹೋಗುತ್ತಿದ್ದರು. ಶೇಖರ್ ಅವಳಿಗೆ ಪ್ರೀತಿಯಿಂದ ಎರಡು ಮೊಳ ಹೂವನ್ನೋ ಪಾನಿಪೂರಿಯನ್ನೋ ಕೊಡಿಸ್ತಿದ್ದ. ಅತ್ತೆ ರುಚಿರುಚಿ ಯಾಗಿ ಅಡುಗೆ–ತಿಂಡಿ ಮಾಡಿ ಬಡಿಸುತ್ತಿದ್ದರು. ಕೆಲಸದವಳು ಉಳಿದ ಕೆಲಸ ಮಾಡುತ್ತಿದ್ದಳು. ಒಟ್ಟಿನಲ್ಲಿ ಅಮೃತ ನೆಮ್ಮದಿಯಿಂದ ಇದ್ದಳು.

ಒಂದು ಭಾನುವಾರ ಬೆಳಿಗ್ಗೆ ಅಮೃತಳ ಚಿಕ್ಕಮ್ಮ–ಚಿಕ್ಕಪ್ಪ ಅವರ ಮನೆಗೆ ಬಂದರು. ಅಮೃತ ಅವರನ್ನು ಸಂಭ್ರಮದಿಂದ ಸ್ವಾಗತಿಸಿದಳು.

"ನಮ್ಮ ಮಂಜುಗೆ ಮದುವೆ ಗೊತ್ತಾಯಿತು. ಅಮೃತ ಮುಂದಿನ ತಿಂಗಳು 14ನೇ ತಾರೀಕು ಮೈಸೂರಿನಲ್ಲೇ ಮದುವೆ. ನೀನು ಖಂಡಿತಾ ಬರಬೇಕು."

"ಆಗಲಿ ಚಿಕ್ಕಮ್ಮ, ಖಂಡಿತ ಬರ್ತೀನಿ. ಹುಡುಗಂಗೆ ಏನು ಕೆಲಸ ?"

"ಹುಡುಗ ಡಾಕ್ಟರ್ ನಮ್ಮ ಬೀಗರಿಗೆ 3 ಜನ ಹೆಣ್ಣುಮಕ್ಕಳು. ಒಬ್ಬನೇ ಗಂಡುಮಗ. ಹೆಣ್ಣುಮಕ್ಕಳಿಗೆಲ್ಲಾ ಮದುವೆಯಾಗಿದೆ. ಇವರಿಗೆ 5–6 ಮನೆಗಳಿವೆ. ನಮ್ಮ ಅಳಿಯ ಕ್ಲಿನಿಕ್ ಇಟ್ಟಿದ್ದಾರೆ ಸಂಪಾದನೆ ಚೆನ್ನಾಗಿದೆಯಂತೆ. ಒಟ್ಟಿನಲ್ಲಿ ನಮ್ಮ ಮಂಜುಳ ತುಂಬಾ ಪುಣ್ಯ ಮಾಡಿ ದ್ದಳು."

"ಅಮೃತಳ ಮನಸ್ಸು ಅಸೂಯೆಯಿಂದ ತಳಮಳಿಸಿತು. ಆದರವಳು ಅದನ್ನು ತೋರಿಸಿಕೊಳ್ಳದೆ ಸಂತಸ ವ್ಯಕ್ತಪಡಿಸಿದಳು.

"ನಮ್ಮ ಮಂಜು ಇದೇ ಊರಿಗೇ ಬರ್ತಾಳಮ್ಮ ವಿಜಯನಗರದಲ್ಲಿ ಮನೆ. ನೀನು ಆಗಾಗ್ಗೆ ವಿಚಾರಿಸಿಕೊಳ್ತಿರಬೇಕು."

ಅಮೃತ ನಗುನಗುತ್ತಾ ಅವರನ್ನು ಬೀಳ್ಕೊಟ್ಟಳು. ಮಂಜುಳೆಯ ನೆನಪಾದೊಡನೆ ಅವಳ ಹೃದಯ ನಿಟ್ಟುಸಿರು ಬಿಟ್ಟಿತು.

ಮಂಜುಳ ಅಮೃತಳ ಚಿಕ್ಕಮ್ಮ ಚಿಕ್ಕಪ್ಪರ ಒಬ್ಬಳೇ ಮಗಳು. ಅವಳ ತಂದೆ ಹೆಸರಾಂತ ಡಾಕ್ಟರ್. ಹೇರಳವಾಗಿ ಸಂಪಾದಿಸಿದ್ದರು. ಮಂಜುಳ ಚಿನ್ನದ ಚಮಚೆ ಬಾಯಲ್ಲಿಟ್ಟುಕೊಂಡೇ ಹುಟ್ಟಿದಳೆನ್ನಬೇಕು. ಮೊದಲಿಂದಲೂ ಅಮೃತ ತನ್ನ ಓರಗೆಯವಳಾದ ಮಂಜುಳಳ ಅದೃಷ್ಟ ಕಂಡು ಒಳಗೊಳಗೇ ಕೊರಗುತ್ತಿದ್ದಳು. ಆದರೆ ಮಂಜುಳಾಗೆ ಅದರ ಅರಿವಿರಲಿಲ್ಲ. ಇಬ್ಬರೂ ಒಂದೇ ಕ್ಲಾಸು, ಒಂದೇ ಕಾಲೇಜು ಆಗಿದ್ದರಿಂದ ಅಮೃತಳ ಸೆರಗು ಹಿಡಿದು ಕೊಂಡೇ ಓಡಾಡುತ್ತಿದ್ದಳು. ಶನಿವಾರ, ಭಾನುವಾರಗಳಲ್ಲಿ ಅಮೃತ ಅವರ ಮನೆಯಲ್ಲಿದ್ದುಕೊಂಡು ಸಿನಿಮಾ-ನಾಟಕಗಳಿಗೆ ಹೋಗುತ್ತಿದ್ದಳು. ಅವರ ಜೊತೆ ಊರೂರು ಸುತ್ತುತ್ತಿದ್ದಳು. ಮಂಜುಳೆಯ ಬೆಲೆಬಾಳುವ ಸೀರೆ-ಒಡವೆಗಳನ್ನು ಧರಿಸುತ್ತಿದ್ದಳು. ಅವರ ಮನೆಯ ವೈಭವ ನೋಡಿದ ಮೇಲೆ ಅಮೃತಾಗೆ ಮೋಹ ಹುಟ್ಟಿತ್ತು.

ಮಂಜುಳ ಚೆಲುವೆ. ಆದರೆ ಸರಳವಾಗಿ ಅಲಂಕರಿಸಿಕೊಳ್ಳುತ್ತಿದ್ದಳು. 23 ವರ್ಷದ ತರುಣಿಯಾಗಿದ್ದರೂ ಮಗುವಿನ ಮುಗ್ಧತೆ ಅವಳ ಮುಖ ದಲ್ಲಿತ್ತು. ಜೊತೆಗೆ ತುಂಬಾ ಮೃದು ಸ್ವಭಾವದ ಹುಡುಗಿ. ಗಟ್ಟಿಯಾಗಿ ಮಾತನಾಡೇ ಅರಿಯಳು. ಅವಳು ಬಿ ಎಸ್ ಸಿ.ಯಾಗುತ್ತಿದ್ದಂತೆ ಓದು ನಿಲ್ಲಿಸಿ ದ್ದಳು. ಆಗಲಿಂದ ವರಾನ್ವೇಷಣೆ ನಡೆದಿತ್ತು.

ಮಂಜುಳಳ ಅದೃಷ್ಟ ಕಂಡು ಅಮೃತಳ ಎದೆ ಅಸಹನೆಯಿಂದ ಕುದಿ ಯಿತು. ಮನಸ್ಸು ತನ್ನನ್ನು ಅವಳ ಜೊತೆ ಹೋಲಿಸಿಕೊಂಡಿತು.

ಮಂಜುಳ ಶ್ರೀಮಂತರ ಮನೆಯಲ್ಲಿ ಹುಟ್ಟಿ, ಬೆಳೆದು, ಶ್ರೀಮಂತರ ಮನೆಯನ್ನೇ ಸೇರುತ್ತಿದ್ದಾಳೆ. ಆದರೆ ನಾನು ಹುಟ್ಟಿದ್ದೂ ಬಡವರ ಮನೆ ಯಲ್ಲಿ, ಬಾಳ್ತಿರೋದು ಕೂಡ ಬಡವರ ಮನೆಯಲ್ಲಿ. ಶ್ರೀಮಂತನೊಬ್ಬನ ಕೈ ಹಿಡಿದಿದ್ದಿದ್ರೆ ಸುಖವಾಗಿರಬಹುದಿತ್ತು. ಅವಳು ಕಾರ್‌ನಲ್ಲೇ ತಿರುಗಾಡ್ತಾಳೆ. ಆದರೆ ನನ್ನ ಅದೃಷ್ಟಕ್ಕೆ ಸ್ಕೂಟರ್ ಕೂಡ ಇಲ್ಲ."

ಅಂದೇ ರಾತ್ರಿ ಅವಳು ಗಂಡನಿಗೆ ಹೇಳಿದಳು "ರೀ ನೀವು ಆದಷ್ಟು ಬೇಗ ಸ್ಕೂಟರ್ ತೆಗೆದುಕೊಳ್ಳಿ."

"ಈಗ ಸ್ಕೂಟರ್ ಯಾಕೆ ಅಮ್ಮ?"

"ಬಸ್‌ನಲ್ಲಿ ಓಡಾಡೀನನಗೆ ಸಾಕಾಗಿ ಹೋಗಿದೆ. ನನ್ನ ಆಯುಷ್ಯ ವೆಲ್ಲಾ ಬಸ್ಸ್ಟಾಪ್‌ನಲ್ಲೇ ಕಳೆದುಹೋಗುತ್ತೇನೋ ಅನ್ನಿಸುತ್ತೆ. 'ಬೆಂಗಳೂರಿನಲ್ಲಿ ಓಡಾಟಕ್ಕೆ ಒಂದು ವೆಹಿಕಲ್ ತುಂಬಾ ಅಗತ್ಯ'. ನೀವು ಸ್ಕೂಟರ್ ತೆಗೆದುಕೊಳ್ಳುವ ಯೋಚನೆ ಮಾಡಿ."

"ಅಷ್ಟೊಂದು ಹಣ ಈಗ ನನ್ನ ಹತ್ತಿರ ಇಲ್ಲವಲ್ಲೇ?"

"ಎಲ್ಲಾದ್ರೂ ಲೋನ್ ತೆಗೆದುಕೊಳ್ಳಿ. ಕಂತಿನಲ್ಲಿ ಹಣ ಕಟ್ಟುವುದು ಕಷ್ಟವಾಗುವುದಿಲ್ಲ."

ಅಮೃತಳ ಹಠಕ್ಕೆ ಅವನು ಮಣಿದು ಸೊಸೈಟಿಯೊಂದರಿಂದ 15,000 ರೂ. ಸಾಲ ತೆಗೆದುಕೊಂಡ. ಅಮೃತ ಶಾಲೆಯಲ್ಲಿ ತಾನು ಹಾಕಿದ್ದ 10,000 ರೂ ಚೀಟಿ ತೆಗೆದುಕೊಟ್ಟಳು. ಅಂತೂ ಇಂತೂ ಹಣ ಹೊಂದಿಸಿ ಶೇಖರ್ ತಿಂಗಳಲ್ಲಿ ಸ್ಕೂಟರ್ ಕೊಂಡುಕೊಂಡ. ಅಮೃತಳ ಆಸೆ ನೆರವೇರಿತು. ಮಗ ಸೊಸೆ ಸ್ಕೂಟರ್‌ನಲ್ಲಿ ತಿರುಗಾಡುವುದನ್ನು ನೋಡಿ ಸರೋಜಮ್ಮ ಹಿರಿಹಿರಿ ಹಿಗ್ಗಿದರು.

o o o o

ಮಂಜುಳಳ ಮದುವೆ ತುಂಬಾ ವೈಭವದಿಂದ ನಡೆಯಿತು. ಅವಳ ಗಂಡ ಮೋಹನ್ ನೋಡಲು ತುಂಬಾ ಸ್ಮಾರ್ಟಾಗಿದ್ದ. ಮದುವೆ ಮನೆಯಲ್ಲೆಲ್ಲಾ ಅಮೃತಳದೇ ಓಡಾಟ. ಪಾದರಸದಂತೆ ಓಡಾಡಿ, ಗಂಡಿನ ಮನೆಯವರೆಲ್ಲರ ಮೆಚ್ಚುಗೆ ಗಳಿಸಿದಳು. ಅವಳ ಚಿಕ್ಕಮ್ಮ ಒಂದು ಪ್ರಿಂಟೆಡ್ ಸಿಲ್ಕ್ ಸೀರೆ ಉಡುಗೊರೆ ನೀಡಿ ಕಳುಹಿಸಿದರು.

ಮದುವೆ ಮುಗಿಸಿಕೊಂಡು ಅಮೃತಾ ಬೆಂಗಳೂರಿಗೆ ಬಂದು ಹದಿನೈದು ದಿನಗಳಾಗಿದ್ದವು. ಒಂದು ದಿನ ಅವಳು ಶಾಲೆಯಲ್ಲಿದ್ದಾಗ ಅವಳಿಗೆ ಮಂಜುಳಳಿಂದ ಫೋನ್ ಬಂತು.

"ಈ ಭಾನುವಾರ ನೀನು ನಿನ್ನ ಗಂಡ ನಮ್ಮನೆಗೆ ಬರಬೇಕು."

"ಏನು ವಿಶೇಷ ?"

"ಭಾನುವಾರ ನಮ್ಮನೆಯಲ್ಲಿ ಸತ್ಯನಾರಾಯಣ ಪೂಜೆ ಇಟ್ಟುಕೊಂಡಿದ್ದೇವೆ. ನಾನೇ ಬಂದು ಕರೆಯಲು ನನಗೆ ಮನೆ ಗೊತ್ತಿಲ್ಲ. ಖಂಡಿತಾ ಬಾ"

"ಬರ್ತೀನಿ. 'ಹನಿಮೂನ್'ಗೆ ಹೋಗಲಿಲ್ವಾ ?"

"ನಮ್ಮ ಅತ್ತಿಗೆಯವರು ಮುಂದಿನವಾರ ಊರಿಗೆ ಹೋಗ್ತಾರೆ. ಅವರು ಹೋದಮೇಲೆ 'ನಾವು ಸಿಂಗಪೂರ್'ಗೆ ಹೋಗಿ ಬರ್ತೇವೆ."

"ಸಿಂಗಪೂರ್‌ಗಾ ?"

"ಹುಂ. ಭಾನುವಾರ ಬರೋದು ಮರೆಯಬೇಡ."

ಅಮೃತಾ ಹೂಂಗುಟ್ಟಿದಳು. ಶೇಖರ್‌ಗೆ ವಿಷಯ ತಿಳಿಸಿದಾಗ ಅವನು ಗೊಣಗಾಡಿದ. "ಅವರೆಲ್ಲಾ ದೊಡ್ಡ ಮನುಷ್ಯರು ಕಣೆ, ನಾನಲ್ಲಿಗೆ ಬರಲ್ಲ."

"ಹಾಗೇನೂ ಇಲ್ಲಾರಿ. ಶ್ರೀಮಂತರಾದರೂ ಅವರಿಗೆ ಸ್ವಲ್ಪಾನೂ ಜಂಬವಿಲ್ಲ."

"ಮದುವೆಗೆ ಹೋಗಿ ಬಂದಿದ್ದಾಯಿತಲ್ಲಾ ? ಪೂಜೆ-ಗೀಜೆಗೆಲ್ಲಾ ಯಾಕೆ?"

"ಸತ್ಯನಾರಾಯಣ ಪೂಜೆಗೆ ಕರೆದರೆ ಹೋಗದೆ ಇರಬಾರದು. ಹೋಗಿ ಬಾಪ್ಪ" ಎಂದರು ಸರೋಜಮ್ಮ. ಶೇಖರ್ ಒಪ್ಪಲೇಬೇಕಾಯ್ತು.

ಭಾನುವಾರ ಬೆಳಗ್ಗೆ ಅಮೃತ ಕೊಂಚ ಎಚ್ಚರಿಕೆಯಿಂದ ಅಲಂಕರಿಸಿಕೊಂಡಳು. ಸಣ್ಣ ಜರಿಯಂಚಿದ್ದ ಟೊಮೊಟೋ ಕೆಂಪಿನ ರೇಷ್ಮೆ ಸೀರೆ ಉಟ್ಟು ಉದ್ದ ತೋಳಿನ ಬ್ಲೌಸ್ ಧರಿಸಿದಳು. ಕೃತಕ ಕೆಂಪಿನ ಸೆಟ್ ಧರಿಸಿ, ತನ್ನ ಕೂದಲನ್ನು ಆಧುನಿಕ ರೀತಿಯಲ್ಲಿ ತುರುಬು ಕಟ್ಟಿದಳು.

ಹೊರಡುವ ಮೊದಲು ಅವಳು ಗಂಡನಿಗೆ ಎಚ್ಚರಿಕೆ ನೀಡಿದಳು. "ಅಲ್ಲಿ ಅವರು ಮಾಡುವ ಉಪಚಾರ ಕಂಡು ಬೆರಗಾಗಿ ತೆಪ್ಪಗೆ ಕುಳಿತುಕೊಂಡು

ಬಿಡಬೇಡಿ. ವಾಪಸ್ಸು ಬರುವಾಗ ಅವರಿಬ್ಬರನ್ನೂ ನಮ್ಮನೆಗೊಂದು ದಿನ ಊಟಕ್ಕೆ ಕರೆಯಿರಿ."

ಶೇಖರ್ ಸುಮ್ಮನೆ ಹೂಂಗುಟ್ಟಿದ. ಅವನಿಗೆ ಶ್ರೀಮಂತರೆಂದರೆ ಅಲರ್ಜಿ ಮಂಜುಳ ಸರಳ ವ್ಯಕ್ತಿಯಂತೆ ಕಂಡರೂ ಮೋಹನ ಅಂತಹವನಲ್ಲವೆಂದು ಅವನ ಮನಸ್ಸಿಗೆ ಹೊಳೆದಿತ್ತು.

ಅವರು ಮಂಜುಳ ಮನೆ ತಲುಪಿದಾಗ ಒಂಭತ್ತು ಗಂಟೆಯಾಗಿತ್ತು. ಆ ಮನೆಯ ಅಂದ-ಚೆಂದ ನೋಡಿ ಮಂಜುಳ ಬೆರಗಾದಳು. ವಿಶಾಲವಾದ ಕಾಂಪೌಂಡ್‌ನಲ್ಲಿದ್ದ ಆ ಮನೆ ತಿಳಿಹಸಿರು ಬಣ್ಣದಿಂದ ನವವಧುವಿನಂತೆ ಶೋಭಿಸುತ್ತಿತ್ತು. ಸುಂದರವಾದ ತೋಟ ಮನಸೆಳೆಯುವಂತಿತ್ತು.

ಚಿಕ್ಕದಾದ ವೆರಾಂಡ, ವಿಶಾಲವಾದ ಹಾಲ್, ಹಾಲ್‌ನ ಇಕ್ಕೆಲಗಳಲ್ಲಿ ನಾಲ್ಕು ರೂಮುಗಳು, ಹಾಲ್‌ದಾಟಿದೊಡನೆ ದೊಡ್ಡ ಹಜಾರ, ಅಲ್ಲಿ ಅಡಿಗೆ ಮನೆ, ದೇವರ ಮನೆ, ಊಟದ ಮನೆ, ಒಂದುಪಕ್ಕದಲ್ಲಿ ಮಹಡಿಗೆಹೋಗಲು ಮೆಟ್ಟಿಲುಗಳು. ಹಜಾರ ದಾಟಿದೊಡನೆ ದೊಡ್ಡ ಅಂಗಳ, ನಾಲ್ಕು ಬಚ್ಚಲು ಮನೆ, ಶೌಚಾಲಯಗಳು ಇದ್ದವು. ಮಹಡಿಯ ಮೇಲೆ ಕೂಡ ದೊಡ್ಡ ಹಾಲ್, ನಾಲ್ಕು ರೂಮುಗಳಿದ್ದವು. ಪ್ರತಿ ರೂಂನಲ್ಲಿಯೂ, ಮಂಚ, ಫ್ಯಾನು, ಗೋಡೆ ಬೀರುಗಳು, ಕೆಳಗೊಂದು ಫೋನ್, ಮೇಲೊಂದು ಫೋನ್ ಇದ್ದವು. ಮನೆಯ ಪಕ್ಕದಲ್ಲಿ ಗ್ಯಾರೇಜ್ ಇತ್ತು.

ದೇವರ ಪೂಜೆಗೆ ಕುಳಿತಿದ್ದ ಮಂಜುಳ ಅಡಿಯಿಂದ ಮುಡಿಯವರೆಗೆ ಒಡವೆ ಧರಿಸಿ ಭಾರೀ ಕಾಂಜೀವರಂ ಸೀರೆ ಉಟ್ಟಿದ್ದಳು. ಮೋಹನ ಜರಿಯಂಚಿನ ಮೈಸೂರ್‌ಸಿಲ್ಕ್ ಪಂಚೆ, ಶಲ್ಲಿ ಧರಿಸಿ ಚೆನ್ನಾಗಿ ಕಾಣಿಸುತ್ತಿದ್ದ. ಅವನ ಹಣೆಯಲ್ಲಿದ್ದ ಕುಂಕುಮ ಅವನ ಅಂದಕ್ಕೆ ಮೆರಗು ನೀಡಿತ್ತು. ಮೋಹನನ ಅಕ್ಕಂದಿರೂ ಕೂಡ ಮೈತುಂಬಾ ಒಡವೆಧರಿಸಿ, ಒಳ್ಳೆಯ ರೇಷ್ಮೆ, ಮೈಸೂರು ಸಿಲ್ಕ್ ಸೀರೆಗಳನ್ನುಟ್ಟು ಓಡಾಡುತ್ತಿದ್ದರು.

ತುಂಬಾ ಓಡಾಡಬೇಕೆಂದುಕೊಂಡು ಬಂದಿದ್ದ ಅನ್ನಿತ ಆಯಾಸವಾದವ ಳಂತೆ ಒಂದು ಕಡೆ ಮೌನವಾಗಿ ಕುಳಿತಳು. ಅವಳಲ್ಲಿ ಪೂಜೆ ನೋಡುವ

ಉತ್ಸಾಹ ಉಳಿಯಲಿಲ್ಲ. ಮನ ತನ್ನನ್ನು ಮಂಜುಳಳ ಜೊತೆ ಹೋಲಿಸಿ ಕೊಂಡು ಕೊರಗಿತು. ಮನೆಗೆ ಹೊರಡುವಾಗ ಬಾಯಿಮಾತಿಗೂ ಅವಳು ಅವರನ್ನು ತಮ್ಮ ಮನೆಗೆ ಕರೆಯಲಿಲ್ಲ. ಕೈ ತೊಳೆಯುವಾಗ ಗಂಡನಿಗೆ ಕಟ್ಟಪ್ಪಣೆ ಮಾಡಿದಳು. "ನೀವು ಮಂಜುಳ, ಅವಳ ಗಂಡನ್ನ ನಮ್ಮ ಮನೆಗೆ ಕರೆಯಬೇಡಿ. ಕೈತೋರಿಸಿ ಅವಲಕ್ಷಣ ಅನ್ನಿಸಿಕೊಳ್ಳುವುದಕ್ಕೆ ನನಗಿಷ್ಟವಿಲ್ಲ."

ಮನೆ ತಲುಪುತ್ತಿದ್ದಂತೆ ಶೇಖರ್ ಕೇಳಿದ. "ಯಾಕೆ ನೀನು ಅವರಿಬ್ಬ ರನ್ನು ನಮ್ಮ ಮನೆಗೆ ಕರೆಯಲಿಲ್ಲ ?"

"ಈ ಮನೆಯಲ್ಲಿ ಏನಿದೇಂತ ಅವರನ್ನು ಕರೆಯಬೇಕು ? ಕೂತ್ಕೊಳ್ಳಿ ಅಂತ ಹೇಳುವುದಕ್ಕೆ ಸರಿಯಾದ ಎರಡು ಕುರ್ಚಿಗಳಿಲ್ಲ. ಬಣ್ಣ-ಸುಣ್ಣ ಕಾಣದ ಈ ಮನೆ ನೋಡುವುದಕ್ಕೆ ಅವರು ಯಾಕೆ ಬರಬೇಕು ? ಅವರುಗಳಿಗೆ ನೆಲದಮೇಲೆ ಕುಳಿತು ಊಟಮಾಡಿ ಅಭ್ಯಾಸವಿಲ್ಲ ನಮ್ಮನೆಯಲ್ಲಿ ಡೈನಿಂಗ್ ಹಾಲೂ ಇಲ್ಲ. ಡೈನಿಂಗ್ ಸೆಟ್ಟೂ ಇಲ್ಲ. ಯಾರನ್ನಾದ್ರೂ ಮನೆಗೆ ಕರೆಯುವುದಕ್ಕೇ ಬೇಜಾರಾಗುತ್ತೆ."

"ಅವರಿಗೆ ಹೋಲಿಸಿಕೊಂಡು ನೀನು ಬೇಜಾರು ಮಾಡಿಕೊಂಡ್ರೆ ನಾನೇನು ಮಾಡಲಿ ಅಮ್ಮ ? ಅದು ಅವರವರ ಯೋಗ. ಇಬ್ಬರೂ ಶ್ರೀಮಂತರು, ಮನೇನ್ನ ಬೇಕಾದ ಹಾಗೆ ಅಲಂಕರಿಸಿದ್ದಾರೆ ಬೇಕಾದ ಸಾಮಾನು ಇಟ್ಕೊಂಡಿದ್ದಾರೆ ಅಪ್ಪನ ಆಸ್ತಿ ಇದೆ. ನಾವಿಬ್ರೂ ಬಡವರು 'ಶ್ರೀಮಂತಿಕೇನ್ನ' ಬಾ ಅಂತ ಕರೆದರೆ ಎಲ್ಲಿಂದ ಬರತ್ತೆ ನೀನೇ ಹೇಳು" ಎಂದು ತಾಳ್ಮೆಯಿಂದಲೇ ಕೇಳಿದ ಶೇಖರ್.

"ನೋಡಿ, ನಿಮ್ಮ ಡಿಪಾರ್ಟ್‌ಮೆಂಟ್‌ನಲ್ಲಿ ಪ್ರಮೋಷನ್ ತುಂಬಾ ನಿಧಾನ ನೀವು ಬೇರೆ ರೀತಿ ಹಣ ಸಂಪಾದಿಸುವುದಕ್ಕೂ ಸಾಧ್ಯವಿಲ್ಲ. ನಾನು ಟ್ಯೂಷನ್ಸ್ ಹೇಳಿ ಸಂಪಾದಿಸ್ತೀನಿ ಅಂತ ಹೇಳಿದ್ರೂ ನೀವು ಒಪ್ತಿಲ್ಲವಲ್ಲಾ ?"

"ನಿನ್ನಿಷ್ಟ ಬಂದ ಹಾಗೆ ಮಾಡು. ಊಟ ಜಾಸ್ತಿಯಾಯ್ತು ನಂಗೆ ನಿದ್ರೆ ಬರ್‍ತಾಯಿದೆ" ಎಂದು ಮಲಗಿದ ಶೇಖರ್.

ಸಿಂಗಪೂರ್ ಪ್ರವಾಸ ಮುಗಿಸಿಕೊಂಡು ಬಂದ ಮಂಜುಳೆಯ ಮನಸ್ಸು ಮಾತ್ರ ಉಲ್ಲಾಸದಿಂದಿರಲಿಲ್ಲ. ಪ್ರವಾಸ ಚೆನ್ನಾಗಿ ನಡೆದಿತ್ತು. ಆದರೆ ಗಂಡನ ಸಾಮೀಪ್ಯದಿಂದ ಅವನ ಸ್ವಭಾವದ ಪರಿಚಯವಾಗಿತ್ತು. 'ನಾನು ಮೋಹನನಿಗೆ ತಕ್ಕವಳಲ್ಲ' ಎಂಬ ಅಳುಕೂ ಮನದಲ್ಲಿ ಮೂಡಿತ್ತು. ಮೋಹನ್ ಚೆಲುವ, ರಸಿಕ. ಜೊತೆಗೆ ಅಲಂಕಾರ ಪ್ರಿಯ. ಹೆಂಡತಿ ಅತ್ಯಾಧುನಿಕ ರೀತಿಯಲ್ಲಿ ಅಲಂಕರಿಸಿಕೊಳ್ಳಬೇಕೆಂಬ ಹಂಬಲ ಅವನಿಗಿತ್ತು. ಸಿಂಗಪೂರ್‌ಗೆ ಹೊರಡುವ ಮೊದಲು ಅವನು ಕೇಳಿದ್ದ. "ನೀನು ಚೂಡಿದಾರ್ ಹಾಕಲ್ವಾ ?"

"ಹಾಕ್ತೀನಿ. ಮದುವೆಯಾದ ಮೇಲೆ ಅವೆಲ್ಲಾ ಬೇಡಾಂತ ಸುಮ್ನಿದ್ದೆ."

ಅಂದೇ ಸಾಯಂಕಾಲ ಅವನು ಅವಳಿಗೆ ಆರು ಸೆಟ್ ಚೂಡಿದಾರ್, 2 ಸೆಟ್ ನೈಟಿ. ಒಂದು ದೊಡ್ಡ ಬಾಕ್ಸ್‌ನಲ್ಲಿ ನಾನಾ ರೀತಿಯ ಪ್ರಸಾಧನ ತಂದಿದ್ದ.

"ನೋಡಿ, ನಿಮಗೋಸ್ಕರ ಚೂಡಿದಾರ್, ನೈಟಿ ಹಾಕ್ತೀನಿ. ಆದರೆ ನನಗೆ ಈ ಮೇಕಪ್ ಸಾಮಾನುಗಳು ಬೇಡ. ನನಗೆ ಅವುಗಳನ್ನು ಉಪಯೋಗಿಸಿ ಅಭ್ಯಾಸವಿಲ್ಲ."

"ನಾನು ಅಭ್ಯಾಸಮಾಡಿಸ್ತೀನಿ" ಎಂದಿದ್ದ ಅವನು. ಅವಳು ಅವನಿಗಾಗಿ ಕೊಂಚ ಕಲಿತಿದ್ದಳು. ಪ್ರವಾಸದಲ್ಲಿದ್ದಾಗ ಅವನು ಅವಳ ಕೂದಲನ್ನು 'ಬಾಬ್' ಮಾಡಿಸಬೇಕೆಂದು ಯೋಚಿಸಿದ್ದ. ಆಗವಳು ಪ್ರತಿಭಟಿಸಿದ್ದಳು.

ಸಿಂಗಪೂರ್ ಪ್ರವಾಸ ಹೊಸ ಅನುಭವ ನೀಡಿದ್ದರೂ, ಮೋಹನ್ ಕೆಲವುಬಾರಿ ಮುಖಕ್ಕೆ ಹೊಡೆದಂತ ಮಾತಾಡಿದ್ದನ್ನು ಅವಳು ಮರೆತಿರಲಿಲ್ಲ.

"ನಿನಗೆ ಯಾರು ಬಿ.ಎಸ್‌ಸಿ. ಡಿಗ್ರಿ ಕೊಟ್ಟವರು ? ಇಂಗ್ಲೀಷ್‌ನಲ್ಲಿ ಸರಿಯಾಗಿ ಮಾತಾಡಕ್ಕೇ ಬರಲ್ಲವಲ್ಲ ನಿನಗೆ ?"

"ನಿನಗೆ ಏನೇ ಅಲಂಕಾರ ಮಾಡಿದ್ರೂ ಪ್ರಯೋಜನವಿಲ್ಲ. ನಿನಗೆ ಮಾಡ್ ಡ್ರೆಸ್‌ಗಳು ಸೂಟ್ ಆಗುವುದೇ ಇಲ್ಲ."

ದಾರಿಯಲ್ಲಿ ಎದುರಾಗುವ ಹುಡುಗಿಯರನ್ನು ನೋಡಿ "ಆ ಹುಡುಗಿನ್ನ ನೋಡು ಎಷ್ಟು ಮುದ್ದಾಗಿದ್ದಾಳೆ. ನೀನೂ ಇದ್ದೀಯಾ ಗೌರಮ್ಮನ ಹಾಗೆ. ನಿನ್ನ ಜೊತೆ ಹೊರಗೆ ಬರಕ್ಕೇ ಬೇಜಾರಾಗುತ್ತೆ" ಎನ್ನುತ್ತಿದ್ದ.

'ಆ ಹುಡುಗಿ ಎಷ್ಟು ಬೋಲ್ಡಾಗಿದ್ದಾಳೆ ನೋಡು. ಅವಳ ಕಣ್ಣು ಚೆನ್ನ, ಇವಳ ನಗು ಚೆನ್ನ, ಮತ್ತೊಬ್ಬಳ ಫಿಗರ್ ಚೆನ್ನ, ಇನ್ನೊಬ್ಬಳ ಬಾಬ್ ಚೆನ್ನ' ಎಂದು ಹುಡುಗಿಯರ ಹೊಗಳಿಕೆ ಕೇಳಿ ಮಂಜುಳಾಗೆ ಬಹಳ ಕಸಿವಿಸಿಯಾಗಿತ್ತು.

ಈ ತರಹ ಸಂದರ್ಭಗಳಲ್ಲೇ ಒಮ್ಮೆ ಅವನು ಹೇಳಿದ್ದ "ನಿನ್ನ ಕಸಿನ್ ಅಮೃತ ಅಪ್ಸರೆ ಇದ್ದಹಾಗಿದ್ದಾಳೆ. ಶೇಖರ್ ಅವಳಿಗೆ ಸರಿಯಾದ ಗಂಡನಲ್ಲ."

ಆದರೆ ಮಂಜುಳಾಗೆ ಶೇಖರನಂತಹ ಸಾಧು ಮನುಷ್ಯನಿಗೆ ಅಮೃತ ಸರಿಯಾದ ಹೆಂಡತಿಯಲ್ಲ ಎನ್ನಿಸಿತ್ತು.

ಸಿಂಗಪೂರ್ ಪ್ರವಾಸ ಮುಗಿಸಿಕೊಂಡು ಬಂದ ಮೇಲೆ ಅವಳು ತವರು ಮನೆಗೆ ಹೋಗಿ ವಾರವಿದ್ದು ವಾಪಸ್ಸಾಗಿದ್ದಳು. ಆದರೆ ಬೆಂಗಳೂರಿಗೆ ಬಂದ ಮೇಲೆ ಅವಳಿಗೆ ಹೊತ್ತೇ ಹೋಗದಂತಾಗಿತ್ತು. ಅತ್ತೆ-ಮಾವ ತುಂಬಾ ಒಳ್ಳೆಯವರು. ಯಾವ ತಂಟೆಗೂ ಬರುತ್ತಿರಲಿಲ್ಲ. ಮನೆ ಕೆಲಸಕ್ಕೆ ಆಳು-ಕಾಳುಗಳಿದ್ದರು. ಅಡಿಗೆಯನ್ನು ಮಾತ್ರ ಮಂಜುಳ ತಾನೇ ಇಷ್ಟಪಟ್ಟು ಮಾಡುತ್ತಿದ್ದಳು. ಅತ್ತೆ ಕೈಲಾದಷ್ಟು ಸಹಾಯ ಮಾಡುತ್ತಿದ್ದರು.

ಮೋಹನ್ ಒಂಭತ್ತುಗಂಟೆಗೆ ತಿಂಡಿ ತಿಂದುಕೊಂಡು ಕ್ಲಿನಿಕ್‌ಗೆ ಹೋಗಿ ಮಧ್ಯಾಹ್ನ ಎರಡು ಗಂಟೆಗೆ ವಾಪಸ್ಸಾಗುತ್ತಿದ್ದ. ಊಟಮಾಡಿ ಮಲಗಿ ಪುನಃ ಐದು ಗಂಟೆಗೆ ಹೊರಡುತ್ತಿದ್ದ ಎಂಟೂವರೆಯುವರೆಗೂ ಕ್ಲಿನಿಕ್‌ನಲ್ಲಿದ್ದು ನಂತರ ಕ್ಲಬ್‌ಗೆ ಹೋಗಿ 10-11 ಗಂಟೆಗೆ ಮನೆಗೆ ಬರುತ್ತಿದ್ದ. ಪೇಷೆಂಟ್ಸ್ ಹೆಚ್ಚಾಗಿದ್ದ ದಿನಗಳಲ್ಲಿ ಕ್ಲಬ್‌ಗೆ ಹೋಗಲಾಗುತ್ತಿರಲಿಲ್ಲ.

ಮದುವೆಯಾದ ಹೊಸದರಲ್ಲಿ ಮಂಜುಳ ತನ್ನ ಅದೃಷ್ಟಕ್ಕೆ ಬಹಳ ಹಿಗ್ಗಿದ್ದಳು. ಆದರೆ ದಿನ ಕಳೆಯುತ್ತಿದ್ದಂತೆ ಅವಳಿಗೆ ತಾನೆಂತಹ ಹೀನ

ಅದೃಷ್ಟದವಳೆಂದು ಅರಿವಾಗತೊಡಗಿತ್ತು. ಅವಳಿಗೆ ಎಲ್ಲಾ ಇತ್ತು. ಆದರೆ ಒಂದರ್ಥದಲ್ಲಿ ಏನೂ ಇರಲಿಲ್ಲ. ಅವಳು ಗಂಡನ ಸಾಮೀಪ್ಯ ಬಯಸಿದ್ದಷ್ಟು ಅವನು ದೂರವಾಗತೊಡಗಿದ್ದ. ಅವನಿಗೆ ಹೆಂಡತಿಯು ನೆನಪಾಗುತ್ತಿದ್ದುದು ರಾತ್ರಿ ಮಾತ್ರ !

"ಬದುಕೆಂದರೆ ಇದೇನೆ ?" ಎಂದು ಒಮ್ಮೊಮ್ಮೆ ಅವಳು ತನ್ನನ್ನೇ ಪ್ರಶ್ನಿಸಿಕೊಳ್ಳುತ್ತಿದ್ದಳು. ಮದುವೆಯ ಮೊದಲು ಅವಳು ಸುಖದಾಂಪತ್ಯದ ಬಗ್ಗೆ ರಂಗುರಂಗಿನ ಕನಸು ಕಂಡಿದ್ದಳು. ಆದರೀಗ ಆ ಕನಸುಗಳು ನನಸಾಗುವ ಸಾಧ್ಯತೆಗಳೇ ಇಲ್ಲವೇನೋ ? ಅನ್ನಿಸುತ್ತಿತ್ತು. ಅವಳಿಗೆ ಪ್ರತಿದಿನ ಸಾಯಂಕಾಲ ಗಂಡನ ಜೊತೆ ಎಲ್ಲಿಗಾದರೂ ಹೋಗಿ ಬರಬೇಕೆನ್ನಿಸುತ್ತಿತ್ತು. ಆದರೆ ಮೋಹನ ಮನೆಯಲ್ಲೇ ಇರುತ್ತಿರಲಿಲ್ಲ. ಭಾನುವಾರ ಅವನ ಕ್ಲಿನಿಕ್‌ಗೆ ರಜವಿತ್ತು. ಅವನು ಬೆಳಗ್ಗೆ 10 ಗಂಟೆಗೆ ಮನೆಬಿಟ್ಟರೆ ರಾತ್ರಿಯಾವಾಗಲೋ ವಾಪಸ್ಸಾಗುತ್ತಿದ್ದ. ಆದರೆ ಪಾರ್ಟಿ–ಗೀರ್ಟಿಗಳಿಗೆ, ಮದುವೆಮನೆಗಳಿಗೆ ತನ್ನ ಪ್ರತಿಷ್ಠೆ ಮೆರೆಸಲು ತಪ್ಪದೆ ಕರೆದೊಯ್ಯುತ್ತಿದ್ದ.

ತಿಂಗಳು ಉರುಳಿತು. ಒಂದು ಭಾನುವಾರ ಮಂಜುಳ ಗಂಡನಿಗೆ ಹೇಳಿದಳು "ಬೆಳಗ್ಗೆ ನೀವು ಹೋಗುವಾಗ ನನ್ನನ್ನು ಅಮೃತಳ ಮನೆ ಹತ್ತಿರ ಡ್ರಾಪ್ ಮಾಡಿ. ನಾನು ಸಾಯಂಕಾಲದವರೆಗೂ ಇದ್ದು ಬರ್ತೀನಿ."

ಅವರು ಅಮೃತಳ ಮನೆ ತಲುಪಿದಾಗ ಹತ್ತು ಗಂಟೆಯಾಗಿತ್ತು. ಅಮೃತಾ ತಲೆಗೆ ಹರಳೆಣ್ಣೆ ಮೆತ್ತಿಕೊಂಡು ಓಡಾಡುತ್ತಿದ್ದಳು. ಶೇಖರ್ ಮನೆ ಕ್ಲೀನ್ ಮಾಡುತ್ತಿದ್ದ ಕಾರ್‌ನಲ್ಲಿ ಬಂದವರನ್ನು ಒಳಗೆ ಕರೆಯಲು ಅಮೃತಾಗೆ ಸಂಕೋಚವಾಯ್ತು.

"ಬನ್ನಿ ಒಳಗೆ" ಬಾಯುಪಚಾರಕ್ಕೆ ಶೇಖರ್ ಮೋಹನನನ್ನು ಕರೆದ.

"ನಾನು ಇನ್ನೊಂದುದಿನ ಬರ್ತೀನಿ, ಮಂಜು ಇವತ್ತು ಸಾಯಂಕಾಲದ ವರೆಗೂ ಇಲ್ಲೇ ಇರ್‍ತಾಳೆ" ಎಂದ ಮೋಹನ್ ಹೊರಟುಬಿಟ್ಟ.

ಅರ್ಧ ಗಂಟೆಯಲ್ಲಿ ಶೇಖರ್ ಮನೆ ಕ್ಲೀನ್ ಮಾಡಿದ. ಮಂಜುಳಾ ಸುಮ್ಮನೆ ಕುಳಿತಿರಲಾರದೆ ಕೊಬ್ಬರಿ ತುರಿದಳು. ಶೇಖರ್ ಸ್ನಾನಮಾಡಿ

ಬಂದು ಚಟ್ನಿ ಗ್ರೈಂಡ್ ಮಾಡಿದ. ಸರೋಜಮ್ಮ ಆಲೂಗಡ್ಡೆ-ಈರುಳ್ಳಿ ಪಲ್ಯಮಾಡಿದರು. ಕೆಲಸದವಳು ಮನೆ ಗುಡಿಸಿ, ಒರೆಸಿದಳು.

"ಬಾಮ್ಮ ಬಿಸಿಬಿಸಿಯಾಗಿ ಮಸಾಲೆದೋಸೆ ಮಾಡಿಕೊಡ್ತೀನಿ. ಅಡಿಗೆಮನೆಯಲ್ಲೇ ಕುಳಿತುಕೋ" ಎಂದರು. ಮಂಜುಳ ಪುಟ್ಟ ಚಾಪೆ ಹಾಕಿಕೊಂಡು ಕುಳಿತಳು.

"ನಿಮ್ಮ ಮಗನಿಗೆ ಮೊದಲು ದೋಸೆ ಕೊಡಿ. ನಾನು ಅಮ್ಮ ಒಟ್ಟಿಗೆ ತೆಗೆದುಕೊಳ್ತೀವೆ."

"ಅವಳ ಎಣ್ಣೆ ಸ್ನಾನದ ವಿಷಯ ನಿಮಗೆ ಗೊತ್ತಿಲ್ಲ. ಎರಡುಗಂಟೆ ಸ್ನಾನಮಾಡ್ತಾಳೆ ಅವನ ಸ್ನಾನ ಮುಗಿಯುವ ಹೊತ್ತಿಗೆ ನೀವು ಇನ್ನೊಂದು ರೌಂಡ್ ತಿನ್ನಬಹುದು ಎಂದ ಶೇಖರ್.

ಮಂಜುಳಾ ಶೇಖರ್‌ಗೆ ತಿಂಡಿಕೊಟ್ಟು, ಸರೋಜಮ್ಮನೂ ತಿಂಡಿ ತೆಗೆದುಕೊಂಡರು. ಅಮೃತಾ ಸ್ನಾನ ಮುಗಿಸಿಕೊಂಡು ಬಂದಮೇಲೆ ಅವಳಿಗೂ ಬಿಸಿಯಾಗಿ ದೋಸೆಕೊಟ್ಟು, ಮತ್ತೊಮ್ಮೆ ಕಾಫಿ ಬಿಸಿಮಾಡಿದರು. ತಾಯಿ, ಮಗ ಅಡಿಗೆ ಏನು ಮಾಡಬೇಕೆಂದು ಚರ್ಚಿಸಿದಾಗ ಮಂಜುಳ ಅವರ ಮಾತಿನ ನಡುವೆ ಪ್ರವೇಶಿಸಿ ಹೇಳಿದಳು ದಯವಿಟ್ಟು ನನಗಾಗಿ ವಿಶೇಷದ ಅಡಿಗೆ ಮಾಡಬೇಡಿ. ಸಿಂಪಲ್ ಆಗಿ ಅನ್ನ ಸಾರು ಮಾಡಿ ಸಾಕು.

ಶೇಖರ್ ಮಾರ್ನಿಂಗ್‌ಷೋಗೆ ಹೊರಟ. ಮಂಜುಳ-ಅಮೃತ ಮನಸ ಬಂದಷ್ಟು ಹರಟಿದರು. ಹತ್ತಿರವೇ ಇದ್ದ ಅಂಗಡಿಗೆ ಅಮೃತ ತರಕಾರಿ ತರಲು ಹೊರಟಾಗ ಮಂಜುಳೆಯೂ ಹೋಗಿ 4-5 ತರಹ ಹಣ್ಣುಗಳನ್ನು ತಂದಳು.

ಮಂಜುಳ ತನ್ನ ಗಂಡನ ಬಗ್ಗೆಯಾಗಲಿ, ಅತ್ತೆ-ಮಾವಂದಿರ ಬಗ್ಗೆಯಾಗಲಿ ಏನೂ ಹೇಳಲಿಲ್ಲ. ಅತ್ತೆ-ಮಾವ ಒಳ್ಳೆಯವರೆ. ಗಂಡನ ಬಗ್ಗೆ ಹೇಳುವುದೇನಿದೆ ? ಹೇಳಿದರೂ ಪ್ರಯೋಜನವೇನು ? ಕೆಲವು ನೋವುಗಳನ್ನು ಹಂಚಿಕೊಳ್ಳಲು ಸಾಧ್ಯವಿಲ್ಲ. ನಮ್ಮ ನೋವನ್ನು ನಾವೇ ನುಂಗಬೇಕು.

ಅಮೃತಳ ಮಾತಿನಿಂದ ಅವಳ ಅತೃಪ್ತಿ ವ್ಯಕ್ತವಾಗುತ್ತಿತ್ತು. ಅವಳು ಮಾತುಮಾತಿಗೂ "ನೀನು ತುಂಬಾ ಪುಣ್ಯವಂತೆ. ಒಳ್ಳೆಯ ಮನೆ ಸೇರಿದ್ದೀಯ" ಎಂದಾಗ ಮಂಜುಳ ಮುಗುಳ್ನಗುತ್ತಿದ್ದಳು ನನ್ನ ಪುಣ್ಯದ ಬಗ್ಗೆ ನನಗೆ ಮಾತ್ರ ಗೊತ್ತು. ಉಳಿದವರಿಗೇನು ಗೊತ್ತು ? ಎಂದುಕೊಂಡಳು ಅಮೃತ ಅಪ್ಪಿ-ತಪ್ಪಿಯೂ ಅಡಿಗೆ ಮನೆ ಕಡೆ ಸುಳಿಯಲಿಲ್ಲ. ಸರೋಜಮ್ಮ ಅನ್ನ, ಹುರುಳಿಕಾಯಿಹುಳಿ, ತಿಳಿಸಾರು ಮಾಡಿದರು. ಶೇಖರ್ ಬರುವಾಗ ಮೈಸೂರುಪಾಕ್, ಚಿಪ್ಸ್ ತಂದ. ಶೇಖರ್ ತಾಯಿಗೆ ಸಹಾಯ ಮಾಡಿದ. ತಾನೇ ಎಲೆ ಹಾಕಿ, ನೀರಿಟ್ಟು, ತುಪ್ಪ ಉಪ್ಪು ಬಡಿಸಿದ. ಶೇಖರನ ಮಾತು-ಕಥೆ, ನಯ-ವಿನಯ ಮಂಜುಳಾಗೆ ತುಂಬಾ ಮೆಚ್ಚುಗೆಯಾದವು.

'ಅಮ್ಮ ಅದೆಷ್ಟು ಪುಣ್ಯವಂತಳು ! ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುವ ಗಂಡ ಇದ್ದಾನೆ ಎಂದುಕೊಂಡಳು. ಅಮೃತಾ ತಮ್ಮ ಬಡತನದ ಬಗ್ಗೆ ಗೊಣಗಿದಾಗ ಅವಳು ಸಮಾಧಾನ ಹೇಳಿದಳು "ಮನೆ, ಹಣ, ಒಡವೆ, ವಸ್ತು. ಶಾಶ್ವತವಲ್ಲ ಅಮ್ಮ ನಿನ್ನನ್ನು ಶೇಖರ್ ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸ್ತಾರೆ. ಅವರಿಗೆ ಒಂದು ದುಶ್ಚಟಾನೂ ಇಲ್ಲ. ನೀನು ನಿಜವಾಗಿ ತುಂಬಾ ಪುಣ್ಯಮಾಡಿದ್ದೀಯ. ನಿನಗೆ ಅದರ ಅರಿವಿಲ್ಲ" ಎಂದಳು.

ಮಂಜುಳ ಹೊರಟಾಗ ಅಮೃತ ಒಳ್ಳೆಯ ಬ್ಲೌಸ್ ಪೀಸ್ ಕೊಟ್ಟು ಕಾಯಿ-ಎಲಡಿಕೆ ಕೊಟ್ಟಳು ಶೇಖರ್ ಅವಳನ್ನು ಸ್ಕೂಟರ್‌ನಲ್ಲಿ ಕರೆದುಕೊಂಡು ಹೋಗಿ ಬಿಟ್ಟು ಬಂದ.

ರಾತ್ರಿ ಊಟಕ್ಕೆ ಕುಳಿತಾಗ ಸರೋಜಮ್ಮ ಮಾತಿಗೆ ಮಾತು ಬಂದು ಹೇಳಿದರು. "ಹುಡುಗಿ ತುಂಬಾ ನಿಧಾನಸ್ಥೆ. ಶ್ರೀಮಂತಳಾದರೂ ಕೊಂಚಾನೂ ಜಂಬವಿಲ್ಲ. ಹಿರಿಯರೊಂದ್ರೆ ತುಂಬಾ ಗೌರವ."

"ನಾನು ಬಜಾರಿ ನನಗೆ ಹಿರಿಯರೊಂದ್ರೆ ಗೌರವವಿಲ್ಲ ಅವಳಿಗಿರುವ ಅನುಕೂಲ ನನಗಿದ್ದಿದ್ರೆ. ನಾನೂ ಮನೆಯಲ್ಲೇ ಇದ್ದು ನಿಮಗೆ ಮಾಡಿ ಹಾಕ್ತಿದ್ದೆ. ಆದರೇನು ಮಾಡಲಿ ? ನಾನಂತಹ ಅದೃಷ್ಟ ಕೇಳಿಕೊಂಡು

ಬಂದಿಲ್ಲ." ಪಟಾಕಿಯಂತೆ ಸಿಡಿದಳು ಅಮೃತ. ಯಾರೊಬ್ಬರೂ ಮಾತಾಡ ಲಿಲ್ಲ.

ಶೇಖರನ ತಮ್ಮ ಶಂಕರ ತಿಂಗಳಿಗೊಂದು ಸಲವೋ ಎರಡು ಸಲವೋ ಬೆಂಗಳೂರಿಗೆ ಬರುತ್ತಲಿದ್ದ ಅವನು ಬಂದಾಗ 'ಮೂಡ್' ಚೆನ್ನಾಗಿದ್ದರೆ ಅಮೃತಾ ಚೆನ್ನಾಗಿ ಮಾತನಾಡಿಸುತ್ತಿದ್ದಳು. ಇಲ್ಲದಿದ್ದರೆ "ಹೇಗಿದ್ದೀಯಾ?" ಎಂದೂ ಕೇಳುತ್ತಿರಲಿಲ್ಲ.

ಅಮೃತ ಬಹಳ ಯೋಚಿಸಿ ಮನೆಯಲ್ಲಿ 10ನೇ ತರಗತಿಯ ಮಕ್ಕಳಿಗೆ 'ಮನೆಪಾಠ' ಹೇಳುವ ನಿರ್ಧಾರ ಕೈಗೊಂಡಳು. ತಾಯಿ-ಮಗ ಅವಳ ಆಸೆಗೆ ಅಡ್ಡಬರಲಿಲ್ಲ. ಆದರೆ ಅವಳೆಂದುಕೊಂಡಂತೆ ಏನೂ ಆಗಲಿಲ್ಲ. ಅವಳಿಗೆ ಎರಡು ತಿಂಗಳಾಗಿದೆ ಎಂದು ತಿಳಿದೊಡನೆ ಸರೋಜಮ್ಮ ಖಡಾಖಂಡಿತವಾಗಿ ಹೇಳಿದರು. "ಈ ಸಲ ವೈಕಳೆಯುವವರೆಗೂ ನೀನು 'ಮನೆಪಾಠ' ಹಚ್ಚಿ ಕೊಳ್ಳಬೇಡ. ನಿನಗೆ ಒಂದೇ ಸಮನೆ ಕುಳಿತುಕೊಂಡು ಪಾಠಮಾಡಕ್ಕೆ ಕಷ್ಟವಾಗತ್ತೆ."

"ನನಗೇನೂ ಕಷ್ಟವಾಗಲ್ಲ. ನಾನು ಶುರು ಮಾಡ್ತೀನೆ" ಎಂದಳು ಅಮೃತ ಮೊಂಡುತನದಿಂದ.

ಶೇಖರ ಮಧ್ಯಸ್ಥಿಕೆ ವಹಿಸಬೇಕಾಯ್ತು.

"ಅಮೃತಾ ಇದು ನಿನ್ನ ಮೊದಲ ಬ್ಯಾಚ್. ನಿನ್ನ ಡೆಲಿವರಿ ಟೈಂ, ಅವರ ಪರೀಕ್ಷೆ ಟೈಂ ಒಂದೇ ಆಗುತ್ತೆ. ಒಳ್ಳೆಯ ಫಲಿತಾಂಶ ಬರದಿದ್ದರೆ ನಿನಗೇ ಕೆಟ್ಟ ಹೆಸರು. ಈ ವರ್ಷ ಸುಮ್ಮನಿರು. ಮುಂದಿನ ವರ್ಷ ನೋಡೋಣ" ಎಂದ ಅಮೃತ ಒಪ್ಪಿಕೊಂಡಳು.

ಸರೋಜಮ್ಮ ಅಮೃತಳಿಗೆ ಏಳನೇ ತಿಂಗಳು ನಡೆಯುತ್ತಿರುವಾಗ ದೇವರ ಮುಂದೆ ಕೂಡಿಸಿ,ಹಸಿರು ಸೀರೆ ಕೊಟ್ಟು, ಪಾಯಸದ ಅಡುಗೆ ಮಾಡಿ ತವರುಮನೆಗೆ ಬಾಣಂತನಕ್ಕೆ ಕಳುಹಿಸಿಕೊಟ್ಟರು. ಸೀತಾರಾಮಯ್ಯ ಬಂದು ಕರೆದೊಯ್ದರು.

ಅಕ್ಕ ಬಾಣಂತನಕ್ಕೆ ಬರುವುದು ತಂಗಿಯರಾದ ರಾಧಿಕಾ, ಚಂದ್ರಿಕಾರಿ ಗಾಗಲಿ ರಾಜು-ಮುರುಳಿಯರಿಗಾಗಲಿ ಕೊಂಚವೂ ಇಷ್ಟವಿರಲಿಲ್ಲ. ಅಕ್ಕ

ಎಷ್ಟು ಸ್ವಾರ್ಥಿ ಎನ್ನುವುದರ ಅರಿವು ಅವರಿಗಿತ್ತು. ಅವಳು ಮೈಸೂರಿನಲ್ಲಿದ್ದಾಗ ತಾನೊಬ್ಬಳೇ ತಿಂಡಿ ತಂದು ತಿನ್ನುತ್ತಿದ್ದುದನ್ನೂ, ತಾನೊಬ್ಬಳೇ ಗೆಳತಿಯರ ಜೊತೆ ಸಿನಿಮಾ ನೋಡಿ ಬರುತ್ತಿದ್ದುದನ್ನು ಅವರು ಮರೆತಿರಲಿಲ್ಲ. ತುಪ್ಪ ತಂದಿಟ್ಟುಕೊಂಡು ಅವಳೊಬ್ಬಳೇ ಹಾಕಿಕೊಳ್ಳುತ್ತಿದ್ದಳು. ಅವಳಿಗೋಸ್ಕರ ತಾಯಿ ಬಟ್ಟಲೊಂದರಲ್ಲಿ ಮೊಸರು ಇಟ್ಟಿರುತ್ತಿದ್ದರು. ಮದುವೆಯಾಗಿ ವರ್ಷವಾಗಿದ್ದರೂ ಅವಳು ಒಮ್ಮೆಯೂ ತಮ್ಮ-ತಂಗಿಯರನ್ನು ತನ್ನ ಮನೆಗೆ ಬರಲು ಆಹ್ವಾನಿಸಿರಲಿಲ್ಲ ಗೌರಿ-ಗಣೇಶ ಮತ್ತು ದೀಪಾವಳಿ ಹಬ್ಬಕ್ಕೆ ಬಂದಾಗಲೂ ತಮ್ಮ-ತಂಗಿಯರಿಗಾಗಿ ಏನೂ ತಂದಿರಲಿಲ್ಲ. ಅವಳು ಬಂದರೆ ತಮ್ಮ ಕೆಲಸದ ಹೊರೆ ಜಾಸ್ತಿಯಾಗುವುದೆಂದೂ ಅವರಿಗೆ ಗೊತ್ತಿತ್ತು.

ಊರಿಗೆ ಬಂದ ದಿನವೇ ಅಮೃತಾ ತಾಯಿಯೆದುರಿಗೆ ಅತ್ತೆಯನ್ನು ದೂರಿದಳು "ಅವರು 'ಆರತಿ' ಮಾಡದೆ ಸೀರೆ ಕೊಟ್ಟು ಕಳಿಸಿದ್ದಾರಮ್ಮ. ನೀನು ಈ ತಿಂಗಳಲ್ಲೇ ಅವರ ಮುಖದ ಮೇಲೆ ಹೊಡೆದ ಹಾಗೆ ಆರತಿ ಇಟ್ಟುಕೋ."

"ನಮ್ಮನೆಯಲ್ಲೂ ಆರತಿ ಪದ್ಧತಿ ಇಲ್ಲಮ್ಮ. ನಿಮ್ಮತ್ತೆ ಈಗಾಗಲೇ ಸೀರೆ ತಂದಿಟ್ಟಿದ್ದಾರೆ. ನಾನು ದೇವರ ಮುಂದೆ ಕೂಡಿಸಿ ಸೀರೆ ಕೊಡ್ತೀನಿ. ನಿನ್ನ ಬಾಣಂತನದ ಖರ್ಚು ಪೂರೈಸೋದೇ ಸಾಕಾಗಿದೆ. ಇನ್ನು ಆರತಿ-ಗೀರತಿಗೆ ಎಲ್ಲಿಂದ ಹಣ ತರೋಣ ?" ಎಂದರು ವಿಜಯಮ್ಮ.

ಅಮೃತ ಆ ಸೀರೆಯನ್ನು ನೋಡಿ ಮುಖ ಸೊಟ್ಟ ಮಾಡಿದಳು. ವಿಜಯಮ್ಮ ಅದನ್ನು ಗಮನಿಸಿದರೂ ಗಮನಿಸದವರಂತಿದ್ದರು. ಅವಳು ಮೈಸೂರಿಗೆ ಬಂದ 15 ದಿವಸಗಳ ನಂತರ ಶೇಖರ್ ಅವಳನ್ನು ನೋಡಲು ಬಂದ. ಬರುವಾಗ ಸಿಹಿ-ಖಾರ, ಹಣ್ಣು-ಹೂವು ತಂದಿದ್ದ. ರಾಜು, ಮುರುಳಿಯರ ಜೊತೆ ಹೋಗಿ ತರಕಾರಿ ತಂದ. ಹುಡುಗರನ್ನು ಸಿನಿಮಾಗೆ ಕರೆದೊಯ್ದ. ಅಣ್ಣ ಬಂದ ದಿನವೇ ಶಂಕರನೂ ಅಲ್ಲಿಗೆ ಬಂದ ಎರಡು ದಿನ ಅವರಲ್ಲಿಯೇ ಊಟ ಮಾಡಿದ. ಗಂಡ ಊರಿಗೆ ಹೊರಡುವ ದಿನ ಅಮೃತ ಗಂಡನಿಗೆ ಉಪದೇಶ ಮಾಡಿದಳು. "ನೀವು ಪದೇ ಪದೇ ಇಲ್ಲಿಗೆ ಇಲ್ಲಿಗೆ ಬರಬೇಡಿ. ಬಂದರೆ ಸುಮ್ಮನೆ ಖರ್ಚು. ನೀವು ಬರುವಾಗ ಒಂದು ಹೊತಿ ತಿಂಡಿ-ತೀರ್ಥ ತರುವ ಅವಶ್ಯಕತೆ ಏನಿತ್ತು ? ನಾನು ಆಸ್ಪತ್ರೆ ಸೇರಿದ ಮೇಲೆ ಫೋನ್ ಮಾಡಿಸ್ತೇನೆ, ಆಗ ಬನ್ನಿ."

ಚಂದ್ರಿಕಾ ಈ ಮಾತುಗಳನ್ನು ಕೇಳಿಸಿಕೊಂಡು ತಾಯಿಗೆ ವರದಿ ಮಾಡಿದಾಗ ಅವರು ತುಂಬಾ ನೊಂದುಕೊಂಡರು. "ಅಳಿಯ ಅಪರಂಜಿ, ಮಗಳೇ ಹಿತ್ತಾಳೆ. ನಾವೇನು ಮಾಡಲು ಸಾಧ್ಯ ?" ಎಂದುಕೊಂಡರು. ಮಗಳ ಬುದ್ಧಿ ಗೊತ್ತಿದ್ದರೂ ಬಾಯಿ ಮಾತಿಗೆ ಅಳಿಯನಿಗೆ ಹೇಳಿದರು. "ಆಗಾಗ್ಗೆ ಬರ್‍ತಾ ಇರಿ. ನೀವು ಬಂದ್ರೆ ಅಮೃತಾಗೆ ಎಷ್ಟೋ ಧೈರ್ಯ ಬರುತ್ತೆ."

"ಆಗಲಿ ಬರೋಣ" ಎಂದ ಶೇಖರ್. ಅವನು ಹೋಗುತ್ತಿದ್ದಂತೆ ಅಮೃತ ತಾಯಿಯ ಬಳಿ ಬಂದು ಪಿಸುಗುಟ್ಟಿದಳು. "ಅಮ್ಮ ನೀನು ಅವರನ್ನು ಬಾ ಅಂತ ಬಲವಂತ ಮಾಡಬೇಡ. ಅವರು ಬಂದ ತಕ್ಷಣ ಶಂಕರನೂ ಬರ್‍ತಾನೆ ಸುಮ್ಮನೆ ಖರ್ಚು."

"ಹೌದಮ್ಮ, ನಿನ್ನ ಗಂಡ ಬಂದ್ರೆ ನಮಗೂ ಖರ್ಚು, ಅವರಿಗೂ ಖರ್ಚು ಮಾವನ ಮನೆಗೆ ಬರಿಗೈಯಲ್ಲಿ ಬಂದು ಹೋಗಕ್ಕಾಗಲ್ಲ. ಏನು ಮಾಡೋದು ?" ಎಂದರು ವಿಜಯಮ್ಮ ಏನೂ ಅರಿಯದವರಂತೆ.

ಅಮೃತಾಗೆ ಕಪಾಳಕ್ಕೆ ಹೊಡೆದಂತಾಯ್ತು. ಆದರೆ ಮಾತಾಡಲಿಲ್ಲ.

ಆಸ್ಪತ್ರೆ ಸೇರಿದ ಕೂಡಲೆ ಅಮೃತ ಗಂಡನಿಗೆ ಫೋನ್ ಮಾಡಿಸಿದಳು. ಶೇಖರ್ ರಜ ಹಾಕಿ ಓಡಿ ಬಂದ. ಅಮೃತ ಶುಕ್ರವಾರ ಸಾಯಂಕಾಲ ಗಂಡು ಮಗುವಿಗೆ ಜನ್ಮ ನೀಡಿದಳು. ಮಗು ತುಂಬಾ ಮುದ್ದಾಗಿತ್ತು. ಮೂರನೇ ತಿಂಗಳಲ್ಲಿ ಸೀತಾರಾಮಯ್ಯ ತಮ್ಮ ಶಕ್ತಿ ಮೀರಿ ನಾಮಕರಣ ಮಾಡಿದರು. ಮಂಜುಳ ನಾಮಕರಣಕ್ಕೆ ಬಂದು ಮಗುವಿಗೆ ಒಂದು ಬೆಳ್ಳಿ ಲೋಟ ಕೊಟ್ಟಳು. ಸರೋಜಮ್ಮ ಮಗುವಿಗೆ ಉಂಗುರ ತಂದಿದ್ದರು. ಮಗುವನು ಕಳಿಸುವಾಗ ಸೀತಾರಾಮಯ್ಯ ಕಿವಿಗೆ ಮುರುವು, ಕಾಲಿಗೆ ಚೈನು, ಉಡಿದಾರ ಕೊಟ್ಟರು. ಅವರು ಒಂದೆಳೆಯ ಸರವನ್ನೂ ಕೊಡಲಿಲ್ಲವೆಂದು ಅಮೃತ ಜಗಳವಾಡಿದಳು ಅವರು ಕೊಟ್ಟ ಸೀರೆಯೂ ಅವಳಿಗೆಇಷ್ಟವಾಗಲಿಲ್ಲ. ತಾಯಿಗೆ ಬಾಣಂತನ ಮಾಡಿದ್ದಕ್ಕೆ 500 ರೂ. ಕೊಟ್ಟಳು. ಸರೋಜಮ್ಮ ಮಗುವಿಗೆ ಅದರ ತಾತನ ಹೆಸರಾದ 'ಕೃಷ್ಣಮೂರ್ತಿ' ಎಂದು ಹೆಸರಿಟ್ಟರು. ಆದರೆ ಅಮೃತಾ 'ಅಶೋಕ' ಎಂದು ಕರೆದಳು.

ಮೂರನೆಯ ತಿಂಗಳಲ್ಲೇ ಅಮೃತ ಗಂಡನ ಮನೆಗೆ ಬಂದುಬಿಟ್ಟಳು ಸರೋಜಮ್ಮನ ಕೆಲಸದ ಹೊರೆ ಜಾಸ್ತಿಯಾಯಿತು.

ಜುಲೈ ತಿಂಗಳಲ್ಲಿ ಅಮೃತ 'ಮನೆ ಪಾಠ' ಆರಂಭಿಸಿದಳು. ಅವಳು ಒಳ್ಳೆಯ ಶಿಕ್ಷಕಿಯಾಗಿದ್ದರಿಂದ ನಾಲ್ಕು ಜನರಿಂದ ಶುರುವಾಗಿದ್ದ ಮನೆಪಾಠ 30 ಜನರಿಗೇರಿತು. ಅವಳು ತಿಂಗಳಿಗೆ 100 ರೂ.ಯಂತೆ ಪ್ರತಿ ವಿಷಯಕ್ಕೂ ನಿಗದಿಪಡಿಸಿದಳು. ಬೆಳಗ್ಗೆ 'ಗಣಿತ' ಹೇಳಿ ಕೊಡುತ್ತಿದ್ದಳು. ಸಾಯಂಕಾಲ ವಿಜ್ಞಾನ ಹೇಳಿ ಕೊಡುತ್ತಿದ್ದಳು. ಮಗುವಿನ ಕಿರಿಕಿರಿ, ಅತ್ತೆಯ ಗೊಣಗಾಟ– ಇವುಗಳ ನಡುವೆ ಪಾಠ ಮಾಡುವುದು ಅಸಾಧ್ಯವೆನ್ನಿಸಿದಾಗ ಅವಳು ಮನೆಯ ಮಹಡಿಯ ಮೇಲಿದ್ದ ಹಾಲ್ ಬಾಡಿಗೆಗೆ ತೆಗೆದುಕೊಂಡಳು. ಅವಳು ಮನೆಯ ಕಡೆ ಗಮನ ಕೊಡುವುದು ಸಾಧ್ಯವೇ ಆಗುತ್ತಿರಲಿಲ್ಲವಾದ್ದರಿಂದ, ಮಗು 'ಅಜ್ಜಿಯನ್ನು' ಹೆಚ್ಚಾಗಿ ಹಚ್ಚಿಕೊಂಡಿತು. ಶೇಖರ್ ಪೋಸ್ಟ್ ಆಫೀಸ್‌ಗೆ ಹೋಗುವವರೆಗೂ ಮಗುವನ್ನು ನೋಡಿಕೊಳ್ಳುತ್ತಿದ್ದ.

ಸರೋಜಮ್ಮನಿಗೆ ಮನೆ ಕೆಲಸ, ಮಗುವಿನ ಜವಾಬ್ದಾರಿ ಕಷ್ಟವೆನ್ನಿಸಿ ದರೂ ಗೊಣಗಾಡದೆ ನೋಡಿಕೊಳ್ಳುತ್ತಿದ್ದರು. "ತಮ್ಮ ಮನೆಗಾಗಿ ಇಷ್ಟೊಂದು ದುಡಿಯುವ ಹುಡುಗಿಗೆ ತಾವೇನು ಮಾಡಿದರೂ ಅಲ್ಪವೇ ?" ಅನ್ನಿಸುತ್ತಿತ್ತು.

ಅಮೃತ ಕೆಲಸ ಮಾಡುತ್ತಿದ್ದುದು ಜೂನಿಯರ್ ಕಾಲೇಜೊಂದರ ಪ್ರೌಢ ಶಾಲಾ ವಿಭಾಗದಲ್ಲಿ ಅವಳು ಪಾಠ ಹೇಳುವುದು ತಿಳಿದೊಡನೆ ಅವಳ ಶಾಲೆಯ ವಿದ್ಯಾರ್ಥಿಗಳು ಕೂಡ ಅವಳ ಹತ್ತಿರ ಪಾಠಕ್ಕೆ ಬರಲು ಬಯಸಿದರು. ಅವಳು ಬೆಳಗಿನ ಹೊತ್ತು ಇನ್ನೊಂದು ಬ್ಯಾಚ್ ಶುರು ಮಾಡಿದಳು. ತಮ್ಮ ಶಾಲೆಯ ಮಕ್ಕಳಿಗೆ ಅವಳು ಪ್ರತಿ ವಿಷಯಕ್ಕೂ 75 ರೂ. ತೆಗೆದುಕೊಳ್ಳು ತ್ತಿದ್ದಳು. ಬುದ್ಧಿವಂತ ಮಕ್ಕಳಿಗೆ ಕೊಂಚ ರಿಯಾಯಿತಿ ಇರುತ್ತಿತ್ತು.

ಅಮೃತ ಬೆಳಗ್ಗೆ 6½ಯಿಂದ 8ರವರೆಗೆ ಒಂದು ಬ್ಯಾಚ್‌ಗೆ ಪಾಠ ಹೇಳು ತ್ತಿದ್ದಳು. ನಂತರ ಸ್ನಾನ ಮಾಡಿ ಕಾಫಿ-ಬ್ರೆಡ್ ತೆಗೆದುಕೊಂಡು 8½ಯಿಂದ 10 ಗಂಟೆಯವರೆಗೆ ಮತ್ತೊಂದು ಬ್ಯಾಚ್‌ಗೆ ಹೇಳುತ್ತಿದ್ದಳು. ಅವಳ ಶಾಲೆ ಶುರುವಾಗುತ್ತಿದ್ದುದು 11-40ಕ್ಕೆ. ಹೆಚ್ಚಿನ ದಿನಗಳಲ್ಲಿ ಆಟೋದಲ್ಲೇ ಹೋಗುತ್ತಿದ್ದಳು. ಸಾಯಂಕಾಲ 6½ಯಿಂದ 8ರವರೆಗೂ ಒಂದು ಬ್ಯಾಚ್‌ಗೆ

ಪಾಠ ಹೇಳುತ್ತಿದ್ದಳು. ಈ ಮಧ್ಯೆ ಸೆಪ್ಟೆಂಬರ್ ಪರೀಕ್ಷೆಗೆ ಕಟ್ಟಿದ್ದ 10-12 ಹುಡುಗರು ಪಾಠಕ್ಕೆ ಬರಲು ಬಯಸಿದರು. ಅವರಿಗೆ 2ನೇ ಬ್ಯಾಚ್‌ನಲ್ಲಿ ಅವಕಾಶ ಕಲ್ಪಿಸಿಕೊಟ್ಟಳು. ಅವರಿಗಾಗಿ ಭಾನುವಾರ, ಶನಿವಾರಗಳಲ್ಲೂ ಪಾಠ ಹೇಳಲಾರಂಭಿಸಿದಳು. ಅವಳ ಆದಾಯ ತಿಂಗಳಿಗೆ 7,500ಕ್ಕೆ ಏರಿತ್ತು.

"ಸಾಯಂಕಾಲದ ಹೊತ್ತು ಟ್ಯೂಷನ್ಸ್ ಬೇಡ. ನಿನ್ನ ಆರೋಗ್ಯ ಹಾಳಾಗುತ್ತದೆ ಮಗು ನಿನ್ನನ್ನು 'ಅಮ್ಮ' ಅಂತಾನೇ ಕರೆಯುವುದಿಲ್ಲ. ಒಂದು ಬ್ಯಾಚ್‌ಗೆ ಪಾಠ ನಿಲ್ಲಿಸಿ ಬಿಡು" ಎನ್ನುತ್ತಿದ್ದ ಶೇಖರ್.

"ಸಾಯಂಕಾಲದ ಹೊತ್ತು ಮಗೂನ್ನ ಕೊಂಚ ನೋಡ್ಕೋಮ್ಮ. ಅಭ್ಯಾಸ ಮಾಡ್ಕೋಮ್ಮ" ಎನ್ನುತ್ತಿದ್ದರು ಸರೋಜಮ್ಮ.

ಆದರೆ ಅಮೃತ ಅವರಿಬ್ಬರ ಮಾತುಗಳಿಗೆ ಕಿವಿಗೊಡುತ್ತಿರಲಿಲ್ಲ.

ತವರಿಗೆ ಚೊಚ್ಚಲು ಬಾಣಂತನಕ್ಕಾಗಿ ಮರು ದಿನ ಊರಿಗೆ ಹೊರಡ ಬೇಕಿದ್ದ ಮಂಜುಳ ತನ್ನ ರೂಮ್‌ನಲ್ಲಿ ಕಣ್ಣೀರು ಸುರಿಸುತ್ತಾ ಕುಳಿತಿದ್ದಳು. ಗಂಟೆ ಹನ್ನೊಂದಾದರೂ ಮೋಹನ ಮನೆಗೆ ಬಂದಿರಲಿಲ್ಲ.

ಮಂಜುಳ ಮದುವೆಗೆ ಮೊದಲು ಕಂಡಿದ್ದ ಕನಸುಗಳೆಲ್ಲಾ ನುಚ್ಚು ನೂರಾಗಿದ್ದವು. ಮನೆಯಲ್ಲಿದ್ದ ಪೀಠೋಪಕರಣಗಳಂತೆ ಅವಳೂ ಆ ಮನೆಗೆ ಭೂಷಣವಾಗಿದ್ದಳು. ಅವಳನ್ನು ಒಬ್ಬ ಮನಸ್ಸಿರುವ ವ್ಯಕ್ತಿ ಎಂದು ಮೋಹನ್ ಪರಿಗಣಿಸೇ ಇರಲಿಲ್ಲ. ತನ್ನ ತಂದೆ-ತಾಯಿಯರ ಮಾತುಗಳಿಗೂ ಅವನು ಮೂರು ಕಾಸಿನ ಬೆಲೆ ಕೊಡುತ್ತಿರಲಿಲ್ಲ. ಅವನಿಗೆ ಕುಡಿತ, ಸಿಗರೇಟ್‌ಗಳ ಅಭ್ಯಾಸವಿದ್ದರೂ ಅವನು ಅವುಗಳಿಗೆ ದಾಸನಾಗಿರಲಿಲ್ಲ. ಇಸ್ಪೀಟ್ ಆಡುತ್ತಿದ್ದರೂ ಅದರ ಗೀಳಿರಲಿಲ್ಲ. ಅವನಿಗೆ ಇದ್ದಿದ್ದು ಹುಡುಗಿಯರ ಗೀಳು. ಸೆರಗು ಕಂಡರೆ ಸಾಕು ಮೈ ಮರೆಯುತ್ತಿದ್ದ. ಚೆಲುವೆಯರಾದ ಪೇಷೆಂಟ್ಸ್ ಬಂದರೆ ಸಾಕು, ಅವರ ಹಿಂದೆ ಬೀಳುತ್ತಿದ್ದ. ಕೆಲವು ಶ್ರೀಮಂತ ತರುಣಿಯರು ತಾವಾಗಿ ಅವನ ಗೆಳೆತನ ಬಯಸಿ ಅವನ ಜೊತೆ ಸುತ್ತಾಡು

ತ್ತಿದ್ದುದುಂಟು. ಬಡ ಹೆಣ್ಣು ಮಕ್ಕಳು ರೂಪಸಿಯರಾಗಿದ್ದರೂ ತಾನಾಗಿ ಅವರ ತಂಟೆಗೆ ಹೋಗುತ್ತಿರಲಿಲ್ಲ.

"ನೀನೊಂದು ಗೂಕಲು, ಹಳ್ಳಿಗುಗ್ಗು. ಹೇಗಿದ್ದೀಯ ನೋಡು. ಈಗಿನ ಕಾಲದಲ್ಲಿ ಹುಡುಗಿಯರು ಹೇಗಿರ್‍ತಾರೆ ಗೊತ್ತಾ ? ಕ್ಲಬ್‌ಗೆ ಹೋಗ್ತಾರೆ ಕಾರ್ಡ್ಸ್ ಆಡ್ತಾರೆ, ಡ್ರಿಂಕ್ಸ್ ತೊಗೋತಾರೆ, ಮಾಡ್ ಡ್ರೆಸಸ್ ಹಾಕ್ತಾರೆ. ಅರಳು ಹುರಿದಂತೆ ಇಂಗ್ಲೀಷ್‌ನಲ್ಲಿ ಮಾತಾಡ್ತಾರೆ. ನಿನ್ನನ್ನು ನನ್ನ ಹೆಂಡತಿ ಅಂತ ಹೇಳಿಕೊಳ್ಳುವುದಕ್ಕೇ ನಾಚಿಕೆಯಾಗುತ್ತೆ."

ಗಂಡನ ಆರೋಪ ಕೇಳಿ ನೊಂದ ಮಂಜುಳ ಒಂದು ದಿನ ಪ್ರಶ್ನಿಸಿದ್ದಳು.

"ನಾನು ನಿಮಗೆ ತಕ್ಕವಳಲ್ಲಾಂತ ನಿಮಗೆ ಗೊತ್ತಿತ್ತು ತಾನೆ ? ನೀವು ಯಾಕೆ ನನ್ನನ್ನು ಮದುವೆಯಾದ್ರಿ ?"

"ನಿನ್ನನ್ನು ನಾನು ಮದುವೆಯಾಗಿದ್ದು ತ್ರಿಲೋಕ ಸುಂದರೀಂತ ಅಲ್ಲ. ನನ್ನ ಅಭಿರುಚಿಗೆ ತಕ್ಕಂತಹ ಹುಡುಗೀನ್ನ ಮದುವೆ ಆಗಿದ್ದಿದ್ರೆ ಅಪ್ಪ-ಅಮ್ಮಂಗೆ ಅವಳು ಇಷ್ಟವಾಗ್ತಿರಲಿಲ್ಲ. ಮನೆ ಕುರುಕ್ಷೇತ್ರವಾಗಿರ್ತಿತ್ತು. ಬೇರೆ ಮನೆ ಮಾಡಬೇಕಾಗುತ್ತಿತ್ತು. ಆಗ ನನ್ನ ಪ್ರೆಸ್ಟೀಜ್ ಹಾಳಾಗ್ತಿತ್ತು. ನಿನ್ನನ್ನು ಮದುವೆಯಾದ್ರೆ ಅಂತಹ ಸಮಸ್ಯೆಗಳಿರುವುದಿಲ್ಲಾಂತ ಭಾವಿಸಿ ನಾನು ನಿನ್ನನ್ನು ಮದುವೆಯಾದೆ."

ಅನ್ನಪೂರ್ಣಮ್ಮ-ಚಕ್ರವರ್ತಿಗಳಿಗೆ ಸೊಸೆಯ ಬಗ್ಗೆ ತುಂಬಾ ಪ್ರೀತಿಯಿತ್ತು. ಅವಳಂತಹ ಮೃದು ಸ್ವಭಾವದ ಹುಡುಗಿಯ ಬಾಳು ಹಾಳು ಮಾಡಿದವಳು ಎಂಬ ಕೊರಗು ಇತ್ತು. ಚಕ್ರವರ್ತಿಗಳು ಆಗಾಗ್ಗೆ ಹೆಂಡತಿಯನ್ನೇ ಬೈಯ್ಯುತ್ತಿದ್ದರು. "ಮದುವೆಯಾದ್ರೆ ಸರಿಹೋಗ್ತಾನೇಂತ ಆ ಹುಡುಗೀನ್ನ ತಂದು ಕಟ್ಟಿದೆಯಲ್ಲಾ.... ಈಗ ನೋಡು ಏನಾಯ್ತೂಂತ ನಿನ್ನ ಜೊತೆ ಕಣ್ಣೀರು ಹಾಕಕ್ಕೆ ಜೊತೆ ಸಿಕ್ಕಂತಾಯ್ತು. ಬೇರೆ ಮನೆಯ ಹುಡುಗೀನ್ನ ತಂದು ಕಣ್ಣೀರಿನಲ್ಲಿ ಕೈ ತೊಳೆಯುವ ಹಾಗೆ ಮಾಡಿದೆಯಲ್ಲೆ ?"

"ನಾನೇನ್ರಿ ಮಾಡಲಿ ? ಚಂದ್ರಿ ಸತ್ತಾಗ ಇವನು ಇಲಿಮರಿಯಂತಾಗಿದ್ದುದನ್ನು ನೋಡಿ 'ಮಗ ಬದಲಾದ' ಅಂದುಕೊಂಡಿದ್ದೆ. ಆದರೆ ನಾಯಿ

ಬಾಲ ದೊಂಕೇಂತ ಈಗ ಅರ್ಥವಾಯ್ತು. ಒಂದು ಮಗುವಾದರೆ ಸರಿ ಹೋಗ್ತಾನೇನೋ ?"

ಚಂದ್ರಿಯ ಪ್ರಸಂಗ ಮಂಜುಳೆಯ ಕಿವಿಯನ್ನೂ ತಲುಪಿತ್ತು. ಚಂದ್ರಿ ಚಕ್ರವರ್ತಿಗಳ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಗಂಗಮ್ಮನ ಮಗಳು ಹುಡುಗಿ ತುಂಬಾ ಚೆಲುವೆ, ಅಷ್ಟೇ ಬುದ್ಧಿವಂತೆ. ಎರಡನೇ ವರ್ಷದ ಪಿ.ಯು.ಸಿ. ಓದುತ್ತಿದ್ದಳು. ಚಕ್ರವರ್ತಿಗಳು ಅವಳ ವಿದ್ಯಾಭ್ಯಾಸಕ್ಕೆ ತುಂಬಾ ನೆರವಾಗುತ್ತಿದ್ದರು. ಗಂಗಮ್ಮ ಮಗಳನ್ನು ಯಾರ ಮನೆಗೂ ಕೆಲಸಕ್ಕೆ ಕಳುಹಿಸುತ್ತಿರಲಿಲ್ಲ. ತುಂಬಾ ಅನಿವಾರ್ಯವಾದಾಗ ಅವಳು ಚಕ್ರವರ್ತಿಗಳ ಮನೆಗೆ ಮಾತ್ರ ಮಗಳನ್ನು ಕಳುಹಿಸುತ್ತಿದ್ದಳು. ಚಂದ್ರಿ ಕಾದಂಬರಿ ಹಾಗೂ ಸಿನಿಮಾ ಪ್ರಿಯೆ. ಅವುಗಳ ಪ್ರಭಾವದಿಂದ ಅವಳ ಮನಸ್ಸು ರಂಗು ರಂಗಿನ ಕನಸು ಕಾಣುತ್ತಿತ್ತು. ಸಿನಿಮಾಗಳಲ್ಲಿ ನಡೆಯುವಂತೆ ತನ್ನ ಚೆಲುವಿಗೆ ಮನಸೋತು ರಾಜಕುಮಾರನೊಬ್ಬ ಬರುತ್ತಾನೆಂದು ನಂಬಿದ್ದಳವಳು. ಆಗತಾನೆ ಎಂ ಬಿ. ಮುಗಿಸಿದ್ದ ಮೋಹನ ಹೊಸ ಹೂವಿಗಾಗಿ ಹಂಬಲಿಸುವ ದುಂಬಿಯಂತಾಗಿದ್ದ. ಚಂದ್ರಿಯ ಮುಗ್ಧತೆಯನ್ನು ದುರುಪಯೋಗಪಡಿಸಿ ಕೊಂಡು ಅವಳಿಗೆ ಸಿನಿಮಾ, ಹೋಟೆಲ್, ಒಡವೆ, ವಸ್ತ್ರಗಳ ಆಮಿಷ ತೋರಿಸಿ ತನ್ನ ಬಲೆಗೆ ಹಾಕಿಕೊಂಡಿದ್ದ. ಚಂದ್ರಿ ಅವನನ್ನು ನಂಬಿ, ತನ್ನ ಸರ್ವಸ್ವ ವನ್ನೂ ಅವನಿಗೆ ಸಮರ್ಪಿಸಿಕೊಂಡಿದ್ದಳು ಅವಳಿಗೆ 3 ತಿಂಗಳೆಂದು ತಿಳಿದಾಗ ಅವಳಿಗೆ ಕೈಕೊಟ್ಟಿದ್ದ. ತಾಯಿಗೆ ವಿಷಯ ತಿಳಿಸಲು ಅಂಜಿದ ಚಂದ್ರಿ ಆತ್ಮ ಹತ್ಯೆ ಮಾಡಿಕೊಂಡಿದ್ದಳು. ಈ ವಿಚಾರ ಚಕ್ರವರ್ತಿಗಳ ಕಿವಿಗೆ ಬಿದ್ದಾಗ ಅವರು ದಿಗ್ಭ್ರಾಂತರಾಗಿದ್ದರು. ಗಂಗಮ್ಮನಿಗೆ ಅಪಾರ ಹಣ ನೀಡಲು ಮುಂದಾಗಿದ್ದರು.

"ಬುದ್ಧ್ಯೋರ, ನೀವು ಲಕ್ಷ ರೂಪಾಯಿ ಕೊಡಬೋದು. ಆದ್ರೆ ಚಂದ್ರೀನ್ನ ಬದುಕಿಸಿಕೊಳ್ಳಕ್ಕಾಯ್ತದಾ? ನಮ್ಮ ಬಾಳಂತೂ ಆಳಾಗೋಯ್ತು ನಿಮ್ಮಾಗ ನನ್ನಗಳ ಬಾಳ್ಗ ಬೆಂಕಿ ಅಚ್ಚುಬುಟ್ಟ. ಅವನು ಬೇರ್ಯೋರ ಬಾಳು ಆಳ್ಮಾಡದಾಗೆ ವಸಿ ನಿಗಾ ಮಡಗಿ" ಅಂದಿದ್ದಳು.

ಚಕ್ರವರ್ತಿಗಳು ಮಗನನ್ನು ಚೆನ್ನಾಗಿ ತರಾಟೆಗೆ ತೆಗೆದುಕೊಂಡಿದ್ದರು.

"ಅವಳು ಹೇಳ್ತಾಳೇಂತ ನೀವು ನಂಬೋದಾ ? ಅವಳಿಗೂ ನನಗೂ ಏನೂ ಸಂಬಂಧಾನೇ ಇಲ್ಲ. ಯಾರದೋ ತಪ್ಪನ್ನು ನನ್ನ ಮೇಲೆ ಹಾಕಕ್ಕೆ

ಪ್ರಯತ್ನಿಸಿದ್ದಾಳೆ” ಎಂದು ದಬಾಯಿಸಿದ್ದ. ಆದರೆ ಅವರಿಬ್ಬರ ಫೋಟೋ ಚಂದ್ರಿಯ ಮನೆಯಲ್ಲಿ ಸಿಕ್ಕಿರುವುದನ್ನು ಹೇಳಿದಾಗ ತಲೆ ತಗ್ಗಿಸಿದ್ದ.

“ನೋಡು, ಗಂಗಮ್ಮ ದೊಡ್ಡ ಮನುಷ್ಯಳು. ನಮ್ಮ ಚಂದ್ರಿಗೆ ಆಗಾಗ್ಗೆ ಹೊಟ್ಟೆನೋವು ಬರ್ತಿತ್ತು. ಅದಕ್ಕೆ ಆತ್ಮಹತ್ಯೆ ಮಾಡಿಕೊಂಡಳು” ಅಂತ ಪೋಲೀಸ್ ಸ್ಟೇಷನ್‌ನಲ್ಲಿ ಹೇಳಿಕೆ ಕೊಟ್ಟಿದ್ದಾಳೆ. ನೀನು ಇನ್ನೊಂದು ಸಲ ಯಾವುದಾದ್ರೂ ಹುಡುಗಿಯರ ತಂಟೆಗೆ ಹೋದರೆ, ನಾನೇ ನಿನ್ನ ಹುಟ್ಟಡಗಿಸಿಬಿಡ್ತೀನೆ ಹುಷಾರ್ ಎಂದಿದ್ದರು. ಅವನು ತುಟಿ ತೆಗೆದಿರಲಿಲ್ಲ.

ಮಗನನ್ನು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಅಮೇರಿಕಾಕ್ಕೆ ಕಳುಹಿಸಬೇಕೆಂಬ ಆಸೆ ಅವರಿಗಿತ್ತು. ಅವನನ್ನು ಕರೆಸಿಕೊಳ್ಳಲು ಅವನ ಇಬ್ಬರು ಅಕ್ಕಂದಿರೂ ಸಿದ್ಧವಾಗಿದ್ದರು. ದೊಡ್ಡವಳು ಶ್ರೀಗೌರಿ ‘ಲಾಸ್ ಏಂಜಲೀಸ್’ನಲ್ಲಿದ್ದಳು. ಎರಡನೆಯವಳು ಶ್ರೀವಿದ್ಯಾ ನ್ಯೂಯಾರ್ಕ್‌ನಲ್ಲಿದ್ದಳು, ಶ್ರೀಗೌರಿ–ಅವಳ ಗಂಡ ಇಬ್ಬರೂ ಡಾಕ್ಟರ್ಸ್, ಶ್ರೀವಿದ್ಯಾ ಇಂಜನಿಯರ್, ಅವಳ ಗಂಡ ಡಾಕ್ಟರ್, ಮೂರನೆಯವಳು ಶ್ರೀದೇವಿ ಆಸ್ಟ್ರೇಲಿಯಾದಲ್ಲಿದ್ದಳು. ಅವಳೂ–ಅವಳ ಗಂಡ ಇಬ್ಬರೂ ಇಂಜನಿಯರ್‌ಗಳು. ಅವರೆಲ್ಲಾ ತುಂಬಾ ಅನುಕೂಲವಾಗಿ, ಸಂತೋಷವಾಗಿ ಇದ್ದರು. ಅನ್ನಪೂರ್ಣಮ್ಮ ಮಗನನ್ನು ಅಮೇರಿಕಾಕ್ಕೆ ಕಳುಹಿಸಲು ಒಪ್ಪಿರಲಿಲ್ಲ.

“ಅವನನ್ನು ಅಮೇರಿಕಾಕ್ಕೆ ಕಳುಹಿಸಿದರೆ ಅವನು ಅಲ್ಲಿಂದ ಖಂಡಿತಾ ವಾಪಸ್ಸು ಬರಲ್ಲಾರಿ ಅವನು ತಾನೆ ಅಲ್ಲಿಗೆ ಹೋಗಿ ಏನ್ಮಾಡಬೇಕು ?”

“ಮುಂದಕ್ಕೆ ಓದ್ತಾನೆ ಕಣೆ.”

“ಡೊನೇಷನ್ ಕೊಟ್ಟು ಎಂ.ಬಿ.ಬಿ.ಎಸ್. ಓದಿಸಿದ್ರಿ. ಅವನು ಕೇಳಿದಾಗಲೆಲ್ಲಾ ಹಣ ಕೊಡ್ತಾ ಬಂದ್ರಿ. ಅವನು ಮಾಡಿದ ತಪ್ಪುಗಳನ್ನು ಕ್ಷಮಿಸಿದ್ರಿ, ಏನು ಪ್ರಯೋಜನವಾಯ್ತು? ಅಮೇರಿಕಾಕ್ಕೆ ಹೋದ್ರೆ ಅವನು ಖಂಡಿತಾ ವಾಪಸ್ಸು ಬರಲ್ಲ ಅವನಿಗೊಂದು ಕ್ಲಿನಿಕ್ ಹಾಕಿಕೊಡಿ. ಅವನು ಒಳ್ಳೆಯವನಾದ್ರೆ ಮುಂದೆ ನರ್ಸಿಂಗ್ ಹೋಂ ಕಟ್ಟಿಸಿಕೊಡೋಣ.”

ಮೋಹನನಿಗೂ ವಿದೇಶದ ಹುಚ್ಚಿರಲಿಲ್ಲ. ತಂದೆ ಗಳಿಸಿರುವ ಲಕ್ಷಾಂತರ ರೂಪಾಯಿ ಆಸ್ತಿ ಇಂದಲ್ಲ ನಾಳೆ ತನ್ನದಾಗುವುದೆಂದು ಅವನಿಗೆ ಗೊತ್ತಿತ್ತು. ತಂದೆ ಕ್ಲಿನಿಕ್ ಹಾಕಿ ಕೊಟ್ಟಿದ್ದರು. ಅವನ ಹಸ್ತ ಗುಣ ಚೆನ್ನಾಗಿದ್ದುದ

ರಿಂದ ಕ್ಲಿನಿಕ್ ಕೂಡ ಚೆನ್ನಾಗಿ ನಡೆಯುತ್ತಿತ್ತು. ಆದರೆ ಅವನು ಮಾತ್ರ ಬದಲಾಗಿರಲಿಲ್ಲ. ಅವನಿಗೆ ಮೊದಲಿಂದಲೂ 'ಸಂಸಾರ'ವೆಂದರೆ ಅಲರ್ಜಿ, ಮದುವೆ, ಹೆಂಡತಿ, ಮಕ್ಕಳು ಬೇಡದ ವಿಷಯಗಳಾಗಿದ್ದವು ಅವನು ಸ್ವಚ್ಛಂದವಾಗಿ ಹಕ್ಕಿಯಂತೆ ಇರಲು ಬಯಸುತ್ತಿದ್ದ. ಆದರೆ ತಂದೆಯ ಎದುರು 'ನನಗೆ ಮದುವೆ ಬೇಡ' ಎಂದು ಹೇಳುವ ಧೈರ್ಯ ಅವನಿಗಿರಲಿಲ್ಲ.

ಮಂಜುಳ 12 ಗಂಟೆಯವರೆಗೂ ಗಂಡನಿಗಾಗಿ ಕಾದು ಮಲಗಿದಳು. ತನ್ನನ್ನು ಕರೆದೊಯ್ಯಲು ಬಂದಿರುವ ತಂದೆ–ತಾಯಿ, ತಮ್ಮ ಮನೆಯಲ್ಲಿ ಉಳಿದುಕೊಳ್ಳದಿರುವುದು ತನ್ನ ಪುಣ್ಯ ಎನ್ನಿಸಿತು. ತವರಿಗೆ ಹೋದಾಗಲೂ ಮಂಜುಳ ತಂದೆ-ತಾಯಿಯ ಬಳಿ ತನ್ನ ದುಃಖ ತೋಡಿಕೊಂಡಿರಲಿಲ್ಲ. ಅಳಿಯ ತುಂಬಾ ಒಳ್ಳೆಯವನೆಂದೇ ಅವಳ ತಂದೆ-ತಾಯಿ, ನಂಬಿದ್ದರು

ವಾರದ ಹಿಂದೆ ಅವಳ ಅತ್ತೆ 'ಸೀಮಂತ' ಇಟ್ಟುಕೊಳ್ಳುವುದರ ಬಗ್ಗೆ ಪ್ರಸ್ತಾಪಿಸಿದ್ದರು. ಮಂಜುಳಾಗೆ ಯಾಕೋ ಅವೆಲ್ಲಾ ಬೇಡವೆನ್ನಿಸಿತ್ತು. ಚಕ್ರವರ್ತಿಗಳು ಕಡ್ಡಿ ಮುರಿದಂತೆ ಹೇಳಿದರು. "ಅವೆಲ್ಲಾ ಏನೂ ಬೇಡ. ನೀನು ಸೀಮಂತ ಇಟ್ಟುಕೊಂಡು ಊರಿನವರನ್ನೆಲ್ಲಾ ಊಟಕ್ಕೆ ಕರಿ. ನಿನ್ನ ಮಗರಾಯ ಮನೆಗೆ ರಾತ್ರಿ 12 ಗಂಟೆಗೆ ಬರಲಿ. ಬಂದವರೆದುರಿಗೆ ನಮ್ಮ ಮರ್ಯಾದೆ ಹೋಗುತ್ತಷ್ಟೆ. ನಿನ್ನ ಸೊಸೆಗೆ ಸುಖವಾಗಿ ಹೆರಿಗೆ ಆಗಲಿ. ಮಗು ನಾಮಕರಣವನ್ನ ಗ್ರಾಂಡಾಗಿ ಮಾಡೋಣ" ತಂದೆ ತಾಯಿಯರಿಗೂ ಮಂಜುಳ ಸೀಮಂತ-ಆರತಿ ಏನೂ ಬೇಡವೆಂದು ಹೇಳಿದ್ದಳು.

ಅಂದು ರಾತ್ರಿ ಮೋಹನ ಮನೆಗೆ ಬಂದಾಗ ಒಂದು ಗಂಟೆಯಾಗಿತ್ತು. ಚಕ್ರವರ್ತಿಗಳು ಎದ್ದೇ ಇದ್ದರು.

"ಯಾಕೋ ಇಷ್ಟು ತಡ ?"

"ನನ್ನ ಫ್ರೆಂಡ್‌ಗೆ ಆಕ್ಸಿಡೆಂಟ್ ಆಗಿ ಆಸ್ಪತ್ರೆಯಲ್ಲಿದ್ದಾನೆ. ಅವನಿಗೆ ಜ್ಞಾನಾನೇ ಬಂದಿರಲಿಲ್ಲ. ಅವನ ಮನೆಯವರೆಲ್ಲಾ ತುಂಬಾ ಗಾಬರಿಯಾಗಿದ್ರು. ಅವನಿಗೆ ಜ್ಞಾನ ಬರುವವರೆಗೂ ಇರಬೇಕಾಯ್ತು."

"ಯಾವ ಆಸ್ಪತ್ರೆಯಲ್ಲಿದ್ದಾನೆ ?"

"ಮಾರ್ಥಾಸ್‌ನಲ್ಲಿದ್ದಾನೆ."

"ನಾಳೆ ನಿನ್ನ ಹೆಂಡತಿ ಊರಿಗೆ ಹೋಗುವ ವಿಚಾರ ನಿನಗೆ ಗೊತ್ತಿದೆ ತಾನೆ ? ನಾಳೆ ನಿಮ್ಮತ್ತೆ-ಮಾವ ತಿಂಡಿಗೆ ಒಂಭತ್ತು ಗಂಟೆಯ ಹೊತ್ತಿಗೆ ಇಲ್ಲಿಗೇ ಬರ್ತಾರೆ. ಅವರು ನಿನ್ನ ಹೆಂಡತೀನ್ನ ಕರೆದುಕೊಂಡು ಹೊರಡುವವರೆಗೂ ನೀನು ಕ್ಲಿನಿಕ್‌ಗೆ ಹೋಗಬೇಡ."

"ಆಯ್ತಪ್ಪಾ."

"ಆಕ್ಸಿಡೆಂಟ್ ಆಗಿ ಆಸ್ಪತ್ರೆಯಲ್ಲಿರುವ ನಿನ್ನ ಫ್ರೆಂಡ್ ಹೆಸರೇನು ??

"ಅಶೋಕ್ ಕುಲಕರ್ಣೀಂತ."

"ಯಾವ ವಾರ್ಡ್‌ನಲ್ಲಿದ್ದಾನೆ ?"

"ಸ್ಪೆಷಲ್ ವಾರ್ಡ್‌ನಲ್ಲಿದ್ದಾನೆ, ಯಾಕಪ್ಪಾ ?"

"ನಮ್ಮ ರಂಗರಾಯರೂ 'ಹಾರ್ಟ್ ಅಟ್ಯಾಕ್' ಆಗಿ ಮಾರ್ಥಾಸ್‌ನಲ್ಲೇ ಇದ್ದಾರೆ. ನಾಳೆ ಅವರನ್ನು ನೋಡಕ್ಕೆ ಹೋದಾಗ ನಿನ್ನ ಫ್ರೆಂಡ್‌ನೂ ನೋಡಿಕೊಂಡು ಬರ್ತೀನಿ. ಅದಕ್ಕೆ ಕೇಳಿದೆ."

ಮೋಹನ್ ಮಾತನಾಡದೆ ಉಗುಳು ನುಂಗಿದ. ಅವನ ಬಾಯಿಂದ ಮಾತೇ ಹೊರಡಲಿಲ್ಲ. ಅಂದು ಅವನಿಗೆ ಹೊಸಬಳೊಬ್ಬಳ ಪರಿಚಯವಾಗಿತ್ತು. ಅಂದು ಅವನಿಗೆ ಪರಾಂಜಪೆಯ ಚೆಲುವು, ಹಾವ-ಭಾವ, ಮಾತು ಕಥೆ ನೋಡಿ ಅವನು ಮೈಮರೆತಿದ್ದ, ಪರಾಂಜಪೆ ದೊಡ್ಡ ಇಂಡಸ್ಟ್ರಿಯಲಿಸ್ಟ್ ಆರ್. ಕೆ. ಪರಾಂಜಪೆಯ ಕುಟುಂಬಕ್ಕೆ ಸೇರಿದವಳು. ಆರ್. ಕೆ. ಪರಾಂಜಪೆಯ ಮಗ ಉದಯ್ ಪರಾಂಜಪೆ ಈಗ ವಿದೇಶದಲ್ಲಿದ್ದ. ಅವನ ಹೆಂಡತಿಯೇ 'ಸ್ವಾತಿ' ಅವಳ ಪರಿಚಯವಾದೊಡನೆ 'ನಿಧಿ' ಸಿಕ್ಕಂತೆ ಅವನು ಹಿಗ್ಗಿದ್ದ. ಅವಳು ಅವನನ್ನು ಬನ್ನೇರುಘಟ್ಟದ ಬಳಿ ಇದ್ದ ತನ್ನ ಗೆಸ್ಟ್ ಹೌಸ್‌ಗೆ ಕರೆದೊಯ್ದಿದ್ದಳು. ಮೂರು ಗಂಟೆ ಮೂರು ನಿಮಿಷಗಳಂತೆ ಕಳೆದಿತ್ತು. ಅವನಿಗೆ ಹೆಂಡತಿ, ತಂದೆ-ತಾಯಿ, ಅತ್ತೆ-ಮಾವ ಯಾರ ನೆನಪೂ ಆಗಿರಲಿಲ್ಲ.

"ನೀನು ಯಾವ ಆಸ್ಪತ್ರೆಗೂ ಹೋಗಿರಲಿಲ್ಲಾಂತ ನನಗೆ ಚೆನ್ನಾಗಿ ಗೊತ್ತು. ನಾಳೆ ನಿನ್ನ ಹೆಂಡತಿ ತವರಿಗೆ ಹೊರಟಿದ್ದಾಳೆ ಅನ್ನುವ ಜ್ಞಾನ ನಿನಗೆ ಬೇಡವಾ ? ಆ ಹುಡುಗಿ ಸರಿಯಾಗಿ ಊಟಾನೂ ಮಾಡಲಿಲ್ಲ ಹೋಗಿ ಸಮಾಧಾನ ಹೇಳು."

"ಅವನು ಮಾತನಾಡದೆ ರೂಮು ಸೇರಿ ಬಟ್ಟೆ ಬದಲಾಯಿಸಿದ. ಮಂಜುಳಾಗೆ ಎಚ್ಚರವಿದ್ದರೂ ಕಣ್ಣು ಮುಚ್ಚಿ ನಿದ್ರೆ ನಟಿಸಿದ್ದಳು ಅವನಾಗಿ ಮಾತನಾಡಿಸುವನೇನೋ ? ಎನ್ನುವ ಆಸೆ ಅವಳಿಗೆ ಮಾತನಾಡಿಸಿದರೆ ಅವಳು ಅತ್ತು-ಕರೆದು ರಾಮಾಯಣ ಮಾಡುತ್ತಾಳೇನೋ ಎನ್ನುವ ಭಯ ಅವನಿಗೆ. ಹೀಗಾಗಿ ಇಬ್ಬರೂ ಮೌನವಾಗೇ ಆ ರಾತ್ರಿ ಕಳೆದರು.

ಮರು ದಿನ ಬೆಳಗ್ಗೆ ಮಂಜುಳಾ ತಲೆಗೆ ಸ್ನಾನ ಮಾಡಿ ದೇವರಿಗೆ ದೀಪ ಹಚ್ಚಿದಳು. ಅವಳ ಅತ್ತೆ ಬೀಗರಿಗೆ ತಿಂಡಿ-ಮಾಡಿಸುವ ಸಂಭ್ರಮದಲ್ಲಿದ್ದರು. ಇತ್ತೀಚೆಗೆ ಅಡುಗೆ-ಕೆಲಸಕ್ಕೆಂದು 26 ವರ್ಷದ ರಂಗನಾಥ ಎನ್ನುವ ಯುವಕ ನನ್ನು ನೇಮಿಸಿಕೊಂಡಿದ್ದರು. ಮಂಜುಳಾ ಹಿಂದಿನ ದಿನವೇ ತನ್ನ ಸಾಮಾನು ಸರಂಜಾಮುಗಳನ್ನು ಪ್ಯಾಕ್ ಮಾಡಿಟ್ಟಿದ್ದಳು ಮೋಹನನಿಗೆ ಎಚ್ಚರ ವಾದಾಗ ಒಂಭತ್ತು ಗಂಟೆ. ಅವನು ಜೋರಾಗಿ 'ಮಂಜುಳಾ' ಎಂದು ಕೂಗಿದ.

"ಏನು ?" ಕಾಫಿ ತಂದ ಮಂಜುಳ ಕೇಳಿದಳು

"ಎಷ್ಟು ಹೊತ್ತಿಗೆ ಹೊರಡ್ತೀರ ನೀವು ?"

"ಹನ್ನೊಂದು ಗಂಟೆಗೆ."

"ನೆನ್ನೆ ಬೇಗ ಬರಬೇಕೂಂತಿದ್ದೆ ಆದರೆ ಆಗಲೇ ಇಲ್ಲ...."

"ಇವತ್ತಾದ್ರೂ ಇದ್ದು ನನ್ನನ್ನು ಕಳುಹಿಸಿ ಕೊಡಿ. ನನಗಾಗಿ ನಾನು ನಿಮ್ಮನ್ನ ಕೇಳ್ತಿಲ್ಲ ನೀವು ಇಲ್ಲದೇ ಇದ್ರೆ ನಮ್ಮಾಯಿ-ತಂದೆ ನೊಂದು ಕೊಳ್ತಾರಲ್ಲಾಂತ ಹೇಳ್ತಿದ್ದೀನೆ ಒಂದು ಪಕ್ಷ ನಾನೇನಾದ್ರೂ ಹೆರಿಗೆಯಲ್ಲಿ ಸತ್ತುಹೋದರೆ ಬರದೇ ಇರಬೇಡಿ, ಯಾಕೇಂದ್ರೆ...."

"ಮಂಜುಳ."

"ನೀವು ಬರದೇ ಇದ್ರೆ ನಮ್ತಂದೆ-ತಾಯಿ, ನಿಮ್ತಂದೆ-ತಾಯಿ, ಬೇಜಾರು ಮಾಡಿಕೊಳ್ತಾರೆ. ಅಕ್ಕಪಕ್ಕದವರು ನೂರೆಂಟು ಕಥೆ ಕಟ್ತಾರೆ...."

"ಏನು ಮಾತಾಡ್ತಿದ್ದೀಯ ಮಂಜು ? ನನಗೆ ನಿನ್ನ ಮೇಲೆ ಪ್ರೀತಿ ಇಲ್ವಾ ? ಪ್ರತಿ ವಾರ ನಿನ್ನನ್ನು ನೋಡಲು ನಾನು ಬರ್ತೀನಿ. ನಿನ್ನನ್ನು ಬಿಟ್ಟು ನಾನು ಇರಬಲ್ಲೆನಾ ?"

ಮಂಜುಳ ನಕ್ಕಳು. ಗಂಡನ ಮಾತಿನಲ್ಲಿ ನಿಜಾಂಶವಿರುವುದಿಲ್ಲವೆಂದು ಅವಳಿಗೆ ಗೊತ್ತಿತ್ತು. ಆದರೂ ಆ ಕ್ಷಣದಲ್ಲಿ ಅವನ ಮಾತುಗಳು ಅವಳಿಗೆ ಮುದ ನೀಡಿದವು.

ಮೈಸೂರು ತಲುಪಿದ ಮೇಲೆ ಮಂಜುಳಾಗೆ ಹಾಯೆನ್ನಿಸಿತು. ಬೆಂಗಳೂರಿನ ದೊಡ್ಡ ಮನೆಯಲ್ಲಿ ಓಡಾಡಿ ಅವಳಿಗೆ ಸಾಕಾಗಿ ಹೋಗುತ್ತಿತ್ತು. ಅಲ್ಲಿ ಅವಳಿಗೆ ಕೆಲಸವೇನೂ ಇರಲಿಲ್ಲ. ಆದರೆ ಕೆಲಸದ ಮೇಲ್ವಿಚಾರಣೆ ಮಾಡುವುದರಲ್ಲಿ ಅವಳು ತುಂಬಾ ಸುಸ್ತಾಗಿಬಿಡುತ್ತಿದ್ದಳು. ಅಕ್ಕರೆ ತೋರುವ ಅತ್ತೆ-ಮಾವ ಇದ್ದರೂ ತನ್ನ ಮಾತು-ಕಥೆ, ಭಾವನೆಗಳಿಗೆ ಮೂರು ಕಾಸಿನ ಬೆಲೆ ಕೊಡದ ಗಂಡನ ವರ್ತನೆಯಿಂದ ಅವಳ ಮನಸ್ಸು ಯಾವಾಗಲೂ ಒಂದು ರೀತಿಯ ಗೊಂದಲದಲ್ಲಿ ಮುಳುಗಿರುತ್ತಿತ್ತು.

ತಾಯಿ ಮನೆಗೆ ಬಂದ ಮೇಲೆ ಅವಳಿಗೆ ಒಂದು ರೀತಿಯ ನೆಮ್ಮದಿ ಸಿಕ್ಕಿತು. ಆ ಮನೆಯಲ್ಲಿ ಅವಳಿಗೆ ಪ್ರಿಯವಾದ ಜಾಗವೆಂದರೆ ಮನೆಯ ಹಿಂಭಾಗದಲ್ಲಿದ್ದ ದೊಡ್ಡ ಸಂಪಿಗೆ ಮರ. ಗೆಳತಿಯರನ್ನು ಕರೆದುಕೊಂಡು ಬಂದು. ಆ ಮರದ ಕೆಳಗೆ ಕುಳಿತು ಅಮ್ಮ ಕೊಟ್ಟ ತಿಂಡಿ ತಿನ್ನುತ್ತಾ ಹರಟುತ್ತಿದ್ದುದುಂಟು. ಗೆಳತಿಯರ ಜೊತೆ ಸಿನಿಮಾ-ನಾಟಕಗಳಿಗೆ ಇದ್ದಕ್ಕಿದ್ದಂತೆ ಹೊರಡುತ್ತಿದ್ದಳು. ಆಗ ಯಾವ ಜವಾಬ್ದಾರಿಯೂ ಇಲ್ಲದಿದ್ದುದರಿಂದ ಆರಾಮವಾಗಿದ್ದಳು. ಆದರೆ ಈಗ ?

ಮಂಜುಳ ಊರಿಗೆ ಬಂದಿದ್ದಾಳೆಂದು ತಿಳಿದೊಡನೆ ಅವಳ ಗೆಳತಿಯರು ಅವಳನ್ನು ನೋಡಲು ಬಂದರು. ಎಲ್ಲರೂ ಒಟ್ಟಿಗೆ ಸೇರಿ ಬಹಳ ದಿನಗಳಾಗಿದ್ದವು. ವಾರದ ಕೊನೆಯಲ್ಲಿ ಗಂಡನ ಆಗಮನಕ್ಕಾಗಿ ಕಾದಳು. ಆದರೆ ಮೋಹನ್ ಬರಲಿಲ್ಲ. ದಿನಗಳು ಉರುಳಿದವು. ಅವಳತ್ತೆ-ಮಾವ ವಾರಕ್ಕೆರಡು-ಮೂರು ದಿನ ಫೋನ್ ಮಾಡುತ್ತಿದ್ದರು. ಒಂದು ದಿನ ರಾತ್ರಿ 12 ಗಂಟೆಯಲ್ಲಿ ಅವಳು ಗಂಡನಿಗೆ ಫೋನ್ ಮಾಡಿದಳು. ಮೋಹನ್ ಮನೆಯಲ್ಲಿರಲಿಲ್ಲ.

'ಹಣ, ಒಡವೆ, ವಸ್ತ್ರ, ಆಸ್ತಿ-ಪಾಸ್ತಿ ಇದ್ದು ಸಹ ನಾನು ಅಸುಖಿ' ಎನ್ನಿಸಿದಾಗ ಅವಳಿಗೆ ದುಃಖ ಉಕ್ಕಿ ಬಂತು.

ಅಮೃತಾ ಟೆಸ್ಟ್ ಪೇಪರ್ ತಿದ್ದುತ್ತಿದ್ದವಳು ಪೆನ್ ಕೆಳಗಿಟ್ಟು ಹೇಳಿದಳು. "ಯಾಕೋ ತುಂಬಾ ಬೇಜಾರು. ಈ ಪೇಪರ್ ಕರೆಕ್ಷನ್ ಮುಗಿಯುವುದೇ ಇಲ್ಲವೇನೋ ?" ಅನ್ನಿಸ್ತಿದೆ.

"ಮನೆಯಲ್ಲೂ ಟ್ಯೂಷನ್ಸ್ ಹೇಳಿ, ಸ್ಕೂಲ್‌ನಲ್ಲೂ ಇಷ್ಟು ಸಿನ್ಸಿಯರ್ ಆಗಿ ಕೆಲಸ ಮಾಡುವವರನ್ನು ನಾನೀಗಲೇ ನೋಡ್ತಿರುವುದು. ಅದು ಹೇಗೆ ನೀವು ಅಷ್ಟು ತಾಳ್ಮೆಯಿಂದ ಪಾಠ ಹೇಳ್ತೀರಾ ?" ಎಂದು ಕೇಳಿದರು ಅವಳ ಸಹೋದ್ಯೋಗಿ ಗಿರೀಶ್.

"ಯಾಕೆ ಹಾಗೆ ಕೇಳ್ತೀರಾ ? ಮನೆಯಲ್ಲಿ ನೀವು ಟ್ಯೂಷನ್ಸ್ ಹೇಳಲ್ವಾ ?"

"ಸದ್ಯಕ್ಕಂತೂ ಹೇಳ್ತಿಲ್ಲ. ನಾನು ಫಿಸಿಕ್ಸ್. ಎಂ.ಎಸ್‌ಸಿ.ಗೆ ಕಟ್ಟಿದ್ದೇನೆ, ಎಂ.ಎಸ್‌ಸಿ. ಆಗ್ತಿರುವ ಹಾಗೆ ಈ ಕೆಲಸ ಬಿಟ್ಟು ಯಾವುದಾದರೂ ಪ್ರೈವೇಟ್ ಪಿ.ಯು. ಕಾಲೇಜಿಗೆ ಹೋಗ್ತೀನಿ. ಅಮೇಲೆ ಹಣದ ಹೊಳೆ ಹರಿಸಬಹುದು."

"ಅದು ಹೇಗೆ ?"

"ಪಿ ಯು. ಸ್ಟೂಡೆಂಟ್ಸ್ ಹತ್ತಿರ 2500–3000 ರೂ. ತೆಗೆದುಕೊಳ್ಳಬಹುದು. ನಾಲ್ಕು ಬ್ಯಾಚ್‌ಗಳಿಗೆ ಪಾಠ ಇಟ್ಕೊಂಡರೆ ಸಾಕು, ವರ್ಷಕ್ಕೆ 1½–2 ಲಕ್ಷ ಧಾರಾಳವಾಗಿ ಸಂಪಾದಿಸಬಹುದು."

"ಹೌದಾ ?" ಆಶ್ಚರ್ಯದಿಂದ ಕೇಳಿದಳು ಅಮೃತ.

"ಹೌದು ಮ್ಯಾಡಂ. ನೀವು ಮ್ಯಾಥ್ಸ್ ಎಂ.ಎಸ್‌ಸಿ. ಮಾಡಿಕೊಂಡರೆ, ಮನೆಪಾಠಗಳಿಂದ ತುಂಬಾ ಹಣ ಸಂಪಾದಿಸಬಹುದು."

"ನಾನು ರಜ ಹಾಕಿ ಎಂ.ಎಸ್‌ಸಿ. ಮಾಡುವ ಸ್ಥಿತಿಯಲ್ಲಿಲ್ಲ ಸಾರ್."

"ರಜ ಯಾಕೆ ಹಾಕ್ತೀರ ? ಕರೆಸ್ಪಾಂಡೆನ್ಸ್‌ನಲ್ಲಿ ಮಾಡಿ."

ಅವಳು ಉತ್ಸಾಹದಿಂದ ಆತನ ಬಳಿ ವಿಳಾಸ ತೆಗೆದುಕೊಂಡಳು. ಆ ದಿನವೇ ಕಾಗದ ಬರೆದು ಪ್ರಾಸ್ಪೆಕ್ಟಸ್ ತರಿಸಿಕೊಂಡಳು. ಅವಳು ಮುಂದೆ ಓದುವ ನಿರ್ಧಾರ ಮಾಡಿರುವುದನ್ನು ಕೇಳಿ ಶೇಖರ್ ತಾಳ್ಮೆ ಕಳೆದುಕೊಳ್ಳದೆ ಕೇಳಿದ "ಈಗ ನೀನು ಎಂ.ಎಸ್‌ಸಿ. ಮಾಡಲಿಲ್ಲಾಂತ ಯಾರು ಅಳ್ತಿದ್ದಾರೆ ? ನೀನು ಖಂಡಿತಾ ಎಂ.ಎಸ್‌ಸಿ. ಮಾಡು. ಆದರೆ ಈಗಲ್ಲ; ಮಗು ಕೊಂಚ

ದೊಡ್ಡದಾದ ಮೇಲೆ ಮಾಡು. ಇಲ್ಲದಿದ್ರೆ ಅಮ್ಮನಿಗೆ ತುಂಬಾ ಕಷ್ಟ ವಾಗುತ್ತೆ."

"ನೋಡಿ, ನೀವು ಸುಮ್ಮನೆ ಏನೇನೋ ಹೇಳಿ ನನ್ನ ತಲೆ ಕೆಡಿಸಬೇಡಿ. ನಾನು ಎಂ ಎಸ್ ಸಿ ಮಾಡಲೇಬೇಕು. ಎಂ.ಎಸ್ ಸಿ. ಮಾಡೋದ್ರಿಂದ ನಮಗೆ ತುಂಬಾ ಅನುಕೂಲವಾಗತ್ತೆ ಕಣ್ರಿ."

ಶೇಖರ ಏನೂ ಬದಲು ಹೇಳಲಿಲ್ಲ. ಹೇಳಿದರೂ ಏನೂ ಪ್ರಯೋಜನ ವಾಗದೆಂದು ಅವನಿಗೆ ತಿಳಿದಿತ್ತು. ತಾನು ಮದುವೆಯಾದರೂ ತಾಯಿಗೆ ತನ್ನ ಹೆಂಡತಿಯಿಂದ ಏನೂ ಪ್ರಯೋಜನವಾಗಲಿಲ್ಲವಲ್ಲಾ ಎಂದು ಬೇಸರವೂ ಆಯಿತು.

ಮಧ್ಯಮ ವರ್ಗದ ಮನೆಯಿಂದ ಹೆಣ್ಣು ತಂದರೂ ಅವಳಿಂದ ತಮಗೆ ಯಾವ ರೀತಿಯ ಸಹಕಾರವೂ ಸಿಗುತ್ತಿಲ್ಲವಲ್ಲಾ ಎಂಬ ಕೊರಗು ಸರೋಜಮ್ಮ ನಿಗೆ ಇದ್ದೇ ಇತ್ತು. ಒಂದು ಸಂತಸದ ಸಂಗತಿಯೆಂದರೆ, ಅವಳು ಅವರ ತಂಟೆಗೆ ಬರುತ್ತಿರಲಿಲ್ಲ, ವಿನಾಃಕಾರಣ ದೂರುತ್ತಿರಲಿಲ್ಲ. ಬೇರೆ ಮನೆಯ ಸೊಸೆಯರಂತೆ ಕಾಸಿಗೆ ಕಾಸು ಲೆಕ್ಕ ಕೇಳುತ್ತಿರಲಿಲ್ಲ. ಅಡಿಗೆ ಮನೆಗೆ ಅವಳು ಪ್ರವೇಶಿಸುತ್ತಲೇ ಇರಲಿಲ್ಲವಾದ್ದರಿಂದ, ಅವರಿಗೆ ಅಡಿಗೆ ಮನೆಯಲ್ಲಿ ತುಂಬಾ ಸ್ವಾತಂತ್ರ್ಯವಿತ್ತು. ಆದರೆ ಅಡಿಗೆ ತಿಂಡಿ ಮಾಡಿಕೊಂಡು, ಮಗುವನ್ನೂ ನೋಡಿಕೊಳ್ಳುವುದು ಅವರಿಗೆ ಬಹಳ ಕಷ್ಟವೆನ್ನಿಸುತ್ತಿತ್ತು. ಅವರ ಮನಃ ಕಾಡುತ್ತಿದ್ದುದು ಮಗನ ಪ್ರೀತಿಗೆ ಸ್ಪಂದಿಸದ ಸೊಸೆಯ ವರ್ತನೆ! ಅವರು ಬೇಸರ ಮಾಡಿಕೊಳ್ಳುತ್ತಿದ್ದುದು ಮಗನ ಹೀನ ಅದೃಷ್ಟದ ಬಗ್ಗೆ. ಸಾಧಾರಣ ಕೆಲಸದಲ್ಲಿರುವ ಮಗನಿಗೆ ಕೆಲಸದಲ್ಲಿರುವ ಹುಡುಗಿಯನ್ನು ತಂದು ಮದುವೆ ಮಾಡಿದರೆ ಸಂತೋಷವಾಗುತ್ತಾನೆಂದು ಭಾವಿಸಿ ಅಮೃತಾಳನ್ನು ಸೊಸೆ ಮಾಡಿಕೊಂಡಿದ್ದರು. ಮಧ್ಯಮ ವರ್ಗದ ಮನೆಯ ಹುಡುಗಿಯಾದರೆ ಹೊಂದಿಕೊಳ್ಳುತ್ತಾಳೆಂಬ ಅಭಿಪ್ರಾಯ ಅವರದಾಗಿತ್ತು. ಆದರೆ ಅವರು ಅಂದುಕೊಂಡಿದ್ದೇ ಒಂದು; ಆಗಿದ್ದೇ ಒಂದು. ಮಗನಿಗೆ ಮದುವೆಯಾದರೂ ಅವರಿಗೆ ಅಡುಗೆ ಮನೆಯಿಂದ ಬಿಡುಗಡೆ ಸಿಕ್ಕಿರಲಿಲ್ಲ. ತಾಯಿಗೆ ತೊಂದರೆ ಯಾಗುತ್ತದೆಯಲ್ಲಾ ಎಂದು ಶೇಖರ ಆದಷ್ಟು ಎಲ್ಲಾ ಕೆಲಸ ಮಾಡಿಕೊಡು ತ್ತಿದ್ದ. ಮಗುವನ್ನು ತಾನೇ ನೋಡಿಕೊಳ್ಳುತ್ತಿದ್ದ. ಒಮ್ಮೊಮ್ಮೆ ತಾನೇ

ಬೇಗ ಸ್ನಾನ ಮಾಡಿ ಅಡುಗೆಗೆ ಇಡುತ್ತಿದ್ದ. ಸೊಸೆ ತನಗೂ, ಮನೆಗೂ ಸಂಬಂಧವೇ ಇಲ್ಲ ಎನ್ನುವಂತೆ ವರ್ತಿಸುವುದು ಅವರಿಗೆ ನುಂಗಲಾರದ ತುತ್ತಾಗಿತ್ತು.

ಒಮ್ಮೆ ಸರೋಜಮ್ಮ ವೈರಲ್ ಜ್ವರ ಬಂದು ಹಾಸಿಗೆ ಹಿಡಿದಿದ್ದರು. ಎದ್ದು ಕುಳಿತುಕೊಳ್ಳಲೂ ಆಗುತ್ತಿರಲಿಲ್ಲ. ಆಗ ಕೂಡ ಅಮೃತಾ ಅಡಿಗೆ ಮನೆಗೆ ಕಾಲಿಟ್ಟಿರಲಿಲ್ಲ. ಅಂದು ಮೊದಲ ಬಾರಿ ಶೇಖರ್ ಹೆಂಡತಿಯೊಡನೆ ಜೋರಾಗಿ ಜಗಳವಾಡಿದ್ದ.

"ಅಮ್ಮ ಸಾಯ್ತಾ ಬಿದ್ದಿದ್ದಾಳೆ. ನಾನು ಮಗೂನೂ ನೋಡಿಕೊಂಡು ಅಡಿಗೆ ಮನೆ ಕೆಲಸಾನೂ ಹೇಗೆ ಮಾಡಲಿ ? ನೀನು ಮಹಾರಾಣಿ ಅಂದ್ಕೊಂಡಿದ್ದೀಯ ? ಮಗೂನ್ನ ನೋಡ್ಕೋ ಇಲ್ಲ ಅಡಿಗೆ ಮಾಡು."

"ಹುಡುಗರಿಗೆ ಪರೀಕ್ಷೆ ಸಮಯ. ನಾನು ಪಾಠ ಹೇಳಲೇಬೇಕು. ನೀವು ಬೇರೆ ಏನಾದರೂ ವ್ಯವಸ್ಥೆ ಮಾಡಿಕೊಳ್ಳಿ."

"ಇದು ನಿನ್ನ ಮನೆ ಕಣೇ. ಇವನು ನಿನ್ನ ಮಗ. ತಾಯಿಯಾದ ನೀನು ಇಷ್ಟೊಂದು ಉದಾಸೀನ ಮಾಡಿದ್ರೆ ಆ ಮಗು ಗತಿಯೇನು ?"

"ನಾನು ನನಗೋಸ್ಕರ ಇದೆಲ್ಲಾ ಮಾಡ್ತಿದ್ದೀನೇನ್ರಿ ? ಹಗಲು-ರಾತ್ರಿ ದುಡಿಯುತ್ತಾ ಇರೋದು ಅವನಿಗೋಸ್ಕರ ತಾನೆ ? ನಾನು ಸಂಪಾದಿಸಿದ್ದೆಲ್ಲಾ ಅವನಿಗೆ ಅಲ್ವಾ ?"

"ಜೀವನದಲ್ಲಿ ಹಣವೊಂದೇ ಮುಖ್ಯವಲ್ಲ ಅಮೃತ. ಒಂದು ದಿನ ಸ್ಕೂಲ್‌ಗೆ ರಜ ಹಾಕು ಅಮ್ಮನ್ನ, ಮಗೂನ್ನ ನೋಡ್ಕೋ ಟ್ಯೂಷನ್ಸ್ ನಾನು ಮನೆಯಲ್ಲಿದ್ದಾಗ ಹೇಳು."

ಅವನು ಹೇಳಿದ್ದರಲ್ಲಿ ಯಾವ ತಪ್ಪೂ ಇರಲಿಲ್ಲ. ಅವಳ ಬಳಿ ಬೇಕಾದಷ್ಟು ಸಿ.ಎಲ್.ಗಳಿದ್ದವು. ಆದರೆ ರಜ ಹಾಕಿ ಮಗುವನ್ನೂ ಅತ್ತೆಯನ್ನೂ ನೋಡಿಕೊಳ್ಳುವಷ್ಟು ಒಳ್ಳೆಯ ಮನಸ್ಸು ಅವಳಿಗಿರಲಿಲ್ಲ. ಶೇಖರನ ಪಾಡು ನೋಡಲಾರದೆ ಪಕ್ಕದ ಮನೆಯ ಶ್ಯಾಮಲ ಮಗುವನ್ನು ನೋಡಿಕೊಂಡಿದ್ದರು. ಊರಿಗೆ ಬಂದಿದ್ದ ಶಂಕರ 2 ದಿನ ರಜೆ ಹಾಕಿ ತಾಯಿಯನ್ನು ನೋಡಿಕೊಂಡಿದ್ದ. ಅವನ ಓದು ಮುಗಿದು, ಅವನಿಗೀಗ ರೈಲ್ವೇಸ್‌ನಲ್ಲಿ ಕೆಲಸ ಸಿಕ್ಕಿತ್ತು.

ಈಗವನು ಮದ್ರಾಸಿನಲ್ಲಿದ್ದ. ಅತ್ತಿಗೆ ಇಲ್ಲದಿರುವಾಗ ಅವನು ತಾಯಿಯ ಬಳಿ ಗೊಣಗಿದ್ದ.

"ಅತ್ತಿಗೆ ನಿನ್ನನ್ನು ಅಡಿಗೆಯವರ ತರಹ ನೋಡಿಕೊಳ್ತಾರೆ. ಅಂತಹದ್ರಲ್ಲಿ ನೀನ್ಯಾಕಮ್ಮ ಇಲ್ಲಿದ್ದೀಯ ? ನನಗೆ ಬೆಂಗಳೂರಿಗೇ ವರ್ಗವಾಗುವ ಹಾಗಿದೆ. ನಾನಂತೂ ಈ ಮನೆಯಲ್ಲಿರಲ್ಲ ನೀನೂ ನನ್ನ ಜೊತೆ ಬಂದಿರು."

"ಹೇಗೆ ಬರಲೋ ಶಂಕರ ? ನಾನಿರೋದ್ರಿಂದ ನಿಮ್ಮಣ್ಣ ಹೊತ್ತುಗೊತ್ತಿಗೆ ಅನ್ನ ಕಾಣ್ತಿದ್ದಾನೆ. ಮಗೂನ್ನೂ ನಾನೇ ನೋಡ್ಕೋಬೇಕು. ನಾನು ನಿನ್ನ ಜೊತೆ ಬಂದುಬಿಟ್ರೆ ಶೇಖರನಿಗೆ ತುಂಬಾ ತೊಂದರೆಯಾಗುತ್ತೆ. ಮಗು ಪಾಡು ನಾಯಿಪಾಡಾಗತ್ತೆ."

"ಅಂತಹದ್ದೆಲ್ಲಾ ಏನೂ ಆಗಲ್ಲ. ಅತ್ತಿಗೆ ಹೇಗೂ ಬೇಕಾದಷ್ಟು ಸಂಪಾದಿಸ್ತಿದ್ದಾರೆ. ಅಡಿಗೆ ಮಾಡಕ್ಕೆ, ಮಗೂನ್ನ ನೋಡಿಕೊಳ್ಳಕ್ಕೆ ಏನಾದ್ರೂ ಬೇರೆ ವ್ಯವಸ್ಥೆ ಮಾಡಿಕೊಳ್ತಾರೆ. ಯಾವುದಾದ್ರೂ 'ಬೇಬಿ ಸಿಟ್ಟಿಂಗ್'ನಲ್ಲಿ ಮಗೂನ್ನ ಬಿಡಬಹುದು

"ನೋಡೋಣಪ್ಪ" ಎಂದಿದ್ದರು ಸರೋಜಮ್ಮ. ತಾವು ಇಲ್ಲಿಂದ ಹೊರಟುಹೋದರೆ ಮಗನಿಗೆ ತುಂಬಾ ಕಷ್ಟವಾಗುವುದೆಂದು ಅವರಿಗೆ ತಿಳಿದಿತ್ತು. ಮಗುವಿಗೆ ವರ್ಷವೂ ತುಂಬಿರಲಿಲ್ಲ. ಅದನ್ನು 'ಬೇಬಿ ಸಿಟ್ಟಿಂಗ್'ಗೆ ಕಳುಹಿಸಲು ಅವರ ಮನಸ್ಸು ಯಾಕೋ ಒಪ್ಪಲಿಲ್ಲ.

ಅಮೃತಳಿಗೆ ಇತ್ತೀಚೆಗೆ ಬಿಡುವೇ ಸಿಗುತ್ತಿರಲಿಲ್ಲ. ಸ್ಕೂಲ್‌ನ ಕೆಲಸ, ಜೊತೆಗೆ ಟ್ಯೂಷನ್ಸ್-ಇದರ ಮಧ್ಯೆ ಎಂ.ಎಸ್‌ಸಿ.ಗೆ ಓದುವ ಕೆಲಸ-ಎಲ್ಲವೂ ಸೇರಿ ಅವಳು ಮನೆಯ ಕಡೆ ಕೊಂಚವೂ ಗಮನ ಹರಿಸದಂತಾಗಿತ್ತು. ಅತ್ತೆಯ ಬಗ್ಗೆ ಅವಳಿಗೆ ತುಂಬಾ ಕೃತಜ್ಞತೆ ಇತ್ತು. ಆದ್ದರಿಂದ ಅವಳು ಅವರನ್ನು ಯಾವ ವಿಚಾರಕ್ಕೂ ಪ್ರಶ್ನಿಸುತ್ತಿರಲಿಲ್ಲ. ಹಬ್ಬ-ಹರಿದಿನದ ನೆಪದಿಂದ ಸೀರೆ-ಬಟ್ಟೆ ತಂದುಕೊಡುತ್ತಿದ್ದಳು ಅಡಿಗೆ ಮನೆಯಲ್ಲಿ ಒಂದು ಡಬ್ಬಿಯಲ್ಲಿ ದುಡ್ಡು ಹಾಕಿ ಮನೆಯ ಖರ್ಚಿಗೆ ಉಪಯೋಗಿಸಿ ಎಂದು ಹೇಳಿದ್ದಳು. ಅವಳೆಂದೂ ಆ ಹಣದ ಲೆಕ್ಕ ಕೇಳುತ್ತಿರಲಿಲ್ಲ ಆದರೆ ಶಂಕರ ಬಂದರೆ ಸಾಕು ಅವಳ ಮುಖ ದಪ್ಪವಾಗುತ್ತಿತ್ತು. ಸಂಪಾದಿಸಲು ಶುರು ಮಾಡಿ ಒಂದು ವರ್ಷವಾದರೂ ಮನೆಗೆ, ತಾಯಿಗೆ ಏನೂ ಕೊಡುತ್ತಿಲ್ಲವಲ್ಲಾ ಎನ್ನಿಸುತ್ತಿತ್ತು.

ತವರಿನವರ ಜೊತೆ ಅವಳು ಸಂಪರ್ಕವನ್ನು ಇಟ್ಟುಕೊಂಡಿರಲಿಲ್ಲ. ನಾಲ್ಕು ತಿಂಗಳ ಹಿಂದೆ ರಾಧಿಕಾ ಮದುವೆ ನಡೆದಿತ್ತು.

ಹುಡುಗ ಬಾಂಬೆಯಲ್ಲಿ ಇಂಜಿನಿಯರ್ ಎಂದು ತಿಳಿದೊಡನೆ ಅವಳ ಮನಸ್ಸು ತಂಗಿಯ ಅದೃಷ್ಟ ಕಂಡು ಕರುಬಿತ್ತು. ಅವರು ಯಾವ ಬೇಡಿಕೆಯೂ ಇಲ್ಲದೆ ವರದಕ್ಷಿಣೆ, ವರೋಪಚಾರ ಏನೂ ತೆಗೆದುಕೊಳ್ಳದೆ ಸರಳ ವಾಗಿ ಮದುವೆ ಮಾಡಿಕೊಡಲು ಕೇಳಿದ್ದರು. ರಾಧಿಕಾಳ ಅದೃಷ್ಟವನ್ನು ಎಲ್ಲರೂ ಕೊಂಡಾಡಿದಾಗ ಅವಳೆದೆ ಅಸಹನೆಯಿಂದ ನರಳಿತ್ತು.

ತಾಯಿಯ ಎದುರು ತನ್ನ ಅಸಮಾಧಾನ ತೋರಿಸಿಕೊಂಡಿದ್ದಳು. "ರಾಧಂಗೆ ಒಳ್ಳೆಯ ಕಡೆ ನೋಡಿ ಮದುವೆ ಮಾಡಿದ್ರಿ ನನ್ನನ್ನು ನೋಡಿದ್ರೆ ಎಂತಹ ಮನೆಗೆ ಕೊಟ್ರಿ. ನಿಮಗೆಲ್ಲಾ ಮೊದಲಿಂದ ಅವಳೆಂದ್ರೆ ಪ್ರೀತಿ."

"ಯಾವ ಬಾಯಲ್ಲಿ ಆ ಮಾತು ಆಡ್ತೀಯ ಅಮೃತಾ ? ಆ ಹುಡುಗಿ ಈ ಮನೇಲಿ ಏನು ಸುಖಪಟ್ಟಳು ಹೇಳು. ಓದು ಮುಗೀತಿದ್ದ ಹಾಗೆ ಕೆಲಸಕ್ಕೆ ಸೇರಿದ್ಳು. ರಾಜೂನ್ನ ಓದಿಸಬೇಕೂಂತ ಎಂ.ಎಸ್‌ಸಿ.ಗೆ ಸೀಟು ಸಿಕ್ಕರೂ ಹೋಗಲಿಲ್ಲ. ಮನೆಯಲ್ಲೂ ಕೆಲಸ ಮಾಡೋಳು ಹೊರಗೂ ಕೆಲಸ ಮಾಡೋಳು. ಅವಳ ಒಳ್ಳೆಯತನವೇ ಅವಳಿಗೆ ಅದೃಷ್ಟ ತಂದಿತು ನೋಡು."

ತಾಯಿ ಪರೋಕ್ಷವಾಗಿ ತನ್ನನ್ನು ದೂಷಿಸುತ್ತಿದ್ದಾರೆಂದು ಅಮೃತಾಗೆ ಅರಿವಾಗಿತ್ತು. ವಿಜಯಮ್ಮ ಹೇಳಿದ್ದರಲ್ಲಿ ಉತ್ಪ್ರೇಕ್ಷೆ ಇರಲಿಲ್ಲ. ರಾಧಿಕಾ ಕೆಲಸಕ್ಕೆ ಸೇರಿದ ಮೇಲೆ ಸುಕನ್ಯ ಎನ್ನುವವರು ಪರಿಚಯವಾಗಿದ್ದರು. ಆಕೆಗೆ ರಾಧಿಕಾಳ ಗುಣ-ಸ್ವಭಾವ ತುಂಬಾ ಹಿಡಿಸಿತ್ತು. ಆಕೆಯ ತವರಿನವರು ಬಾಂಬೆಯಲ್ಲಿದ್ದರು. ಅವರದು ತುಂಬಿದ ಸಂಸಾರ. ಆಕೆಯ ಅಣ್ಣ ಮನೆಯ ಜವಾಬ್ದಾರಿ ಹೊತ್ತು ತಂಗಿಯರ ಮದುವೆ ಮಾಡಿ ಮುಗಿಸಿದ್ದ. ಸುಕನ್ಯಾಳೇ ಮೊದಲ ತಂಗಿ. ಅವನ ಕೊನೆಯ ತಂಗಿಯ ಮದುವೆ ನಿಶ್ಚಯವಾದಾಗ ಒತ್ತಾಯ ಮಾಡಿ ಸುಕನ್ಯ ರಾಧಿಕಾಳನ್ನು ತನ್ನ ಜೊತೆ ಬಾಂಬೆಗೆ ಕರೆದೊಯ್ದಿದ್ದಳು. ರಾಧಿಕಾ ಸ್ನೇಹಜೀವಿ ಬಹುಬೇಗ ಅವರ ಮನೆಯವರ ಜೊತೆ ಬೆರತ್ಹೋಗಿದ್ದಳು ಮನೆಯವಳಂತೆ ಎಲ್ಲ ಕೆಲಸ ಕಾರ್ಯಗಳಿಗೂ ಕೈಹಾಕಿದ್ದಳು.

ರಾಧಿಕಾ ಮನೋಹರನ ಮನಸ್ಸನ್ನೂ ಗೆದ್ದಿದ್ದಳು. ನಂತರ ಸುಕನ್ಯಾ ರಾಧಿಕಾಳ ತಾಯಿ-ತಂದೆಯರ ಜೊತೆ ಮದುವೆಯ ಪ್ರಸ್ತಾಪ ಮಾಡಿದಳು. ಮದುವೆ ಹೂವಿನ ಸರ ಎತ್ತಿದಂತೆ ಸುಲಭವಾಗಿ ನಡೆದಿತ್ತು.

ವಿಜಯಮ್ಮ ಆಗಾಗ್ಗೆ ತಮ್ಮ ಹಿರಿಮಗಳು ಅಮೃತಾಳ ಜೊತೆ ರಾಧಾಳನ್ನು ಹೋಲಿಸಿ ನೋಡುತ್ತಿದ್ದರು. ಅಮೃತ ಸ್ವಾರ್ಥದ ಮುದ್ದೆ. ಅವಳು ಕೆಲಸಕ್ಕೆ ಸೇರಿದ ಮೇಲೆ ತಮ್ಮ ಮನೆಯ ಪರಿಸ್ಥಿತಿ ಸುಧಾರಿಸಬಹುದೆಂದು ಕನಸು ಕಂಡಿದ್ದರು. ಆದರೆ ಅಮೃತ ತನ್ನ ಖರ್ಚಿನ ಬಾಬ್ತು ಕೊಟ್ಟು ಉಳಿದ ಹಣದಲ್ಲಿ ಸೀರೆ, ಒಡವೆ ಮಾಡಿಸಿಕೊಂಡಿದ್ದಳು. ಸಂಬಳ ಬರುತ್ತಿದ್ದಂತೆ ಒಂದು ಬಾಟಲ್ ತುಪ್ಪ ತಂದು ತನ್ನ ಬೀರುವಿನಲ್ಲಿಟ್ಟುಕೊಂಡು ತನಗೆ ಮಾತ್ರ ಹಾಕಿಕೊಳ್ಳುತ್ತಿದ್ದಳು ಕಾಲು ಕೆ ಜಿ ಹುರುಳಿಕಾಯಿ ತಂದುಕೊಟ್ಟು "ಅಮ್ಮ, ಪಲ್ಯ ಮಾಡಿ ಹಾಕು" ಎನ್ನುತ್ತಿದ್ದಳು. ಹಬ್ಬದ ದಿನಗಳಲ್ಲಿ ತಾನು ಹೊಸ ಬಟ್ಟೆ ತೆಗೆದುಕೊಳ್ಳುತ್ತಿದ್ದಳು. ತಂಗಿಯರಿಗೆ ಒಂದು ಡಜನ್ ಬಳೆ ಕೂಡ ತೆಗೆದುಕೊಡುತ್ತಿರಲಿಲ್ಲ. ತಾನೇ ಪ್ರತ್ಯೇಕವಾಗಿ 1 ಪಾವು ಹಾಲು ತೆಗೆದುಕೊಂಡು ಅರ್ಧ ಪಾವು ಕುಡಿಯುತ್ತಿದ್ದಳು. ಉಳಿದರ್ಧ ಹೆಪ್ಪು ಹಾಕಿಕೊಂಡು ಮೊಸರು ತಿನ್ನುತ್ತಿದ್ದಳು. ತಮ್ಮಂದಿರಿಗೆ ಒಂದು ಚಮಚ ಮೊಸರನ್ನೂ ಹಾಕುತ್ತಿರಲಿಲ್ಲ. ಮಕ್ಕಳು ಆಸೆಯಿಂದ ಅಕ್ಕನ ತಟ್ಟೆ ನೋಡುವಾಗ ವಿಜಯಮ್ಮನಿಗೆ ಸಹಜವಾಗುತ್ತಿತ್ತು. ಅವರು ಕ್ರಮೇಣ ಮಕ್ಕಳನ್ನೆಲ್ಲಾ ಒಂದೇ ಪಂಕ್ತಿಯಲ್ಲಿ ಕೂಡಿಸಿ ಬಡಿಸುವುದನ್ನು ನಿಲ್ಲಿಸಿದ್ದರು ಪಂಕ್ತಿಭೇದ ಮಾಡಲು ಆ ತಾಯಿಯ ಮನಸ್ಸಿಗೆ ದುಃಖವಾಗುತ್ತಿತ್ತು.

ಅಮೃತಳ ಸ್ವಭಾವದ ಪರಿಚಯವಿದ್ದ ವಿಜಯಮ್ಮನಿಗೆ ಅವಳು ಶೇಖರನನ್ನು ಒಪ್ಪಿದಾಗ ಆಶ್ಚರ್ಯವೇ ಆಗಿತ್ತು. ಮಗಳು ಇಲ್ಲದ ಸಮಯದಲ್ಲಿ ಅವರು ಗಂಡನ ಬಳಿ ತಮ್ಮ ಅನುಮಾನ ವ್ಯಕ್ತಪಡಿಸಿದ್ದರು ಕೂಡ. "ರೀ, ಅಮೃತಾ ದುಡಿಯುತ್ತಿದ್ದಾಳೆ. ಇವಳು ಬಯಸುವಂತಹ ಶ್ರೀಮಂತಿಕೆ ಆ ಹುಡುಗನಲ್ಲಿಲ್ಲ. ನಾಳೆ ಇವಳು ಸುಖವಾಗಿರ್ತಾಳಾ ?" ಎಂದು ಕೇಳಿದ್ದರು.

"ಅವಳೇ ಒಪ್ಪಿರುವಾಗ ನಿನಗ್ಯಾಕೆ ಅನುಮಾನ ? ಅವಳ ಹಣೆಯಲ್ಲಿ ಏನು ಬರೆದಿರುತ್ತೋ ಹಾಗಾಗುತ್ತೆ" ಎಂದಿದ್ದರಾತ.

"ಅವಳ ಹಣೆಬರಹಾಂತ ಯಾಕೆ ಹೇಳ್ತೀರ? ಆಕೆಂಗೇನು ಗ್ರಹಚಾರ ಕಾದಿದೆಯೋ ಏನೋ? ಆತನ್ನ ನೋಡಿದರೆ ತುಂಬಾ 'ಮೊದು' ಅನ್ನಿಸತ್ತೆ"

ತಾಯಿ ತಂದೆಯರಾಗಿ ತಾವೇ ಮಗಳ ಬಗ್ಗೆ ಕಟುವಾಗಿ ಮಾತಾಡಲಾರದೆ ಸುಮ್ಮನಾಗಿದ್ದರು. ಮದುವೆಗೂ ಅವಳು ತಾನು ಕೊಟ್ಟಿದ್ದರಲ್ಲಿ ಒಂದು ರೂಪಾಯಿಯನ್ನು ಕೊಟ್ಟಿರಲಿಲ್ಲ.

"ನೀನೇನು ಈಗಾಗ್ಲೆ ಮದುವೆಗಳನ್ನು ಮಾಡಿ ಸೋತಿದ್ದೀರಾ? ನಾನು ನಿಮ್ಮ ಮೊದಲ ಮಗಳು. ನನ್ನ ಮದುವೇಗೆ ಖರ್ಚು ಮಾಡಕ್ಕಾಗಲ್ಲಾಂದ್ರೆ ರಾಧಾ, ಚಂದ್ರನ ಮದುವೆ ಹೇಗೆ ಮಾಡ್ತೀರಾ? ನಾನೇ ಒಡವೆ ಮಾಡಿಸಿಕೊಂಡಿದ್ದೇನೆ. ಮದುವೆ ಖರ್ಚು ನೀವು ಮಾಡಿ, ಬೆಳ್ಳಿ ಪಾತ್ರೆ, ಕಡಗ ಚೆನ್ನಾಗಿರೋದು ಕೊಡಿ, ಶೇಖರ್ ಮಾತಾಡುವ ಸ್ವಭಾವದವರಲ್ಲಾಂತ ಕಳಪೆ ಬಟ್ಟೆ ಗಿಟ್ಟೆ ಕೊಟ್ರೆ ನಾನು ಸುಮ್ಮನಿರಲ್ಲ" ಎಂದಿದ್ದಳು.

ಮದುವೆ ಗೊತ್ತಾದಾಗ ಅವಳ ಬಳಿ ಆರು ರೇಷ್ಮೆ ಸೀರೆಗಳಿದ್ದವು. ಅದರಲ್ಲಿ ಎರಡನ್ನು ಉಟ್ಟೇ ಇರಲಿಲ್ಲ. ವಿಜಯಮ್ಮ ಅಳುಕಿನಿಂದಲೇ ಹೇಳಿದ್ದರು. "ಅಮ್ಮ ತ ಒಂದು ಒಳ್ಳೆಯ ಸೀರೆ, ಎರಡು ಸಾಮಾನ್ಯವಾಗಿರೋ ಸೀರೆ ತೋಗೋಮ್ಮ. ಹೇಗೂ ನಿನ್ನ ಹತ್ತಿರ ಈಗಾಗ್ಲೆ ರೇಷ್ಮೆ ಸೀರೆಗಳಿವೆ"

ಅವಳು ಪಟಾಕಿಯಂತೆ ಸಿಡಿದಿದ್ದಳು. "ಆ ಸೀರೆಗಳು ನನ್ನ ಸಂಪಾದನೆಯಲ್ಲಿ ತೊಗೊಂಡಿರೋದು, ನೀವು ನಿಮ್ಮ ಕರ್ತವ್ಯ ಮಾಡಿ. ನೀವು ಬಿಳಿ ಸೀರೆ, 2 ದೊಡ್ಡ ರೇಷ್ಮೆ ಸೀರೆ, 2 ಆರ್ಡಿನರಿ ಸೀರೇ ತೆಗೆಯಲೇಬೇಕು. ಇಲ್ಲದಿದ್ರೆ ನಾನು ಹಸೆಮಣೆ ಹತ್ತೋದೇ ಇಲ್ಲ" ಎಂದಿದ್ದಳು.

ವಿಜಯಮ್ಮ ಮಗಳ ಮದುವೆ ಮಾಡಿ ಮುಗಿಸಿ ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದರು. ಆಕೆ ಸಹನಾಮಯಿ. ಜೀವನದಲ್ಲಿ ತುಂಬಾ ನೊಂದಿದ್ದರು. ಮದುವೆಯಾಗಿ ಆ ಮನೆಗೆ ಕಾಲಿಟ್ಟಾಗಲಿಂದ ಒಂದಲ್ಲಾ ಒಂದು ತಾಪತ್ರಯಗಳು ಅವರನ್ನು ಕಾಡಿದ್ದವು. ಬೀಗಿತ್ತಿಯೂ ನಿಧಾನಿ. ಮಗಳು ಕರೆದರೆ ನಾಲ್ಕು ದಿನ ಬೆಂಗಳೂರಿಗೆ ಹೋಗಿ ಬರೋಣವೆಂದುಕೊಂಡಿದ್ದರಾಕೆ. ಆದರೆ ಆ ಮಗಳು ಕರೆಯುವ ಶ್ರಮವನ್ನು ತೆಗೆದುಕೊಂಡಿರಲಿಲ್ಲ.

ಗೌರಿ-ಗಣೇಶ, ದೀಪಾವಳಿ ಹಬ್ಬಗಳಿಗೆ ಬಂದಾಗಲೂ ತಾಯಿ ಮನೆಯಲ್ಲಿ ತಂದಿರುವ ಸೀರೆ ಚೆನ್ನಾಗಿಲ್ಲವೆಂದು ಜಗಳವಾಡಿದ್ದಳು. ಅಳಿಯ

ಧಾರಾಳತನ ತೋರಿದರೂ ಅವರು ಖರ್ಚು ಮಾಡಲು ಅವಳು ಅವಕಾಶ ಕೊಡುತ್ತಿರಲಿಲ್ಲ.

ಅಕ್ಕನ ಮದುವೆಯಾದ ಹೊಸದರಲ್ಲಿ ರಜಕ್ಕೆ ಬೆಂಗಳೂರಿಗೆ ಹೋಗುತ್ತೇವೆಂದು ಹುಡುಗರು ಕುಣಿದಿದ್ದರು ಮಕ್ಕಳ ಒತ್ತಾಯ ತಡೆಯಲಾರದೆ ವಿಜಯಮ್ಮ ಮಗಳಿಗೆ ಕಾಗದ ಬರೆದಿದ್ದರು ಆದರೆ ಅವಳು ಉತ್ತರವನ್ನು ಕೊಟ್ಟಿರಲಿಲ್ಲ. ಯಾವುದೋ ಮದುವೆಗೆಂದು ತಂದೆ-ತಾಯಿ ಅಪರೂಪಕ್ಕೆ ಮನೆಗೆ ಬಂದಾಗಲೂ 'ಎರಡು ದಿನಗಳಿರಿ' ಎಂದು ಬಲವಂತ ಮಾಡಿರಲಿಲ್ಲ.

ಮಗಳು ಬಾಣಂತನಕ್ಕೆ ಬರುತ್ತಾಳೆಂದು ತಿಳಿದಾಗಲೇ ವಿಜಯಮ್ಮನಿಗೆ ಭಯವಾಗಿತ್ತು. ಮಕ್ಕಳಿಗೇ ಅಕ್ಕನ ಬರುವಿಕೆ ಇಷ್ಟಪಟ್ಟಿರಲಿಲ್ಲ.

"ಅಮ್ಮ, ಅಕ್ಕ ಬಂದು ನಮ್ಮ ಮೇಲೆ ಜೋರು ಮಾಡಿದ್ರೆ ನಾವು ಸುಮ್ಮನಿರಲ್ಲ" ಎಂದು ಮೊದಲೇ ಹೇಳಿದ್ದರು.

ಮದುವೆಯಾದ ಮೇಲೂ ಅಮೃತಳ ಸ್ವಭಾವ ಬದಲಾಗಿರಲಿಲ್ಲ. ದ್ರಾಕ್ಷಿ, ಗೋಡಂಬಿ, ಕಲ್ಲುಸಕ್ಕರೆ, ಚಿಪ್ಸ್, ಬಿಸ್ಕತ್ ಮುಂತಾದವುಗಳನ್ನು ತಂದಿಟ್ಟುಕೊಂಡು ಒಬ್ಬಳೇ ತಿನ್ನುತ್ತಿದ್ದಳು ಚಂದ್ರಿಕಾಗೆ ಮೊದಲಿಂದ 'ಕಾದಂಬರಿ' ಓದುವ ಹುಚ್ಚು. ಅವಳು ಸರ್ಕ್ಯುಲೇಟಿಂಗ್ ಲೈಬ್ರರಿಯೊಂದಕ್ಕೆ ಸದಸ್ಯಳಾಗಿದ್ದಳು. ಅವಳು ಒಂದು ದಿನಕ್ಕೆ ಒಂದು ಕಾದಂಬರಿ ಓದಿ ಮುಗಿಸುತ್ತಿದ್ದಳು. ಆದರೆ ಅಮೃತ 2 ದಿನ ಇಟ್ಟುಕೊಳ್ಳುತ್ತಿದ್ದಳು. 50 ಪೈಸೆ ಕೊಡುವ ಕಡೆ 1½ ರೂಪಾಯಿ ಕೊಡಬೇಕಾಗುತ್ತಿತ್ತು. ಅಪ್ಪಿ-ತಪ್ಪಿಯೂ ಅಮೃತ ಪುಸ್ತಕದ ದುಡ್ಡು ಕೊಡುತ್ತಿರಲಿಲ್ಲ. ಹಾರ್ಲಿಕ್ಸ್ ತಂದಿಟ್ಟುಕೊಂಡಿದ್ದಳು ವಿಜಯಮ್ಮ ಹಾಲು ಬಿಸಿ ಮಾಡಿ, ಸಕ್ಕರೆ ಹಾಕಿ ತಂದಿತ್ತರೆ ಬೀರುವಿನಿಂದ ಬೀರುವಿನಿಂದ ಹಾರ್ಲಿಕ್ಸ್ ಹಾಕಿಕೊಂಡು ಕುಡಿಯುತ್ತಿದ್ದಳು.

ಒಮ್ಮೆ ಕಾಫಿ ಬೇಡವೆಂದ ರಾಧಿಕಾಳ ಗೆಳತಿಯೊಬ್ಬಳಿಗೆ ವಿಜಯಮ್ಮ ಹಾರ್ಲಿಕ್ಸ್ ಮಾಡಿಕೊಟ್ಟರೆಂದು ದೊಡ್ಡ ರಾಮಾಯಣ ಮಾಡಿದ್ದಳು.

ಹಳೆಯ ದಿನಗಳ ನೆನಪಿನಿಂದ ವಿಜಯಮ್ಮ ನಿಟ್ಟುಸಿರು ಬಿಟ್ಟರು. ತಂಗಿಯ ಮದುವೆಯಲ್ಲಿ ಸಂಭ್ರಮದಿಂದ ಓಡಾಡದೆ 'ಅತಿಥಿ'ಯಂತೆ ಕುಳಿತವ

ಳನ್ನು ನೋಡಿ ಅವರ ಮನ ಒಡೆಯಿತು. ಮದುವೆ ಮುಗಿಯುತ್ತಿದ್ದಂತೆ ಏನೋ ನೆಪ ತೆಗೆದು ಅವಳು ಬೆಂಗಳೂರಿಗೆ ಹಿಂದಿರುಗಿದಳು.

ಒಂದೇ ಊರಿನಲ್ಲಿದ್ದರೂ ಅವಳು 'ಮಂಜುಳ'ನ್ನ ಭೇಟಿ ಮಾಡಿ ತಿಂಗಳುಗಳೇ ಉರುಳಿದ್ದವು. ತಂಗಿಯ ಮದುವೆಯಲ್ಲಿ ಮಂಜುಳ ಸಿಕ್ಕಾಗ ತೃಪ್ತಿಯಾಗುವಷ್ಟು ಹರಟಿದ್ದಳು. ಅವಳೇ ಒಂದೆರಡು ಬಾರಿ 'ಹೋಗೇ ಅಮೃತ, ಕೆಲಸ ನೋಡು' ಎಂದರೂ ಕಿವಿಗೆ ಬೀಳದವಳಂತೆ ಸುಮ್ಮನಿದ್ದಳು. ಈ ಮಗಳಿಂದ ದೊಡ್ಡಮ್ಮನಿಗೆ ಚಿಂತೆ ತಪ್ಪಿದಲ್ಲ ಎನ್ನಿಸಿತ್ತು ಮಂಜುಳಾಗೆ.

ಒಂದು ಸಾಯಂಕಾಲ ಅಮೃತ ಬಸ್‌ಗೆ ಕಾಯುತಿದ್ದಾಗ ಅವಳ ಮುಂದೆ ಮೋಹನನ ಕಾರು ಬಂದು ನಿಂತಿತು.

"ಬನ್ನಿ, ನಿಮ್ಮನೆ ಕಡೆ ಹೊರಟಿದ್ದೇನೆ, ಡ್ರಾಪ್ ಮಾಡ್ತೇನೆ."

"ಬೇಡ. ನಿಮಗ್ಯಾಕೆ ತೊಂದರೆ ?"

"ಇಂತಹ ತೊಂದರೆ ಪ್ರತಿದಿನ ಅನುಭವಿಸಲು ಸಿದ್ಧ ನಾನು"

ಅವಳು ಮರುಮಾತಿಲ್ಲದೆ ಕಾರು ಹತ್ತಿದಳು.

"ಮಂಜುಳ ಹೇಗಿದ್ದಾಳೆ ?"

"ಅದನ್ನು ನೀವು ಹೇಳಬೇಕು. ನಾನು ಆ ಕಡೆ ಹೋಗೇ ಇಲ್ಲ. ನಿಮ್ಮ ತಂಗಿ ಮದುವೆಗೆ ಅವಳೂ ಬಂದಿರಬೇಕಲ್ಲಾ ?"

"ಬಂದಿದ್ಳು, ನೀವು ಬರಲಿಲ್ಲವಲ್ಲ ಯಾಕೆ ?

"ತುಂಬಾ ಕೆಲಸವಿತ್ತು, ಬರಕ್ಕಾಗಲಿಲ್ಲ. ನೀವು ಮಂಜುಳ ಇರದಿದ್ರೆ ನಮ್ಮನೆಗೆ ಬರಬಾರದೂಂತ ಶಪಥ ಮಾಡಿದ್ದೀರ ?"

"ಛೆ, ಹಾಗೇನಿಲ್ಲ."

"ಹಾಗಾದ್ರೆ ಈ ವಾರದಲ್ಲಿ ನೀವು ಬಂದೇ ಬರಬೇಕು."

ಅವಳು ಮಾತಾಡಲಿಲ್ಲ, ಅವನ ಮಾತುಗಳ ಧಾಟಿ ಅವಳಿಗೆ ಇಷ್ಟವಾಗಲಿಲ್ಲ.

"ರೀ ಅಮೃತ, ನೀವು ಮಂಜು ಕಸಿನ್ಸ್ ಅಲ್ವಾ ? ನಿಮಗೂ ಅವಳಿಗೂ ಅದ್ಯಾಕೆ ಇಷ್ಟು ವ್ಯತಾಸ ?"

"ಅದು ಸಹಜ ಅಲ್ವಾ ? ಅವಳು ಚಿನ್ನದ ಚಮಚ ಬಾಯಲ್ಲಿಟ್ಟು ಕೊಂಡು ಹುಟ್ಟಿದ್ದಾಳೆ. ನಾವು ಬಡವರು."

"ಛೆ ಛೆ, ನಾನು ಅದನ್ನಲ್ಲ ಹೇಳಿದ್ದು. ನೀವಿಬ್ರೂ ಒಟ್ಟಿಗೆ ಓದಿದ್ದಂತೆ ನೀವು ಅದೆಷ್ಟು ಸ್ಮಾರ್ಟಾಗಿದ್ದೀರ! ಅದೆಷ್ಟು ಬೋಲ್ಡ್ ಆಗಿದ್ದೀರ! ಅದ್ರೆ ಮಂಜು ನೋಡಿ ಹೇಗಿದ್ದಾಳೆ? ಎಲ್ಲಾ ಇದ್ದರೂ ಅನುಭವಿಸಕ್ಕೆ ಪುಣ್ಯ ಬೇಕಲ್ವಾ? ನೀವೇ ಅವಳ ಜಾಗದಲ್ಲಿದ್ದಿದ್ರೆ ರಾಣಿ ತರಹ ಇರ್ತಿದ್ರಿ....."

ಹೊಗಳಿಕೆಯಿಂದ ಅವಳ ಮುಖ ಅರಳಿತು.

"ನಿಮ್ಮ ನೆಯವರು ತುಂಬಾ.....ಮೊದು ಮಂಜೂಗೆ ಅವರಂತಹ ಗಂಡ ಸಿಗಬೇಕಿತ್ತು ನನಗೆ.... ಹೋಗಲಿ ಬಿಡಿ" ಅವನು ಮಾತು ನಿಲ್ಲಿಸಿ ಜೋರಾಗಿ ನಕ್ಕ.

ಅಮೃತಳಿಗೆ ಯಾಕೋ ಕಸಿವಿಸಿಯಾಗತೊಡಗಿತ್ತು. ಅವಳು ಮೈಸೂರಿಗೆ ಹೋದಾಗ ಮದುವೆಯ ಮನೆಯಲ್ಲಿ ಮೋಹನನ ನಡತೆಯ ಬಗ್ಗೆ ಅಪಸ್ವರದ ನುಡಿಗಳು ಕಿವಿಗೆ ಬಿದ್ದಿದ್ದವು.

"ನನ್ನನ್ನು ಇಲ್ಲೇ ಇಳಿಸಿ. ಮಗುವಿಗೆ ಕೊಂಚ ಸಾಮಾನು ಕೊಂಡುಕೊಳ್ಳಬೇಕು"

"ನೀವು ಕಾರಿನಲ್ಲೇ ಕುಳಿತಿರಿ. ನಾನು ತಂದುಕೊಡ್ತೇನೆ "ಅವನು ಕಾರು ಪಾರ್ಕ್ ಮಾಡಿ ಹೇಳಿದ್ದ.

"ಥ್ಯಾಂಕ್ಸ್ ನನಗೆ ಈ ರೀತಿ ಸುಮ್ಮನೆ ಕುಳಿತುಕೊಂಡು ಅಭ್ಯಾಸವಿಲ್ಲ. ನಾನು ಸಾಮಾನು ತೊಗೊಂಡು ಹೋಗ್ತೇನೆ" ಎಂದವಳು ಅವನ ಉತ್ತರಕ್ಕೂ ಕಾಯದಂತೆ ಮುಂದೆ ನಡೆದಿದ್ದಳು.

"ಚೆಲುವೆಯರಾದ ಹೆಂಗಸರನ್ನು ಕಂಡರೆ ಹಲ್ಲುಬಿಡುವ ಇಂತಹ ವ್ಯಕ್ತಿಯ ಜೊತೆ ಮಂಜು ಹೇಗಿದ್ದಾಳೋ?' ಎನಿಸಿ ಶೇಖರನ ನಡವಳಿಕೆ ನೆನಪಾದಾಗ ಅವಳ ಮನ ಮೃದುವಾಗಿತ್ತು. ಅವನಂತಹ ಸಂಗಾತಿಯನ್ನು ಪಡೆಯಲು ತಾನು ಪುಣ್ಯ ಮಾಡಿದ್ದೆ ಎನ್ನಿಸಿತ್ತು.

ಅವಳು ಮನೆ ತಲುಪಿದಾಗ ಅವಳ ಅತ್ತೆ ಹತ್ತಿರವೇ 'ಶ್ರೀರಾಮನ' ದೇವಸ್ಥಾನಕ್ಕೆ ಹೋಗಿದ್ದರು. ಶೇಖರ್ ಪೇಪರ್ ಓದುತ್ತಾ ರೂಮ್‌ನಲ್ಲಿ ಕುಳಿತಿದ್ದ. ಮಗು ಮನೆಯಲ್ಲಿರಲಿಲ್ಲ.

"ಮಗು ಎಲ್ಲಿ?"

"ಶ್ಯಾಮುಲ ಕರ್ಕೊಂಡು ಹೋಗಿದ್ದಾರೆ, ಕಾಫಿ ಕೊಡಲಾ?"

"ಬೇಡಾರಿ, ಸ್ಕೂಲು ಬಿಡುವ ಮೊದಲು ಕಾಫಿ ಕುಡಿದಿದ್ದೆ."

"ಹಾಗಾದ್ರೆ ನೀನು ರೆಸ್ಟ್ ತೊಗೋ. ನಾನು ಒಂದು ಘಳಿಗೆ ಹೊರಗೆ ಹೋಗಿ ಬರ್‍ತೀನಿ."

"ಅವಳು ಅವನ ಕೊರಳು ಬಳಸಿ ಮುದ್ದುಗರೆದಿದ್ದಳು. "ನಿಮ್ಮ ಕೈಹಿಡಿಯುವುದಕ್ಕೆ ನಾನು ತುಂಬಾ ಪುಣ್ಯ ಮಾಡಿದ್ದೀರಿ."

ಅವಳಿಂದ ಅನಿರೀಕ್ಷಿತ ಹೊಗಳಿಕೆ ಕೇಳಿ ಅವನು ಹುಬ್ಬೇರಿಸಿದ್ದ.

"ಏನಮ್ಮಾವ್ರು ಬಹಳ ಪ್ರೀತಿ ತೋರಿಸ್ತಿದ್ದೀರಲ್ಲಾ ?"

"ಯಾಕ್ರೀ ಹಾಗಂತೀರ ? ನನಗೆ ನಿಮ್ಮ ಮೇಲೆ ಪ್ರೀತಿ ಇಲ್ವಾ ?"

"ನಿನ್ನನ್ನು ಅರ್ಥಮಾಡಿಕೊಳ್ಳುವುದೇ ಕಷ್ಟ ಅಮೃತ. ಒಂದೊಂದು ಸಲ ಪ್ರೀತಿಯ ಮಳೆ ಸುರಿಸ್ತೀಯ. ಮತ್ತೊಮ್ಮೆ ಮಾತಾಡಿಸಿದರೆ ಸಾಕು, ಎಗರಿ ಬೀಳ್ತೀಯ."

ಅಮೃತಾ ನಸುನಕ್ಕು ಅವನ ಎದೆಗೆ ಒರಗಿ ಕಣ್ಮುಚ್ಚಿದಳು. ಆ ಕ್ಷಣ ಅನಂತವಾಗಲಿ ಎನ್ನಿಸಿದಾಗ ಅವನು ನುಡಿದ : "ನೀನು ತುಂಬಾ ಚೆಲುವೆ ಅಮ್ಮು. ನಿನ್ನ ನಡೆ-ನುಡಿಯಲ್ಲಿ ಕೊಂಚ ನಯ-ವಿನಯ ಬೆರೆತರೆ ನಿನ್ನ ಚೆಲುವು ಇನ್ನೂ ಇಮ್ಮಡಿಯಾಗುತ್ತದೆ."

ಅಷ್ಟರಲ್ಲಿ ಶ್ಯಾಮಲ ಕೂಗಿದ್ದರಿಂದ ಇಬ್ಬರೂ ಹೊರಗೆದ್ದು ಬಂದರು.

ಮಂಜುಳ ಮೈಸೂರಿಗೆ ಬಂದು 2 ತಿಂಗಳಾಗಿದ್ದರೂ ಮೋಹನ ಒಮ್ಮೆಯೂ ಅವಳನ್ನು ನೋಡಲು ಬಂದಿರಲಿಲ್ಲ. ಅವಳ ಅತ್ತೆ-ಮಾವ ಮಾತ್ರ ಆಗಾಗ್ಗೆ ಫೋನ್ ಮಾಡುತ್ತಿದ್ದರು. ಅವರು ಕೇಳುತ್ತಿದ್ದುದು ಒಂದೇ ಪ್ರಶ್ನೆಗಳು.

"ಹೇಗಿದ್ದೀಯಮ್ಮ ? ಹುಷಾರಾಗಿದ್ದೀಯ ?"

"ಹುಂ ಹುಷಾರಾಗಿದ್ದೇನೆ. ನೀವೆಲ್ಲಾ ಆರೋಗ್ಯವಾ ?"

"ಹೂಂಮ್ಮ, ಡಾಕ್ಟರ್‌ಗೆ ತೋರಿಸಿದ್ದೀಯ ತಾನೆ ?"

"ಹುಂ, ಡಾಕ್ಟರ್ ಏನೂ ತೊಂದರೆ ಇಲ್ಲ ಅಂದಿದ್ದಾರೆ."

ಅಲ್ಲಿಗೆ ಅವರ ಸಂಭಾಷಣೆ ಮುಗಿಯುತ್ತಿತ್ತು. ಫೋನ್ ನಲ್ಲಿ ಗಂಡನ ಬಗ್ಗೆ ಕೇಳಲು ಅವಳಿಗೆ ಸಂಕೋಚವಾಗುತ್ತಿತ್ತು. ಅವಳು ಅನೇಕ ಸಲ ರಾತ್ರಿ 11 ಗಂಟೆಯ ಮೇಲೆ ಫೋನ್ ಮಾಡಿದ್ದಳು. ಆದರೆ ಒಮ್ಮೆಯೂ ಮೋಹನ ಸಿಕ್ಕಿರಲಿಲ್ಲ. ಅವಳ ತಾಯಿ-ತಂದೆ ಮಾತ್ರ ಅಳಿಯನ ವರ್ತನೆ ಯಿಂದ ತುಂಬಾ ನೊಂದುಕೊಂಡಿದ್ದರು.

"ಯಾಕಮ್ಮ, ನಿನ್ನ ಗಂಡ ಬರಲೇಯಿಲ್ಲ ?" ಎಂದು ಹತ್ತಾರು ಬಾರಿ ಕೇಳಿದ್ದರು. ಆದರೆ ಅವಳಿಂದ ಸರಿಯಾದ ಉತ್ತರ ಬಂದಿರಲಿಲ್ಲ. ಒಮ್ಮೆ ಅವಳ ತಂದೆ. "ಮಂಜುಳಾ, ನಿಮ್ಮಾವನಿಗೆ ಹೇಳಿ ನಿನ್ನ ಗಂಡನನ್ನು ಕಳು ಹಿಸುವುದಕ್ಕೆ ಹೇಳಲೇನಮ್ಮಾ ?" ಎಂದು ಕೇಳಿದ್ದರು.

"ಖಂಡಿತ ಬೇಡಪ್ಪ. ಯಾರದೋ ಬಲವಂತಕ್ಕೆ ಅವರು ನನ್ನನ್ನು ನೋಡಲು ಬರುವುದು ನನಗಿಷ್ಟವಿಲ್ಲ. ನೀನು ಹಾಗೆ ಅವರನ್ನು ಇಲ್ಲಿಗೆ ಕರೆಸಿದರೆ ನನಗೆ ಸಂತೋಷವಾಗುವುದರ ಬದಲು ಬೇಸರ ಆಗತ್ತೆ" ಎಂದಿದ್ದಳು.

ಅವರು ಮತ್ತೆ ಆ ವಿಚಾರ ಪ್ರಸ್ತಾಪಿಸಿರಲಿಲ್ಲ.

ಒಂದು ಶುಕ್ರವಾರ ಬೆಳಗ್ಗೆಯೇ ಅವಳಿಗೆ ನೋವು ಕಾಣಿಸಿಕೊಂಡಿತು. ಅವಳನ್ನು ತಕ್ಷಣ ನರ್ಸಿಂಗ್ ಹೋಂಗೆ ಅಡ್ಮಿಟ್ ಮಾಡಿದರು. ಸುಮಾರು 10 ಗಂಟೆಯ ಹೊತ್ತಿಗೆ ಅವಳು ಮುದ್ದಾದ ಹೆಣ್ಣು ಮಗುವಿಗೆ ಜನ್ಮ ನೀಡಿದಳು.

"ಲಕ್ಷ್ಮಿ ಹುಟ್ಟಿದ್ದಾಳಮ್ಮ" ಎಂದು ಅವಳ ತಾಯಿ-ತಂದೆ ಹಿರಿ ಹಿರಿ ಹಿಗ್ಗಿದರು. ತಕ್ಷಣ ಬೆಂಗಳೂರಿಗೆ ಫೋನ್ ಮಾಡಿ ವಿಷಯ ತಿಳಿಸಿದರು ರಾತ್ರಿ ಎಂಟು ಗಂಟೆಯ ಹೊತ್ತಿಗೆ ಅವಳ ಅತ್ತೆ-ಮಾವ ಬಂದರು

"ಅತ್ತೆ, ಮೊಮ್ಮಗ ಹುಟ್ಟಲಿಲ್ಲಾಂತ ನಿಮಗೆ ಬೇಸರಾನಾ ?"

"ಛೆ....ಛೆ, ಯಾವುದಾದ್ರೆ ಏನಮ್ಮಾ ? ಗಂಡು ಮಕ್ಕಳು ಕೊಡುವ ಸುಖ ಅಷ್ಟರಲ್ಲೇ ಇದೆ ಬಿಡು."

"ಅತ್ತೆ ಅವರ್ಯಾಕೆ ಬರಲಿಲ್ಲ ?"

"ಯಾರಮ್ಮ ?"

"ನಿಮ್ಮ ಮಗ !"

"ಅವನು ಕ್ಲಿನಿಕ್ ಮುಚ್ಚಿ ಹೇಗಮ್ಮ ಬರ್‍ತಾನೆ ? ಮೊನ್ನೆ ತಾನೆ ಬಂದು ಹೋಗಿದ್ದಾನೆ. ಅಗಲೇ...."

"ಇಲ್ಲವಲ್ಲ, ಅವರು ಬಂದೇ ಇಲ್ಲ" ಎಂದರು ಗೋವಿಂದರಾವ್.

"ಮಂಜು ಇಲ್ಲಿಗೆ ಬಂದಾಗಲಿಂದ ಅವರು ಒಂದು ಸಲಾನೂ ಬಂದಿಲ್ಲ" ಎಂದರು ವಿಶಾಲಾಕ್ಷಮ್ಮ.

"ಏನು ? ಒಂದು ಸಲಾನೂ ಬಂದಿಲ್ವಾ ?" ಆಶ್ಚರ್ಯದಿಂದ ಕೇಳಿದರು ಅನ್ನಪೂರ್ಣಮ್ಮ.

ಯಾರೊಬ್ಬರೂ ಮಾತನಾಡಲಿಲ್ಲ. ಮಗ, ತನ್ನ ಹೆಂಡತಿಯನ್ನು ನೋಡಲು ಒಮ್ಮೆಯೂ ಹೋಗಿಲ್ಲ ಎಂದು ತಿಳಿದು ಆ ತಾಯಿ-ತಂದೆಗಳ ಹೊಟ್ಟೆ ಉರಿದುಹೋಯಿತು. ಮಗ ಅದೆಷ್ಟು ರೀತಿ ಸುಳ್ಳು ಹೇಳಬಲ್ಲನೆಂದು ಅವರಿಗೆ ಮೊದಲ ಬಾರಿಗೆ ಅರ್ಥವಾಯಿತು. ಚಕ್ರವರ್ತಿಗಳಿಗಂತೂ ಬ್ರಹ್ಮಾಂಡ ದಷ್ಟು ಸಿಟ್ಟು ಬಂದಿತ್ತು. ಮಂಜುಳ ಮೈಸೂರಿಗೆ ಹೋದ ಎಂಟು ದಿನಕ್ಕೆ ಅವನು ತಂದೆ-ತಾಯಿಯ ಬಳಿ ತಾನು ಮೈಸೂರಿಗೆ ಹೋಗುವ ವಿಚಾರ ಪ್ರಸ್ತಾಪಿಸಿದ್ದ. "ಅಪ್ಪ, ನಾನು ಈ ಶನಿವಾರ ಮೈಸೂರಿಗೆ ಹೋಗಿ ಮಂಗಳವಾರಾನೋ ಬುಧವಾರಾನೋ ಬರ್‍ತೀನಿ."

"ಹಾಗೆ ಮಾಡಪ್ಪ. ನೀನು ಹೋದರೆ ಆ ಹುಡುಗಿಗೂ ತುಂಬಾ ಸಂತೋಷವಾಗತ್ತೆ" ಎಂದಿದ್ದರು ಚಕ್ರವರ್ತಿ

ಅವನು ಮಂಗಳವಾರ ಸಾಯಂಕಾಲ ವಾಪಸ್ಸಾಗಿದ್ದ "ಮಂಜು ಹುಷಾರಾಗಿದ್ದಾಳೆ. ನಿಮ್ಮನ್ನೆಲ್ಲಾ ಕೇಳಿದಳು" ಎಂದು ಹೇಳಿದ್ದ ಅವನ ಮಾತನ್ನು ಅವರು ನಂಬಿದ್ದರು. ಒಮ್ಮೊಮ್ಮೆ ಕ್ಲಿನಿಕ್‌ನಿಂದ ಫೋನ್ ಮಾಡಿ "ಮೈಸೂರಿಗೆ ಹೋಗ್ತೀನಿ" ಎನ್ನುತ್ತಿದ್ದ.

"ಮೊದಲೇ ಗೊತ್ತಿದ್ದಿದ್ರೆ. ಏನಾದ್ರೂ ತಿಂಡಿ ಮಾಡಿ ಕಳುಹಿಸ ಬಹುದಿತ್ತು" ಎಂದುಕೊಳ್ಳುತ್ತಿದ್ದರು ಅನ್ನಪೂರ್ಣಮ್ಮ.

"ಇದ್ದಕ್ಕಿದ್ದಂತೆ ಹೊರಡ್ತಾನಲ್ಲಾ. ಬಟ್ಟೆ ಬರೆಗೆ ಏನ್ಮಾಡ್ತಾನೆ ?" ಎಂದು ಗಂಡನನ್ನು ಕೇಳಿದ್ದರು.

"ಊರಿಗೆ ಹೋದಾಗಲೆಲ್ಲಾ ಹೊಸ ಬಟ್ಟೆ ತೆಗೆದುಕೊಳ್ತಾನೇನೋ ?

ಅವನು ಬಟ್ಟೆಗೆ ಹಾಕುವಷ್ಟು ಹಣಾನ್ನ ಸೆಂಗಸರೂ ಹಾಕಲ್ಲ" ಎನ್ನುತ್ತಿದ್ದರು ಚಕ್ರವರ್ತಿಗಳು.

ಮಗ ಮೈಸೂರಿಗೆ ಬರದೆ ಮತ್ತೆಲ್ಲಿಗೆ ಹೋಗುತ್ತಿದ್ದನೆಂದು ಅವರಿಬ್ಬರಿಗೂ ಆಶ್ಚರ್ಯವಾಯ್ತು.

ಆ ದಿನ ಇದ್ದು ಅವರು ಮರುದಿನವೇ ಬೆಂಗಳೂರಿಗೆ ಹೊರಟರು.

ಕಾರ್‌ನಲ್ಲಿ ಪ್ರಯಾಣಿಸುತ್ತಿದ್ದ ಅನ್ನಪೂರ್ಣಮ್ಮ ಗಂಡನನ್ನು ಕೇಳಿದರು. "ಏನ್ರಿ ಇದು ಅನ್ಯಾಯ ? ನಮ್ಮ ಮೋಹನನಿಗೆ ಯಾವಾಗ ಬುದ್ಧಿ ಬರೋದು ? ಮಂಜುಳ 'ಒಂದು ಸಲವೂ ಗಂಡ ಬಂದೇ ಇಲ್ಲಾಂತ' ಹೇಳ್ತಾಳೆ. ಇವನು ನೋಡಿದ್ರೆ ಪ್ರತಿ ವಾರ ಹೋಗ್ತಿದ್ದೇಂತ ಹೇಳ್ತಾನೆ ಯಾರ ಮಾತನ್ನ ನಂಬುವುದು ?"

"ನೋಡು ಅನ್ನಪೂರ್ಣ, ಕಳ್ಳ-ಕಾಕರನ್ನಾದ್ರೂ ನಂಬ ಬಹುದು. ಖದೀಮರನ್ನಾದ್ರೂ ನಂಬಬಹುದು. ಆದರೆ ನಿನ್ನ ಮಗನ್ನ ನಂಬಕ್ಕಾಗಲ್ಲ. ಮಂಜುಳಾ ಊರಿಗೆ ಹೋದ ಮೇಲೆ ಇವನು ಇಲ್ಲಿ ಬೇರೆ ಯಾವುದೋ ಹುಡುಗಿ ಸ್ನೇಹ ಮಾಡಿರಬೇಕು "

"ನಾಯಿ ಬಾಲಕ್ಕೆ ದಬ್ಬೆ ಕಟ್ಟಿದ್ರೆ ಅದು ಸರಿ ಹೋಗುತ್ತದಾ ? ಮೋಹನ ಈ ಜನ್ಮದಲ್ಲಿ ಸರಿಹೋಗಲ್ಲ."

ಅವರು ಬೆಂಗಳೂರು ತಲುಪಿದಾಗ ಸಾಯಂಕಾಲ ಏಳು ಗಂಟೆ. ಅವರು ಮಗನಿಗಾಗಿ ಕಾದರು. ಅವನು ಬಂದಾಗ ರಾತ್ರಿ ಹನ್ನೆರಡು ಗಂಟೆ. ಅವನಿಗಾಗಿ ಕಾಯುತ್ತಾ ಕುಳಿತಿದ್ದ ಚಕ್ರವರ್ತಿಗಳು ಮಗನನ್ನು ಕರೆದರು.

"ಏನಪ್ಪಾ ?"

"ನಿನಗೆ ಹುಟ್ಟಿರೋದು ಗಂಡು ಮಗುನೋ, ಹೆಣ್ಣು ಮಗುನೋ ?"

"ಹೆಣ್ಣು ಮಗು, ನನಗಷ್ಟು ನೆನಪಿಲ್ವಾ ?"

"ಹೆಂಡತೀನ್ನ ನೋಡಿ ಎರಡೂವರೆ ತಿಂಗಳಾಗಿರುವ ನಿನಗೆ ಮಗುವಾಗಿರುವ ವಿಷಯ ನೆನಪಿರುತ್ತದೆಯೋ ಇಲ್ವೋ ಅನ್ನುವ ಅನುಮಾನ ಬಂದಿತ್ತು. ಅದಕ್ಕೆ ಕೇಳಿದೆ."

ಅವನು ಅವರ ಮುಂದೆ ತಲೆ ತಗ್ಗಿಸಿ ನಿಂತ.

"ಆ ಹುಡುಗಿ ನೀನು ಹೋಗಿ ನೋಡಲಿಲ್ಲಾಂತ ಕಣ್ಣೀರಿನಲ್ಲಿ ಕೈ ತೊಳೆಯುತ್ತಿದ್ದಾಳೆ. ಅವಳೇನು ತಪ್ಪು ಮಾಡಿದ್ದಾಳೇಂತ ಈ ಶಿಕ್ಷೆ ?" ತಾಯಿ ಕೇಳಿದಳು.

"ಅವಳು ನನಗೆ ಇಷ್ಟವಿಲ್ಲಮ್ಮ."

"ಯಾಕಿಷ್ಟವಿಲ್ಲ ?" 83354 CR

"ಅವಳು ಈಗಿನ ಕಾಲದವರ ತರಹ ಇಲ್ಲ. ಯಾವಾಗಲೂ ಹಳ್ಳಿ ಗುಗ್ಗು ತರಹ ಇರ್ತಾಳೆ."

"ಮದುವೆಯಾದಾಗ ಬುದ್ಧಿ ಇರಲಿಲ್ವಾ ? ನೀನು ನಾಳೇನೇ ಹೋಗಿ ಅವಳನ್ನೂ ಮಗೂನ್ನೂ ನೋಡಿಕೊಂಡು ಬಾ.... ಇಲ್ಲದಿದ್ದರೆ...."

"ಇಲ್ಲದಿದ್ದರೆ ...?"

"ನನ್ನ ಆಸ್ತಿ ಸ್ವಯಾರ್ಜಿತ ಅನ್ನುವುದನ್ನು ಮರೆಯಬೇಡ. ಅದರಲ್ಲಿ ಒಂದು ಕಾಸೂ ನಿನಗೆ ಕೊಡಲ್ಲ. ಆ ಹುಡುಗಿ ಚಿನ್ನದಂತಹ ಹುಡುಗಿ. ಅವಳ ಮನಸ್ಸು ನೋಯಿಸಿದ್ರೆ ದೇವರು ನಿನಗೆ ಒಳ್ಳೆಯದು ಮಾಡಲ್ಲ."

ಮೋಹನ ದುರ್ದಾನತೆಗೆದು ಕೊಂಡವನಂತೆ ಎದ್ದು ಹೋದ ನಾಲ್ಕು ದಿನ ಬಿಟ್ಟು ಮೈಸೂರಿಗೆ ಹೋಗಿ ಹೆಂಡತಿ, ಮಗುವನ್ನು ನೋಡಿ ಬಂದ. ಮಂಜುಳಾಗೆ ಅವನ ಆಗಮನದಿಂದ ಅಂತಹ ಖುಷಿಯೇನೂ ಆಗದಿದ್ದರೂ, ಅವಳ ತಾಯಿ-ತಂದೆಯರಿಗೆ ಸಮಾಧಾನವಾಯ್ತು. 894 814 3083 muk N97

o o o o o

"ಎಸ್.ಎಸ್.ಎಲ್.ಸಿ. ಪರೀಕ್ಷೆಗಳು ಸಮೀಪಿಸುತ್ತಿದ್ದವು. ಅಂದು ಭಾನುವಾರ ಬೆಳಗ್ಗೆ ಪಾಠ ಮುಗಿಸಿ ಪೇಪರ್ ಓದುತ್ತಾ ಅಮೃತ ಕುಳಿತಿದ್ದಳು. ಗಾಡಿ ಒರೆಸುತ್ತಿದ್ದ ಶೇಖರ ಕೇಳಿದ "ಮುಂದಿನ ತಿಂಗಳು ಆರನೇ ತಾರೀಖು ನಮ್ಮ 'ಅಲೋಕ'ನ ಹುಟ್ಟಿದ ಹಬ್ಬ ಅಲ್ವಾ ?"

"ಹೌದು, ನಾನು ಮರತೇ ಬಿಟ್ಟಿದ್ದೆ."

"ಸದ್ಯ. ಅಲೋಕಾಂತ ಒಬ್ಬ ಮಗ ಇರುವ ವಿಚಾರಾನ್ನ ನೀನು ಮರೆತಿಲ್ಲವಲ್ಲಾ. ಅದು ನನ್ನ ಪುಣ್ಯ."

"ನೀವು ಸುಮ್ಮನೆ ನನ್ನನ್ನು ಹಂಗಿಸಬೇಡಿ. ಬರ್ತ್‌ಡೇ ಹೇಗೆ ಮಾಡೋಣ ಹೇಳಿ."

"ನನ್ನ ಸಲಹೆಯಂತೆ ಕೇಳ್ತೀಯಾ? ನಿನಗೇನನ್ನಿಸಿದೆಯೋ ಅದು ಹೇಳು."

"ನೋಡ್ರಿ, ಬರ್ತ್‌ಡೇನ್ನ ಸಿಂಪಲ್ಲಾಗಿ ಮನೆಯಲ್ಲೇ ಮಾಡೋಣ, ಬೆಳಗ್ಗೆ ದೇವಸ್ಥಾನಕ್ಕೆ ಹೋಗಿ ಬಂದು ಮನೆಮಟ್ಟಿಗೆ ಹಬ್ಬದ ಅಡಿಗೆ ಮಾಡಿಕೊಳ್ಳೋಣ. ಸಾಯಂಕಾಲ ಸುತ್ತ-ಮುತ್ತ ಇರುವ ಮಕ್ಕಳನ್ನು ಕರೆದು ಸಿಹಿ-ಖಾರ ಕೊಡೋಣ."

"ಆಯ್ತು, ಹಾಗೇ ಮಾಡೋಣ. ನಮ್ಮಮ್ಮನಿಗೊಂದು ಸೀರೆ ತರೋಣ"

"ಓ ಅದಕ್ಕೇನು? ನಾನೇ ಹೇಳೋಣಾಂತಿದ್ದೆ" ಎಂದಳು ಅಮೃತ.

"ನಿಮ್ಮ ತಾಯಿ-ತಂದೆಗೂ ಕಾಗದ ಬರೆಯೋಣ"

"ಅದೆಲ್ಲಾ ಏನೂ ಬೇಡ ಪರೀಕ್ಷೆಗಳು ನಡೆಯುತ್ತಾ ಇವೆ. ಅವರು ಹುಡುಗರನ್ನು ಬಿಟ್ಟು ಬರಲ್ಲ."

ಶೇಖರ್ ಮಾತಾಡಲಿಲ್ಲ. ಹೆತ್ತ ತಾಯಿ-ತಂದೆಯ ಮೇಲೇ ಅಭಿಮಾನವಿಲ್ಲದ ಹೆಂಡತಿ ತನ್ನ ತಾಯಿಗೆ ಸೀರೆ ತರಲು ಒಪ್ಪಿದ್ದು ಆಶ್ಚರ್ಯವೆನ್ನಿಸಿತು. ನಿಧಾನವಾಗಿ ಕುಳಿತು ಯೋಚಿಸಿದಾಗ ಅದಕ್ಕೆ ಕಾರಣ ಹೊಳೆದು ಮನಸ್ಸು ವ್ಯಾಕುಲಗೊಂಡಿತು.

"ಅಮ್ಮ ಅಡಿಗೆಯವಳ ತರಹ ಅಡಿಗೆ ಮಾಡ್ಕೊಂಡು, ಆಯಾ ತರಹ ಮಗೂನ್ನ ನೋಡಿಕೊಳ್ಳುವುದಕ್ಕೆ ಈ ಉಪಚಾರ! ಅಮ್ಮನಿಗೇನು ಕಡಿಮೆ ವಯಸ್ಸಾಗಿದೆಯೇ? ಸೊಸೆಯಾದವಳು ಒಂದು ದಿನ ಕೂಡಿಸಿ ಅಡಿಗೆ ಮಾಡಿ ಬಡಿಸಬಾರದೆ? ಬೆಳಗ್ಗೆ ಎದ್ದು ಕಾಫಿ ಕೂಡ ಬೆರೆಸಿಕೊಳ್ಳದೆ 'ಅತ್ತೆ, ಒಂದು ಕಪ್ ಸ್ಟ್ರಾಂಗ್ ಕಾಫಿ' ಅಂತ ಮಾಣಿಗೆ ಹೇಳುವಂತೆ ಆರ್ಡರ್ ಮಾಡುತ್ತಾಳಲ್ಲಾ? ಇದು ಸರಿಯೇ? ಇವಳ ತಾಯಿ-ತಂದೆಯರು ಮಗಳಿಗೆ ಬುದ್ಧಿ ಹೇಳಬಾರದೆ? ಎನ್ನಿಸಿತು.

ಹುಟ್ಟಿದ ಹಬ್ಬ ಸರಳವಾಗಿ ನಡೆಯಿತು. ತಮಗೆ ತಂದ ಸೀರೆ ನೋಡಿ ತುಂಬಾ ಸಂತಸಪಟ್ಟರು. ಅಂದು ರಾತ್ರಿ ಊಟಕ್ಕೆ ಕುಳಿತಾಗ ಅಮೃತಾ ಹೇಳಿದಳು.

"ನನಗೆ ನೆನಪೇ ಆಗಲಿಲ್ಲ. ಮಂಜು ಊರಿಗೆ ಬಂದಿದ್ದಿದ್ರೆ ಅವಳ ನ್ನಾದ್ರೂ ಕರೆಯುಬಹುದಿತ್ತು."

"ನಿಮ್ಮಂದೆ, ತುಯಿನ್ನೇ ಕರೆಯುದಿದ್ದ ಮೇಲೆ ಅವರ್‍ಯಾಕೆ ಬಿಡು."

"ನಾನೇನು ಅವಳನ್ನು ಮೈಸೂರಿನಿಂದ ಕರೆಸಬಹುದಿತ್ತೂಂತ ಹೇಳಿದ್ನಾ? ನಮ್ಮ ಚಿಕ್ಕಪ್ಪನ ಮಗಳವಳು. ಒಂದೇ ಊರಿನಲ್ಲಿದ್ದಾರಲ್ಲಾಂತ ಹೇಳಿದೆ."

"ನಮ್ಮ ಚಿಕ್ಕಪ್ಪನ ಮಗ ಮುಂದಿನ ಬೀದಿಯುಲ್ಲೇ ಇದ್ದಾನೆ. ಅಮ್ಮನ ಅಣ್ಣನ ಮಗಳು ಪಾರ್ಕ್ ಹತ್ತಿರಾನೇ ಇದ್ದಾಳೆ. ನಿನ್ನ ಸೋದರಮಾವನ ಮಗಳು ಬಸ್ಟ್ಯಾಪ್ ಹತ್ತಿರಾನೇ ಇದ್ದರಲ್ವಾ-ಅವರನ್ನೆಲ್ಲಾ ಕರೆಯುಬಹುದಿತ್ತಲ್ವಾ ?" ಶೇಖರ್ ಕೇಳಿದ

ಅಮೃತಾ ಮುಖ ಊದಿಸಿದಳು.

"ಅವರನ್ನೆಲ್ಲಾ ಕರೆಯುವುದಕ್ಕೆ ನೀನು ಒಪ್ತಿರಲಿಲ್ಲಾಂತ ನನಗೆ ಗೊತ್ತು. ನಿಮ್ಮ ಚಿಕ್ಕಮ್ಮನ ಮಗಳು ಶ್ರೀಮಂತಳಾಗಿರುವುದರಿಂದ ನನಗವರ ಯೋಚನೆ ಬಂತು."

"ಹೌದೂರಿ, ನನಗೆ ಶ್ರೀಮಂತರನ್ನು ಕಂಡರೆ ಇಷ್ಟ. ಅವಳನ್ನು ಕರೆದಿದ್ದಿದ್ದೆ ಭಾರೀ ಉಡುಗೊರೆ ತಂದುಕೊಡ್ತಿದ್ಲು ಅನ್ನುವ ಆಸೆಯಿಂದ ಹಾಗೆ ಹೇಳ್ದೆ. ನಿಮಗೀಗ ಸಮಾಧಾನವಾಯ್ತು ?"

"ಹಣವಂತರಿಗೆ ಅಷ್ಟೊಂದು ಪ್ರಾಮುಖ್ಯತೆ ಕೊಡಬಾರದು ಕಣೆ."

"ನಿಮ್ಮ ಉಪದೇಶ ನನಗೆ ಬೇಕಿಲ್ಲ ಮಂಜು ಹಣವಂತಳೋಂತ ನಾನವಳ ಸಂಪರ್ಕ ಬೆಳೆಸಿಲ್ಲ. ನಾವಿಬ್ಬರೂ ಒಟ್ಟಿಗೆ ಬೆಳೆದವರು, ಒಟ್ಟಿಗೆ ಓದಿದವರು. ನಾವಿಬ್ಬರೂ ಎಷ್ಟು ಕ್ಲೋಸ್ ಅನ್ನುವುದು ನಿಮಗೇನು ಗೊತ್ತು ?"

"ನಿನಗೆ ಅವಳ ಮೇಲೆ ಅಷ್ಟೊಂದು ಅಭಿಮಾನವಿದ್ರೆ ಆಕೆ ಪ್ರಗ್ನೆಂಟು ಅಂತ ತಿಳಿದ ಮೇಲೆ ಯಾಕೆ ಒಂದು ಸಲಾನೂ ನೋಡಿಕೊಂಡು ಬರಲಿಲ್ಲ ? ಅವಳನ್ನು ಊಟಕ್ಕೆ ಕರೆದು ಉಪಚಾರ ಮಾಡಲಿಲ್ಲ ? ಅವಳು ಊರಲ್ಲಿದ್ದಾಳೋ ಇಲ್ವೋಂತ ತಿಳಿದುಕೊಳ್ಳುವುದಕ್ಕೆ ನಿನಗೆ ಬಿಡುವಿಲ್ಲ ಅಲ್ವಾ ?" ಶೇಖರ್ ವ್ಯಂಗ್ಯವಾಗಿ ಪ್ರಶ್ನಿಸಿದ.

"ಸಾಕು ಜಗಳ ನಿಲ್ಲಿಸೋ, ಬೆಳಗ್ಗೆಯೆಲ್ಲಾ ಸಂತೋಷದಿಂದಿದ್ದು

ಉಂಡು ಮಲಗುವ ಹೊತ್ತಿಗೆ ಇದೆಂತಹ ಜಗಳ ?" ಸರೋಜಮ್ಮ ಗದರಿದರು ಶೇಖರ್ ನಗುತ್ತಾ ಎದ್ದುಹೋದ

ಒಂದು ವರ್ಷದ ಆಲೋಕ ತೊದಲ್ನುಡಿಗಳನ್ನಾಡುತ್ತಾ, ಪುಟ್ಟ ಪುಟ್ಟ ಹೆಜ್ಜೆಯಿಡುತ್ತಾ ಮನೆ ತುಂಬಾ ಓಡಾಡುತ್ತಿದ್ದ. ಸರೋಜಮ್ಮನಿಗೆ ಅವನನ್ನು ಹಿಡಿಯುವುದು ತುಂಬಾ ಕಷ್ಟವಾಗಿತ್ತು. ಅಮೃತ ತನ್ನ ಎಂ.ಎಸ್‌ಸಿಗೆ ಸಂಬಂಧಿಸಿದಂತೆ 'ಸಂಪರ್ಕಶಿಬಿರ'ದ ತರಗತಿಗೆ ಹೊರಟುಹೋಗಿದ್ದಳು. ಅವಳು 20 ದಿನ ಬರುವಂತಿರಲಿಲ್ಲ ಶೇಖರನಿಗೆ ಈಗ ಬೇರೆ ಬ್ರಾಂಚ್‌ಗೆ ವರ್ಗವಾಗಿತ್ತು. ಕೈತುಂಬಾ ಕೆಲಸವೂ ಇರುತ್ತಿತ್ತು. ಅವನಿಗೆ ಮೊದಲಿನಂತೆ ತಾಯಿಗೆ ಸಹಾಯ ಮಾಡಲಾಗುತ್ತಿರಲಿಲ್ಲ ಅವನೇ ಒಂದು ದಿನ ಕೇಳಿದ.

"ಅಮ್ಮ ಹತ್ತು-ಹನ್ನೆರಡು ವರ್ಷದ ಹುಡುಗಿಯೊಬ್ಬಳನ್ನು ಹುಡುಕ ಬಾರದಾ ?"

"ಯಾಕಪ್ಪಾ ?"

"ಆಲೋಕನ್ನ ನೋಡಿಕೊಳ್ಳುವುದಕ್ಕೆ, ಇತ್ತೀಚೆಗೆ ಅವನನ್ನು ಹಿಡಿಯುಕ್ಕೆ ಕೈಯ್ಯಲ್ಲಾಗ್ತಿಲ್ಲವಲ್ಲಾ... ?"

"ಅಮೃತಾ ಒಪ್ತಾಳೇನೋ 'ಒಂದು ಹುಡುಗೀನ್ನ ಕೆಲಸಕ್ಕಿಟ್ಕೊಂಡ್ರೆ ತಿಂಗಳಿಗೆ 100 ರೂಪಾಯಿ ಕೊಟ್ಟು, ಒಂದು ಹೊತ್ತಿನ ಊಟ-ತಿಂಡಿ, ಕಾಫಿ ಕೊಡಬೇಕು. ವೃಥಾ ಖರ್ಚು ಅಂತಾಳೇನೋ ?"

"ನಾನೇ ಹೇಗಾದರೂ ಸಂಬಳ ಕೊಡ್ತೀನಮ್ಮ. ಒಟ್ಟಿನಲ್ಲಿ ನಿನಗೆ ತೊಂದರೆ ಆಗಬಾರದು ಒಂದು ಹುಡುಗೀನ್ನ ಹುಡುಕು."

ಮಗ ತಮ್ಮ ಬಗ್ಗೆ ಕಾಳಜಿಯಿಂದ ಮಾತನಾಡಿದಾಗ ಸರೋಜಮ್ಮನಿಗೆ ತುಂಬಾ ಸಂತೋಷವಾಯಿತು. ಅವರು ಹುಚ್ಚು ಹುಡುಕಬೇಕಾಗಲಿಲ್ಲ. ಶ್ಯಾಮಲಳ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಚಿಕ್ಕೀರಿಯ ಅಕ್ಕನ ಮಗಳು ಮಾದೇವಿ ಕೆಲಸಕ್ಕಾಗಿ ಮನೆ ಹುಡುಕುತ್ತಿದ್ದಳು. ಆಲೋಕ ಆಗಾಗ್ಗೆ ಅಲ್ಲಿಗೆ ಬರುತ್ತಿದ್ದ ಮಾದೇವಿಯ ಪರಿಚಯವೂ ಅವನಿಗಿತ್ತು. ಅವಳು ಆಲೋಕನನ್ನು ನೋಡಿಕೊಳ್ಳಲು ಸಂತೋಷದಿಂದ ಒಪ್ಪಿಕೊಂಡಳು.

ಮಾದೇವಿ ಕೆಲಸಕ್ಕೆ ಬರಲಾರಂಭಿಸಿದ ಮೇಲೆ ಸರೋಜಮ್ಮನಿಗೆ ಎಷ್ಟೋ ಬಿಡುವು ದೊರೆಯಲಾರಂಭಿಸಿತು ಕೆಲಸದವಳು ಬರುವುದು ತಡವಾಗುವು

ದೆಂದು ಸರೋಜಮ್ಮ ಪ್ರತಿದಿನ ಬೆಳಗ್ಗೆ ತಾವೇ ಬಾಗಿಲಿಗೆ ನೀರು ಹಾಕುತ್ತಿದ್ದರು. ಮಾದೇವಿ ಬೆಳಗ್ಗೆ ಆರೂವರೆ ಗಂಟೆಗೇ ಬರುತ್ತಿದ್ದಳು. ಅಲೋಕ ಏಳುತ್ತಿದ್ದುದು ಏಳೂವರೆ ಗಂಟೆಗೆ. ಮಾದೇವಿ ಬಾಗಿಲಿಗೆ ನೀರು ಹಾಕಿ, ಅತ್ಯವಶ್ಯಕವಾಗಿ ಬೇಕಾಗಿದ್ದ ಒಂದೆರಡು ಪಾತ್ರೆಗಳನ್ನು ತೊಳೆದುಕೊಡುತ್ತಿದ್ದಳು. ಅಲೋಕ ಎದ್ದ ಮೇಲೆ ಅವನನ್ನು ಒಂದು ಕ್ಷಣ ಬಿಟ್ಟಿರುತ್ತಿರಲಿಲ್ಲ. ಅವನ ಸಮಸ್ತ ಜವಾಬ್ದಾರಿಯನ್ನೂ ಅವಳೇ ತೆಗೆದುಕೊಂಡಿದ್ದಳು. ಸಮಯವೆಂದರೆ ಅಂಗಡಿಗೂ ಹೋಗಿ ಬರುತ್ತಿದ್ದಳು.

ಇಪ್ಪತ್ತು ದಿನಗಳ ನಂತರ ಊರಿಗೆ ಬಂದ ಅಮೃತಾ ಮಗುವನ್ನಾಡಿಸುತ್ತಾ ಕುಳಿತಿದ್ದ ಮಾದೇವಿಯನ್ನು ನೋಡಿದರೂ ಏನೂ ಪ್ರಶ್ನಿಸಲಿಲ್ಲ. ಸ್ನಾನ ಮಾಡಿ ಕಾಫಿ,ತಿಂಡಿ ಮುಗಿಸಿ ಮಲಗಿದವಳು ಎರಡು ಗಂಟೆಗೆ ಎದ್ದಳು. ಪುನಃ ಊಟದ ನಂತರ ಮಲಗಿ ಆರು ಗಂಟೆಗೆ ಎದ್ದಳು. ಆ ವೇಳೆಗೆ ಶೇಖರ್ ಮಗುವನ್ನು ಹೊರಗೆ ಕರೆದೊಯ್ದಿದ್ದ. ಅದು ವಾಪಸ್ಸಾಗುವ ವೇಳೆಗೆ ನಿದ್ರೆ ಬಂದು ಮಲಗಿಬಿಟ್ಟಿತ್ತು.

ಮಾರುದಿನ ಬೆಳಗ್ಗೆ ತಮ್ಮ ಮನೆಯಲ್ಲಿ ಓಡಾಡುತ್ತಿದ್ದ ಮಾದೇವಿಯನ್ನು ನೋಡಿ ಕೇಳಿದಳು. "ಈ ಹುಡುಗಿ ಯಾಕೆ ಇಲ್ಲಿದ್ದಾಳೆ ?"

"ಅಲೋಕನ್ನ ನೋಡಿಕೊಳ್ತಿದ್ದಾಳೆ....."

"ನೀವೇ ಗೊತ್ತುಮಾಡಿಕೊಂಡ್ರಾ ?"

"ಹೌದು, ನನಗೆ ಬೇರೆ ಬ್ರಾಂಚ್‌ಗೆ ವರ್ಗವಾಗಿದೆ. ನಾನು 8-45 ಗಂಟೆಗೆಲ್ಲ ಮನೆ ಬಿಡಬೇಕು. ಅಮ್ಮನಿಗೆ ಮಗೂನ್ನ ನೋಡಿಕೊಳ್ಳುವುದಕ್ಕಾಗಲ್ಲ. ಅಲೋಕ ಈಗ ಮನೆ ತುಂಬಾ ಓಡಾಡ್ತಾನೆ. ಅಡಿಗೆ ಕೆಲಸ ಮಾಡ್ಕೊಂಡು ಅಮ್ಮ ಹೇಗೆ ಅವನನ್ನು ನೋಡಿಕೊಳ್ತಾಳೆ ?"

"ಅವಳಿಗೆಷ್ಟು ಸಂಬಳ ?"

"ನೂರು ರೂಪಾಯಿ ಬೆಳಗ್ಗೆ ಊಟ, ತಿಂಡಿ, ಕಾಫಿ....."

"ಅಷ್ಟೆಲ್ಲಾ ಖರ್ಚು ಮಾಡುವುದರ ಬದಲು ಮಗೂನ್ನ 'ಬೇಬಿಸಿಟ್ಟಿಂಗ್' ನಲ್ಲೇ ಬಿಡಬಹುದಿತ್ತು."

"ಈಗಲೂ ಬಿಡು, ಯಾರು ಬೇಡಾಂತಾರೆ ? ಆದ್ರೆ ಅವನನ್ನು ಕರೆದು

ಕೊಂಡು ಹೋಗಿ ಬಿಡುವ, ಅಲ್ಲಿಂದ ವಾಪಸ್ಸು ಕರೆತರುವ ಜವಾಬ್ದಾರಿ ನಿನ್ನದೇ ಅನ್ನುವುದನ್ನು ಮರೆಯಬೇಡ."

ಅಮೃತ ಉತ್ತರ ಕೊಡಲಿಲ್ಲ. ಅವಳಿಗೆ ಅಂತಹ ಕೆಲಸಗಳನ್ನು ಮಾಡಲು ಬಿಡುವೂ ಇರಲಿಲ್ಲ ಮನಸ್ಸು ಇರಲಿಲ್ಲ. ತಾನು ಮಗುವನ್ನು 'ಬೇಬಿ ಸಿಟ್ಟಿಂಗ್'ನಲ್ಲಿ ಬಿಟ್ಟರೆ ಅತ್ತೆ ಕಿರಿಯ ಮಗನ ಬಳಿ ಹೋಗಬಹುದು. ಆಗ ತನಗೇ ತೊಂದರೆ ಎನ್ನಿಸಿತು. ಆದ್ದರಿಂದ ಅವಳು ವಾದ ಮಾಡದೆ ಸುಮ್ಮನಾದಳು. ಮಾದೇವಿ ಚುರುಕು ಹುಡುಗಿ. ಅವಳಿಂದ ತುಂಬಾ ಬಹಳ ಸಹಾಯವಾಗುತ್ತದೆಯೆಂದು ಅಮೃತಾಗೆ ನಿಧಾನವಾಗಿ ಅರ್ಥ ವಾಯಿತು ಅವಳು ಕೆಲಸಕ್ಕೆ ಹೊರಡುತ್ತಿದ್ದಂತೆ ವ್ಯಾನಿಟಿ ಬ್ಯಾಗ್, ಗಾಗಲ್ಸ್, ಕರ್ಚೀಫ್, ಚಪ್ಪಲಿ ತಂದು ಕೊಡುತ್ತಿದ್ದಳು ಅವಳು ಕೆಲಸ ದಿಂದ ಬಂದೊಡನೆ ಡಬ್ಬಿ ತೆಗೆದು ತೊಳೆದಿಟ್ಟು, ಅವಳು ಬಿಚ್ಚಿದ ಸೀರೆ ಮಡಿಸುತ್ತಿದ್ದಳು. ಅವಳ ಬಟ್ಟೆಗಳನ್ನು ಐರನ್ ಮಾಡಿಸಿ ತರುತ್ತಿದ್ದಳು. ಅವಳು ಹೇಳಿದ ಕೆಲಸಗಳನ್ನೆಲ್ಲಾ ಗೊಣಗದೆ ಮಾಡುತ್ತಿದ್ದಳು.

ಹದಿನೈದು ದಿನ ಕಳೆಯಿತು ಒಂದು ದಿನ ಮಂಜುಳಾ ಅವಳಿಗೆ ಫೋನ್ ಮಾಡಿದಳು "ಅಮೃತ ಈ ಭಾನುವಾರ ಮಗೂಗೆ ನಾಮಕರಣ ಇಟ್ಟುಕೊಂಡಿ ದ್ದೇವೆ. ನೀನು, ಶೇಖರ್ ಅಲೋಕ್ ಎಲ್ಲರೂ ತಪ್ಪದೆ ಬರಬೇಕು."

"ನೀನು ಯಾವಾಗ ಊರಿಗೆ ಬಂದೆ ?"

"ನಾನು ಬಂದು ವಾರವಾಯ್ತು ನನ್ನ ಮಗಳಿಗೊಂದು ಒಳ್ಳೆಯ ಹೆಸರು ಆರಿಸು."

ಅಮೃತ ಅಂದೇ ಸಾಯಂಕಾಲ ಗಂಡನಿಗೆ ವಿಷಯ ತಿಳಿಸಿದಳು.

"ನೀನು ಹೋಗಿ ಬಾ, ನಾನು ಬರಲ್ಲ" ಎಂದ ಶೇಖರ.

"ಯಾಕೆ ಬರಲ್ಲ ?"

"ಯಾಗ ಬರಬೇಕು ? ಹೋದ ವಾರ ನನ್ನ ಮಿತ್ರ ಮಗ ಬಾಲು ಮನೆ 'ಗೃಹಪ್ರವೇಶ'ಕ್ಕೆ ನೀನು ಬಂದೆಯಾ ?"

"ನನಗೆ ಓದಿಕೊಳ್ಳುವುದಿತ್ತಾರಿ....."

"ಈಗೇನು ನಿನ್ನ ಪರೀಕ್ಷೆ ಮುಗಿದು ಹೋಗಿದೆಯಾ ? ನಿನಗೇನೂ ಓದೋದು ಇಲ್ವಾ ? ನಿನ್ನ ಕಡೆಯವರನ್ನು ಕಂಡ್ರೆ ನಿನಗೆ ಅಭಿಮಾನ ಅದೇ

ನಮ್ಮ ಕಡೆಯವರ ಬಗ್ಗೆ ನಿನಗೆ ಅಸಡ್ಡೆ. ಹೋಗೋದಾದ್ರೆ ನೀನೊಬ್ಬಳು ಹೋಗಿ ಬಾ."

"ಮಂಜು ಅಲೋಕನನ್ನೂ ಕರೆದುಕೊಂಡು ಬರಕ್ಕೆ ಹೇಳಿದ್ದಾಳೆರಿ."

"ಧಾರಾಳವಾಗಿ ಕರ್ಕೊಂಡು ಹೋಗು. ಅವ್ಳು ಅವರಣ್ಣನ್ನ ನೋಡಿಕೊಂಡು ಬರಬೇಕು ಅಂತಿದ್ದಾಳೆ. ನಾನು ಕರ್ಕೊಂಡು ಹೋಗಿ ಬರ್ತೀನಿ."

"ನನ್ನೊಬ್ಬಳ ಕೈಲಿ ಅವನನ್ನು ನೋಡಿಕೊಳ್ಳಕ್ಕಾಗಲ್ಲಪ್ಪ. ನೀವೂ ಬಂದ್ರೆ ಅವನನ್ನು ಕರೆದುಕೊಂಡು ಹೋಗ್ತೀನಿ. ಇಲ್ಲದಿದ್ರೆ ಇಲ್ಲ."

"ನಾನು ಬರಲ್ಲ. ಅಲೋಕನ್ನ ನಾವೇ ಕರೆದುಕೊಂಡು ಹೋಗ್ತೀವೆ, ನೀನೊಬ್ಬಳೇ ಹೋಗಿ ಬಾ."

ಭಾನುವಾರ ಅಮೃತ ದೊಡ್ಡ ಜರಿಯಂಚಿನ ಕಡು ಕೆಂಪು ಬಣ್ಣದ ಕಲ್ಕತ್ತಾ ಕಾಟನ್ ಸೀರೆಯುಟ್ಟು, ಜರಿಯಂಚಿನ ಬ್ಲೌಸ್ ತೊಟ್ಟು ಸಿದ್ಧಳಾದಳು. ಅದಕ್ಕೆ ಒಪ್ಪುವ ಕೃತಕ ಆಭರಣ ಧರಿಸಿ, ತನ್ನ ಕೂದಲನ್ನು ಹಾರಾಡಲು ಬಿಟ್ಟು ಕ್ಲಿಪ್ ಹಾಕಿದಳು. ತಿಂಗಳ ಹಿಂದೆ ತನ್ನ ಕೂದಲನ್ನು 'ಯು' ಶೇಪ್ ಮಾಡಿಸಿದ್ದಳು.

"ರೀ, ನಾನು ಹೇಗೆ ಕಾಣಿಸ್ತಿದ್ದೀನಿ ?"

"ಅಪ್ಸರೆ ತರಹ ಇದ್ದೀಯ. ಹೋಗಿ ಬಾ."

"ರೀ ನನ್ನನ್ನು ಡ್ರಾಪ್ ಮಾಡಿಬಿಡ್ರಿ."

"ಸಾರಿ ಅಮ್ಮು. ನಾನು ನಿನ್ನನ್ನು ಡ್ರಾಪ್ ಮಾಡಲು ಬಂದ್ರೆ ನಿಮಗೆ ಒಂಭತ್ತು ಗಂಟೆ ಬಸ್ಸು ತಪ್ಪಿಹೋಗತ್ತೆ."

ಅಮೃತ ಗೊಣಗಿಕೊಂಡೇ ಹೊರಟಳು. ಮಂಜು ತಾಯಿ-ತಂದೆ ಬಂದಿದ್ದರು. ಮಂಜು, ಅವಳ ಅತ್ತೆ-ಮಾವ ಎಲ್ಲರೂ ಅಲೋಕನ ಬಗ್ಗೆ ಕೇಳಿದಾಗ ಅವಳಿಗೆ ತಾನು ಅವನನ್ನು ಕರೆತರಬೇಕಿತ್ತು ಎನ್ನಿಸಿತು.

"ಅಮೃತ ನಾನು ನಿನ್ನ ಹತ್ತಿರ ತುಂಬಾ ಮಾತಾಡಬೇಕು. ಮುಂದಿನ ಭಾನುವಾರ ಬೆಳಗ್ಗೇನೆ ಬರ್ತೀಯಾ ?"

"ನಿಮ್ಮತ್ತೆ-ಮಾವ ಗಂಡ ಏನೂ ಅನ್ನಲ್ವಾ ?"

"ಅವರ್‍ಯಾಕೆ ಅಂತಾರೆ ? ನಮ್ಮ ಯಜಮಾನರಂತೂ ಭಾನುವಾರಗಳಲ್ಲಿ ಮನೆಯಲ್ಲೇ ಇರಲ್ಲ "

"ನಾನು ಅಲೋಕನನ್ನೂ ಕರ್ಕೊಂಡು ಬರ್‍ಲಾ ?"

"ಅದನ್ನೂ ಕೇಳಬೇಕೇನೆ ? ನಮ್ಮ ಮನೆ ಕೆಲಸದವಳ ಮಗಳು ಚಿಕ್ಕಿ ನೋಡಿಕೊಳ್ತಾಳೆ."

"ಮಗೂಗೆ ಏನು ಹೆಸರಿಟ್ಟೆ ?"

"ನಮ್ಮತ್ತೆ ಮಾವ 'ಲಕ್ಷ್ಮಿ' ಅಂತ ಇಟ್ಟಿದ್ದಾರೆ ನಮ್ಮ ಯಜಮಾನರಿಗೆ ಅದು ಹಿಡಿಸಲಿಲ್ಲ, 'ಲಹರಿ' ಅಂತ ಇಟ್ಟಿದ್ದಾರೆ."

ಅಮೃತ 'ಅ'ಕಾರದಿಂದ-'ಹ'ಕಾರದವರೆಗೆ ಬರೆದುಕೊಂಡು ಬಂದಿದ್ದ ಹೆಸರುಗಳ ಪಟ್ಟಿ ಪರ್ಸ್‌ನಲ್ಲೇ ಉಳಿಯಿತು.

ಅವಳು ಮನೆಗೆ ಬರುವ ವೇಳೆಗೆ ಗಂಟೆ ನಾಲ್ಕಾಗಿತ್ತು. ಸಾಯಂಕಾಲದ 'ಆರತಿ' ಕಾರ್ಯಕ್ರಮಕ್ಕೆ ಇರಲು ಅವಳು ಇಷ್ಟಪಟ್ಟಿರಲಿಲ್ಲ. ಮಂಜುಳ ಶ್ರೀಮಂತ, ಸುಂದರ, ವಿದ್ಯಾವಂತ ಪತಿಯ ಕೈ ಹಿಡಿದೂ ಕೂಡ ಸುಖವಾಗಿಲ್ಲವೆಂದು ತಿಳಿದು ಅವಳಿಗೆ ವಿಚಿತ್ರ ರೀತಿಯಲ್ಲಿ ಸಮಾಧಾನವಾಗಿತ್ತು. ಗಂಡನನ್ನ ಮೋಹನನಿಗೆ ಹೋಲಿಸಿಕೊಂಡಾಗ ಒಂದು ರೀತಿಯ ಅವರ್ಣನೀಯ ಆನಂದವಾಗಿತ್ತು. ಭಾನುವಾರ ಮಂಜು ತನ್ನ ಕಷ್ಟ-ಸುಖ ಹೇಳಿಕೊಳ್ಳುತ್ತಾಳೇನೋ ಅನ್ನಿಸಿತ್ತು.

ಅಮೃತ ಮನೆಗೆ ಹೊರಟುಹೋದ ಮೇಲೆ ಮಂಜುಳಾಗೆ ತಾನವಳನ್ನು ಭಾನುವಾರ ಬರಲು ಹೇಳಬಾರದಿತ್ತು ಅನ್ನಿಸಿತು. ಅವಳಿಗೆ ಅಮೃತಾಳ ಸ್ವಭಾವ ಚೆನ್ನಾಗಿ ಅರ್ಥವಾಗಿತ್ತು. ಅವಳಿಗೆ ಯಾವಾಗಲೂ ಇನ್ನೊಬ್ಬರನ್ನು ಕಂಡರೆ ಹೊಟ್ಟೆಕಿಚ್ಚು. ಯಾರಾದರೂ ಹಾಳಾದರೆಂದರೆ ಹಿಗ್ಗುವ ದುರ್ಬುದ್ಧಿ. ಅಂತಹವಳ ಎದುರಿಗೆ ತನ್ನ ಗಂಡನ ಬಗ್ಗೆ ಹೇಳಿದರೆ. ಅವಳು ಸುಮ್ಮನಿರುತ್ತಾಳೆಯೆ ? ಎಲ್ಲರ ಬಳಿಯೂ ಇದೇ ವಿಚಾರ ಹೇಳಿಕೊಂಡು ಬರುತ್ತಾಳೆ. ಆಗ ತನ್ನ ಮರ್ಯಾದೆ ಏನು ಉಳಿಯುತ್ತದೆ ?' ಎನ್ನಿಸಿತು.

ಅವಳು ಶನಿವಾರ ಬೆಳಗ್ಗೆ ಅಮೃತಾಗೆ ಫೋನ್ ಮಾಡಿ ಹೇಳಿದಳು.
"ಸಾರಿ ಅಮ್ಮು. ನಾವೆಲ್ಲಾ ನಾಳೆ ಒಂದು ಮದುವೆಗೆ ಹೋಗ್ತಿದ್ದೇವೆ. ನಾನು ಪುನಃ ಫೋನ್ ಮಾಡ್ತೀನಿ ಆ ದಿನ ಬಾ" ಎಂದಳು.

ಅಮೃತ 'ಹಾಗೇ ಆಗಲಿ ಕಣೆ. ನಾನೇ ಫೋನ್ ಮಾಡೋಣಾಂತಿದ್ದೆ. ನಾನು ಎಂ.ಎಸ್ಸಿ. ಪರೀಕ್ಷೆ ತೆಗೆದುಕೊಂಡಿದ್ದೇನಲ್ವಾ ಓದೋದು ತುಂಬಾ ಇರತ್ತೆ' ಎಂದಳು.

ಫೋನ್ ಕೆಳಗಿಟ್ಟು ಮಂಜುಳಾ ನಿಟ್ಟುಸಿರು ಬಿಟ್ಟಳು ತಾನೂ ಅಮೃತ ಳಂತೆ ಓದಿ ಕೆಲಸಕ್ಕೆ ಸೇರಿದ್ದಿದ್ದರೆ ಕೆಲಸದ ನೆಪದಲ್ಲಿಯಾದರೂ 5-6 ಗಂಟೆ ಗಳ ಕಾಲ ಹೊರಗಿರಬಹುದಿತ್ತು ಅಂದುಕೊಂಡಳು. ಮಗುವಿರುವುದರಿಂದ ಅವಳಿಗೆ ಹೊತ್ತು ಹೋಗುತ್ತಿತ್ತು. ಮೋಹನನಿಗಂತೂ ಅವಳ ಬಗ್ಗೆ ಅಂತಹ ಅಕ್ಕರೆ ಇರಲಿಲ್ಲ ಮಗುವನ್ನು ಕೊಂಚ ಮಾತನಾಡಿಸುತ್ತಿದ್ದ. ಅಪರೂಪಕ್ಕೆ ಎತ್ತಿಕೊಳ್ಳುತ್ತಿದ್ದ. ತಾಯಿ-ತಂದೆಯರ ಬಗ್ಗೆ ಭಯ-ಭಕ್ತಿ ಯಾಗಲಿ, ಗೌರವವಾಗಲಿ ಇರಲಿಲ್ಲ. ಗಂಡ ಮೊದಲಿಂದಲೂ 'ಶ್ರೀಕೃಷ್ಣ' ಎಂದು ಅವಳಿಗೆ ಅರ್ಥವಾಗಿತ್ತು ಅವನು ಹೊರಗಡೆ ಬೇರೆ ಬೇರೆ ಹುಡುಗಿ ಯರ ಜೊತೆ ಸಂಪರ್ಕ ಇಟ್ಟುಕೊಂಡಿದ್ದಾನೆಂಬ ಅನುಮಾನ ಅವಳಿಗೆ ಇದ್ದೇ ಇತ್ತು. ಆದರೆ ಇತ್ತೀಚಿಗೆ ಅವಳ ಅನುಮಾನ ದೃಢವಾಗಿತ್ತು.

ಒಂದು ರಾತ್ರಿ ಅವಳು ಮಗುವನ್ನು ಮಲಗಿಸಿ ಹೊರಗೆ ಬಂದಾಗ ಅತ್ತೆ-ಮಾವ ಮಾತಾಡುತ್ತಿದ್ದುದು ಅವಳ ಕಿವಿಗೆ ಬಿದ್ದಿತ್ತು. ಅವಳ ಮಾವ ತುಂಬಾ ಬೇಸರದಿಂದ ಹೇಳುತ್ತಿದ್ದರು.

"ನಿನ್ನ ಮಗ ಈ ಜನ್ಮದಲ್ಲಿ ಬದಲಾಗಲ್ಲ ಕಣೆ. ನಾವು ಆ ಹುಡುಗೀನ ತಂದು ಇವನಿಗೆ ಕಟ್ಟಿ ಅವಳ ಬಾಳು ಹಾಳ್ಮಾಡಿದೆವು."

"ಯಾಕ್ರಿ ಹಾಗಂತೀರಾ ?"

"ಇವತ್ತು ಸಾಯುಂಕಾಲ ವಾಕಿಂಗ್ ಹೋದಾಗ ನಮ್ಮ ಬೀದಿಯ ಕೊನೆಯಲ್ಲಿದೆಯಲ್ಲಾ 'ದೀಪಾ ಭಂಡಾರ್'ಗೆ ಹೋಗಿದ್ದೆ."

"ಯಾಕೆ ?"

"ಊದಿನ ಕಡ್ಡಿ ತರಕ್ಕೆ ಹೋಗಿದ್ದೆ ಕಣೆ ಪಕ್ಕದಲ್ಲಿ ಒಂದು ದೊಡ್ಡ ಬಳೆ ಅಂಗಡಿ ಇದೆ ನೋಡು, ಅವನು ಒಂದು ಚೀಟಿ, ಒಂದು ಪ್ಯಾಕೆಟ್ ಕೊಟ್ಟು 'ನಿಮ್ಮ ಮಗ ಕೇಳಿದ್ರು ಸಾರ್. ನಿಮ್ಮ ಕೈಯಲ್ಲೇ ಕೊಡಲಾ ?' ಅಂತ ಕೇಳಿದ ಆ ಚೀಟಿಯಲ್ಲಿ ಅದೇಂತೆಂಹವೋ ಪೌಡರ್, ಕ್ರೀಂ, ರೋಸ್,

ಲಿಪ್‌ಸ್ಟಿಕ್, ಏನೇನೋ ಮಣ್ಣು-ಮಸಿ ಇದ್ದವು. ಬಿಲ್ಲು ಎಷ್ಟಾಗಿತ್ತು ಗೊತ್ತಾ ?"

"ಎಷ್ಟು ?"

"ಸಾವಿರದ ನೂರು ಚಿಲ್ರೆ... "

"ಮಂಜು ಹೇಳಿದ್ದ ಳೇನೋ ?"

"ಸುಮ್ನಿರು, ನೀನು ನಿನ್ನ ಮಗನ್ನ ವಹಿಸಿಕೊಂಡು ಬರಬೇಡ ಅವುಗಳ ಹೆಸರನ್ನು ನಿನ್ನ ಸೊಸೆ ಕೇಳಿದ್ದಾಳೋ ಇಲ್ವೋ ?"

"ಹಾಗಾದ್ರೆ ಅದೆಲ್ಲಾ ಯಾರಿಗೇರಿ ?"

"ಯಾರೋ ಹೊಸ ಫ್ರೆಂಡ್ ಸಿಕ್ಕಿರಬೇಕು. ಹೋದ ಶನಿವಾರ ರಾಯರು ಊಟಿಗೆ ಹೋಗಿದ್ರಂತೆ."

"ಯಾವ ರಾಯರು ?"

"ಜಯಸಿಂಹ ಕಣೆ. ಯಾವುದೋ ಮದುವೆಗೆ ಊಟಿಗೆ ಹೋಗಿದ್ರಂತೆ ನಿನ್ನ ಮಗ ಯಾವುದೋ ಹುಡುಗಿ ಜೊತೆ ಅಲ್ಲಿಗೆ ಬಂದಿದ್ದನಂತೆ. ಆ ಹುಡುಗಿ ಮೇಕಪ್‌ನಲ್ಲಿ ಮುಳುಗಿ ಹೋಗಿದ್ಳು" ಅಂದ ಜಯಸಿಂಹ.

"ಹೌದಾ ?"

"ಜಯಸಿಂಹ ನನ್ನ ಪ್ರಾಣ ಸ್ನೇಹಿತ ಅವನಿಗೆ ಗೊತ್ತಿಲ್ಲದೆ ಇರೋದು ಏನಿದೆ ಹೇಳು. 'ಅನ್ಯಾಯವಾಗಿ ಆ ಹುಡುಗಿ ಬಾಳು ಹಾಳು ಮಾಡಿಬಿಟ್ಟೆಯಲ್ಲಯ್ಯ ?' ಅಂತ ನನ್ನನ್ನು ಬೈದ ಕಣೆ."

"ಈಗ ಮಗು ಇದೆಯಲ್ಲಾ ಇನ್ನಾದ್ರೂ ಬುದ್ಧಿ ಬರುತ್ತದೇನೋ ನೋಡೋಣ."

"ಅವನಿಗೆ ಬುದ್ಧಿ ಬರೋದು ಒಂದೇ ಸಲ ಕಣೆ. ಕೈಕಾಲು ಮುರಿದು ಕೊಂಡು ಹಾಸಿಗೆ ಹಿಡಿಯಬೇಕು. ಇವನ ಪ್ರೇಯಸಿಯರು ಥೂ....ಛೀ, ಅಂತ ಉಗುಳಬೇಕು. ಆಗಲೇ ಕಣೆ ಅವನು ಸರಿಹೋಗೋದು."

"ಬಿಡ್ತು ಅನ್ನಿ. ತಂದೆಯಾದ ನಿಮ್ಮ ಬಾಯಿಂದ ಇಂತಹ ಮಾತುಗಳು ಬರಬಾರದು."

"ಹೊಟ್ಟೆ ಉರಿಯುವುದಿಲ್ಲವೇನೆ ಅನ್ನಪೂರ್ಣ ? ಮಗುವಾದ ಮೇಲಾದ್ರೂ ಸರಿಹೋಗ್ತಾನೇನೋ ಅಂತ ಅಂದ್ಕೊಂಡಿದ್ದೆ. ಆ ನಿರೀಕ್ಷೆಯೂ

ಸುಳ್ಳಾಯಿತಲ್ಲ ? ದೂರದಿಂದ ಮಾತಾಡಿಸ್ತಾನೆ. ಬೆಣ್ಣೆಮುದ್ದೆ ಇದ್ದಂತಿರುವ ಮಗೂನ್ನ ಕಂಡ್ರೆ ಎತ್ತಿಕೊಳ್ಳಬೇಕು ಅನ್ನುವ ಆಸೇನೇ ಹುಟ್ಟಲ್ವಾ?"

ಅನ್ನಪೂರ್ಣಮ್ಮ ಏನು ಉತ್ತರ ಹೇಳಲು ಸಾಧ್ಯ ? ಅದೇ ಕೊರಗು ಅವರನ್ನೂ ಕಾಡುತ್ತಿತ್ತು ತಾನೆ ?

ಹೋಗಲಿ ಸುಮ್ಮನಿರಿ. ಈ ವಿಚಾರ ಮಂಜು ಕಿವಿಗೆ ಬಿದ್ರೆ ಅದೆಷ್ಟು ನೊಂದುಕೊಳ್ತಾಳೋ ಏನೋ ?" ಎಂದರವರು.

ಆದರೆ ಆ ಮಾತುಗಳು ಮಂಜುಳೆಯ ಕಿವಿಗೆ ಬಿದ್ದು ಕಾದ ಸೀಸವನ್ನು ಕಿವಿಗೆ ಸುರಿದಂತಾಗಿತ್ತು. ಹೃದಯದಲ್ಲಿ ಏನೋ ವೇದನೆ. ತನ್ನ ಅಳಲನ್ನು ಯಾರ ಬಳಿಯೂ ಹೇಳಿಕೊಳ್ಳಲಾಗದೆ ಅವಳು ಒದ್ದಾಡಿದಳು. 'ತನ್ನ ಕೊರಗಿಗೆ ಕೊನೆಯೇ ಇಲ್ಲವೆ ?' ಅನ್ನಿಸಿತು. ಜನರು 'ಹಣವೊಂದಿದ್ದರೆ ಸಾಕು' ಎನ್ನುತ್ತಾರೆ. ಆದರೆ ತನಗೆ ಇಷ್ಟೊಂದು ಆಸ್ತಿ-ಪಾಸ್ತಿ ಇದ್ದು ಏನು ಪ್ರಯೋಜನ ? ಅನ್ನಿಸಿತು. ಅವಳಿಗೆ ಎಷ್ಟೋ ಬಾರಿ ಡೈವೋರ್ಸ್ ತೆಗೆದುಕೊಳ್ಳಬೇಕೆನ್ನಿಸುತ್ತಿತ್ತು. ಮೈಸೂರಿನಲ್ಲಿದ್ದಾಗ, ಮಗುವಾಗುವ ಮೊದಲು ಆ ನಿರ್ಧಾರ ಗಟ್ಟಿಯಾಗಿತ್ತು. ಆದರೆ ಹೆಣ್ಣುಮಗುವಾದ ಮೇಲೆ ಒಂದು ರೀತಿಯ ಅಳುಕು ಅವಳನ್ನು ಕಾಡತೊಡಗಿತ್ತು.

'ನಾನು ಡೈವೋರ್ಸ್ ಮಾಡಿ ಅಮ್ಮನ ಮನೆ ಸೇರಬಹುದು ಆದರೆ ತಂದೆಯಿಲ್ಲದ ನನ್ನ ಮಗುವಿನ ಭವಿಷ್ಯ ಏನಾಗಬಹುದು ? ಮಗುವನ್ನು ಗಂಡ ತಾನೇ ಇಟ್ಟುಕೊಳ್ಳಲು ಬಯಸಿದರೆ ಏನು ಮಾಡುವುದು ? ನಾನು ಗಂಡನ ಮನೆ ಬಿಟ್ಟು ತವರುಮನೆ ಸೇರಿದರೆ ಅಮ್ಮ-ಅಪ್ಪ ನೆಮ್ಮದಿಯಿಂದ ಇರುವರೆ ?' ಎಂಬ ಯೋಚನೆಗಳು ತಲೆಕೆಡಿಸಿದಾಗ ಅವಳು ಡೈವೋರ್ಸ್ ವಿಚಾರ ಕೈಬಿಟ್ಟಿದ್ದಳು. ತಾನೊಂದು ಜೇಡರ ಬಲೆಯಲ್ಲಿ ಸಿಕ್ಕಿಕೊಂಡಿರುವಂತೆ ಅವಳಿಗೆ ಭಾಸವಾಗುತ್ತಿತ್ತು.

ಅನ್ನಪೂರ್ಣಮ್ಮ ಮತ್ತು ಚಕ್ರವರ್ತಿಗಳ ಊಹೆ ಸುಳ್ಳಾಗಿರಲಿಲ್ಲ. ಅನಿರೀಕ್ಷಿತವಾಗಿ ಒಂದು ಪಾರ್ಟಿಯಲ್ಲಿ ಮೋಹನನಿಗೆ ಶೀಲಾ ಕುಲಕರ್ಣಿಯ ಪರಿಚಯವಾಗಿತ್ತು. ಮದುವೆಯಾದ ಹೊಸತರಲ್ಲಿ ಮೋಹನ ಹೆಂಡತಿಯನ್ನ ಪಾರ್ಟಿಗಳಿಗೆ ಕರೆದೊಯ್ಯುತ್ತಿದ್ದುದುಂಟು. ಆದರೆ ಈಗ ಅವಳಿಗೆ ಬಿಡುವೂ ಇರುತ್ತಿರಲಿಲ್ಲ. ಅವನಿಗೆ ಆಸಕ್ತಿಯೂ ಇರಲಿಲ್ಲ. ಶೀಲಾ ಕುಲಕರ್ಣಿಯನ್ನು

ಮೊದಲಬಾರಿಗೆ ನೋಡಿದಾಗ ತೀರಾ ಸಾಧಾರಣ ರೂಪದವಳು ಎನ್ನಿಸಿತ್ತು. ಆದರೆ ಅವಳ ಜೊತೆ ಮಾತನಾಡಲಾರಂಭಿಸಿದ ಮೇಲೆ ಅವಳ ಕಣ್ಣುಗಳಲ್ಲಿ ತೀವ್ರವಾದ ಸೆಳೆತ ಇರುವಂತೆ ಭಾಸವಾಗತೊಡಗಿತ್ತು. ಆ ಭಾವನೆ ಬಂದೊಡನೆ ಅವನ ಕಣ್ಣಿಗೆ ಅವಳು ಅದ್ವಿತೀಯ ಚೆಲುವೆಯಂತೆ ಕಾಣಿಸಿದ್ದಳು. ಚೆಲುವಿಗೆ ತಕ್ಕಂತಹ ಮಾತಿನ ಚಾಣಾಕ್ಷತನ ಅವಳಲ್ಲಿತ್ತು. ಜೊತೆಗೆ ತುಂಬಾ ದಿಟ್ಟತನದ ಹೆಣ್ಣು.

"ನಾಳೆ ಭಾನುವಾರ ನಿಮ್ಮ ಪ್ರೋಗ್ರಾಂ ಏನು ?"ಅವಳೇ ಕೇಳಿದ್ದಳು.

"ಸದ್ಯಕ್ಕೆ ಏನೂ ಇಲ್ಲ" ಎಂದಿದ್ದನವನು.

"ಷಲ್ ವಿ ಗೋ ಟು ಎ ಫಿಲಂ ?" ಕೇಳಿದ್ದಳವಳು.

"ಓ.ಕೆ." ಎಂದಿದ್ದನವನು.

"ಬೆಳಗ್ಗೆ ಒಂಭತ್ತು ಗಂಟೆಗೇ ನಮ್ಮನೆಗೆ ಬನ್ನಿ" ಎಂದು ತನ್ನ ವಿಳಾಸ ನೀಡಿದ್ದಳವಳು.

ಮರುದಿನ ಬೆಳಗ್ಗೆ ಅವನು ಶಿಸ್ತುಗಾರ ಪುಟ್ಟಸ್ವಾಮಿಯಂತೆ ಅಲಂಕರಿಸಿಕೊಂಡು ಕಾರ್‌ನಲ್ಲಿ ಅವಳ ಮನೆಗೆ ಹೋಗಿದ್ದ.

ಜಯನಗರದ ಕಾಂಪ್ಲೆಕ್ಸ್ ಬಳಿ ಇದ್ದ ಅವಳ ಮನೆ ಅವಳಷ್ಟೇ ಸುಂದರವಾಗಿತ್ತು. ಕಪ್ಪುಬಣ್ಣದ ಚೂಡಿದಾರ್ ಧರಿಸಿದ್ದ ಶೀಲಾ ಅವನಿಗೆ ಸ್ವಾಗತ ಬಯಸಿದ್ದಳು. ಸೊಗಸಾದ ಕಾಫಿ ಕೊಟ್ಟಿದ್ದಳು. ಒಳ್ಳೆಯ ಹೋಟೆಲ್‌ನಲ್ಲಿ ತಿಂಡಿ ತಿಂದು ಬನ್ನೇರುಘಟ್ಟಕ್ಕೆ ಹೋಗಿದ್ದರು ಅಲ್ಲಿಂದ ಬಂದು ಹೋಟೆಲ್‌ನಲ್ಲಿ ಊಟ ಮಾಡಿ, ಇಂಗ್ಲಿಷ್ ಸಿನಿಮ ನೋಡಿದ್ದರು. ಅವಳನ್ನು ಮನೆಯ ಹತ್ತಿರ ಬಿಡಲು ಹೋದಾಗ ಮತ್ತೆ ಅವನಿಗಾಗಿ ಕಾಫಿ ಮಾಡಿದ್ದಳು. ಒಂದು ದಿನದ ಓಡಾಟ ಅವನನ್ನು ಸಮೀಪಕ್ಕೆ ತಂದಿತ್ತು.

ಅವರು ಬನ್ನೇರುಘಟ್ಟದಲ್ಲಿ ಐಸ್‌ಕ್ರೀಂ ತಿನ್ನುತ್ತಿದ್ದಾಗ ಅವಳು ತನ್ನ ಕಥೆ ಹೇಳಿದ್ದಳು. ಶ್ರೀಮಂತ ತಂದೆಯ ಒಬ್ಬಳೇ ಮಗಳವಳು. ತಾಯಿಯಿಲ್ಲದ ಮಗುವೆಂದು ಅವರು ಅವಳನ್ನು ತುಂಬಾ ಮುದ್ದಾಗಿ ಸಾಕಿದ್ದರು. ತಮ್ಮ ತಂಗಿಯ ಮಗನಿಗೇ ಕೊಟ್ಟು ಮದುವೆ ಮಾಡಿದ್ದರು. ಹದಿನೆಂಟರ ಹರಯದಲ್ಲೇ ಅವಳಿಗೆ ಮದುವೆಯಾಗಿತ್ತು. ಅವಳಿಗೆ ಆಗ ಮದುವೆಯ ಬಗ್ಗೆ ಅಂತಹ ಕಲ್ಪನೆಗಳೇನೂ ಇರಲಿಲ್ಲ. ಅತ್ತೆಯ ಮಗ ಸುರೇಶನ ಬಗ್ಗೆ

ಅಭಿಮಾನವೂ ಇತ್ತು. ಮದುವೆಯಾಗುತ್ತಿದ್ದಂತೆ ಅತ್ತೆ ಮನೆಯವರು ಅವಳ ಮನೆ ಸೇರಿದ್ದರು. ಸುರೇಶ ಬಿ.ಇ. ಮುಗಿಸಿ ಕಂಪನಿಯೊಂದರಲ್ಲಿ ಇಂಜಿನಿಯರ್ ಆಗಿದ್ದ. ಅತ್ತೆಗೆ. ಸೊಸೆಯ ರೀತಿ ನೀತಿಯೊಂದೂ ಸರಿಹೋಗುತ್ತಿರಲಿಲ್ಲ. ಅಣ್ಣನೆದುರಿಗೆ ಗದರಿಸಲಾರದೆ ಸುಮ್ಮನಿದ್ದರು. ಸುರೇಶ ತಾಯಿ ಹಾಕಿದ ಗೆರೆ ದಾಟುತ್ತಿರಲಿಲ್ಲ ಅವಳ ತಂದೆ ಹೃದಯಾಘಾತದಿಂದ ಕಣ್ಮುಚ್ಚಿದ ಮೇಲೆ ಅತ್ತೆಯ ದರ್ಬಾರು ಜೋರಾಗಿತ್ತು. ಅವಳು ಕುಳಿತರೆ ತಪ್ಪು, ನಿಂತರೆ ತಪ್ಪು ಎನ್ನತೊಡಗಿದ್ದರು. ಸುರೇಶ 'ಅಮ್ಮ ಹೇಳಿದಂತೆ ಕೇಳು' ಎನ್ನುತ್ತಿದ್ದ. ಕೊನೆಗೆ ಶೀಲಾ ಧೈರ್ಯ ತೆಗೆದುಕೊಂಡು ಸುರೇಶನನ್ನು ಡೈವೋರ್ಸ್ ಮಾಡಿ, ಅವರನ್ನೆಲ್ಲಾ ಮನೆಯಿಂದ ಓಡಿಸಿದ್ದಳು.

"ಆಸ್ತಿ ನನ್ನ ಹೆಸರಿಗಿದ್ದುದರಿಂದ ನನಗೆ ತೊಂದರೆಯಾಗಲಿಲ್ಲ. ನನಗೀಗ, ಮದುವೆ, ಗಂಡ, ಮಕ್ಕಳು–ಯಾವ ವಿಚಾರದಲ್ಲೂ ಆಸಕ್ತಿನೇ ಇಲ್ಲ. ನನಗೆ 'ಸ್ವತಂತ್ರನಾದ ಪಕ್ಷಿ'ಯಂತೆ ಇರುವುದಕ್ಕೆ ಆಸೆ"

"ನನಗೂ ಮದುವೆಯಲ್ಲಿ ದಾಂಪತ್ಯ ಜೀವನದಲ್ಲಿ ಆಸಕ್ತಿ ಉಳಿದಿಲ್ಲ ಶೀಲ. ಒಲ್ಲದ ಹುಡುಗಿಯ ಕೈಹಿಡಿದು ಒದ್ದಾಡ್ತಿದ್ದೇನೆ. ಅವಳು ನನಗೆ ಯಾವ ರೀತಿಯಲ್ಲೂ ಸರಿಯಾಗಿಲ್ಲ. ನಮ್ತಂದೆ–ತಾಯಿ ಬಲವಂತಕ್ಕೆ ತಾಳಿ ಕಟ್ಟಿದ್ದಾಯ್ತು. ನನ್ನ ಪುಣ್ಯ ನನ್ನ ಮಗಳು ನನ್ನ ತರಹ ಇದ್ದಾಳೆ. ನನ್ನ ಹೆಂಡತಿ ಬಗ್ಗೆ ನನಗೆ ಪ್ರೀತಿನೇ ಇಲ್ಲ" ಎಂದು ತನ್ನ ದುಃಖ ತೋಡಿಕೊಂಡಿದ್ದ.

ಶೀಲಾಳ ಪರಿಚಯವಾದ ಮೇಲೆ ಸುಳ್ಳು ಹೇಳಿ ಊಟಿ, ಮೈಸೂರು, ಮದ್ರಾಸ್ ಎಂಬು ಅಲೆಯತೊಡಗಿದ್ದ. ಅವಳನ್ನು ಉಡುಗೊರೆಗಳಲ್ಲಿ ಮುಳುಗಿಸಿದ್ದ.

"ಮೋನಿ ನನಗೆ ಇವೆಲ್ಲಾ ಏನೂ ಬೇಡ ಇದನ್ನೆಲ್ಲಾ ಕೊಂಡುಕೊಳ್ಳುವ ಶಕ್ತಿ ನನಗಿದೆ. ನನಗೆ ನೀನು ಬೇಕು" ಎನ್ನುತ್ತಿದ್ದಳು ಶೀಲ.

"ನಾನು ಮಂಜೂನ್ನ ಡೈವೋರ್ಸ್ ಮಾಡಿ ನಿನ್ನನ್ನು ಮದುವೆಯಾಗ್ತೀನಿ ಶೀಲ" ಎನ್ನುತ್ತಿದ್ದ.

"ಬೇಡ, ನನಗೆ ಮದುವೆ ಇಷ್ಟವಿಲ್ಲ. ನನಗೋಸ್ಕರ ನೀನು ಯಾಕೆ

ಆ ಹುಡುಗೀನ್ನ ಡೈವೋರ್ಸ್ ಮಾಡ್ತೀಯಾ ? ನಾನು ನಿನ್ನನ್ನು ಮದುವೆಯಾಗೊಂತ ಒತ್ತಾಯಿಸಲ್ಲ, ಯಾಕೆ ಚಿಂತೆ ?" ಎನ್ನುತ್ತಿದ್ದಳು.

ಇತ್ತೀಚಿಗೆ ಮಂಜುಳಾಗೆ ಗಂಡನ ಬಗ್ಗೆ ಇದ್ದ ಅಲ್ಪ ಸ್ವಲ್ಪ ಗೌರವವೂ ಮಾಯವಾಗಿತ್ತು. ಮಗಳನ್ನು ನೋಡಿ ತನ್ನ ದುಃಖ ಮರೆಯುತ್ತಿದ್ದಳು. ಅವಳಿಗೆ ಸಂಗೀತದಲ್ಲಿ ಆಸಕ್ತಿಯಿತ್ತು. ಮೈಸೂರಿನಲ್ಲಿದ್ದಾಗ ಜೂನಿಯರ್ ಪರೀಕ್ಷೆ ಪಾಸು ಮಾಡಿದ್ದಳು. ಈಗ ಸೀನಿಯರ್ ಪರೀಕ್ಷೆಗೆ ಕುಳಿತುಕೊಳ್ಳಲು ನಿಶ್ಚಯಿಸಿದ್ದಳು. ಅವಳತ್ತೆ ಮಗುವನ್ನು ನೋಡಿಕೊಳ್ಳುತ್ತಿದ್ದುದರಿಂದ ಮಗುವಿನ ಚಿಂತೆ ಅವಳಿಗಿರಲಿಲ್ಲ. ಒಂದು ಕೆಲಸದ ಹುಡುಗಿಯನ್ನು ಗೊತ್ತು ಮಾಡಿದ್ದರು. ಅವಳ ಮಾವ ಅವಳ ಆಸೆಗೆ ಅಡ್ಡಿ ಬರಲಿಲ್ಲ. ಮನೆಯ ಹತ್ತಿರವೇ ಇದ್ದ ಸಂಗೀತ ಪಾಠ ಹೇಳುವ ವಸಂತಲಕ್ಷ್ಮಿ ಬಳಿ ಮಂಜುಳಾ ಪಾಠಕ್ಕೆ ಹೋಗಲಾರಂಭಿಸಿದಳು.

ಅಮೃತ ತನ್ನ ಕೆಲಸಕ್ಕೆ ರಾಜೀನಾಮೆ ಕೊಡುವ ನಿರ್ಧಾರ ಕೈಗೊಂಡಿದ್ದಳು.

"ಇರುವ ಕೆಲಸ ಬಿಟ್ಟು ನೀನು ಪ್ರೈವೇಟ್ ಕಾಲೇಜಿನಲ್ಲಿ ಕೆಲಸ ಮಾಡೋದು ಸರಿಯಾಗಿ ಕಾಣ್ತಿಲ್ಲ ಅಮೃತ ಪ್ರೈವೇಟ್ ಕಾಲೇಜಿನಲ್ಲಿ ಸಂಬಳಾನೂ ಕಡಿಮೆ. ಕೆಲಸಾನೂ ಪರ್ಮನೆಂಟಾಗಿರಲ್ಲ."

"ನೋಡ್ರಿ, ನಿಮಗಿದೆಲ್ಲಾ ಅರ್ಥವಾಗಲ್ಲ. ನಾನು ಹೈಸ್ಕೂಲಿನಲ್ಲೇ ಇರುವುದಾಗಿದ್ದಿದ್ರೆ ಇಷ್ಟು ಕಷ್ಟಪಟ್ಟು ಎಂ.ಎಸ್‌ಸಿ. ಯಾಕೆ ಮಾಡಬೇಕಿತ್ತು ? ಕಾಲೇಜಿಗೆ ಹೋದರೆ ನಾನು 'ಲೆಕ್ಚರರ್' ಅನ್ನಿಸಿಕೊಳ್ತೀನಿ. ಆಗ ವಿದ್ಯಾರ್ಥಿಗಳು ನನ್ನ ಹತ್ತಿರ ಪಾಠಕ್ಕೆ ಬರ್ತಾರೆ."

"ನೀನು ಕಾಲೇಜಿಗೆ ಸೇರಿದ ತಕ್ಷಣ ಪಾಠಕ್ಕೆ ಬಂದುಬಿಡ್ತಾರಾ ?"

"ಒಂದೆರಡು ವರ್ಷಗಳು ಕೊಂಚ ಕಷ್ಟವಾಗಬಹುದು. ನಾವು ಹೊಂದಿಕೋಬೇಕು. ಕಾಲೇಜಿಗೆ ಸೇರಿದ್ರೆ ತುಂಬಾ ಬಿಡುವು ಸಿಗುತ್ತದೆ. ಆಗ ಎಸ್.ಎಸ್.ಎಲ್.ಸಿ. ಸ್ಟೂಡೆಂಟ್ಸ್‌ಗೂ ಪಾಠ ಹೇಳಬಹುದು."

"ನಿನ್ನಿಷ್ಟ. ಅದ್ಯಾಕೆ ದುಡ್ಡು ದುಡ್ಡೂಂತ ಒದ್ದಾಡ್ತೀಯೋ ಏನೋ ? ಪ್ರಪಂಚದಲ್ಲಿ ಹಣವೇ ಸರ್ವಸ್ವವೇನೆ ಅಮೃತಾ ?"

"ನೋಡ್ರಿ, ಮನುಷ್ಯ ಬದುಕಿನಲ್ಲಿ ಮೇಲೆ ಬರಬೇಕೂರಿ. ನಮ್ಮನೆ ನೋಡಿ ಹೇಗಿದೆ, ಯಾರನ್ನಾದ್ರೂ ಮನೆಗೆ ಆಹ್ವಾನಿಸುವ ಹಾಗಿದೆಯಾ ? ನಮ್ಮನೆಯಲ್ಲಿ ಏನಿದೆ ಹೇಳಿ ? ನಾನು ಅತ್ತು ಕರೆದು ಮಾಡಿದ್ದಕ್ಕೆ ಒಂದು ಕಪ್ಪುಬಿಳುಪಿನ ಟಿ.ವಿ. ತಂದಿಟ್ಟಿದ್ದೀರ. ಕಲರ್ ಟಿ.ವಿ. ಫ್ರಿಜ್ ವಾಷಿಂಗ್ ಮಿಷನ್ ತೊಗೋಬೇಕು. ಒಳ್ಳೆಯ ಜಾಗದಲ್ಲಿ ದೊಡ್ಡ ಮನೆ ಕಟ್ಟಿಸಬೇಕು. ಮನೇನ್ನ ಚೆನ್ನಾಗಿ ಡೆಕೋರೇಟ್ ಮಾಡಬೇಕು. ಫೋನ್, ಕಾರು ಎಲ್ಲಾ ಇರಬೇಕು. ಮನೇನ್ನ ಚೆನ್ನಾಗಿ ಡೆಕೋರೇಟ್ ಮಾಡಬೇಕು. ಅಲೋಕ ನನ್ನು ರಾಜಕುಮಾರನ ಹಾಗೆ ಸಾಕಬೇಕು. ಅವನನ್ನು ಇಂಜನಿಯರೋ ಡಾಕ್ಟರೋ ಮಾಡಬೇಕು ಮೈತುಂಬಾ ಒಡವೆಗಳಿರಬೇಕು. ಬೀರು ತುಂಬಾ ಸೀರೆಗಳಿರಬೇಕು."

"ಸಾಕು, ಸಾಕು ಅಮ್ಮು ಮನುಷ್ಯನಿಗೆ ಇಷ್ಟೊಂದು ಆಸೆಗಳು ಇರ ಬಾರದು."

"ಆಸೆ ಇರುವುದರಿಂದಲೇ ಬದುಕಿಗೆ ಗುರಿ ಇರೋದೂರಿ ನೋಡ್ತೀರಿ. ಇನ್ನು 5-6 ವರ್ಷಗಳಲ್ಲಿ ಈ ಅಮೃತಾ ಏನೇನು ಮಾಡ್ತಾಳೇಂತ" ಎಂದಳು ಅಮೃತ ಒಂದು ರೀತಿಯ ಛಲದಿಂದ.

ಶೇಖರ್ ನಿಟ್ಟುಸಿರು ಬಿಟ್ಟ.

ನಾಲ್ಕೇ ತಿಂಗಳಲ್ಲಿ ಅಮೃತಾ ತನ್ನ ಕಾಲೇಜಿಗೆ ರಾಜಿನಾಮೆ ಕೊಟ್ಟು ಇಂದಿರಾನಗರದಲ್ಲಿ ಪ್ರಾರಂಭವಾಗಿದ್ದ 'ಶ್ರೀ ವಾಸವಾಂಬ ಕಿರಿಯ ಕಾಲೇಜ್' ನಲ್ಲಿ ಗಣಿತದ ಉಪನ್ಯಾಸಕಿಯಾಗಿ ಸೇರಿದಳು. ಮನೆಯಲ್ಲಿ ಹತ್ತನೇ ತರಗತಿಯ ವಿದ್ಯಾರ್ಥಿನಿಯರಿಗೆ ಪಾಠ ಹೇಳಲಾರಂಭಿಸಿದಳು. ಸಂಬಳ ಕಡಿಮೆ ಇದ್ದರೂ ಪಾಠಗಳಿಂದ ಸಾಕಷ್ಟು ಹಣ ಬರುತ್ತಿತ್ತು. ಅಲೋಕನಿಗೆ ಈಗ ನಾಲ್ಕನೆ ವರ್ಷ ನಡೆಯುತ್ತಿತ್ತು. ಅವನೀಗ ಮುದ್ದುಮುದ್ದಾಗಿ ಮಾತನಾಡುತ್ತಿದ್ದ. ಅಜ್ಜಗಂತೂ ಮೊಮ್ಮಗನೆಂದರೆ ಪಂಚಪ್ರಾಣ ಶೇಖರ್ ಆಫೀಸ್‌ನಿಂದ ಬಂದೊಂಡನೆ ಮಗುವನ್ನು ಸುತ್ತಾಡಲು ಕರೆದೊಯ್ಯುತ್ತಿದ್ದ. ಅಮೃತಾಗೆ ಬಿಡುವು ಸಿಗುತ್ತಿದ್ದರೂ ಮಗುವಿನ ಜೊತೆ ಕಾಲ ಕಳೆಯಲು ಬಿಡುವಿರುತ್ತಿರ

ಲಿಲ್ಲ. ದಣಿದ ದೇಹಕ್ಕೆ ವಿಶ್ರಾಂತಿಯು ಅಗತ್ಯವಿರುತ್ತಿತ್ತು. ಅವಳು ಕಾಲೇಜ್‌ನಲ್ಲಿ ಒಳ್ಳೆಯ ಲೆಕ್ಚರರ್ ಎಂದು ಹೆಸರುಗಳಿಸಿದ್ದಳು. ಮೊದಲನೆ, ಪಿ.ಯು.ಸಿ.ಯ ವಿದ್ಯಾರ್ಥಿಗಳು. ಈಗಾಗಲೇ ಬಂದು 'ಪಾಠ ಹೇಳಿ ಮ್ಯಾಡಂ' ಎಂದು ಒತ್ತಾಯಿಸತೊಡಗಿದ್ದರು.

ಈ ಮಧ್ಯೆ ಶಂಕರನ ಮದುವೆ ನಿಶ್ಚಯವಾಯ್ತು. ಹುಡುಗಿ 'ಟೆಲಿಫೋನ್ಸ್'ನಲ್ಲಿ ಕೆಲಸದಲ್ಲಿದ್ದಳು. ಲಕ್ಷಣವಾಗಿದ್ದಳು. ಸರೋಜಮ್ಮನಿಗೆ ಹುಡುಗಿ ಒಪ್ಪಿಗೆಯಾದಳು. ಆದರೆ ಶೇಖರನಿಗೆ ಸಮಾಧಾನವಿರಲಿಲ್ಲ.

"ಶಂಕರ, ನೀನು ಕೆಲಸದಲ್ಲಿ ಇಲ್ಲದೇ ಇರುವ ಹುಡುಗಿಯನ್ನು ಮದುವೆಯಾಗಬೇಕಿತ್ತು" ಎಂದ.

"ಯಾಕಣ್ಣ ಹಾಗಂತೀಯ ? ಈಗಿನ ಕಾಲದಲ್ಲಿ ಒಬ್ಬರ ಸಂಪಾದನೆಯಲ್ಲಿ 'ಜೀವನ ನಿರ್ವಹಣೆ' ಕಷ್ಟಾಂತ ನಿಮಗೆ ಗೊತ್ತಿಲ್ವಾ ?"

"ಅದು ನಿಜ. ಆದರೆ ಹೆಣ್ಮಕ್ಕಳು ಮನಸ್ಸು ಮಾಡಿದ್ರೆ ಮನೆಯಲ್ಲೇ ಕುಳಿತು ಬೇಕಾದಷ್ಟು ಸಂಪಾದಿಸಬಹುದು. ದುಡ್ಡಿಗೆ ಪ್ರಾಧಾನ್ಯತೆ ಕೊಟ್ಟರೆ. ಸಂಸಾರದಲ್ಲಿ ಸುಖ, ನೆಮ್ಮದಿ, ಶಾಂತಿಗಳನ್ನು ತ್ಯಾಗ ಮಾಡಬೇಕಾಗತ್ತೆ."

ಅಲ್ಲೇ ಕುಳಿತಿದ್ದ ಅಮೃತ ಗಂಡನ ಮಾತು ಕೇಳಿ ಅವನತ್ತ ಆಶ್ಚರ್ಯದಿಂದ ನೋಡಿದಳು. "ನಾವು ಈ ಮನೆಗಾಗಿ ಹಗಲೂ, ರಾತ್ರಿ ದುಡಿಯುತ್ತಿದ್ದರೂ, ಈ ವ್ಯಕ್ತಿಗೆ ನನ್ನ ಬಗ್ಗೆ ಅಭಿಮಾನವಿಲ್ಲವಲ್ಲಾ ?" ಎನ್ನಿಸಿತು.

ಆದರೆ ಶಂಕರ ಅಣ್ಣನ ಮಾತು ಒಪ್ಪಿಕೊಳ್ಳಲಿಲ್ಲ 'ಅಣ್ಣ ಪ್ರಪಂಚದಲ್ಲಿ ಈಗ ದುಡಿಯುತ್ತಿರುವ ಗಂಡ-ಹೆಂಡತಿಯರ ಸಂಖ್ಯೆಯೇ ಹೆಚ್ಚು. ಅವರೆಲ್ಲಾ ಸುಖವಾಗಿಲ್ಲಾಂತ ಹೇಳ್ತೀಯಾ ? ಗಂಡ-ಹೆಂಡತಿಯರ ನಡುವೆ ಹೊಂದಾಣಿಕೆ ಇದ್ರೆ ಯಾವ ಕೊರತೇನೂ ಇರಲ್ಲ ಬಿಡು" ಎಂದ.

ಶೇಖರ್ ಉತ್ತರಿಸಲಿಲ್ಲ. ಆದರೆ ಆ ದಿನ ರಾತ್ರಿಯೇ ಅಮೃತ ಅವನನ್ನು ತರಾಟೆಗೆ ತೆಗೆದುಕೊಂಡಳು.

"ಸಾಯಂಕಾಲ ಶಂಕರನ ಎದುರಿಗೆ ನೀವ್ಯಾಕೆ ಹಾಗೆ ಹೇಳಿದ್ರಿ ?"

"ಏನು ಹೇಳಿದೆ ?"

"ಕೆಲಸದಲ್ಲಿ ಇಲ್ಲದೇ ಇರುವ ಹುಡುಗಿಯನ್ನು ಮದುವೆಯಾಗ

ಬೇಕಿತ್ತೊಂತ ಹೇಳಿದ್ರಲ್ಲಾ-ನನ್ನನ್ನು ಮದುವೆಯಾಗಿದ್ರಿಂದ ನಿಮ್ಮ ಸುಖಕ್ಕೇನು ಕಡಿಮೆಯಾಗಿರೋದು ?"

"ಆ ಪ್ರಶ್ನೆಯನ್ನು ನೀನೇ ನಿನ್ನ ಅಂತರಾತ್ಮಕ್ಕೆ ಹಾಕಿಕೋ. ನೀನು ಒಳ್ಳೆಯ ಲೆಕ್ಚರರ್ ಇರಬಹುದು. ಆದರೆ ಒಳ್ಳೆಯ ಗೃಹಿಣಿ ಅಲ್ಲ."

"ನಿಮ್ಮ ಸರ್ಟಿಫಿಕೇಟ್ ನನಗೆ ಬೇಕಿಲ್ಲ."

"ಅಮೃತ, ಮದುವೆಗೆ ಮೊದಲೇ ನಾನು ಈ ವಿಚಾರ ನಿನಗೆ ಹೇಳಿದ್ದೆ. ನಮ್ಮಿಬ್ಬರ ಸಂಬಳದಿಂದ ಸುಖವಾಗಿರಬಹುದಿತ್ತು. ಎಂ.ಎಸ್‌ಸಿ. ಮಾಡ್ತೀನೀಂತ ಹಠ ಹಿಡಿದೆ ಲೆಕ್ಚರರೂ ಆದೆ ಈಗ ನೋಡಿದ್ರೆ ಬಿಡುವೇ ಇಲ್ಲದೆ ದುಡಿಯುತ್ತಾ ಇದ್ದೀಯ ಬೆಳಗ್ಗೆಯಿಂದ ರಾತ್ರಿಯವರೆಗೂ ನೀನು ಲೆಕ್ಚರರ್ ಆಗೇ ಇರ್ತೀಯ ಹೊರತು ಈ ಮನೆ 'ಗೃಹಿಣಿ'ಯಾಗಿರಲ್ಲ. ನನ್ನ ಹೆಂಡತಿಯಾಗಿ, ಅಲೋಕನ ತಾಯಿಯಾಗಿ, ಅಮ್ಮನ ಸೊಸೆಯಾಗಿ ಏನು ಮಾಡ್ತಿದ್ದೀಯ ? ನಾನೂ ಮನುಷ್ಯ ಕಣೆ. ಹೆಂಡತಿಯಾದವಳು ನನಗೆ ರುಚಿ ರುಚಿಯಾದ ಅಡಿಗೆ ತಿಂಡಿ ಮಾಡಿ ಹಾಕಲಿ, ಕಾಫಿ ಮಾಡಿ ಕೊಡಲಿ ಅನ್ನುವ ಆಸೆ ನನಗೂ ಇರತ್ತೆ. ನೀನು ಯಾವತ್ತಾದರೂ ಒಂದು ದಿನ ನನಗೆ ಕಾಫಿ ಮಾಡಿ ಕೊಟ್ಟಿದ್ದೀಯ ? ಅಡಿಗೆ ಮಾಡಿ ಬಡಿಸಿದ್ದೀಯಾ ? ನಾನೇನು ಮುದುಕ ಅಲ್ಲ ಹೆಂಡತಿಯ ಜೊತೆ ಸಾಯಂಕಾಲದ ಹೊತ್ತು ತಿರುಗಾಡಿ ಕೊಂಡು ಬರಬೇಕು ಅನ್ನುವ ಆಸೆ ನನಗಿದ್ದೇ ಇರತ್ತೆ. ನಾವಿಬ್ಬರೂ ಒಟ್ಟಿಗೆ ಹೊರಗೆ ಹೋಗಿ ಎಷ್ಟು ದಿನ ಆಯ್ತೂಂತ ನೆನಪಿದೆಯಾ ನಿನಗೆ ?"

"ನಾನು ನನಗೋಸ್ಕರ ದುಡಿಯುತ್ತಿದ್ದೇನೇನ್ರಿ ? ಈ ಮನೆಗೋಸ್ಕರ ಅಲ್ವಾ ನಾನಿಷ್ಟು ಕಷ್ಟಪಡ್ತಾ ಇರೋದು ?"

"ನಾಲ್ಕು ಗೋಡೆಗಳಿದ್ರೆ ಅದು ಮನೆ ಅನ್ನಿಸಿಕೊಳ್ಳಲ್ಲ ಕಣೆ. ಅಲ್ಲಿರುವ ಜನಗಳ ನಡುವೆ ಪರಸ್ಪರ ಪ್ರೀತಿ, ವಿಶ್ವಾಸ ಹೊಂದಾಣಿಕೆ ಇರಬೇಕು. ಅಲೋಕ ಹತ್ತಿರ ಬಂದರೂ. ಅವನನ್ನಪ್ಪಿ ಮುದ್ದಿಸುವುದಕ್ಕೆ ನಿನಗೆ ಬಿಡುವು ಇರುವುದಿಲ್ಲ. ಒಂದು ದಿನ ಆ ಮಗೂಗೆ ಊಟ ತಿನ್ನಿಸಿದ್ದೀಯಾ ? ಒಂದು ದಿನ ಆ ಮಗೂಗೆ ಸ್ನಾನ ಮಾಡಿಸಿದ್ದೀಯ ? ಆ ಮಗುವಿಗೆ 'ತಾಯಿ' ಅನ್ನುವ ಅಭಿಮಾನ ಹೇಗೆ ಹುಟ್ಟುತ್ತದೆ ಹೇಳು. ಅವನು ಅಪ್ಪ, ಅಜ

ಅಂತ ಹಂಬಲಿಸುತ್ತಾನೆಯೋ ಹೊರತು 'ಅಮ್ಮ' ಅಂತ ಅತ್ತಿದ್ದನ್ನ ನೀನು ಯಾವತ್ತಾದರೂ ನೋಡಿದ್ದೀಯಾ ?"

ಅಮೃತ ಉತ್ತರ ಕೊಡಲಿಲ್ಲ.

"ನಮ್ಮಮ್ಮನಂತೂ ನಿನ್ನ ದೃಷ್ಟಿಯಲ್ಲಿ ಬಿಟ್ಟೆ ಅಳು. ಅಮ್ಮನಿಗೂ ವಯಸ್ಸಾಯ್ತು. ನ್ಯಾಯವಾಗಿ ನಾವು ಅವಳನ್ನು ಕೂರಿಸಿ ಮಾಡಬೇಕು. ಆದರೆ ಆ ಅದೃಷ್ಟ ಅವಳಿಗೆಲ್ಲಿದೆ ? ಅಪರೂಪಕ್ಕೆ ಒಂದಿನವಾದರೂ ಒಂದನ್ನ-ಸಾರು ಮಾಡಿ ಹಾಕಲ್ಲ ನೀನು."

"ಹೌದು, ನಾನು ಕೆಟ್ಟವಳು. ನನ್ನನ್ನು ಯಾಕೆ ಮದುವೆಯಾದ್ರಿ ? ನಿಮ್ಮನ್ನು ಕೂಡಿಸಿ ಮಾಡುವಂತಹ ಯಾರಾದ್ರೂ ಹಳ್ಳೀ ಗುಗ್ಗೂನ್ನ ಮದುವೆಯಾಗಬೇಕಿತ್ತು."

"ನಾನೂ ಅದೇ ಅಂದ್ಕೊಳ್ತಿದ್ದೇನೆ. ನಿನ್ನನ್ನು ಡೈವೋರ್ಸ್ ಮಾಡಿ ನಾನ್ಯಾಕೆ ಬೇರೆ ಮದುವೆ ಆಗಬಾರದು ಅನ್ನಿಸ್ತಿದೆ."

ಅವಳು ಆಶ್ಚರ್ಯದಿಂದ ಅವನತ್ತ ನೋಡಿದಳು.

"ಏನ್ರಿ ನಾನಷ್ಟು ಕೆಟ್ಟವಳಾ ?" ಅವನ ಕೊರಳು ಬಳಸಿ ಕೇಳಿದಳ ವಳು.

ತನಗೆ ಅತಿ ಸಮೀಪದಲ್ಲಿದ್ದ ಅವಳ ಮುಖವನ್ನು ತನ್ನ ಬೊಗಸೆಯಲ್ಲಿ ಹಿಡಿದು ಹೇಳಿದನವನು. "ಈ ಕಣ್ಣು, ಈ ಬಾಯಿ, ಈ ಮುದ್ದಾದ ಮೂಗು, ಈ ಪೊಂಡುತನ ಇರುವ ಬೇರೆ ಹುಡುಗಿ ಸಿಕ್ಕರೆ ಈಗಲೂ ನಾನು ತಾಳಿ ಕಟ್ಟಕ್ಕೆ ಸಿದ್ಧ."

ಅವಳು ಅವನೆದೆಗೆ ಗುದ್ದಿದಳು.

"ಈ ಬಡಪಾಯಿಗೆ ಕೊಂಚ ಟೈಂ ಮೀಸಲಾಗಿಡಿ ಮ್ಯಾಡಂ. ಒಂದೇ ಮನೆಯಲ್ಲಿದ್ರೂ 'ವಿರಹದ' ಬೇಗೆಯಿಂದ ಬಳಲಿ ಹೋಗ್ತಿದ್ದೇನೆ ನಾನು...." ಅವಳನ್ನು ಮುದ್ದಿಸಿ ಹೇಳಿದನವನು.

ಅವಳು ನಕ್ಕು ಅವನನ್ನಪ್ಪಿದಳು

○ ○ ○ ○

ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಪಾಠ ಹೇಳುತ್ತಿದ್ದುದರಿಂದ ಕೇವಲ 10 ಮಂದಿ ಎರಡನೇ ಪಿ.ಯು.ಸಿ. ವಿದ್ಯಾರ್ಥಿಗಳಿಗೆ ಗಣಿತ ಹೇಳಿ ಕೊಡಲು ಅಮೃತ ಒಪ್ಪಿದಳು. ಕೆಲವೇ ದಿನಗಳಲ್ಲಿ ಆ ಸಂಖ್ಯೆ 20 ಮಂದಿಗೆ ಏರಿತು. ಆ ವಿದ್ಯಾರ್ಥಿಗಳೆಲ್ಲರೂ ಪ್ರಥಮ ದರ್ಜೆಯಲ್ಲಿ ಪಾಸಾದರು. ಒಬ್ಬ ವಿದ್ಯಾರ್ಥಿ ಗಣಿತದಲ್ಲಿ ನೂರಕ್ಕೆ ನೂರು ನಂಬರ್ ತೆಗೆದುಕೊಂಡು, ಪಿ ಯು.ಸಿ ಯಲ್ಲಿ ಐದನೇ ರ್‍ಯಾಂಕ್ ಗಳಿಸಿದ. ಇದರಿಂದ ಅಮೃತಳ ಹೆಸರು ಎಲ್ಲ ಕಡೆ ಕೇಳಿಬರಲಾರಂಭಿಸಿತು.

ಅಲೋಕನಿಗೆ ಐದನೇ ವರ್ಷ ನಡೆಯುತ್ತಿದ್ದಾಗ, ಅಮೃತ ಮತ್ತೆ ಗರ್ಭಿಣಿಯಾದಳು. ಶೇಖರ್, ಸರೋಜಮ್ಮ ತುಂಬ ಸಂತಸಪಟ್ಟರು. ಆದರೆ ಅಮೃತಾಗೆ ಸಂತಸವಾಗಲಿಲ್ಲ.

"ರೀ, ನನಗ್ಯಾಕೋ ಈಗ ಮಗು ಬೇಡ ಅನ್ನಿಸ್ತಿದೆ."

"ಯಾಕೆ ಬೇಡ ? ಅಲೋಕನಿಗೂ ಐದು ವರ್ಷ ತುಂಬುತ್ತದೆ. ಇದೇ ಸರಿಯಾದ ಟೈಂ. ನನಗೇನೋ ಈ ಸಲ ಮಗಳೇ ಹುಟ್ತಾಳೆ ಅನ್ನಿಸ್ತಿದೆ."

"ನಿಮಗೆ ಸಾವಿರ ಅನ್ನಿಸ್ತಿರಬಹುದು. ಆದರೆ ನನಗೆ ಮಗು ಬೇಕು ಅನ್ನಿಸ್ತಿಲ್ಲ. ಇರುವ ಒಬ್ಬನನ್ನೇ ಚೆನ್ನಾಗಿ ಸಾಕೋಣ."

"ಯಾಕೆ ಅಮ್ಮು ಹೀಗಂತಿದ್ದೀಯ ?"

"ನಾನೀಗ ಒಳ್ಳೆಯ ಹೆಸರು ಗಳಿಸಿದ್ದೇನೆ. ಅದನ್ನು ಉಳಿಸಿಕೊಳ್ಳ ಬೇಕಾದರೆ ನಾನು ಈ ವರ್ಷ ಟ್ಯೂಷನ್ಸ್ ಮುಂದುವರಸಲೇಬೇಕು. ಈಗ ನಾನು ಮೆಟರ್ನಿಟಿ ಲೀವ್ ಹಾಕಿದ್ರೆ ಯಾರೂ ನನ್ನ ಹತ್ತಿರ ಪಾಠಕ್ಕೆ ಬರಲ್ಲ."

"ನಿನ್ನ ಪಾಠದ ಮನೆ ಹಾಳಾಯ್ತು. ಒಂದು ವರ್ಷ ಪಾಠ ಹೇಳ ದಿದ್ರೆ ಪ್ರಾಣ ಹೋಗತ್ತೇನು ? ನಮ್ಮ ಸಂಸಾರಕ್ಕಿಂತ ನಿನ್ನ ಪಾಠಗಳು ಮುಖ್ಯವೇನು ?"

"ಒಂದು ಮಗುವನ್ನು ನೋಡಿಕೊಳ್ಳುವುದೇ ನಮ್ಮ ಕೈಲಿ ಆಗ್ತಿಲ್ಲ. ಇನ್ನೊಂದು ಮಗುವನ್ನು ಹೇಗ್ರಿ ನೋಡಿಕೊಳ್ಳೋದು ?"

"ಆ ಚಿಂತೆ ನಿನಗ್ಯಾಕೆ ? ನೀನೇನು ಅಲೋಕನ್ನ ನೋಡಿಕೊಳ್ತಿ ದ್ದೀಯಾ ? ನಾನು ಅಮ್ಮ ಅವನನ್ನು ಹೇಗೆ ಬೆಳೆಸ್ತಿದ್ದೇವೆ ನೋಡು.

ನಿನಗೆ ಯಾವ ರೀತಿಯಲ್ಲೂ ತೊಂದರೆಯಾಗದ ರೀತಿ ನಾವು ಮಗೂನ್ನ ನೋಡಿಕೊಳ್ತೀವೆ. ನೀನು ಏನೇನೋ ಯೋಚಿಸಿ ತಲೆ ಕೆಡಿಸಿಕೊಳ್ಳಬೇಡ."

ಅಮೃತ ಮಾತನಾಡಲಿಲ್ಲ. ಆದರೆ ಅವಳಾಗಲೇ ನಿರ್ಧಾರ ತೆಗೆದು ಕೊಂಡಾಗಿತ್ತು. ಆ ಶನಿವಾರ ಕಾಲೇಜಿಗೆ ಹೋಗಿ, ಹಾಗಿಂದಹಾಗೆ 'ಆದರ್ಶ ನರ್ಸಿಂಗ್ ಹೋಂ'ಗೆ ಹೋಗಿ 'ಕ್ಲೀನ್' ಮಾಡಿಸಿಕೊಂಡು ಬಂದಳು.

ಸಾಯಂಕಾಲ ಆರು ಗಂಟೆಗೆ ಮನೆಗೆ ಬಂದವಳೇ, "ಕಾಲೇಜಿನಲ್ಲೇ ತುಂಬಾ ಹೊಟ್ಟೆನೋವು ಶುರುವಾಯ್ತು. ಹತ್ತಿರವೇ ಇದ್ದ ನರ್ಸಿಂಗ್ ಹೋಂಗೆ ಅಡ್ಮಿಟ್ ಮಾಡಿದರು. ಅಬಾರ್ಷನ್ ಆಯ್ತು" ಎಂದು ಹೇಳಿದಳು. ಸರೋಜಮ್ಮ ಅವಳ ಮಾತು ನಂಬಿದರೂ, ಶೇಖರ್ ನಂಬಲಿಲ್ಲ.

ಅಮೃತಾಗೆ ಈ ವಿಚಾರದ ಬಗ್ಗೆ ಚರ್ಚೆ ಮಾಡುವುದು ಇಷ್ಟವಿರಲಿಲ್ಲ. ಶೇಖರ್ ಏನಾದರೂ ಕೇಳಬಹುದೆಂದುಕೊಂಡಿದ್ದವಳಿಗೆ ಅವನ ಮೌನ ಆಶ್ಚರ್ಯ ತಂದಿತು.

ಎರಡು ತಿಂಗಳು ಕಳೆಯಿತು. ಶಂಕರನಿಗೆ ಬೆಂಗಳೂರಿಗೇ ವರ್ಗ ವಾಯ್ತು. ಅವನು ವಿದ್ಯಾರಣ್ಯಪುರಂನಲ್ಲಿ ಮನೆಮಾಡಿದ ಒಂದು ಶನಿವಾರ ಬೆಳಗ್ಗೆ ಸರೋಜಮ್ಮ ಮಗನ ಬಳಿ ಹೇಳಿದರು,

"ಶೇಖರೂ, ನಾನಿವತ್ತು ಶಂಕರೂ ಮನೆಗೆ ಹೋಗಿ ನಾಲ್ಕು ದಿನ ಇದ್ದು ಬರ್ತೀನಿ. ಅವನು ಬಾ ಅಂತ ಪ್ರತಿವಾರ ಬಂದಾಗಲೂ ಕರೆಯುತ್ತಲೇ ಇರ್ತಾನೆ. ನನಗೆ ಹೋಗುವುದಕ್ಕಾಗಿಲ್ಲ."

"ನನಗೆ ರಜ ಹಾಕಕ್ಕಾಗಲ್ಲಮ್ಮ....."

"ನೀನು ರಜ ಹಾಕಬೇಡಪ್ಪ. ನಾನು ಅಲೋಕನ್ನ, ಮಾದೇವಿನ್ನ ನನ್ನ ಜೊತೆಯಲ್ಲೇ ಕರೆದುಕೊಂಡು ಹೋಗ್ತೀನಿ. ನೀನು ನನ್ನನ್ನು ಒಂಬತ್ತು ಗಂಟೆಯ ಬಸ್‌ಗೆ ಹತ್ತಿಸಿಬಿಡು. ಶಂಕರೂ ಬಸ್ಟಾಪ್‌ಗೆ ಬಂದು ಇಳಿಸಿ ಕೊಳ್ತಾನೆ."

"ಹಾಗೇ ಆಗಲಮ್ಮ" ಎಂದ ಶೇಖರ್ ತಾಯಿಯನ್ನು ಎಂಟು ಗಂಟೆಗೆ ಹೊರಡಿಸಿದ. ಅಲೋಕ ಖುಷಿಯಿಂದ ಹೊರಟ. ಮಾದೇವಿಯೂ ಹೊರ ಡಲು ತಯಾರಾಗಿ ಬಂದಿದ್ದಳು. ಶೇಖರ್ ತಾಯಿಯ ಕೈಗೆ ನೂರು ರೂಪಾಯಿ ಕೊಟ್ಟು "ಖರ್ಚಿಗೆ ಇಟ್ಟುಕೋಮ್ಮ" ಎಂದ. ಅವರಿಗೆ ತುಂಬಾ

ಖುಷಿಯಾಯ್ತು. ಅತ್ತೆ ಮಗನನ್ನು ಕರೆದುಕೊಂಡು ಮೂರು ದಿನ ವೈದ್ಯರನ ಮನೆಗೆ ಹೋಗಿ ಬರುತ್ತಾರೆಂದು ತಿಳಿದಾಗಲೂ ಅಮೃತಾಗೆ ಏನೂ ಅನ್ನಿಸಲಿಲ್ಲ. ಮಾದೇವಿಗೆ "ಮಗೂನ್ನ ಹುಷಾರಾಗಿ ನೋಡಿಕೊಳ್ಳಿ" ಎಂದು ಹೇಳಿದಳಷ್ಟೆ.

ಶೇಖರ್ ಎಂಟು ಗಂಟೆಗೆ ತಾಯಿಯನ್ನು ಬಸ್‌ಗೆ ಹತ್ತಿಸಿ, ಶಂಕರನ ಪಕ್ಕದ ಮನೆಗೆ ಫೋನ್ ಮಾಡಿ, ಶಂಕರನಿಗೆ ವಿಷಯ ತಿಳಿಸಲು ಹೇಳಿದ. ನಂತರ ಹೋಟೆಲ್‌ಗೆ ಹೋಗಿ ತಿಂಡಿ ತಿಂದು ಹೆಂಡತಿಗೆ ನಾಲ್ಕು ಇಡ್ಲಿ ಕಟ್ಟಿಸಿ ಕೊಂಡು ಬಂದ. ಅವನು ಬರುವ ವೇಳೆಗೆ ಒಂದು ಬ್ಯಾಚ್‌ನ ಪಾಠ ಮುಗಿದಿತ್ತು.

"ಇಡ್ಲಿ ತಂದಿದ್ದೇನೆ. ಕಾಫಿ ಮಾಡ್ಕೊಂಡು ಕುಡಿ. ನಿನಗೋಸ್ಕರ ಅಡಿಗೆ ಮಾಡಿಕೊಳ್ಳುವುದಾದರೆ ಮಾಡ್ಕೋ. ನಾನು ಹೊರಗೇ ಊಟ ಮಾಡ್ತೀನಿ."

ಅಮೃತ ಸ್ನಾನ ಮಾಡಿ ತಿಂಡಿ ತಿಂದಳು. ಕಾಫಿ ಬಿಸಿ ಮಾಡಿಕೊಳ್ಳಲು ಬೇಜಾರಾಗಿ ಒಂದು ಕಪ್ ಹಾಲು ಕುಡಿದಳು. ಮಧ್ಯಾಹ್ನ ಕಾಲೇಜಿನ ಕ್ಯಾಂಟೀನಿನಲ್ಲೇ ಊಟ ಮಾಡಿದಳು. ಅವಳು ಸಾಯಂಕಾಲ ಐದೂವರೆಗೆ ಮನೆಗೆ ಬಂದರೂ, ಶೇಖರ್ ಮನೆಗೆ ಬಂದಿರಲಿಲ್ಲ. ಒಂಭತ್ತು ಗಂಟೆ ಯಾದರೂ ಗಂಡ ಬರದಿದ್ದಾಗ ಅವಳಿಗೆ ಆತಂಕವಾಯ್ತು. ಪಾಠ ಹೇಳು ತ್ತಲೇ ಅವಳು ಒಂದನ್ನ ಸಾರು ಮಾಡಿಟ್ಟಳು. ಹತ್ತೂವರೆಗೆ ಶೇಖರ್ ಮನೆಗೆ ಬಂದ.

"ಎಲ್ಲಿಗೆ ಹೋಗಿದ್ರಿ ?"

"ಬೇಜಾರಾಗಿತ್ತು. ಸಿನಿಮಾಕ್ಕೆ ಹೋಗಿದ್ದೆ"

"ನನಗ್ಯಾಕೆ ಹೇಳಲಿಲ್ಲ ?"

"ಹೇಳಿದ್ದಿದ್ರೆ ನೀನೇನು ನನ್ನ ಜೊತೆ ಬರ್ತಿದ್ದೆಯಾ ? ಆ ಪುಣ್ಯ ನನ ಗೆಲ್ಲಿದೆ ? ಅಲೋಕ ಮನೆಯಲ್ಲಿದ್ದಾಗ ಎಲ್ಲಿಗೂ ಹೋಗಕ್ಕಾಗಲ್ಲ. ಅದಕ್ಕೆ ಇವತ್ತು ಹೋಗಿ ಬಂದೆ "

"ಬಟ್ಟೆ ಬದಲಾಯಿಸಿ ಬನ್ನಿ. ಊಟ ಮಾಡೋಣ"

"ಸಾರಿ. ಅಮ್ಮು, ನನಗೆ ನಿದ್ರೆ ಬರ್ತಿದೆ ಸಾಯಂಕಾಲ ತಿಂಡಿ

ತಿಂದಿರೋದೇ ಅರಗಿಲ್ಲ. ನೀನು ಊಟ ಮಾಡು."

"ಸಾಯಂಕಾಲ ಯಾಕೆ ತಿಂಡಿ ತಿಂದ್ರಿ ?"

"ನೀನು ಅಡಿಗೆ ಮಾಡಿರ್ತೀಯಾ ಅನ್ನುವ ನಂಬಿಕೆ ನನಗಿರಲಿಲ್ಲ. ಅದಕ್ಕೆ ತಿಂಡಿ ತಿಂದು ಬಂದೆ."

ಅವಳು ಮಾತಾಡದೆ ಊಟ ಕಲಿಸಿಕೊಂಡು ಕುರ್ಚಿಯ ಮೇಲೆ ಕುಳಿತಳು. ಹಿಂದೊಮ್ಮೆ ಸರೋಜಮ್ಮನಿಗೆ ಹುಷಾರಿರಲಿಲ್ಲ. ಪಕ್ಕದ ಮನೆಯ ಶ್ಯಾಮಲಾ ಅವರಿಗೆ ಗಂಜಿ ಮಾಡಿಕೊಟ್ಟು, ಮಗುವನ್ನು ನೋಡಿಕೊಂಡಿದ್ದಳು. ಅಂದು ಸಾಯಂಕಾಲ ಅಮೃತ ಮನೆಗೆ ಬರುವುದು ತಡವಾಗಿತ್ತು. ಬರುವಾಗಲೇ ಕಾಫಿ ಕುಡಿದು ಬಂದಿದ್ದಳು. ಮನೆಗೆ ಬಂದವಳೇ ಆ ದಿನದ ಪಾಠ ಕ್ಯಾನ್ಸಲ್ ಮಾಡಿ ಮಲಗಿಬಿಟ್ಟಿದ್ದಳು. ಮಗು ಶ್ಯಾಮಲಾಳ ಮನೆಯಲ್ಲೇ ಊಟ ಮಾಡಿ ಮಲಗಿಬಿಟ್ಟಿತ್ತು.

ಎಂಟೂವರೆಗೆ ಮನೆಗೆ ಬಂದ ಶೇಖರ, ತಾಯಿಗೆ ಔಷಧಿ, ಹಾಲು ಕೊಟ್ಟು ಬಟ್ಟೆ ಬದಲಾಯಿಸಿಕೊಂಡು ಬಂದು ಹೇಳಿದ್ದ "ಬಾ ಅಮ್ಮು ಬಡಿಸು" ಆಗ ಅವಳಿಗೆ ತಾನು ಅಡಿಗೆ ಮಾಡಿಲ್ಲವೆಂದು ನೆನಪಾಗಿತ್ತು. 'ಸಾರೀ ನಾನು ಅಡಿಗೆಯನ್ನೇ ಮಾಡಿಲ್ಲ' ಎಂದಿದ್ದಳು. ಅವನು ಹತ್ತಿರದ ಬೇಕರಿಗೆ ಹೋಗಿ ಬ್ರೆಡ್ ತಂದಿದ್ದ.

ಅವಳಿಗ್ಯಾಕೋ ಊಟ ಮಾಡಲಾಗಲಿಲ್ಲ. ಮರುದಿನ ಭಾನುವಾರ ಬೇಗ ಎದ್ದು ತಿಂಡಿ ಮಾಡಬೇಕೆಂದುಕೊಂಡಳು ಆದರೆ ಎಚ್ಚರವೇ ಆಗಲಿಲ್ಲ. ಅವಳು ಏಳುವ ಹೊತ್ತಿಗೆ ಎಂಟು ಗಂಟೆಯಾಗಿತ್ತು. ಆ ವೇಳೆಗೆ ಶೇಖರ್ ಸ್ನಾನಮಾಡಿ ದೇವರಿಗೆ ದೀಪ ಹಚ್ಚಿದ್ದ. ಅವಳು ಕಾಫಿ ಬೆರೆಸುತ್ತಾ ಕೇಳಿದಳು.

"ನೀವು ಕಾಫಿ ಕುಡಿದಾಯ್ತಾ ?"

"ಆಯ್ತು; ಆದರೆ ನಿನ್ನ ಅಮೃತ ಹಸ್ತದಿಂದ ಕಾಫಿ ಕುಡಿದು ಬಹಳ ದಿನಗಳಾಗಿವೆ. ಒಂದು ಲೋಟ ಕಾಫಿ ಕೊಡು" ಎಂದ ಶೇಖರ್ ಅವಳು ಸಿಟ್ಟು ಮಾಡಿಕೊಳ್ಳದೆ ಕಾಫಿ ಬೆರೆಸಿಕೊಟ್ಟಳು.

"ನಿಮ್ಮ ಪ್ರೋಗ್ರಾಂ ಏನು ?"

"ನೀನು ಮನೆಯಲ್ಲಿರುವುದಾದರೆ ನಾನೂ ಇರ್ತೀನಿ. ಇಲ್ಲದಿದ್ರೆ ನಾನು ಶಂಕರೂ ಮನೆಗೆ ಹೋಗಿ ಸಾಯಂಕಾಲ ವಾಪಸ್ಸು ಬರ್ತೀನಿ."

"ಭಾನುವಾರಗಳಲ್ಲಿ ನಾನೆಲ್ಲಿಗೆ ಹೊರಗೆ ಹೋಗ್ತೀನಿ ? ಮನೆಯಲ್ಲೇ ಇರ್ತೀನಿ."

"ಮನೆಯಲ್ಲೇ ಇದ್ದು ಟ್ಯೂಷನ್ಸ್ ಹೇಳುವುದಾದರೆ ನಾನಿದ್ದು ಏನು ಪ್ರಯೋಜನ ಹೇಳು. ನಾನು ಶಂಕರೂ ಮನೆಗೇ ಹೋಗ್ತೀನಿ."

"ಒಂದು ಬ್ಯಾಚ್ ಸ್ಟೂಡೆಂಟ್ಸ್ ಬರ್ತಾರೇರಿ. ಅವರನ್ನು ಬೇಗ ಕಳು ಹಿಸಿಬಿಡ್ತೀನೆ."

ಶೇಖರ್ ಒಪ್ಪಿದ. ಅಮೃತ ತಾನೇ ಉಪ್ಪಿಟ್ಟು ಮಾಡಿದಳು. ನಂತರ ಅಡಿಗೆಗಿಟ್ಟಳು. ಹತ್ತು ಗಂಟೆಗೆ ಅವಳ ಸ್ಟೂಡೆಂಟ್ಸ್ ಬಂದರು. ಹನ್ನೊಂದಾಯಿತು, ಹನ್ನೆರಡಾಯಿತು. ಅವಳು ಎದ್ದು ಬರಲಿಲ್ಲ. ಶೇಖರನೇ ಅಡಿಗೆ ಪೂರೈಸಿದ. ಸುಮಾರು 1½ ಗಂಟೆಯ ಹೊತ್ತಿಗೆ ಅವಳು ಎದ್ದು ಬಂದಳು.

"ಯಾವುದೋ ಪತ್ರಿಕೆ ತಂದಿದ್ರೂರಿ. ಒಂದೆರಡು ಲೆಕ್ಕಗಳು ತುಂಬಾ ತಲೆಕೆಡಿಸಿದವು. ತಲೆನೋವು ಬಂದುಬಿಡ್ತು" ಎಂದಳು.

"ಊಟ ಮಾಡಿ ರೆಸ್ಟ್ ತಗೋ" ಎಂದ ಶೇಖರ್ ತಾನೇ ಎರಡು ತಟ್ಟೆ ಹಾಕಿ ಬಡಿಸಿದ.

ಅಮೃತ ಊಟಕ್ಕೆ ಕುಳಿತಳು. ಗಂಡ ಹೆಂಡತಿಯರ ನಡುವೆ ಹೆಚ್ಚು ಮಾತು-ಕಥೆ ನಡೆಯಲಿಲ್ಲ. ಅವಳು ಊಟ ಮಾಡಿ ಮಲಗಿಬಿಟ್ಟಳು. ಅವಳಿಗೆ ಎಚ್ಚರವಾದಾಗ ಗಂಟೆ ನಾಲ್ಕು ದಾಟಿತ್ತು. ಹೊರಗಡೆಯಿಂದ ಡೋರ್ ಲಾಕ್ ಮಾಡಿ ಕಿಟಕಿಯಿಂದ ಬೀಗದಕೈ ಒಳಗಡೆಗೆ ಎಸೆಯಲಾಗಿತ್ತು. ಅವಳು ಬಾಗಿಲು ತೆಗೆದುಕೊಂಡು ಹೊರಗೆ ಬಂದಾಗ ಎದುರುಮನೆ ಸುಕನ್ಯಾ ಕೇಳಿದಳು, "ನಿಮ್ಮ ಯಜಮಾನರು ಸಿನಿಮಾಕ್ಕೆ ಹೋದರಲ್ಲಾ, ನೀವ್ಯಾಕೆ ಹೋಗಲಿಲ್ಲ ?"

"ತುಂಬಾ ತಲೆನೋಯುತ್ತಾ ಇತ್ತೂರಿ, ಅದಕ್ಕೆ ಹೋಗಲಿಲ್ಲ"

"ಅಷ್ಟು ಹೊತ್ತು ಪಾಠ ಹೇಳಿದ್ರೆ ತಲೆನೋವು ಬರದೆ ಇನ್ನೇನಾಗುತ್ತೇರಿ ? ನಿಮಗೆ ತುಂಬಾ ದುರಾಸೆಯಪ್ಪ...." ಎಂದಳು.

ಬೇರೆ ಸಂದರ್ಭದಲ್ಲಾಗಿದ್ದರೆ ಅವಳು ಸುಕನ್ಯಳ ಜೊತೆ ಜಗಳವಾಡುತ್ತಿದ್ದಳೇನೋ ? ಆದರೆ ಜಗಳವಾಡಲು ಅವಳಿಗೆ ಈಗ ಮೂಡ್ ಇರಲಿಲ್ಲ.

ಒಳಗೆ ಹೋಗಿ ಟೀವಿ ಆನ್ ಮಾಡಿದಳು. ಆದರೆ ನೋಡಲಾಗಲಿಲ್ಲ. ತಾನು 'ಒಂಟಿ' ಅನ್ನುವ ಭಾವನೆ ತೀವ್ರವಾಗಿ ಕಾಡಿದಾಗ ಅವಳಿಗೆ ಅಳು ಉಕ್ಕಿ ಬಂತು. ಗಂಡ ತನಗೆ ಹೇಳದೆ ಹೋಗಿದ್ದು ಅವಳ ಮನಸ್ಸಿಗೆ ತುಂಬಾ

ನೋವನ್ನುಂಟುಮಾಡಿತು. ಸಾಯಂಕಾಲದವರೆಗೂ ಕಾದಿದ್ದರೆ ತಾವಿಬ್ಬರೂ ಒಟ್ಟಿಗೆ ಹೋಗಬಹುದಿತ್ತಲ್ಲಾ ? ಎನ್ನಿಸಿತು. ಅವಳು ಗಂಡನ ಬರುವಿಕೆಗಾಗಿ ಕಾಯುತ್ತಾ ಕುಳಿತಳು.

ತಾನು ಮನೆಗೆ ಕಾಲಿಟ್ಟೊಡನೆ ಹೆಂಡತಿ ಜಗಳವಾಡಬಹುದೆಂದು ನಿರೀಕ್ಷಿಸಿದ್ದ ಶೇಖರ್‌ಗೆ ಅವಳು ಶಾಂತವಾಗಿರುವುದನ್ನು ಕಂಡು ಆಶ್ಚರ್ಯಯಾಯಿತು. ಊಟವಾದ ಮೇಲೆ ಅವಳು ನಗುತ್ತಲೇ ಕೇಳಿದಳು "ಯಾಕ್ರಿ ನನ್ನನ್ನು ಬಿಟ್ಟು ಸಿನಿಮಾಕ್ಕೆ ಹೋದ್ರಿ ? ನನಗೊಂದು ಮಾತು ಹೇಳಿದ್ದಿದ್ರೆ ನಾನೂ ಬರ್ತಿರಲಿಲ್ವಾ ?"

"ನೀನು ತಲೆನೋವೂಂತ ಮಲಗಿದ್ದೆ. ನೀನು ಬರಲ್ಲಾಂತ ಭಾವಿಸಿ ನಾನೊಬ್ಬನೇ ಸಿನಿಮಾಕ್ಕೆ ಹೋದೆ."

"ನಿಮಗೆ ಅವಕಾಶ ಸಿಕ್ಕಿದ್ರೆ ಸಾಕು, ದಿನಾ ಸಿನಿಮಾ ನೋಡುವುದಕ್ಕೆ ಸಿದ್ಧ ಅನ್ನಿ."

"ಯಾಕೆ ನೋಡಬಾರದು ಹೇಳು. ಈಗ ನನ್ನ ಲೈಫ್‌ನಲ್ಲಿ ಉಳಿದಿರೋದು ಅದೊಂದೇ ಮನರಂಜನೆ ತಾನೆ ?"

ಅವಳು ಉತ್ತರಿಸಲಿಲ್ಲ. ಯಾಕೋ ದಿನದಿನಕ್ಕೆ ತಮ್ಮ ನಡುವೆ ಬಿರುಕು ಹೆಚ್ಚಾಗುತ್ತಿದೆ ಎನ್ನಿಸಿತು. ಎಷ್ಟೇ ರೀತಿಯಲ್ಲಿ ಯೋಚಿಸಿದರೂ ಅವಳಿಗೆ ತನ್ನ ತಪ್ಪು ಕಾಣಲೇ ಇಲ್ಲ. 'ನಾನು ಜೀವನದಲ್ಲಿ ಮುಂದೆವರೆಯ ಬೇಕೆಂದು ಬಯಸುವುದು ತಪ್ಪೇ ? ಸಾಯುವವರೆಗೂ ಈ ಬಾಡಿಗೆ ಮನೆಯಲ್ಲೇ ಕೊಳೆಯಬೇಕೆ ? ನಮ್ಮ ಮಗುವನ್ನು ನಾವು ಸರಿಯಾಗಿ ಬೆಳೆಸುವುದು ಬೇಡವೆ ? ಅವನಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಡಿಸುವುದು ಬೇಡವೆ ? ನಾನು ಬಡತನದಲ್ಲಿ ಕೊಳೆತಿದ್ದು ಸಾಲದೆ ? ನನಗಿರುವ ಬುದ್ಧಿಶಕ್ತಿಗೆ, ಒಳ್ಳೆಯ ಅವಕಾಶ ಸಿಕ್ಕಿದ್ದಿದ್ದರೆ, ನಾನು ಇಂಜಿನಿಯರೋ, ಡಾಕ್ಟರೋ ಆಗಬಹುದಿತ್ತು. ಆದರೆ ನಾನೇನಾಗಿದ್ದೇನೆ ? ನನ್ನ ಸ್ವಪ್ರಯತ್ನದಿಂದ ಲೆಕ್ಚರರ್ ಆಗಿದ್ದೇನೆ. ಈಗಿನ ಕಾಲದಲ್ಲಿ 'ದುಡ್ಡಿದ್ದವನೇ ದೊಡ್ಡಪ್ಪ' ಮೆರಿಟ್ ಇರುವ ವಿದ್ಯಾರ್ಥಿಗಳೇ ಪಿ ಯು ಸಿ.ಯಲ್ಲಿ ಕಾಂಬಿನೇಷನ್ ತೆಗೆದುಕೊಳ್ಳಲು 8-10 ಸಾವಿರ ಕೊಡಬೇಕಾಗಿದೆ. ಅಲ್ಲೋಕ ಇಂಜಿನಿಯರ್ ಅಥವಾ ಡಾಕ್ಟರ್ ಪರೀಕ್ಷೆ ಓದಲು ಅದೆಷ್ಟು ಸಾವಿರಗಳು ಬೇಕಾಗುತ್ತವೋ ಏನೋ ? ಅದಕ್ಕೆಲ್ಲಾ

ಹಣ ಬೇಡವೆ ? ನಮ್ಮಿಬ್ಬರ ಸಂಬಳದಲ್ಲಿ ಆ ರೀತಿಯೆಲ್ಲಾ ಖರ್ಚು ಮಾಡಿ ಓದಿಸಲು ಸಾಧ್ಯವೆ ?'

ಅವಳು ಕುಳಿತ ಕಡೆಯಿಂದಲೇ ಸುತ್ತಲೂ ಕಣ್ಣು ಹಾಯಿಸಿದಳು. ಅವಳು ಕುಳಿತಿದ್ದ ಗಾದ್ರೇಜ್ ಕುರ್ಚಿ, ಅದರ ಜೊತೆಯ ಮತ್ತೊಂದು ಕುರ್ಚಿ ಬಿಟ್ಟರೆ ಮತ್ತೇನೂ ಅಲ್ಲಿರಲಿಲ್ಲ ಅವಳು ಮದುವೆಯಲ್ಲಿ ತನಗೆ ಉಡುಗೊರೆಯಾಗಿ ಬಂದ ಹಣಕ್ಕೆ ಕೊಂಚ ಸೇರಿಸಿ ಒಂದು ಗಾಡ್ರೇಜ್ ಬೀರು ಕೊಂಡಿದ್ದಳು. ಮನೆಯಲ್ಲಿ ಮೊದಲಿಂದ ಗ್ಯಾಸ್ ಇತ್ತು. ಆದರೆ ಬೇಸಿಗೆಯ ಬಿಸಿ ಕಡಿಮೆ ಮಾಡಲು ಫ್ಯಾನ್‌ಗಳಿರಲಿಲ್ಲ. ಫೋನಂತೂ ದೂರವೇ ಉಳಿಯಿತು. ಅವಳ ಕಣ್ಣಿನ ಮುಂದೆ ಮಂಜುಳೆಯ ಮನೆಯ ಚಿತ್ರ ಹಾದು ಹೋಯ್ತು. ಅಷ್ಟು ಭವ್ಯವಾದ ಬಂಗಲೆ ಕಟ್ಟಲಾಗದಿದ್ದರೂ, ಕಡೆಯಪಕ್ಷ ಎರಡು ಬೆಡ್‌ರೂಂ, ಒಂದು ಡ್ರಾಯಿಂಗ್ ರೂಂಗಳಿರುವ ಮನೆಯನ್ನಾದರೂ ಕಟ್ಟಬೇಕೆಂದುಕೊಂಡಳು. ತನ್ನ ಆಸೆಗಳನ್ನು ಪೂರೈಸಿಕೊಳ್ಳಬೇಕಾದರೆ ಸೆಂಟಿಮೆಂಟಲ್ ಆಗಬಾರದು ಎಂದುಕೊಂಡಳು.

ಬುಧವಾರ ಸಾಯಂಕಾಲ ಸರೋಜಮ್ಮ, ಅಲೋಕ ವಾಪಸ್ಸು ಬಂದರು ಅವರು ಎಂದಿನಂತೆ ಮಾತಾಡಲಿಲ್ಲ 'ಅತ್ತೆ ಯಾಕೋ ಒಂದು ಥರಹ ಇದ್ದಾರೆ' ಎಂದುಕೊಂಡಳು ಅಮೃತ. ರಾತ್ರಿ ಊಟಕ್ಕೆ ಕುಳಿತಾಗ ಕೂಡ ಸರೋಜಮ್ಮ ತಮ್ಮ ಕಿರಿಯ ಮಗ-ಸೊಸೆಯರ ಬಗ್ಗೆ ಏನೂ ಹೇಳಲಿಲ್ಲ.

"ವಸಂತ ಚೆನ್ನಾಗಿದ್ದಾಳಾ ಅತ್ತೆ ?"

"ಹುಂ ಚೆನ್ನಾಗಿದ್ದಾಳೆ."

"ಏನಾದ್ರೂ ವಿಶೇಷ ಇದೆಯಾ ?"

"ನನಗದೆಲ್ಲಾ ಹೇಗೆ ಗೊತ್ತಾಗುತ್ತದಮ್ಮಾ ? ಈಗಿನ ಕಾಲದವರ ರೀತಿ ನೀತಿಗಳನ್ನು ಹೇಳಕ್ಕೇ ಆಗಲ್ಲ."

"ಯಾಕತ್ತೆ ಹಾಗಂತೀರಾ ?"

"ನನ್ನ ಮಾತಿನಲ್ಲಿ ಏನು ತಪ್ಪಿದೆ ? ನಿನ್ನನ್ನು ನನ್ನ ಮಗಳ ತರಹ ನೋಡಿಕೊಳ್ತಿದ್ದೇನೆ. ನೀನಾಗಿ ನೀನೇ ಹೋಗಿ ಅಬಾರ್ಷನ್ ಮಾಡಿಸಿಕೊಳ್ಳುವಂತಹದ್ದು ಏನಾಗಿತ್ತು ?"

ಅವಳು ಉತ್ತರ ಕೊಡದೆ ಗಂಡನ ಕಡೆ ನೋಡಿದಳು. ಅವನು ಅಸ್ಥ ಕಲೆಸುತ್ತಾ ಕುಳಿತಿದ್ದ.

"ಮೊನ್ನೆ ವಸಂತನ ಚಿಕ್ಕಮ್ಮನ ಮಗಳು ಡಾ|| ಕೌಸಲ್ಯ ಬಂದಿದ್ದಳು. ಮದುವೆ ಫೋಟೋದಲ್ಲಿ ನಿನ್ನನ್ನು ನೋಡಿ "ಇವರು ನಮ್ಮ ನರ್ಸಿಂಗ್ ಹೋಂ'ಗೆ ಬಂದು ಅಬಾರ್ಷನ್ ಮಾಡಿಸಿಕೊಂಡ್ರು ಅಂತ ಹೇಳಿದಳು. ಅವಳು ಮದುವೆಗೆ ಬಂದಿರಲಿಲ್ಲವಾದ್ದರಿಂದ ಅವಳಿಗೆ ನೀನು ಯಾರೂಂತ ಗೊತ್ತಾಗಿಲ್ಲ."

"ಹೌದು, ಹೋಗಿರಬಹುದು. ಅದರಲ್ಲಿ ತಪ್ಪೇನಿದೆ ?"

"ಅದು ನಮ್ಮ ವಂಶದ ಮಗು. ನಿನಗೆ ಆ ಮಗುವಿನ ಮೇಲೆ ಎಷ್ಟು ಅಧಿಕಾರವಿತ್ತೋ, ಅಷ್ಟೇ ಅಧಿಕಾರ ನನಗೂ ಇತ್ತು. ನನ್ನನ್ನು ಒಂದು ಮಾತು ಕೇಳಕ್ಕಾಗಲಿಲ್ವಾ ನಿನಗೆ ?" ಶೇಖರ್ ಗುಡುಗಿದ.

"ನಿಮ್ಮನ್ನು ಕೇಳಿದ್ರೆ ನೀವು ಒಪ್ಪಲ್ಲಾಂತ ನನಗೆ ಗೊತ್ತಿತ್ತು. ಅದಕ್ಕೆ ಹಾಗೆ ಮಾಡ್ದೆ."

"ನಿನಗೆ ಇನ್ನೊಂದು ಮಗು ಆಗಿದ್ದಿದ್ರೆ ಏನು ತೊಂದರೆ ಆಗ್ತಿತ್ತು ? ಆಲೋಚನೆಯಿಂದ ನಿನಗೇನು ತೊಂದರೆಯಾಗಿದೆ? ನಾನು ಅಮ್ಮ ತಾನೆ ಅವನನ್ನು ನೋಡಿಕೊಳ್ತಿರುವುದು ಹಾಗೇ ಈ ಮಗುವನ್ನೂ ಸಾಕ್ತಾ ಇದ್ದೆವು."

"ನಿಮಗೆ ಬರುವ ಸಂಬಳದಲ್ಲಿ ಇಬ್ಬರು ಮಕ್ಕಳನ್ನು ಸರಿಯಾಗಿ ಸಾಕುವ ಶಕ್ತಿಯಿದೇನ್ರಿ ? ನಾಸಿಗ ಮಗು ಬೇಕೂಂತ ಕೂತಿದ್ದಿದ್ರೆ ಸಾವಿರಾರು ರೂಪಾಯಿಗಳು ನಷ್ಟ ಆಗಿರುತ್ತಿದ್ದವು. ಮಕ್ಕಳು ಬೇಕೂಂತ ಹಂಬಲಿಸುವುದಕ್ಕೆ ನಿಮಗ್ಯಾವ ಅಧಿಕಾರಾನೂ ಇಲ್ಲ."

"ಹೌದು ಕಣೆ. ನಾನು ಬಡವ, ನೀನು ನನ್ನಂತಹವನ ಕೈ ಹಿಡಿಯ ಬಾರದಿತ್ತು. ನನಗೆ ಬರುವ ಸಂಬಳ ಕಡಿಮೆ, ಪ್ರಮೋಷನ್ ಸಿಗೋದು ಕಷ್ಟಾಂತ ತಿಳಿದಿದ್ದ ಮೇಲೂ ನೀನು ಯಾಕೆ ನನ್ನನ್ನು ಮದುವೆಯಾದೆ ? ನಿನ್ನಂತಹ ಹೆಂಗಸರಿಗೆ ಮದುವೆ ಬೇರೆ ಕೇಡು. ಸಂಸಾರದ ನೆಮ್ಮದಿಗಿಂತ ದುಡ್ಡೇ ಪ್ರಧಾನವಾಗಿರುವ ನಿಮಗೆ ಮದುವೆ ಯಾಕೆ ? ಮಕ್ಕಳು ಯಾಕೆ ?"

ಸರೋಜಮ್ಮ ತಮ್ಮ ದುಡುಕುತನಕ್ಕೆ ತುಂಬಾ ನೊಂದುಕೊಂಡರು. ಡಾ|| ಕೌಸಲ್ಯ ಹೇಳಿದ ಕ್ಷಣದಿಂದ ಅವರ ಎದೆ ಕುದಿಯುತ್ತಿತ್ತು. ಸೊಸೆ ಯನ್ನು ನೋಡಿದ ಕೂಡಲೇ ಅವರ ಕೋಪ ಭುಗಿಲ್ಲೆದ್ದಿತು.

ಒಂದು ತಿಂಗಳು ಕಳೆಯುವಷ್ಟರಲ್ಲಿ ಅವರಿಗೆ ಸೊಸೆಯ ಮತ್ತೊಂದು ಮುಖದ ಪರಿಚಯವಾಗತೊಡಗಿತು. ಅವಳು ಮೊದಲಿನಂತೆ ಗೌರವ ಕೊಟ್ಟು ಮಾತಾಡುತ್ತಿರಲಿಲ್ಲ 'ಇದು ನನ್ನ ಮನೆ, ನನ್ನ ಸಂಪಾದನೆಯಲ್ಲಿ ಈ ಮನೆ ನಡೆಯುತ್ತಿದೆ' ಎನ್ನುವ ಧೋರಣೆ ಅವಳ ಮಾತು ಮತ್ತು ಕೃತಿಗಳಲ್ಲಿ ಕಾಣುತ್ತಿತ್ತು. ಅವರಿಗೆ ಒಮ್ಮೊಮ್ಮೆ ಶಂಕರನ ಮನೆಗೆ ಹೋಗಿಬಿಡಬೇಕೆನ್ನಿಸುತ್ತಿತ್ತು. ಆದರೆ ಮಗ, ಮೊಮ್ಮಗನ ನೆನಪಾದಾಗ ಅವರ ನಿರ್ಧಾರ ಸಡಿಲವಾಗುತ್ತಿತ್ತು.

'ಇನ್ನೆಷ್ಟು ದಿನ ಇಲ್ಲಿರಲು ಸಾಧ್ಯ ? ನಾಳೆ ವಸಂತಳಿಗೆ ಒಂದು ಮಗುವಾದರೆ ಅಲ್ಲಿಗೆ ಹೋಗದೆ ಇರುವುದಕ್ಕಾಗುತ್ತದೆಯೆ ? ಈಗ ಜಗಳವಾಡಿಕೊಂಡು ಹೋಗುವುದರ ಬದಲು ನಗುನಗುತ್ತಾ ದೂರವಾದರೆ ಒಳ್ಳೆಯದು' ಎಂದುಕೊಂಡು ಸುಮ್ಮನಾಗಿದ್ದರು.

"ಅತ್ತೆ, ಮಗೂಗೆ ಈ ದಿನ ಮೊಗ್ಗಿನ ಜಡೆ ಹಾಕ್ತೀರಾ ?" ಮಂಜುಳ ಮೊಗ್ಗನ್ನು ಪೋಣಿಸುತ್ತಾ ಅತ್ತೆಯನ್ನು ಕೇಳಿದಳು.

ಮೊಮ್ಮಗಳಿಗೆ ತಲೆ ಬಾಚುತ್ತಿದ್ದ ಅನ್ನಪೂರ್ಣಮ್ಮ "ಇವತ್ತು ಬೇಡಮ್ಮ. ನಾಳೆ ಹಾಕ್ತೀನಿ. ಈಗಾಗಲೇ ಐದು ಗಂಟೆ, ಮಗು ಇನ್ನೂ ಒಂದು ಗಂಟೆ ಕೂತ್ಕೊಂಡು ಹಾಕಿಸಿಕೊಳ್ಳಬೇಕು. ಈ ದಿನ ನಿಮ್ಮಾವನ ಸ್ನೇಹಿತರ ಮನೆಗೆ ಹೋಗಬೇಕು" ಎಂದರು.

ಮಂಜು ಮಗಳನ್ನೆತ್ತಿಕೊಂಡು ಮುದ್ದಿಸಿ ಅವಳಿಗೆ ಮಲ್ಲಿಗೆಯ ದಂಡೆ ಮುಡಿಸಿದಳು. ಏಳು ವರ್ಷದ ಲಹರಿಗೆ ತಲೆ ತುಂಬಾ ಕೂದಲು. ಮಗು ತಂದೆಯಂತೆ ಬೆಳ್ಳಗೆ ತುಂಬಾ ಮುದ್ದಾಗಿತ್ತು. ವಯಸ್ಸಿಗೆ ಮೀರಿದ ಎತ್ತರದಿಂದ ದೊಡ್ಡ ಹುಡುಗಿಯಂತೆ ಕಾಣುತ್ತಿದ್ದಳು. ಹಿಂದಿನ ವಾರ ಅವಳ ಹುಟ್ಟಿದ ಹಬ್ಬಕ್ಕೆ ಬಂದಿದ್ದ ಅಮೃತ ಲಹರಿಯನ್ನು ನೋಡಿ ಆಶ್ಚರ್ಯದಿಂದ ಕೇಳಿದಳು "ಲಹರಿ, ನಮ್ಮ ಅಲೋಕನಿಗಿಂತ 2 ವರ್ಷ ಚಿಕ್ಕವಳಲ್ವಾ ?"

"ಹುಂ. ಯಾಕೆ ಹಾಗೆ ಕೇಳ್ತಿದ್ದೀಯಾ ?"

"ಅಲೋಕಸಿಗಿಂತ ಎಷ್ಟು ಉದ್ದ ಕಾಣಿಸ್ತಾಳೆ ನೋಡು. ಇವಳನ್ನು ನೋಡಿದ್ರೆ ಏಳು ವರ್ಷಾಂತ ಹೇಳಕ್ಕೇ ಆಗಲ್ಲ. ಒಂಭತ್ತು ವರ್ಷಾಂತ ಧಾರಾಳವಾಗಿ ಹೇಳಬಹುದು" ಎಂದಿದ್ದಳು.

ಮರುದಿನ ಮಧ್ಯಾಹ್ನ ಊಟವಾದ ಮೇಲೆ ಅನ್ನಪೂರ್ಣಮ್ಮ ಮೊಮ್ಮಗಳನ್ನು ಕೂಡಿಸಿಕೊಂಡು ಮೊಗ್ಗಿನ ಜಡೆ ಹೆಣೆದರು. ದೊಡ್ಡ ಜರಿ ಅಂಚಿನ ಲಂಗ, ಜರಿಯುಂಚಿದ್ದ ಬ್ಲೌಸ್ ಹಾಕಿದರು ಮೈ ತುಂಬಾ ಒಡವೆ ಹಾಕಿದರು. ಅವರಿಗೆ ಸೀರೆ ಉಡಿಸುವ ಆಸೆ ಇತ್ತು. ಆದರೆ ಲಹರಿ ಒಪ್ಪಲಿಲ್ಲ.

"ಮೋಹನ ಮನೆಯಲ್ಲಿದ್ದಿದ್ರೆ ಫೋಟೋ ತೆಗೀಂತ ಹೇಳಬಹುದಿತ್ತು" ಎಂದರು.

"ಅವರು ಬರ್ತಾರೋ ಇಲ್ವೋ ಯಾರಿಗೆ ಗೊತ್ತು? ನಾನೇ 'ವಿನಾಯಕ ಸ್ಟುಡಿಯೋ'ಗೆ ಹೋಗಿ ಮಗೂಗೆ ಫೋಟೋ ತೆಗೆಸಿಕೊಂಡು ಬರ್ತೀನೆ" ಎಂದಳು ಮಂಜುಳ.

ಅದೇ ರೀತಿ ಫೋಟೋ ತೆಗೆಸಿದ್ದಾಯಿತು. ಚಕ್ರವರ್ತಿಗಳು ಫೋಟೋ ನೋಡಿ ಹಿರಿಹಿರಿ ಹಿಗ್ಗಿದರು ಆದರೆ ಮೋಹನನಿಗೆ ತೋರಿಸಿದಾಗ ಅವನು ಸಾಕಷ್ಟು ಕೂಗಾಡಿದ "ಹಳ್ಳಿ ಗುಗ್ಗು ತರಹ ಕಾಣಿಸ್ತಾಳೆ. ನೀವು ಯಾಕೆ ಈ ಅವತಾರ ಮಾಡಿದ್ರಿ? ಹುಲಿ ವೇಷದವರ ತರಹ ಕಾಣಿಸ್ತಾಳೆ. ಅವಳು ನನ್ನ ಮಗಳು, ನನ್ನ ತರಹಾನೇ ಬೆಳೆಯಬೇಕು ಬಾ ಲಹರಿ ನನ್ನ ಜೊತೆ" ಎಂದವನೇ ಬ್ಯೂಟಿ ಪಾರ್ಲರ್‌ಗೆ ಕರೆದೊಯ್ದು 'ಬಾಬ್' ಮಾಡಿಸಿಕೊಂಡು ಬಂದ.

ಅನ್ನಪೂರ್ಣಮ್ಮ ಮಗನ ಜೊತೆ ಈ ವಿಚಾರಕ್ಕೆ ಜಗಳ ಆಡಿದರು.

"ಲಹರಿ ನನ್ನ ಮಗಳು ಅವಳು ಆರನೇ ಶತಮಾನದ ಹುಡುಗಿಯ ತರಹ ಬೆಳೆಯಕೂಡದು. 'ಸಿರಿ' ಅವರಮ್ಮನ ತರಹಾನೇ ಇದ್ದಾಳೆ. ಅವಳನ್ನು ನಿಮ್ಮ ಇಚ್ಛೆ ಬಂದ ರೀತಿಯಲ್ಲಿ ಬೆಳೆಸಿ" ಎಂದ ಮೋಹನ.

ಮೋಹನ ಮಗುವನ್ನು ತನಗಿಷ್ಟಬಂದಂತೆ ಬೆಳೆಸಲಾರಂಭಿಸಿದ. ಮಗು ಮುದ್ದಾಗಿ 'ಅಮ್ಮ' ಎನ್ನುತ್ತಿತ್ತು ಆದರೆ ಅದನ್ನು ತಪ್ಪಿಸಿ 'ಮಮ್ಮಿ-ಡ್ಯಾಡಿ'ಎಂದು ಹೇಳಕೊಟ್ಟಿದ್ದ. ಮನೆಯಲ್ಲಿರುವಾಗ ಯಾವಾಗಲೂ ಮಗು ವಿನ ಜೊತೆ ಇರುತ್ತಿದ್ದ. ಅವಳನ್ನು ದೂರದ ಕಾನ್ವೆಂಟ್‌ಗೆ ಸೇರಿಸಿದ.

ಇಂಗ್ಲೀಷ್ ಹೇಳಿಕೊಡಲು 'ಎಸ್ತರ್' ಎನ್ನುವ ಟೀಚರನ್ನು ಗೊತ್ತುಮಾಡಿದ ಎಸ್ತರ್ ಬೆಳಗ್ಗೆ 8 ಗಂಟೆಗೆಲ್ಲಾ ಬರುತ್ತಿದ್ದಳು. ಅವಳು, ಲಹರಿ, ಮೋಹನ ಜೊತೆ ಬೆಳಗಿನ ತಿಂಡಿ ತಿನ್ನುತ್ತಿದ್ದರು. ಮೋಹನ ಅವರಿಬ್ಬರನ್ನೂ ಸ್ಕೂಲಿಗೆ ಬಿಟ್ಟು, ಕ್ಲಿನಿಕ್‌ಗೆ ಹೋಗುವ ಅಭ್ಯಾಸ ಮಾಡಿಕೊಂಡ.

ಲಹರಿ ಒಮ್ಮೊಮ್ಮೆ ಶನಿವಾರ, ಭಾನುವಾರಗಳಲ್ಲಿ ಎಸ್ತರ್ ಮನೆಯಲ್ಲೇ ಇರುತ್ತಿದ್ದಳು. ಎಸ್ತರ್ ತುಂಬಾ ಮುದ್ದಾದ ಹುಡುಗಿ ಮೋಹನನ ಮಾತು-ಕಥೆಗೆ ಮನಸೋತಿದ್ದಳು. ಅವನಿಂದ ಅವಳಿಗೆ ಲಾಭವೂ ಇತ್ತು.

ಲಹರಿ ಹೈಸ್ಕೂಲ್‌ಗೆ ಬರುವ ವೇಳೆಗೆ ಸಂಪೂರ್ಣವಾಗಿ ತಂದೆಯ ಮಗಳಾಗಿಬಿಟ್ಟಿದ್ದಳು. ಅರಳು ಹುರಿದಂತೆ ಇಂಗ್ಲೀಷ್ ಮಾತನಾಡುತ್ತಿದ್ದಳು. ಯಾವಾಗಲೂ ಫ್ರಾಕ್, ಮಿಡಿ, ಮಿನಿ ಧರಿಸುತ್ತಿದ್ದಳು. ಹುಡುಗರ ಜೊತೆ ಫ್ರೀಯಾಗಿ ಮಾತುಕತೆಯಾಡಿಕೊಂಡು ಕಾಲ ಕಳೆಯುತ್ತಿದ್ದಳು ಆದರೆ ತುಂಬಾ ಬುದ್ಧಿವಂತೆ. ಪಿ.ಯು.ಸಿ ಯಲ್ಲಿ ಒಳ್ಳೆಯ ನಂಬರ್‌ಗಳಿಸಿ ಬಿ.ಇ.ಗೆ ಸೇರಿದ್ದಳು. ಬಿ.ಇ. ಮಾಡುವಾಗ ಸ್ನೇಹಿತರ ಬಳಗ ಹೆಚ್ಚಾಗಿತ್ತು. ಅವಳಿಗೆ ತಾಯಿ, ತಂಗಿ, ಅಜ್ಜ-ಅಜ್ಜಿಯರ ಬಗ್ಗೆ ತುಂಬಾ ತಿರಸ್ಕಾರವಿತ್ತು.

"ಅಮ್ಮ, ನೀನು ಮಲಗಬಾರದಾ ? ಎಷ್ಟು ಹೊತ್ತು ಅವರಿಗೋಸ್ಕರ ಕಾಯ್ತೀಯ ? ಅವರಿಗೇನು ಹೊತ್ತೆ-ಗೊತ್ತೆ ?" ಸಿರಿ ಪ್ರೀತಿಯಿಂದ ಗದರಿದಳು.

"ನೀನು ಮಲಗಿಕೊಳ್ಳಮ್ಮ. ನನಗ್ಯಾಕೋ ನಿದ್ರೆ ಬರ್ತಿಲ್ಲ."

"ನಿನ್ನ ತಲೆ ತುಂಬಾ ಲಹರಿ ಚಿಂತೇನೇ ತುಂಬಿರುವಾಗ ನಿನಗೆ ನಿದ್ರೆ ಹೇಗೆ ಬರುತ್ತೆ ಹೇಳು ? ಅವಳೇನು ಎಳೆಯ ಮಗೂನಾ ಅಮ್ಮ ? ನೀನು ಮಲಗದಿದ್ರೆ ನಾನೂ ಮಲಗಲ್ಲ ಅಷ್ಟೆ."

ತಾಯಿಯ ಮುಂದಿದ್ದ ಕುರ್ಚಿಯಲ್ಲಿ ಕುಳಿತು ಸಿರಿ ಮೊಂಡುತನ ಮಾಡಿದಳು. ಮಂಜುಳ ಅಭಿಮಾನದಿಂದ ಅವಳತ್ತ ದಿಟ್ಟಿಸಿದಳು. ಕಡುನೀಲಿ ಬಣ್ಣದ ನೈಟಿ ಧರಿಸಿ, ಕೂದಲನ್ನು ಹಾರಾಡಲು ಬಿಟ್ಟಿದ್ದ ಸಿರಿ ಮುದ್ದಾಗಿ

ಕಾಣುತ್ತಿದ್ದಳು. ಈ ಮಗಳನ್ನು ಕಂಡರೆ ಮಂಜುಳಾಗೆ ತುಂಬಾ ಪ್ರೀತಿ. ಪ್ರತಿ ವಿಚಾರದಲ್ಲೂ ಅವಳ್ನು ಅಮ್ಮನನ್ನೇ ಹೋಲುತ್ತಿದ್ದಳು.

"ಬಾಮ್ಮ ಮಲಗೋಣ" ಅವಳು ಬಲವಂತ ಮಾಡಿ ತಾಯಿಯನ್ನು ಎಳೆದುಕೊಂಡು ಹೋಗಿ ಮಂಚದ ಮೇಲೆ ಮಲಗಿಸಿ, ತಾನೂ ಮಲಗಿಕೊಂಡಳು.

"ರಂಗ ಸಿನಿಮಾ ನೋಡ್ತಾ ಕೂತಿರ್ತಾನೆ. ಅವರು ಬಂದಾಗ ಅವನೇ ಹೋಗಿ ಬಾಗಿಲು ತೆಗೆಯುತ್ತಾನೆ. ನೀನು ಹೋಗಿ ತೆಗೆಯಬೇಡ.

ಮಗಳ ಮಾತು ಕೇಳಿ ಮಂಜುಳ ನಕ್ಕಳು, 'ಈ ಮಗಳು ಇಲ್ಲದಿದ್ದರೆ ನಾನೇನಾಗುತ್ತಿದ್ದೆನೋ?' ಎಂಬ ಕಲ್ಪನೆಯಿಂದಲೇ ಅವಳ ಮೈ ನಡುಗಿತು. ಸಿರಿ ಎಲೆಕ್ಟ್ರಾನಿಕ್ಸ್ ಬಿ.ಎಸ್‌ಸಿಯ 2ನೇ ವರ್ಷದಲ್ಲಿದ್ದಳು. ಲಹರಿ ಬಿ.ಇ. ಮುಗಿಸಿ ಪ್ರೈವೇಟ್ ಫರ್ಮೊಂದರಲ್ಲಿ ಇಂಜಿನಿಯರ್ ಆಗಿದ್ದಳು. ಮೋಹನ್ ಈಗಲೂ ತಾನು 18 ವರ್ಷದ ಹುಡುಗನೆಂದು ಭಾವಿಸಿ ಅಡ್ಡಾಡಿಕೊಂಡಿದ್ದ. ಈಗಲೂ ಕ್ಲಿನಿಕ್ ನಡೆಯುತ್ತಿತ್ತು. ಲಹರಿ ಪ್ರಾಪ್ತ ವಯಸ್ಕಳಾಗಿದ್ದರೂ ಮೋಹನ ಮಗಳ ಮದುವೆಯ ಬಗ್ಗೆ ತಲೆ ಕೆಡಿಸಿಕೊಂಡಿರಲಿಲ್ಲ. ಇಪ್ಪತ್ತು ವರ್ಷಗಳ ಹಿಂದೆ ಹೇಗಿದ್ದನೋ ಈಗಲೂ ಹಾಗೇ ಇದ್ದ.

ಲಹರಿ ಪಿ.ಯು.ಸಿ.ಯಲ್ಲಿದ್ದಾಗ ಅನ್ನಪೂರ್ಣಮ್ಮ ಹೃದಯಾಘಾತದಿಂದ ಕಣ್ಮುಚ್ಚಿದರು. ಸಾಯುವವರೆಗೂ ಅವರು ಮಗನ ಚಿಂತೆಯಲ್ಲಿ ಕುದ್ದುಹೋಗಿದ್ದರು. ತಾಯಿ ಸತ್ತಾಗ ಬಂದಿದ್ದ ಹೆಣ್ಣುಮಕ್ಕಳು ತಮ್ಮನಿಗೆ ತುಂಬಾ ಬುದ್ಧಿವಾದ ಹೇಳಿದ್ದರು. ತಾಯಿ ಪತ್ರಗಳಲ್ಲಿ ತಮ್ಮ ದುಃಖವನ್ನು ತೋಡಿಕೊಂಡಿದ್ದನ್ನು ಬಣ್ಣಿಸಿದ್ದರು.

ಹೆಂಡತಿ ಕಣ್ಮುಚ್ಚಿದ ಮೇಲೆ ಚಕ್ರವರ್ತಿಗಳು ಅರ್ಧವಾಗಿದ್ದರು. ತಾವು ಅವರನ್ನು ಮದುವೆಯಾದ ರೀತಿ, ತಮ್ಮ ಅನ್ಯೋನ್ಯ ದಾಂಪತ್ಯ–ಇವುಗಳ ಬಗ್ಗೆ ಆಗಾಗ್ಗೆ ಸೊಸೆಯ ಬಳಿ ಹೇಳುತ್ತಲೇ ಇರುತ್ತಿದ್ದರು. ಹೆಂಡತಿಯ ಅಗಲಿಕೆ ಸಹಿಸಲಾಗದೆ ಅವರು ಮೂರು ವರ್ಷಗಳಲ್ಲಿ ಎಲ್ಲರನ್ನೂ ಅಗಲಿದರು. ತಂದೆ ಸತ್ತಾಗ ಹೆಣ್ಣುಮಕ್ಕಳು ಬರಲಿಲ್ಲ. ತಂದೆಯ ದಿನಕರ್ಮಗಳನ್ನು ಮಾಡಿ ಮೋಹನ್ ಲಾಯರನ್ನು ನೋಡಲು ಹೋದಾಗ ಕೇಶವಯ್ಯ ಹೇಳಿದರು.

"ನಾಳೆ ನಾನೇ ಬಂದು ವಿಲ್ ಓದ್ತೀನಪ್ಪ. ಆತುರಪಡಬೇಡ" ಎಂದಿದ್ದರು.

"ನಮ್ತಂದೆ ವಿಲ್ ಓದುವಂತಹದ್ದೇನಿದೆ ? ಅವರ ಆಸ್ತಿಗೆಲ್ಲಾ ನಾನೇ ತಾನೆ ವಾರಸುದಾರ ?" ಎಂದಿದ್ದ ಮೋಹನ ಧೋರಣೆಯಿಂದ.

"ಅದು ಪಿತ್ರಾರ್ಜಿತ ಆಸ್ತಿ ಅಲ್ಲ ಅನ್ನುವುದನ್ನು ನೀನು ಮರೆಯಬೇಡ" ಎಂದು ಕೇಶವಯ್ಯ ಎಚ್ಚರಿಸಿದ್ದರು. ಮರುದಿನ ಮಂಜುಳೆಯ ತಂದೆ-ತಾಯಿ ಚಕ್ರವರ್ತಿಯ ಸ್ನೇಹಿತರು, ದಾಯಾದಿಗಳು ಅಪಾರ ಬಂಧುಗಳೆದುರು ಲಾಯರ್ ಕೇಶವಯ್ಯ ವಿಲ್ ಓದಿದರು. ಚಕ್ರವರ್ತಿಗಳು ತಮ್ಮ ಸಮಸ್ತ ಆಸ್ತಿಯೆಲ್ಲವನ್ನೂ ಸೊಸೆಯ ಹೆಸರಿಗೆ ಬರೆದಿದ್ದರು. ಹೆಣ್ಣುಮಕ್ಕಳು ತಂದೆಯ ಆಸ್ತಿಯಲ್ಲಿ ತಮಗೆ ಪಾಲು ಬೇಡವೆಂದು ಬರೆದುಕೊಟ್ಟಿದ್ದ ಪತ್ರಗಳು ಅದರ ಜೊತೆ ಇದ್ದವು.

"ನನ್ನದು ಸ್ವಯಾರ್ಜಿತ ಆಸ್ತಿ. ಈ ಆಸ್ತಿಯನ್ನು ನನಗಿಷ್ಟ ಬಂದವರಿಗೆ ಬರೆಯುವ ಹಕ್ಕು ನನಗಿದೆ ಎಂದು ಭಾವಿಸಿ, ಈ ಮನೆ ಶ್ರೀರಂಗಪಟ್ಟಣದ ಬಳಿ ಇರುವ 10 ಎಕರೆ ಭೂಮಿ(ಗದ್ದೆ) ಬೆಂಗಳೂರಿನ ಮಲ್ಲೇಶ್ವರಂನಲ್ಲಿರ ವ ನಾಲ್ಕು ಫ್ಲಾಟುಗಳು, ಬ್ಯಾಂಕ್‌ನಲ್ಲಿರುವ ಹಣ ನಮ್ಮನೆಯ ಸ್ಥಿರ-ಚರ ಆಸ್ತಿಗಳೆಲ್ಲವೂ ನನ್ನ ಸೊಸೆ ಮಂಜುಳಾಗೆ ಸೇರತಕ್ಕದ್ದು ನನ್ನ ಮಗ ಮೋಹನನಿಗೆ ಅವನ ಕ್ಲಿನಿಕ್ ಅವನು ಉಪಯೋಗಿಸುತ್ತಿರುವ ಕಾರು, ಸ್ಕೂಟರ್ ಸೇರ ತಕ್ಕದ್ದು. ಕೆನರಾ ಬ್ಯಾಂಕ್‌ನಲ್ಲಿರುವ 2 ಲಕ್ಷ ರೂಗಳನ್ನು ನನ್ನ ಮನೆಯ ಕೆಲಸಗಾರರಿಗೆ ಸಮನಾಗಿ ಹಂಚತಕ್ಕದ್ದು) ಸಿಂಡಿಕೇಟ್ ಬ್ಯಾಂಕ್‌ನಲ್ಲಿರುವ ಹಣವನ್ನು ಶಾರದಾ ವೃದ್ಧಾಶ್ರಮ ಹಾಗೂ ಶಾರದಾ ಅನಾಥಾಶ್ರಮಕ್ಕೆ ಹಂಚತಕ್ಕದ್ದು.

ಒಂದು ಪಕ್ಷ ನನ್ನ ಸೊಸೆ ಅಕಾಲ ಮರಣಕ್ಕೆ ತುತ್ತಾದರೆ ಆ ಆಸ್ತಿಯ ಹಕ್ಕು ಅವಳ ಮಕ್ಕಳಿಗೆ ಸೇರುತ್ತದೆ. ಆ ಮಕ್ಕಳೂ ಅಕಾಲ ಮರಣಕ್ಕೆ ತುತ್ತಾದರೆ, ಆಸ್ತಿಯೆಲ್ಲವೂ ಈ ಕೆಳಕಂಡ ಸಂಸ್ಥೆಗಳಿಗೆ ಸೇರುತ್ತವೆ."

"ನನಗೆ ಈ ಆಸ್ತಿಪಾಸ್ತಿ ಏನೂ ಬೇಡ" ಮಂಜುಳ ಅಳುತ್ತಾ ಹೇಳಿದಳು.

"ನಿಮ್ಮ ಮಾವನ ಇಚ್ಛೆಯಂತೆ ಈ ಆಸ್ತಿ ಪತ್ರ ತಯಾರಾಗಿದೆ. ನೀವು ಈ ಬಗ್ಗೆ ಏನೂ ಹೇಳುವಂತಿಲ್ಲ."

ಮೋಹನ್ ತಲೆಯ ಮೇಲೆ ಕೈಹೊತ್ತು ಕುಳಿತಿದ್ದ. ತಂದೆ ತನಗೆ ಈ ರೀತಿ ಮೋಸ ಮಾಡುವರೆಂದು ಅವನೆಂದೂ ಊಹಿಸಿರಲಿಲ್ಲ. ಅವನು ಕೂಗಾಡಿದಾಗ ಲಾಯರ್ ಶಾಂತವಾಗಿ ಹೇಳಿದರು "ನೀನು ಅವರಿಗೆ ತಕ್ಕ ಮಗನಾಗಿರಲಿಲ್ಲ. ನಿನಗಾಗಿ ಅವರು ಜೀವ ತೇಯ್ದರು. ಅಂತಹ ತಂದೆ–ತಾಯಿಗಳು ನಿನ್ನ ಚಿಂತೆಯಿಂದ ಕೊರಗುವಂತೆ ಮಾಡಿಬಿಟ್ಟೆ. ಈಗಲಾದ್ರೂ ಸರಿಯಾಗಿರು. ಚಿನ್ನದಂತಹ ಹೆಂಡತಿಯನ್ನು ಮನೆಯಲ್ಲಿಟ್ಟುಕೊಂಡು ಅದ್ಯಾಕೆ ಬೇರೆಯವರ ಜೊತೆ ಓಡಾಡ್ತೀಯ ?"

"ಅದು ನನ್ನಿಷ್ಟ"

"ನಿನಗೆ ಆಸ್ತಿ ಕೊಟ್ಟಿದ್ದಿದ್ರೆ ನಿನ್ನ ಹೆಂಡತಿ-ಮಕ್ಕಳು ಇವತ್ತು ಬೀದಿಯಲ್ಲಿ ನಿಂತಿರುತ್ತಿದ್ದರು. ಅದನ್ನು ತಪ್ಪಿಸುವುದಕ್ಕೋಸ್ಕರಾನೇ ನಿಮ್ಮ ತಂದೆ ಈ ಕೆಲಸ ಮಾಡಿದ್ರು. ಮಂಜುಳಾಗೆ ನಿನ್ನನ್ನು ಹೊರಗೆ ಹಾಕುವ ಹಕ್ಕಿದೆಯೇ ಹೊರತು ನಿನಗೆ ಆ ಹಕ್ಕಿಲ್ಲ" ಎಂದಿದ್ದರು ಲಾಯರ್.

ಮಂಜುಳಾಗೆ ಲಹರಿ ಹುಟ್ಟಿದ 4 ವರ್ಷಕ್ಕೆ ಮತ್ತೊಬ್ಬ ಮಗಳು ಹುಟ್ಟಿದ್ದಳು. ಅನ್ನಪೂರ್ಣಮ್ಮ ತಾವೇ ಬಾಣಂತನ ಮಾಡಿದ್ದರು. ಸಿರಿಯ ತಲೆ ಕಂಡರೆ ಮೋಹನನಿಗಾಗುತ್ತಿರಲಿಲ್ಲ. ಲಹರಿ ಡ್ಯಾಡಿಯ ಮಗಳಾಗಿ ಬೆಳೆದಂತೆ, ಸಿರಿ ಅಮ್ಮನ ಮಗಳಾಗಿ ಬೆಳೆದಿದ್ದಳು.

ತಂದೆ ಸತ್ತಮೇಲೆ ಮೋಹನ ಸುಮ್ಮನೆ ಕೈಕಟ್ಟಿ ಕುಳಿತಿರಲಿಲ್ಲ. ಸಾಯುವಾಗ ತಂದೆಗೆ 'ಬುದ್ಧಿಭ್ರಮಣೆ'ಯಾಗಿತ್ತೆಂದೂ, ಅವರು ಮಾಡಿರುವ ವಿಲ್ ಸರಿಯಾಗಿಲ್ಲವೆಂದೂ ನಿರೂಪಿಸಲು ಪ್ರಯತ್ನಿಸಿದ್ದ. ಆದರೆ ಪ್ರಯೋಜನವಾಗಿರಲಿಲ್ಲ. ಅವನ ಲಾಯರ್ ರಾಜೀವನಾಥ್, ತನ್ನ ಸೀನಿಯರ್ ಕೇಶವಯ್ಯಂಗೆ ತಿಳಿಸಿ, ಅವನ ಯೋಜನೆ ತಲೆಕೆಳಗುಮಾಡಿದ್ದ.

ತಂದೆ ಸತ್ತಮೇಲೆ ಮೋಹನ ಹಣಕ್ಕಾಗಿ ಹೆಂಡತಿಯನ್ನೇ ಆಶ್ರಯಿಸಬೇಕಾಯ್ತು. ಲಹರಿಯ ಮೂಲಕ ಹೆಂಡತಿಗೆ ಹತ್ತಿರವಾಗಲು ಪ್ರಯತ್ನಿಸಿದ್ದ. ಎರಡು ಮೂರು ವರ್ಷಗಳಲ್ಲಿ ಅದು ಇದು ನೆಪ ಹೇಳಿ ಸುಮಾರು 4 ಲಕ್ಷ ರೂಪಾಯಿ ಅವಳಿಂದ ಪಡೆದಿದ್ದ. ಮಗಳನ್ನು ನೋಡಲು ಬಂದಿದ್ದ ಮೂರ್ತಿಗಳು ಇಬ್ಬರು ಹೆಣ್ಣುಮಕ್ಕಳ ಹೆಸರಿನಲ್ಲಿ ಎರಡೆರಡು ಲಕ್ಷ ರೂಪಾಯಿಗಳನ್ನು ಫಿಕ್ಸೆಡ್‌ನಲ್ಲಿ ಹಾಕಿಸಿದ್ದರು.

"ನೋಡಮ್ಮ, ಮನೆ ಬಾಡಿಗೆ ವಸೂಲು ಮಾಡಲು ನಿನಗೆ ಗಂಡಸರ ಸಹಾಯ ಬೇಕು. ಅಂತಹ ನಂಬಿಕಸ್ತರು ಯಾರಿದ್ದಾರೆ ಯೋಚಿಸು" ಎಂದಿದ್ದರು.

ಅದೇ ಸಂದರ್ಭದಲ್ಲಿ ಚಕ್ರವರ್ತಿಗಳ ಆತ್ಮೀಯಸ್ನೇಹಿತರಾದ ಬಲರಾಮ ರಾಜು ಅವಳನ್ನು ನೋಡಲು ಬಂದಿದ್ದರು.

"ನಾವು ಈ ಏರಿಯಾ ಬಿಟ್ಟು ಹೊರಡಬೇಕಾಗಿದೆಯಮ್ಮ. ಮನೆ ಭೋಗ್ಯಕ್ಕೆ ಹಾಕಿಕೊಂಡಿದ್ದೆವು. ಹೋದ ತಿಂಗಳೇ ಮನೆ ಬಿಡಬೇಕಾಗಿತ್ತು. ಮನೆ ಸಿಕ್ಕಿರಲಿಲ್ಲ. ಈಗೊಂದು ಮನೆ ಸಿಗುವಂತಿದೆ."

"ಮನೆಯೆಲ್ಲಿ ನೋಡಿದ್ದೀರಾ ?"

"ರಾಜೇಶ್ವರಿನಗರದಲ್ಲಿ ಸಿಗುವಂತಿದೆ. ತುಂಬಾ ದೂರ ಬೇರೆ. ನನ್ನ ಮೊಮ್ಮಕ್ಕಳಿಗೆ ಬೇರೆ ಸ್ಕೂಲು ಹುಡುಕಬೇಕು. ಬಹಳ ಕಷ್ಟವಾಗಿದೆ" ಮಂಜುಳ ಅವರ ಮಾತು ಕೇಳಿ ಕೊಂಚ ಯೋಚಿಸಿ ಹೇಳಿದಳು.

"ಸಾಯಂಕಾಲ ನಮ್ಮನೆಗೆ ಬನ್ನಿ. ಈ ಬಗ್ಗೆ ಮಾತಾಡೋಣ"

"ಯಾಕಮ್ಮ ?"

"ನೀವು ಬನ್ನಿ ಹೇಳ್ತೀನಿ" ಅಂದಳು.

ಅವಳು ಸಾಯಂಕಾಲ ಅವರ ಜೊತೆ ಮಲ್ಲೇಶ್ವರಂನಲ್ಲಿರುವ ಫ್ಲಾಟ್ ಗಳನ್ನು ನೋಡಲು ಹೋಗಿದ್ದಳು. ಫ್ಲಾಟ್‌ನಲ್ಲಿ ಬಾಡಿಗೆಗಿದ್ದವರಲ್ಲಿ ಒಬ್ಬರು ಡಾಕ್ಟರ್, ಇನ್ನೊಬ್ಬರು ಇಂಜಿನಿಯರ್, ಇನ್ನೊಬ್ಬರು ಬ್ಯಾಂಕ್ ಆಫೀಸರ್. ಇನ್ನೊಂದು ಮನೆಯಲ್ಲಿ ಒಬ್ಬ ದಿನಸಿಅಂಗಡಿ ಮಾಲೀಕರಿದ್ದರು. ಆತ ಮೂರು ತಿಂಗಳಿಂದ ಬಾಡಿಗೆ ಕೊಟ್ಟಿರಲಿಲ್ಲ.

ಮಂಜುಳಾ ಮನೆಗೆ ವಾಪಸ್ಸಾದ ಮೇಲೆ ಬಲರಾಮರಾಜುವಿಗೆ ಹೇಳಿ ದ್ದಳು "ನೀವು ಆ ಅಂಗಡಿಯವರನ್ನು ಮನೆ ಬಿಡಿಸಿದರೆ ನಿಮಗೆ ನಾನು ಆ ಫ್ಲಾಟ್ ಬಾಡಿಗೆಗೆ ಕೊಡ್ತೀನಿ. ನೀವು 10,000 ರೂ. ಅಡ್ವಾನ್ಸ್ ಕೊಟ್ಟು ತಿಂಗಳಿಗೆ 1500 ರೂ. ಬಾಡಿಗೆ ಕೊಟ್ರೆ ಸಾಕು. ಆದರೆ ಪ್ರತಿತಿಂಗಳೂ ಸರಿ ಯಾಗಿ ಬಾಡಿಗೆ ವಸೂಲುಮಾಡಿ ನನ್ನ ಹೆಸರಿಗೆ ಕ್ರೆಡಿಟ್ ಮಾಡುವ ಜವಾ ಬ್ದಾರಿ ನಿಮ್ಮದು."

ಆತ ಸಂತೋಷದಿಂದ ಒಪ್ಪಿದ್ದರು. ಅವಳು ರಾಜು ಹಾಗೂ ಸಿರಿಯ ಜೊತೆ ಶ್ರೀರಂಗಪಟ್ಟಣದ ಬಳಿ ಇರುವ ಗದ್ದೆ ನೋಡಿಬಂದಳು. ಅವರು ನಿಯತ್ತಿನ ಜನವಾಗಿದ್ದರಿಂದ ಯೋಚಿಸುವಂತಹದ್ದೇನೂ ಇರಲಿಲ್ಲ. ಮನೆ ಬಾಡಿಗೆ ಬರುತ್ತಿತ್ತು. ಗದ್ದೆಯಿಂದ ಭತ್ತ ಬರುತ್ತಿತ್ತು. ಬ್ಯಾಂಕ್‌ನಲ್ಲಿ ಮಾವ ಇಟ್ಟಿದ್ದ 19 ಲಕ್ಷ 5 ಲಕ್ಷ ರೂಪಾಯಿಗಳಿಗೆ ಇಳಿದಿತ್ತು. ಮೋಹನ ಬದಲಾಗಲೇ ಇಲ್ಲ. ತನಗೆ ಹಣ ಬೇಕಾದಾಗ ಹೆಂಡತಿಯನ್ನು ಓಲೈಸುತ್ತಿದ್ದ. ಮಂಜುಳ ಈಗ ಗಂಡನ ಬಗ್ಗೆ ಯೋಚಿಸುವುದನ್ನು ಬಿಟ್ಟಿದ್ದಳು. ಅವಳನ್ನು ಈಗ ಕಾಡುತ್ತಿದ್ದುದು ಲಹರಿಯ ಚಿಂತೆ ಮಾತ್ರ.

ಲಹರಿ ಗುಣ–ಸ್ವಭಾವಗಳಲ್ಲಿ, ರೂಪದಲ್ಲಿ ತಂದೆಯನ್ನೇ ಹೋಲುತ್ತಿದ್ದಳು. ಮೊದಲಿನಿಂದಲೂ ಮೊಂಡುತನ, ಹಠದ ಸ್ವಭಾವ ಅವಳಲ್ಲಿ ಮನೆ ಮಾಡಿತ್ತು, ಬಡವರನ್ನು ಕಂಡರಂತೂ ತುಂಬಾ ತಾತ್ಸಾರ. ಆಳು–ಕಾಳುಗಳ ಜೊತೆ, ತಾಯಿ-ತಂಗಿಯ ಜೊತೆ ನಯವಾಗಿ ಮಾತನಾಡಿ ಅಭ್ಯಾಸವೇ ಇರಲಿಲ್ಲ. ಅವಳ ಕಾಟ ತಡೆಯಲಾರದೆ 5–6 ಜನ ಅಡಿಗೆಯವರು ಕೆಲಸ ಬಿಟ್ಟುಹೋಗಿದ್ದರು. ಮಂಜುಳಾ ಇತ್ತೀಚೆಗೆ ಅಡಿಗೆಯವರನ್ನು ಬಿಡಿಸಿ, ತಾನೇ ಅಡಿಗೆ ಮಾಡಲಾರಂಭಿಸಿದ್ದಳು ಬಿಡುವಿದ್ದಾಗ ಸಿರಿ ಸಹಾಯ ಮಾಡುತ್ತಿದ್ದಳು.

"ಏನಡಿಗೆ ಮಾಡಿದ್ದೀಯ ಮಮ್ಮಿ ಬಾಯಿಗಿಡಕ್ಕಾಗಲ್ಲ. ದಿನಾ ಅದೆ ಹುಳಿ, ಸಾರು, ಚಟ್ನಿ, ಗೊಜ್ಜು ಬೇರೆ ಏನಾದ್ರೂ ಮಾಡಬಾರದಾ ?" ಅನ್ನುತ್ತಿದ್ದಳು.

"ಬಿಟ್ಟಿ ಆಸ್ತಿ ಸಿಕ್ಕಿತೂಂತ ಮಜ ಮಾಡ್ತಿದ್ದೀಯಲ್ಲಾ ? ನನಗೂ ಅದರಲ್ಲಿ ಪಾಲಿದೆ ಅನ್ನುವುದನ್ನು ಮರೆಯಬೇಡ. ನಾನು ಕೇಳಿದಾಗ ಕೇಳಿದಷ್ಟು ಹಣ ಕೊಡಬೇಕು" ಅನ್ನುತ್ತಿದ್ದಳು. ಅವಳು 5–10 ಸಾವಿರ ಕೇಳಿದಾಗ ಒಮ್ಮೊಮ್ಮೆ ಮಂಜುಳಾ ಪ್ರಶ್ನಿಸುತ್ತಿದ್ದುದು ಉಂಟು.

"ಅಷ್ಟೊಂದು ಹಣ ನಿನಗ್ಯಾಕೆ ?"

"ಖರ್ಚು ಮಾಡೋಕ್ಕೆ"

ಪಿ.ಯು ಸಿ.ಯಲ್ಲಿದ್ದಾಗ ಲಹರಿ ಆಡುತ್ತಿದ್ದ ಮಾತಿನ ವೈಖರಿಯಿದು. ಹೈಸ್ಕೂಲ್‌ನಲ್ಲಿರುವಾಗಲೇ ಅವಳು ಹಠ ಹಿಡಿದು ಲೂನಾತೆಗೆದುಕೊಂಡಿದ್ದಳು

ಆಗ ಪ್ರತಿ ತಿಂಗಳೂ 250 ರೂ. ಪಾಕೆಟ್‌ಮನಿ ಹಠ ಮಾಡಿ ತೆಗೆದುಕೊಳ್ಳು ತ್ತಿದ್ದಳು. ಆದರೆ ಅದು ಹೆಸರಿಗೆ ಮಾತ್ರ. ಅದಕ್ಕಿಂತ ಹೆಚ್ಚಾಗಿ ಖರ್ಚು ಮಾಡುತ್ತಿದ್ದಳು. ಆಗಾಗ್ಗೆ ಮೋಹನ ಕೂಡ ಹಣ ಕೊಡುತ್ತಿದ್ದ. ಬಿ.ಇಗೆ ಬಂದಮೇಲೆ ಅವಳ ಖರ್ಚು ತಿಂಗಳಿಗೆ ಸಾವಿರ ರೂ.ಗೆ ಏರಿತ್ತು.

"ಬ್ಯಾಂಕ್‌ನಲ್ಲಿಟ್ಟಿರೋದು ನೀನು ದುಡಿದು ಸಂಪಾದಿಸಿರುವ ಹಣ ವೇನು ಮಮ್ಮಿ? ನನಗೆ ಆ ಹಣದ ಮೇಲೆ ಸಂಪೂರ್ಣ ಹಕ್ಕಿದೆ" ಎನ್ನು ತ್ತಿದ್ದಳು.

"ಸರಿಯಾಗಿ ಹೇಳಿದೆ ಬೇಬಿ" ಎನ್ನುತ್ತಿದ್ದ ಮೋಹನ್. ಮೊದ ಮೊದಲು ಮಂಜುಳಾ ಗಂಡ-ಮಗಳು ಕೇಳಿದಾಗ ಹಣ ಕೊಡಲು ನಿರಾಕರಿಸು ತ್ತಿದ್ದುದುಂಟು. ಆದರೆ ಅದರಿಂದ ವ್ಯಥಾ ಘರ್ಷಣೆ ಆಗುತ್ತಿತ್ತು. ಹತ್ತಿದ್ದ ಜಗಳ ಹರಿಯುತ್ತಿರಲಿಲ್ಲ. ಆದ್ದರಿಂದ ಇತ್ತೀಚೆಗೆ ಅವಳು ಮರುಮಾತಾಡದೆ ಹಣ ಕೊಡುತ್ತಿದ್ದಳು.

ಬಿ.ಇ. ಸೇರಿದಮೇಲೆ ಲಹರಿಯ ಓಡಾಟ ಹೆಚ್ಚಾಗಿತ್ತು. ಯಾವಾಗಲೂ ಹುಡುಗ, ಹುಡುಗಿಯರ ಹಿಂಡು ಅವಳ ಹಿಂದೆ ಇರುತ್ತಿತ್ತು. ಅವರಿಗಾಗಿ ಲಹರಿ ತುಂಬಾ ಹಣ ಖರ್ಚು ಮಾಡುತ್ತಿದ್ದಳು. ಪ್ರತಿವಾರ ಪಾರ್ಟಿ-ಪಿಕ್‌ನಿಕ್ ಎಂದು ಅಲೆಯುತ್ತಿದ್ದಳು. ಪಾಶ್ ಹೋಟೆಲ್‌ಗಳಿಗೆ ಹೋಗು ತ್ತಿದ್ದಳು. ಹುಡುಗರ ಪರಿಚಯವಿದ್ದರೂ ಅವಳು ಯಾರನ್ನೂ ಹೆಚ್ಚು ಹಚ್ಚಿ ಕೊಂಡಿರಲಿಲ್ಲ. ಮಂಜುಳಾಗೆ ಮಗಳು ಅಷ್ಟು ಹೊತ್ತು ಮನೆಯಿಂದ ಹೊರಗೆ ಇರುವುದು ಇಷ್ಟವಾಗುತ್ತಿರಲಿಲ್ಲ ಆದರೆ ಯಾರಿಗೆ ಹೇಳಲು ಸಾಧ್ಯ? ಮಗಳ ಬಗ್ಗೆ ಮುತುವರ್ಜಿ ವಹಿಸಬೇಕಾಗಿದ್ದ ತಂದೆಯೇ ಇನ್ನೂ ಹದಿನೆಂಟು ವರ್ಷದ ತರುಣನಂತಾಡುವಾಗ ಅವಳು ತಾನೆ ಏನು ಮಾಡಲು ಸಾಧ್ಯವಿತ್ತು?

ಲಹರಿ ಮನೆಯಲ್ಲಿರುವಷ್ಟು ಹೊತ್ತೂ ಕ್ಯಾಸೆಟ್ಸ್ ಕೇಳುತ್ತಲೋ ವೀಡಿಯೋ ಫಿಲಂಗಳನ್ನು ನೋಡುತ್ತಲೋ ಕಾಲ ಕಳೆಯುತ್ತಿದ್ದಳು. ತಾಯಿ ತಂಗಿಯರನ್ನು ಮಾತನಾಡಿಸುತ್ತಿದ್ದುದೇ ಅಪರೂಪ. ಅದಿಗೆ ತಿಂಡಿಯಲ್ಲಿ ನೂರೆಂಟು ಕೊಂಕು ತೆಗೆಯುತ್ತಿದ್ದಳು ಅದಕ್ಕೆ ಮೋಹನ ತಾಳ ಹಾಕು ತ್ತಿದ್ದ.

ಹೊರಗಡೆ ಬೈಕ್ ನಿಂತ ಶಬ್ದ ಕೇಳಿ ಮಂಜುಳಾ ಎದ್ದು ಕಿಟಕಿಯಿಂದ ಇಣುಕಿದಳು. ಲಹರಿ ಆ ಯುವಕನ ಸ್ಕೂಟರ್‌ನಲ್ಲಿ ಬಂದಿಳಿದು ಅವನಿಗೆ ಬೈ ಹೇಳಿದಳು.

"ಲೋ ರಂಗಾ, ಎಲ್ಲಾ ಮಲಗಿಬಿಟ್ರೇನೋ ?"

"ಹೂಂ ಅಮ್ಮ. ರಾಯರು ಇನ್ನೂ ಬಂದಿಲ್ಲ. ಅಮ್ಮಾವ್ರು, ನಿಮ್ಮ ತಂಗಿ ಈಗ ಮಲಗುವದಕ್ಕೆ ಹೋದ್ರು. ನಿಮಗೆ ಬಡಿಸ್ಲಾ ?"

"ನನ್ನ ಊಟವಾಗಿದೆ. ನೀನು ಊಟ ಮಾಡಿ ಮಲಗು"

"ರಾಯರು....."

"ಅವರು ಬಾಂಬೆಗೆ ಹೋಗಿದ್ದಾರೆ. ಇನ್ನೊಂದು ವಾರ ಬರಲ್ಲ. ಒಂದು ಲೋಟ ಬಿಸಿಹಾಲು ತಂದುಕೊಟ್ಟುಬಿಡು."

ರಂಗ ಭಯ-ಭಕ್ತಿಗಳಿಂದ ಹೂಂ ಎಂದ. ಅವನು ಆ ಮನೆಗೆ ಬಂದು ಮೂರು ವರ್ಷಗಳಾಗಿದ್ದವು. ಮಂಜುಳ ತನಗೆ ಅಡಿಗೆಗೆ ಸಹಾಯ ಮಾಡಲು ಅವನನ್ನು ನೇಮಿಸಿಕೊಂಡಿದ್ದಳು. ಸಿರಿಯಾಗಲಿ, ಮಂಜುಳ ಆಗಲಿ ಅವನನ್ನು ಆಳಿನಂತೆ ನಡೆಸಿಕೊಳ್ಳುತ್ತಿರಲಿಲ್ಲ. ಆದರೆ ಲಹರಿ ಮಾತ್ರ ಅವನಿಗೆ ಕೊಂಚವೂ ಮರ್ಯಾದೆ ಕೊಡುತ್ತಿರಲಿಲ್ಲ.

ಮಗಳು ಮಹಡಿ ಹತ್ತಿದ ಸದ್ದು ಕೇಳಿದ ಮೇಲೆ ಮಂಜುಳ ನಿಟ್ಟುಸಿರು ಬಿಟ್ಟು ಮಂಚದ ಮೇಲೆ ಉರುಳಿಕೊಂಡಳು.

ಲಹರಿ ಬಿ.ಇ. ಮುಗಿಸಿ ಪ್ರೈವೇಟ್ ಫರ್ಮ್‌ನಲ್ಲಿ ಕೆಲಸಕ್ಕೆ ಸೇರಿದ ಮೇಲೆ ಅವಳಿಗೆ ಆ ಯುವಕನ ಪರಿಚಯವಾಗಿತ್ತು. ಹೆಸರು ಹರ್ಷ. ಲಹರಿ ಇತ್ತೀಚೆಗೆ ಅವನನ್ನು ತುಂಬಾ ಹಚ್ಚಿಕೊಂಡಿದ್ದಾಳೇನೋ ? ಎಂದು ಎನ್ನಿಸ ತೊಡಗಿತ್ತು. ಅವನ ಪರಿಚಯವಾದ ಮೇಲೆ ಅವಳು ತನ್ನ ಕೈನೆಟಿಕ್ ಹೋಂಡಾವನ್ನು ಅವನಿಗೆ ಕೊಟ್ಟಿದ್ದಳು. ಒಂದೂವರೆ ತಿಂಗಳಲ್ಲಿ ಅವನು ಹೀರೋ ಹೋಂಡ ಕೊಂಡಿದ್ದ. ಅವಳು ತನ್ನ ಮೊದಲ ಸಂಬಳದಲ್ಲಿ ತಾಯಿ ತಂಗಿಯರಿಗೆ ಸಿಹಿ ಕೂಡ ತಂದುಕೊಟ್ಟಿರಲಿಲ್ಲ. ಹಟ ಮಾಡಿ ತಾಯಿಯಿಂದ 10,000 ರೂ. ತೆಗೆದುಕೊಂಡಿದ್ದಳು.

ಮಂಜುಳ ಅನುಮಾನದಿಂದ ಕೇಳಿದ್ದಳು "ಅಷ್ಟೊಂದು ಹಣ ನಿನಗ್ಯಾಕೆ ?"

"ನನಗೆ ಅರ್ಜೆಂಟಾಗಿ ಬೇಕೇಬೇಕು. ಸಾಲಾಂತ ಕೊಡು ತಿಂಗಳಿಗೆ ಸಾವಿರದ ತರಹ ತೀರಿಸ್ತೀನಿ."

"ಲಹರಿ ನಮಗೆಲ್ಲಿ ಸ್ವೀಟ್ಸ್ ?" ಸಿರಿ ಕೇಳಿದ್ದಳು.

"ಹೋಗೇ, ನಿಮಗೆಲ್ಲಾ ಯಾರು ಸ್ವೀಟ್ಸ್ ಕೊಡ್ತಾರೆ ? ನನ್ನ ಏಳಿಗೆ ನೋಡಿ ಸಂತೋಷ ಪಡುವವರಿಗೆ ಸ್ವೀಟ್ಸ್ ಕೊಡಿಸ್ತೀನಿ" ಎಂದಿದ್ದಳು.

ಮಂಜುಳಾಗೆ ಲಹರಿ ತಾನೇ ಹಣ ಹಾಕಿ ಹರ್ಷನಿಗೆ ವೆಹಿಕಲ್ ತೆಗೆದು ಕೊಟ್ಟಿರಬಹುದೆಂಬ ಅನುಮಾನವಿದ್ದೇ ಇತ್ತು. ಅವಳು ಮಗುವಾಗಿದ್ದಾಗ ಮಾಡಿಸಿ ಹಾಕಿದ್ದ 24 ಗ್ರಾಂ ಸರ ಅವಳ ಕತ್ತಿನಲ್ಲಿರಲಿಲ್ಲ.

"ಲಹರಿ ನಿನ್ನ ಸರ ಎಲ್ಲಿ ?"

"ವಿಜಿ ಹಾಕ್ಕೊಂಡಿದ್ದಾಳೆ ಮಮ್ಮಿ."

"ಚಿನ್ನದ ಸರ ಬಳೆ ಎಲ್ಲಾ ಯಾಕೆ ಫ್ರೆಂಡ್ಸ್‌ಗೆ ಹಾಕಿಕೊಳ್ಳೋಕೆ ಕೊಡ್ತೀಯ ?"

"ಅದು ನನ್ನದು ತಾನೆ, ಅದಕ್ಕೆ ಕೊಟ್ಟೆ. ನಿನ್ನ ಒಡವೆಗಳೆಲ್ಲಾ ಲಾಕರ್‌ನಲ್ಲಿ ಸೇಫ್ ಆಗಿ ಇವೆಯಲ್ಲಾ—ಇನ್ಯಾಕೆ ನನ್ನ ಒಡವೆಗಳ ಚಿಂತೆ ?"

"ದಂಡಿಸುವವರಿಲ್ಲದೆ ಮಗಳು ಹಾಳಾಗುತ್ತಿದ್ದಾಳೆ" ಎಂದು ತಾಯಿ ಕೊರಗುತ್ತಿದ್ದಳು. ಹರ್ಷ ಪ್ರತಿದಿನ ಬೈಕ್ ತಂದು, ಅವಳನ್ನು ಕರೆದೊಯ್ಯುತ್ತಿದ್ದ. ಅವಳು ಅವನ ಜೊತೆ ರಾತ್ರಿ ವಾಪಸ್ಸಾಗುತ್ತಿದ್ದಳು. ಒಮ್ಮೊಮ್ಮೆ ಸಾಯಂಕಾಲ ಅವನ ಜೊತೆ ಬಂದು, ಏನಾದರೂ ತಿಂಡಿ ತಿಂದು, ಬಟ್ಟೆ ಬದಲಾಯಿಸಿ ಪುನಃ ಹೊರಗೆ ಹೊರಡುತ್ತಿದ್ದಳು. ಬಟ್ಟೆಗೆ, ಕಾಸ್ಮೆಟಿಕ್ಸ್‌ಗಳಿಗೆ ಸಿಕ್ಕಾಪಟ್ಟೆ ಹಣ ಸುರಿಯುತ್ತಿದ್ದಳು.

ಲಹರಿಯದು ಈ ಪರಿಯಾದರೆ, ಸಿರಿಯ ರೀತಿನೀತಿಯೇ ಬೇರೆ. ತಂದೆಗೆ ತಾನು 'ಬೇಡದ ಮಗು' ಎಂಬುದರ ಅರಿವು ಅವಳಿಗಿತ್ತು. ಅವಳು ಅಮ್ಮನ ಮಗಳಾಗೇ ಬೆಳೆದಿದ್ದಳು. ತುಂಬಾ ಮೃದು ಸ್ವಭಾವ. ತಂದೆಯ ಜೊತೆ ಮಾತನಾಡದಿದ್ದ ದಿನಗಳೇ ಹೆಚ್ಚು. ಚಿಕ್ಕಂದಿನಲ್ಲೂ ತಂದೆ ತನ್ನನ್ನು ಕರೆದು ಮುದ್ದಿಸುತ್ತಿದ್ದುದು ಅವಳಿಗೆ ನೆನಪಿರಲಿಲ್ಲ. ಒಮ್ಮೆ ಅವನು ಲಹರಿಗೆ ಫ್ರಾಕ್ ತಂದಿದ್ದ. ಸಿರಿ "ಪಪ್ಪ ನಂಗೆ ಫ್ರಾಕ್" ಎನ್ನುತ್ತಾ ಹೋಗಿ ತಂದೆಯ ತೊಡೆ ಏರಿದ್ದಳು.

"ನಿಂಗೆ ನಿಮ್ಮಮ್ಮ ಕೊಡಿಸ್ತಾಳೆ ಹೋಗು" ಎಂದು ಅವನು ಅವಳನ್ನು ಕೊಡೆಯಿಂದ ತಳ್ಳಿದ್ದ. ಆ ಪುಟ್ಟ ಹೃದಯಕ್ಕಾದ ನೋವು ಅಷ್ಟಿಷ್ಟಲ್ಲ. ಅಂದಿನಿಂದ ಅವಳು ತಾಯಿಯನ್ನೇ ಹೆಚ್ಚು ಅವಲಂಬಿಸಿದ್ದಳು. ಅಕ್ಕ-ತಂಗಿಯರು ಎರಡು ಧ್ರುವಗಳಂತೆ ಇದ್ದರು. ಲಹರಿಗೆ ನಯವಾಗಿ ಮಾತನಾಡೇ ಗೊತ್ತಿರಲಿಲ್ಲ. ಸಿರಿಗೆ ಯಾರನ್ನೂ ಗದರಿಸುವ ಅಭ್ಯಾಸವೇ ಸಿರಿಗಿರಲಿಲ್ಲ. ಲಹರಿ ಅಲಂಕಾರಪ್ರಿಯೆ. ಸಿರಿ ಆದಷ್ಟೂ ಸರಳವಾಗಿರುತ್ತಿದ್ದಳು. ಲಹರಿಗೆ ಮನೆಯಲ್ಲಿದ್ದೇ ಅಭ್ಯಾಸವಿರಲಿಲ್ಲ ಸಿರಿಗೆ ಹೆಚ್ಚು ಹೊರಗೆ ಹೋಗಿಯೇ ಅಭ್ಯಾಸವಿರಲಿಲ್ಲ. ಅವಳು ಸುಗಮ ಸಂಗೀತ ಕಲಿತಿದ್ದಳು. ಭಾವಗೀತೆಗಳನ್ನೂ, ದೇವರನಾಮಗಳನ್ನೂ ಸುಶ್ರಾವ್ಯವಾಗಿ ಹಾಡುತ್ತಿದ್ದಳು. ಕಾದಂಬರಿಯ ಹುಚ್ಚಿತ್ತು. ನಿಟ್ಟಿಂಗ್, ಕಸೂತಿ ಇತ್ಯಾದಿಗಳಲ್ಲಿ ಆಸಕ್ತಿ ಇತ್ತು. ಹಾಗೆಂದು ಮುಖೇಡಿಯಾಗಿರಲಿಲ್ಲ. ಕಾಲೇಜಿನ ಚರ್ಚಾಸ್ಪರ್ಧೆಗಳಲ್ಲಿ ಪ್ರಥಮ ಬಹುಮಾನ ಯಾವಾಗಲೂ ಅವಳಿಗೇ ಮೀಸಲಾಗಿರುತ್ತಿತ್ತು. ಅವಳಿಗೆ ಆಯ್ದ ಕೆಲವು ಸ್ನೇಹಿತರಿದ್ದರು.

ಅಪರೂಪಕ್ಕೆ ಒಮ್ಮೊಮ್ಮೆ ತಾಯಿಯನ್ನು ಕರೆದುಕೊಂಡು ಸಿನಿಮಾ, ನಾಟಕ, ಸಂಗೀತ ಕಾರ್ಯಕ್ರಮಗಳಿಗೆ ಹೋಗುತ್ತಿದ್ದುದುಂಟು. ಅವಳಿಗೂ ಪಿ.ಯು.ಸಿ.ಯಲ್ಲಿ ತುಂಬಾ ಒಳ್ಳೆಯ ಮಾರ್ಕ್ಸ್ ಬಂದಿತ್ತು ಆದರವಳು ಬಿ.ಇ. ಎಂ ಬಿ ಓದಲು ಇಷ್ಟಪಡದೆ, ಬಿ.ಎಸ್.ಸಿ.ಗೆ ಸೇರಿದ್ದಳು. ಅವಳಿಗೆ ತಾಯಿಯ ಬಗ್ಗೆ ಪ್ರೀತಿಯ ಜೊತೆ ಅನುಕಂಪವೂ ಇತ್ತು.

"ಅಮ್ಮ, ತಾತ ನಿನ್ನ ಹೆಸರಿಗೆ ಆಸ್ತಿ ಮಾಡಿಡದೆ ಹೋಗಿದ್ದರೆ ಈ ವೇಳೆಗೆ ಪಪ್ಪ ನಮ್ಮಿಬ್ಬರನ್ನೂ ಮನೆಯಿಂದ ಅಟ್ಟಿಬಿಡ್ತಿದ್ದರೋ ಏನೋ ?" ಎನ್ನುತ್ತಿದ್ದಳು. ತಾತನ ಮುಂದಾಲೋಚನೆಯ ಬಗ್ಗೆ ಹೆಮ್ಮೆಯಿತ್ತು. ತಂದೆಯ ಬಗ್ಗೆ ಅವರಿವರು ಆಡಿಕೊಳ್ಳುವುದು ಕಿವಿಗೆ ಬಿದ್ದಿತ್ತು. ಈಗ ಲಹರಿ ಜನರ ಬಾಯಿಗೆ ಆಹಾರವಾಗಿದ್ದಳು. ಅಕ್ಕ-ತಂಗಿಯರು ಎಂದೂ ಒಟ್ಟಿಗೆ ಹೊರಗೆ ಹೋಗುತ್ತಿರಲಿಲ್ಲ ಲಹರಿಯ ದೃಷ್ಟಿಯಲ್ಲಿ ತಂಗಿ ಒಂದು ಹಳ್ಳಿ ಗುಗ್ಗು. ಸಿರಿಗೆ ಅಕ್ಕನ ಬಗ್ಗೆ ತುಂಬಾ ಕರುಣೆ ಇತ್ತು. ಒಂದಲ್ಲಾ ಒಂದು ದಿನ ಅಕ್ಕ ತುಂಬಾ ಪೆಟ್ಟು ತಿನ್ನುತ್ತಾಳೆ ಎನ್ನಿಸುತ್ತಿತ್ತು. ದುಡ್ಡೇ

ಪ್ರಧಾನವೆಂದು ಭಾವಿಸಿರುವ ತನ್ನ ತಂದೆ-ಅಕ್ಕ ಮಾನವೀಯ ಗುಣಗಳನ್ನು ಕಳೆದುಕೊಂಡು ಅಮಾನುಷರಂತೆ ವರ್ತಿಸುತ್ತಾರಲ್ಲಾ ?' ಎಂದು ಬೇಸರವೂ ಆಗುತ್ತಿತ್ತು.

ಕಿಟಕಿಯಿಂದ ತಣ್ಣನೆಯ ಗಾಳಿ ಬೀಸಿ ಬಂದು ಮೈ ನಡುಗಿಸಿದಾಗ, ಶೇಖರ್‌ಗೆ ಎಚ್ಚರವಾಯಿತು. ಅವನು ಗಂಟೆ ನೋಡಿದ ಐದು ಗಂಟೆಯಾಗಿತ್ತು. ಎದ್ದು ಮುಖ ತೊಳೆದು, ಕಾಫಿ ಕುದಿದು, ಬಾಯ್ಲರ್ ಸ್ವಿಚ್ ಹಾಕಿ, ಮನೆ ಲಾಕ್ ಮಾಡಿ ತಂಗಾಳಿಗೆ ಮೈಯೊಡ್ಡಿ ಹಾವಿನಂತೆ ಮಲಗಿದ್ದ ಡಾಂಬರು ರಸ್ತೆಯಲ್ಲಿ ಹೆಜ್ಜೆ ಹಾಕಿದ. ರಸ್ತೆ ನಿರ್ಜನವಾಗಿತ್ತು. ಅಲ್ಲೊಂದು ಇಲ್ಲೊಂದು ವಾಹನಗಳು ಚಲಿಸುತ್ತಿದ್ದವು. ಬೆಳಗಿನ ವಾಯುವಿಹಾರಕ್ಕೆ ಹೊರಡುವವರು ಇನ್ನೂ ಹೊರಟಿರಲಿಲ್ಲ. ಆದರೆ ಶೇಖರ್ ಪ್ರತಿದಿನ ಬೆಳಗ್ಗೆ 5-25ಕ್ಕೆ ಹೊರಟು 6-20ಕ್ಕೆ ವಾಪಸ್ಸಾಗುತ್ತಿದ್ದ.

ಅಮೃತ ಬಸವೇಶ್ವರನಗರದಲ್ಲಿ 50'×60'ರ ಸೈಟೊಂದನ್ನು ತೆಗೆದುಕೊಂಡು ಮನೆ ಕಟ್ಟಿಸಿದಳು, ಮನೆ ತುಂಬಾ ಚೆನ್ನಾಗಿತ್ತು. ಅವಳು ಒಂದಾನೊಂದು ಕಾಲದಲ್ಲಿ ಬಯಸಿದ್ದ ಎಲ್ಲಾ ಸಾಮಾನುಗಳು ಅಲ್ಲಿದ್ದವು. ಅಲೋಕ ಮಾತ್ರ ಬಿ ಇ. ಮುಗಿಸದೆ ಸೋಮಾರಿಯಾಗಿ ಕುಳಿತು ಕಾಲ ಕಳೆಯುತ್ತಿದ್ದ. ಶೇಖರ್ ಮಗನ ತಂಟೆಗೇ ಹೋಗುತ್ತಿರಲಿಲ್ಲ. ಅಮೃತ ಸಂಪಾದನೆ ಹೆಚ್ಚಿದ ಮೇಲೆ ಬದಲಾಗಿದ್ದಳು. ತನಗಿಂತ ಕಡಿಮೆ ಸಂಬಳ ತೆಗೆದುಕೊಳ್ಳುವ ಗಂಡನ ಬಗ್ಗೆ ಅವಳಿಗೆ ಕೊಂಚವೂ ಪ್ರೀತಿ-ಗೌರವಗಳಿರಲಿಲ್ಲ

ಅಲೋಕನಿಗೆ ನಾಲ್ಕು ವರ್ಷ ತುಂಬಿದ್ದಾಗ ಶಂಕರನ ಹೆಂಡತಿ ಐದು ತಿಂಗಳ ಹೆಣ್ಣುಮಗುವಿನ ಜೊತೆ ಗಂಡನ ಮನೆಗೆ ವಾಪಸ್ಸಾಗಿದ್ದಳು. ಅವಳ ತಾಯಿ ಒಂದು ತಿಂಗಳು ಬಂದಿರಲು ಒಪ್ಪಿದ್ದರು. ಶೇಖರ್ ತಾಯಿಯನ್ನು ಕರೆಯಲು ಬಂದಿದ್ದ.

"ಅಮ್ಮ ಅಲೋಕ ದೊಡ್ಡವನಾಗಿದ್ದಾನೆ. ನೀನು ನಮ್ಮನೆಗೆ ಬಂದು ನಮ್ಮ ವೀಣನ್ನ ನೋಡಿಕೋ."

ಸರೋಜಮ್ಮ ಒಪ್ಪಿದ್ದರು. ವಿಷಯ ತಿಳಿದ ಅಮೃತ ಹಾರಾಡಿದ್ದಳು.

"ಇಷ್ಟುದಿನ ನಿಮಗೆ ನಾವು ಬೇಕಾಗಿತ್ತು. ಈಗ ಶಂಕರ ಬೆಂಗಳೂರಿಗೆ ಬಂದಾಂತ ನೀವು ಅವನ ಹಿಂದೆ ಹೊರಡೋದಾ ? ನಮ್ಮ ಅಲೋಕನ್ನ ಯಾರು ನೋಡಿಕೊಳ್ತಾರೆ ?"

"ಅಲೋಕ ದೊಡ್ಡವನಾಗಿದ್ದಾನೆ. ಪ್ಲೇಹೋಂಗೆ ಹೋಗ್ತಾನೆ. ಶಂಕರರೂ ಮಗು ಚಿಕ್ಕದಲ್ವೆ ? ಅವರಿಬ್ಬರೂ ಕೆಲಸಕ್ಕೆ ಹೋದ್ರೆ ಮಗೂನ್ನ ಯಾರು ನೋಡಿಕೊಳ್ತಾರೆ ?"

"ನಿಮಗೆ ಇತ್ತೀಚೆಗೆ ಅವರೇ ಹೆಚ್ಚು ಹತ್ತಿರದವರಾಗಿಬಿಟ್ಟಿದ್ದಾರೆ."

ಸರೋಜಮ್ಮನಿಗೂ ರೇಗಿತ್ತು "ನೋಡಮ್ಮ, ಏನೇನೋ ಅನ್ನಬೇಡ. ನನಗೆ ಯಾರೂ ಹೆಚ್ಚಿಲ್ಲ. ಯಾರೂ ಕಡಿಮೆಯಿಲ್ಲ. ನನ್ನನ್ನ ಯಾರೂ ಕೂಡಿಸಿ ಮಾಡಲ್ಲಾಂತ ನನಗೆ ಗೊತ್ತು. ನಿನಗೆ ಇತ್ತೀಚೆಗೆ ನನ್ನ ಬಗ್ಗೆ ಗೌರವ ಇಲ್ಲ ಒಂದು ದಿನವೂ ಒಂದರ್ಧ ಪಾವು ಅನ್ನ ಮಾಡಿ ಹಾಕಲಿಲ್ಲ ನೀನು. ಒಂದು ಲೋಟ ಕಾಫಿ ಬೇಕಾದ್ರೂ 'ಅತ್ತೆ ಕಾಫೀಂತ' ಕುಳಿತ ಕಡೆ ಯಿಂದ ಆರ್ಡರ್ ಮಾಡ್ತಿದ್ದೆ. ನನ್ನ ಮಗ ಮೊಮ್ಮಗನಿಗೋಸ್ಕರ ಇಲ್ಲಿದ್ದೆ ಇದುವರೆಗೂ ನಿರ್ವಂಚನೆಯಿಂದ ಮಾಡಿದ್ದೇನೆ. ಇನ್ಮೇಲೆ ನಿನ್ನ ಮನೆ ನೀನು ನೋಡಿಕೋ."

"ನೋಡಿಕೊಳ್ತೀನೆ. ನಾನೇನು ನಿಮ್ಮ ಕಾಲಿಗೆ ಬಿದ್ದು ನನ್ನ ಮಗೂನ್ನ ನೋಡಿಕೊಳ್ಳೀಂತ ಕೇಳ್ತಿಲ್ಲ. ದುಡ್ಡುಬಿಸಾಕಿದ್ರೆ ನಿಮ್ಮಂತಹವರು ನೂರಾರು ಜನ ಸಿಗ್ತಾರೆ."

ಅಳೆ ಅಳುತ್ತಲೇ ಮನೆ ಬಿಟ್ಟು ಹೋಗಿದ್ದರು. ಶಂಕರನ ಮನೆಯಲ್ಲಿ ಅವರು ಸುಖವಾಗೇ ಇದ್ದರು. ವಸಂತ ಕೆಲಸಕ್ಕೆ ಹೋಗುವ ಹುಡುಗಿ ಯಾದರೂ ಹೋಗುವವರೆಗೂ ಮನೆಯ ಒಳಗೆ ಕೆಲಸ ಮಾಡುತ್ತಿದ್ದಳು. ಅಲೋಕ ಪ್ಲೇಹೋಂಗೆ ಹೋಗುತ್ತಿದ್ದ. ನಂತರ ಹತ್ತಿರವೇ ಇದ್ದ 'ಬೇಬಿ ಸಿಟ್ಟಿಂಗ್'ನಲ್ಲಿರುತ್ತಿದ್ದ ಅತ್ತೆ ತಮ್ಮ ಮನೆ ಬಿಟ್ಟು ಹೋದಮೇಲೂ ಅಮೃತ ಬದಲಾಗಿರಲಿಲ್ಲ.

ಶೇಖರನಿಗಿನ್ನೂ ಆ ದಿನ ತುಂಬಾ ಚೆನ್ನಾಗಿ ನೆನಪಿತ್ತು. ತಾಯಿ ಶಂಕರನ ಜೊತೆ ಹೊರಟುಹೋದ ದಿನ ಶೇಖರನೂ ಅಲೋಕನ ಜೊತೆ ಹೋಗಿ ರಾತ್ರಿಯವರೆಗೂ ಇದ್ದು ಅಲ್ಲೇ ಊಟ ಮಾಡಿಕೊಂಡು ಬಂದಿದ್ದ. ಅಂದು ಸಾಯಂಕಾಲ ಅಮೃತ ತನ್ನ ವಿದ್ಯಾರ್ಥಿಯ ಅಕ್ಕನ ಮದುವೆ ರಿಸೆಪ್ಷನ್‌ಗೆ ಹೋಗಿದ್ದಳು.

ಮರುದಿನ ಬೆಳಗ್ಗೆ ಅಮೃತ ಎಂದಿನಂತೆ ಏಳು ಗಂಟೆಗೆ ಎದ್ದಿದ್ದಳು. ಆ ವೇಳೆಗೆ ಶೇಖರ್ ಕಾಫಿ ಮಾಡಿದ್ದ.

"ತಿಂಡಿ ಏನ್ಮಾಡ್ತೀಯ ಅಮ್ಮು ?" ಕಾಫಿ ಹೀರುತ್ತಾ ಕೇಳಿದ ಶೇಖರ್.

"ನಾನು ಹೇಗ್ರಿ ತಿಂಡಿ ಮಾಡಲಿ ? ನನಗೆಲ್ಲಿ ಬಿಡುವಿದೆ ? ಎಂಟು ಗಂಟೆಗೆ ನನ್ನ ಸ್ಟೂಡೆಂಟ್ಸ್ ಬರ್ತಾರೆ."

"ಹಾಗಾದ್ರೆ ತಿಂಡಿ-ಅಡಿಗೆ ಯಾರು ಮಾಡ್ತಾರೆ ?"

"ನೀವು ಮಾಡಿ. ನೀವು ಮಾಡೋದು ಮತ್ತೇನು ?"

"ನನ್ನನ್ನು ನೀನು ಈ ಮನೆಯ ಅಡಿಗೆಯವನು ಅಂದ್ಕೊಂಡಿದ್ದೀಯ?"

"ನೋಡ್ರಿ, ಹೆಂಗಸಾದ ನಾನು ಮನೆ ಜವಾಬ್ದಾರಿ ತೆಗೆದುಕೊಂಡಿರುವಾಗ, ನೀವು ಅಡಿಗೆಮನೆ ಜವಾಬ್ದಾರಿ ತೆಗೆದುಕೊಂಡ್ರೆ ತಪ್ಪೇನಿದೆ ? ನಾನು ಕೆಲಸದಲ್ಲಿ ಇಲ್ಲದೇ ಇದ್ದಿದ್ರೇ ಅಚ್ಚುಕಟ್ಟಾಗಿ ಅಡಿಗೆ-ತಿಂಡಿ ಮಾಡಿ ಹಾಕ್ತಿದ್ದೆ."

"ನೋಡು ಅಮೃತ, ನೀನು ಈಗಲೂ ಕೆಲಸ ಬಿಟ್ಟುಬಿಡು. ನಿನ್ನನ್ನು ಸಾಕುವ ಯೋಗ್ಯತೆ ನನಗಿದೆಯೋ ಇಲ್ವೋ ನೋಡು."

ನೋಡಿದ್ದೇನಲ್ಲಾ ನಿಮ್ಮ ಸಂಪಾದನೆ ಲಕ್ಷಣ. ನೋಡ್ರಿ ಮನುಷ್ಯನಿಗೆ ಜೀವನದಲ್ಲಿ ಮೇಲೆ ಬರಬೇಕು ಅನ್ನುವ ಆಸೆ ಇರಬೇಕು. ನಿಮಗೆ ಅಂತಹ ಆಸೆಗಳೇ ಇಲ್ಲ ಆದರೆ ನನಗೆ ಹೃದಯದ ತುಂಬಾ ಅಂತಹ ಆಸೆಗಳಿವೆ. ಆ ಆಸೆಗಳನ್ನು ಈಡೇರಿಸಿಕೊಳ್ಳಬೇಕಾದರೆ ನಾನು ಕಷ್ಟಪಡಲೇಬೇಕು. ಜೀವನವಿಡೀ ಅಡಿಗೆಮನೆಯಲ್ಲಿ ತೊಳೆಯುವುದಕ್ಕೆ ನಾನು ಸಿದ್ಧಳಿಲ್ಲ.

ಶೇಖರ್ ಮಾತಾಡಿರಲಿಲ್ಲ. ಮದುವೆಯ ವಿಚಾರದಲ್ಲಿ ತಾನು ತುಂಬಾ ದುಡುಕಿಬಿಟ್ಟೆ ಎನ್ನಿಸಿತ್ತು. ಮದುವೆಯಾದ ಹೊಸದರಲ್ಲಿ ಎಲ್ಲವೂ ಚೆನ್ನಾಗಿತ್ತು. ಆದರೆ ಅಮೃತ ಲೆಕ್ಚರರ್ ಆದಮೇಲೆ ಅವಳ ಅಹಂ ಹೆಚ್ಚಾಗಿತ್ತು. ಮುಂದೆ ಎಂದೋ ಸುಖವಾಗಿರಬಹುದು ಎನ್ನುವ ಹುಚ್ಚಿನಿಂದ ಈಗಿನ ಸುಖ

ಹಾಳು ಮಾಡಿಕೊಳ್ಳುತ್ತಿದ್ದಳು. ಅವಳಾದರೂ ಸುಖವಾಗಿದ್ದಳೆ ? ಬೆಳಗ್ಗೆ ಯಿಂದ ಸಾಯಂಕಾಲದವರೆಗೂ ದುಡಿತವೇ ಆಗಿರುತ್ತಿತ್ತು. ತಾನೊಬ್ಬಳು ಗೃಹಿಣಿ, ಒಂದು ಮಗುವಿನ ತಾಯಿ ಎನ್ನುವುದನ್ನೇ ಅವಳು ಮರೆತಿದ್ದಳು. ತನ್ನ ಆಸೆ-ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಎಲ್ಲರನ್ನೂ ದೂರಮಾಡಿ ಕೊಂಡಿದ್ದಳು. ತನ್ನ ತವರಿನಿಂದ ದೂರವೇ ಉಳಿದಿದ್ದಳು. ಮೊದಲನೆಯ ತಂಗಿಯ ಮದುವೆಗೆ ನೆಂಟಳಂತೆ ಹೋಗಿ ಬಂದಿದ್ದಳು. ಅವರ್ಯಾರೂ ಬರು ತ್ತಲೇ ಇರಲಿಲ್ಲ. ಅವನ ಕಡೆಯವರಂತೂ ಈ ಕಡೆಯೇ ತಲೆಯನ್ನೇ ಹಾಕು ತ್ತಿರಲಿಲ್ಲ. ಸರೋಜಮ್ಮನನ್ನು ನೋಡಬೇಕೆನಿಸಿದಾಗ ಶಂಕರನ ಮನೆಗೆ ಹೋಗುತ್ತಿದ್ದರು. ಶೇಖರ್ ಒಮ್ಮೊಮ್ಮೆ ಯೋಚಿಸುತ್ತಿದ್ದ. 'ನಮ್ಮ ದಾಂಪತ್ಯ ಜೀವನಕ್ಕೆ ಅರ್ಥವಿದೆಯೆ ? ನಮ್ಮ ಜೀವನದಲ್ಲಿ ಸುಖವಿದೆಯೆ ? ಎಲ್ಲಾ ಗಂಡ ಹೆಂಡತಿಯರಂತೆ ನಾವು ಹೊರಗೆ ಹೋಗುತ್ತೇವೆಯೆ ? ಒಂದು ಮದುವೆ-ಮುಂಜಿಗೆ ಒಟ್ಟಿಗೆ ಹೋಗುತ್ತೇವೆಯೆ ? ಒಂದೇ ಚಾವಣಿಯ ಕೆಳಗಡೆ ಇದ್ದರೂ ನಾವು ಅಪರಿಚಿತರಾಗಿಯೇ ಉಳಿದಿದ್ದೇವೆ. ಅಲೋಕನಿಗಾಗಿ ನಾವು ಈ ಮನೆಯಲ್ಲಿರಬೇಕಾಗಿದೆ. ನಮ್ಮ ಜಗಳ ಮಗುವಿನ ಮನಸ್ಸಿನ ಮೇಲೆ ಪರಿಣಾಮ ಬೀರಬಾರದು. ಅಮ್ಮ ಮಗುವನ್ನು ನೋಡಿಕೊಂಡಂತೆ ನಾನು ನೋಡಿಕೊಳ್ಳಬೇಕು' ಎಂಬ ತೀರ್ಮಾನಕ್ಕೆ ಬಂದಿದ್ದ.

ತಾಯಿ ತಮ್ಮನ ಮನೆಗೆ ಹೋದ ಮೇಲೆ ಶೇಖರ ಬೆಳಗ್ಗೆ ಎದ್ದು ತಾನೇ ಕಾಫಿ ಮಾಡುತ್ತಿದ್ದ. ತಿಂಡಿ ಮಾಡಿ ಮಗನಿಗೆ ತಿನ್ನಿಸಿ, ತಾನೂ ತಿಂದು ಬಿಡುತ್ತಿದ್ದ ಅಡಿಗೆ ಮಾಡುತ್ತಿರಲಿಲ್ಲ. ಮಗುವಿನ ಬಾಕ್ಸ್‌ಗೆ ಕೇಕ್, ಬಿಸ್ಕತ್ ಹಾಕಿರುತ್ತಿದ್ದ. ಅಲೋಕ ಹನ್ನೊಂದು ಗಂಟೆಗೆ ಪ್ಲೇಹೌಸ್‌ನಲ್ಲಿ ತಿನ್ನುತ್ತಿದ್ದ ಒಂದು ಗಂಟೆಗೆ ಅವನು ಬೇಬಿ ಸಿಟ್ಟಿಂಗ್‌ಗೆ ಹೋಗುತ್ತಿದ್ದ. ಅಲ್ಲೇ ಅವನ ಊಟವಾಗುತ್ತಿತ್ತು. ಸಾಯಂಕಾಲ ಶೇಖರ ಮನೆಗೆ ಬರುವಾಗ ಮಗುವನ್ನು ಕರತರುತ್ತಿದ್ದ. ರಾತ್ರಿ ಬಿಸಿ ಅಡಿಗೆ ಮಾಡಿ ಮಗುವಿಗೆ ತಿನ್ನಿಸು ತ್ತಿದ್ದ. ಹೆಂಡತಿಯನ್ನು ತಿಂದೆಯಾ, ಬಿಟ್ಟೆಯಾ ಎಂದು ಕೇಳುತ್ತಿರಲಿಲ್ಲ. ಶನಿವಾರಗಳಲ್ಲಿ ಮಗುವನ್ನು ಹೋಟೆಲ್, ಸಿನಿಮಾ ಅಥವಾ ಲಾಲ್‌ಬಾಗ್, ಕಬ್ಬನ್ ಪಾರ್ಕ್‌ಗಳಿಗೆ ಕರೆಯುತ್ತಿದ್ದ. ಭಾನುವಾರಗಳಲ್ಲಿ ತಮ್ಮನ ಮನೆಗೆ

ಕರೆದೊಯ್ಯುತ್ತಿದ್ದ. ಅಲ್ಲಿ ಬೆಳಿಗ್ಗೆಯಿಂದ ರಾತ್ರಿಯವರೆಗೂ ಇದ್ದು ತಂದೆ ಮಗ ವಾಪಸ್ಸು ಬರುತ್ತಿದ್ದರು.

ಅಲೋಕ ಹೈಸ್ಕೂಲ್‌ಗೆ ಬರುವ ವೇಳೆಗೆ ಅಮೃತ ಮನೆಯ ಮೇಲು ಭಾಗದಲ್ಲಿ ಪಾಠ ಹೇಳಲು ಅನುಕೂಲವಾಗುವಂತೆ ದೊಡ್ಡ ಹಾಲ್ ಕಟ್ಟಿಸಿದ್ದಳು. ಮನೆಯಲ್ಲಿ ಎಲ್ಲಾ ವಸ್ತುಗಳೂ ಇದ್ದವು. ಮೈತುಂಬಾ ಒಡವೆಗಳು, ಬೀರುವಿನ ತುಂಬಾ ಸೀರೆಗಳೂ ಇದ್ದವು. ಒಬ್ಬ ವಿದ್ಯಾರ್ಥಿಯಿಂದ ಅವಳು 3000 ರೂ. ತೆಗೆದುಕೊಳ್ಳುತ್ತಿದ್ದಳು. ದಿನಕ್ಕೆ ನಾಲ್ಕು ಬ್ಯಾಚ್‌ಗೆ ಪಾಠ ಹೇಳುತ್ತಿದ್ದಳು. ಪ್ರತಿ ಬ್ಯಾಚ್‌ನಲ್ಲಿ 40 ಜನ ವಿದ್ಯಾರ್ಥಿಗಳಿರುತ್ತಿದ್ದರು.

ಅಲೋಕ ಇತ್ತೀಚೆಗೆ ತಂದೆಯಿಂದ ದೂರವಾಗತೊಡಗಿದ್ದ. "ನೀನು ಚೆನ್ನಾಗಿ ಓದಬೇಕು ಅಲೋಕ. ಹಣ ಇದೇಂತ ಸಿಕ್ಕಾಪಟ್ಟೆ ಖರ್ಚುಮಾಡಬಾರದು. ಯಾವಾಗಲೂ ನಾವು ನಮಗಿಂತ ಕೆಳಗಿನವರನ್ನು ನೋಡಬೇಕು. ದುಡ್ಡನ್ನು ಹಿತ-ಮಿತವಾಗಿ ಖರ್ಚು ಮಾಡಬೇಕು" ಎನ್ನುವ ತಂದೆಗಿಂತ, "ಅಲೋಕ, ಎಷ್ಟು ಹಣ ಬೇಕೋ ಸಂಕೋಚವಿಲ್ಲದೆ ಕೇಳು. ನಾನು ದುಡೀತಾ ಇರೋದೆ ನಿನಗಾಗಿ. ನನ್ನ ಬಾಲ್ಯವಂತೂ ಬಡತನದಲ್ಲೇ ಕಳೆಯಿತು. ನೂರು ರೂಪಾಯಿಗೆ ಒಂದು ಸೀರೆ ತೊಗೋಬೇಕಿದ್ರೆ,ನಿಮ್ಮಪ್ಪನ್ನ ನೂರಾರು ಬಾರಿ ಕೇಳಬೇಕಿತ್ತು. ನಿನಗೆ ಯಾವ ಕೊರತೆಯೂ ಆಗಕೂಡದು" ಎನ್ನುವ ತಾಯಿ ಪ್ರಿಯವಾಗಿದ್ದಳು.

ಹೈಸ್ಕೂಲಿನಲ್ಲಿದ್ದಾಗಲೇ ಅವನು ಲೂನಾ ತೆಗೆದುಕೊಂಡಿದ್ದ ಅಲೋಕ ದಡ್ಡನಲ್ಲ, ಆದರೆ ಸೋಮಾರಿ. ಅವನು ಎಸ್.ಎಸ್.ಎಲ್.ಸಿ.ಗೆ ಬಂದಾಗ ಅಮೃತ ಹನ್ನೆರಡು ಸಾವಿರ ಕೊಟ್ಟು ಅವನನ್ನು ಪಾಠಕ್ಕೆ ಸೇರಿಸಿದ್ದಳು. ಅವನು ಶೇ. 55 ಅಂಕ ಗಳಿಸಿ ಪಾಸುಮಾಡಿದ್ದ. ಅವನಿಗೆ ಸೈನ್ಸ್ ಕಾಂಬಿನೇಷನ್ ಕೊಡಿಸಲು ಅಮೃತ 20,000 ರೂ. ಡೊನೇಷನ್ ಕೊಟ್ಟಿದ್ದಳು. ಪುನಹ ಅವನನ್ನು ಟ್ಯೂಷನ್‌ಗೆ ಹಾಕಿದ್ದಳು.

"ಅಮ್ಮ ನಾನು ಮಾತ್ರ ನಿನ್ನ ಹತ್ತಿರ ಪಾಠ ಹೇಳಿಸಿಕೊಳ್ಳಲ್ಲ" ಎಂದಿದ್ದ ಅಲೋಕ.

"ನೀನು ನನ್ನ ಹತ್ತಿರವೇ ಪಾಠ ಹೇಳಿಸಿಕೋಬೇಕು. ಬೇರೆ ಕಡೆಗೆ

ನಿನ್ನನ್ನು ಕಳುಹಿಸಲ್ಲ" ಎನ್ನಬಹುದಿತ್ತು. ಆದರೆ ಹಾಗನ್ನದೆ ಅವನನ್ನು ಬೇರೆ ಕಡೆಯಲ್ಲಿ ಪಾಠಕ್ಕೆ ಸೇರಿಸಿದ್ದಳು. ಅವನು ಸರಿಯಾಗಿ ಓದುತ್ತಿದ್ದಾನೋ ಇಲ್ಲವೋ ಎಂದು ಒಮ್ಮೆಯೂ ವಿಚಾರಿಸುತ್ತಿರಲಿಲ್ಲ. ಮಗ ಸರಿಯಾಗಿಲ್ಲವೆಂದು ಶೇಖರನಿಗೆ ಗೊತ್ತಿತ್ತು. ತಾಯಿ–ಮಗ ಮನೆಯ ಊಟ ತಿಂಡಿ ತಿನ್ನುತ್ತಿದ್ದುದೇ ಅಪರೂಪವಾಗಿತ್ತು. ಶೇಖರ್ ತನಗೋಸ್ಕರ ಅಡಿಗೆ ಮಾಡಿಕೊಳ್ಳಬೇಕಿತ್ತು.

ಅಮೃತ ಸಾಮಾನ್ಯವಾಗಿ 50 ರೂ. ತೆಗೆದು ಮಗನ ಕೈಲಿತ್ತು "ಲೋ ಅಲೋಕ, ಹೋಗಿ ತಿಂಡಿ ತೆಗೆದುಕೊಂಡು ಬಾ" ಎನ್ನುತ್ತಿದ್ದಳು. ಅವನು ಚಿಲ್ಲರೆ ವಾಪಸ್ಸು ಮಾಡುವ ಅಭ್ಯಾಸವನ್ನೇ ಇಟ್ಟುಕೊಂಡಿರಲಿಲ್ಲ.

ಫ್ರಿಜ್‌ನಲ್ಲಿ ಯಾವಾಗಲೂ ಐಸ್‌ಕ್ರೀಂ, ಕೇಕ್, ಬಿಸ್ಕತ್ ಇರುತ್ತಿದ್ದವು ಪ್ರತಿದಿನ ಸಾಯಂಕಾಲ ಮನೆಗೆ ಬರುವಾಗ ಬೇಕರಿಯಿಂದ 30–40 ರೂ. ತಿಂಡಿ ತೆಗೆದುಕೊಂಡು ಬರುತ್ತಿದ್ದಳು.

ಬೇಸಿಗೆ ರಜದಲ್ಲಿ ಮಾತ್ರ ಅಮೃತ ಬಿಡುವಾಗಿರುತ್ತಿದ್ದಳು. ಅವಳಿಗೆ ತವರಿಗಾಗಲಿ ಅಥವ ಬೇರೆ ಯಾರಾದರೂ ನೆಂಟರ ಊರಿಗಾಗಲಿ ಹೋಗಲು ಇಷ್ಟವಾಗುತ್ತಿರಲಿಲ್ಲ. ಬೆಂಗಳೂರಿನಲ್ಲೇ ಇದ್ದರೆ ಯಾರಾದರೂ ಬಂದು ಠಿಕಾಣಿ ಹಾಕುತ್ತಾರೆಂಬ ಭಯವೂ ಅವಳಿಗಿತ್ತು. ಆದ್ದರಿಂದ ಬಲವಂತವಾಗಿ ಗಂಡ-ಮಗನನ್ನು ಹೊರಡಿಸಿಕೊಂಡು ಪ್ರವಾಸಕ್ಕೆ ಹೋಗುತ್ತಿದ್ದಳು. ಶೇಖರನಿಗೆ ಕ್ರಮೇಣ ಅದೂ ಬೇಸರವೆನ್ನಿಸತೊಡಗಿತ್ತು.

ಅಲೋಕ ಪಿ.ಯು ಸಿ.ಯಲ್ಲಿ ತುಂಬಾ ಕಡಿಮೆ ಪರ್ಸಂಟೇಜ್ ತೆಗೆದಿದ್ದ

"ನಿನ್ನ ತಲೆಗೆ ಸೈನ್ಸ್ ಹೋಗಲ್ಲಾಂತ ಕಾಣತ್ತೆ. ಬಿ.ಎ ಗೆ ಸೇರಿಕೋ ಇಂಗ್ಲೀಷ್‌ನಲ್ಲೋ, ಎಕನಾಮಿಕ್ಸ್‌ನಲ್ಲೋ ಎಂ.ಎ ಮಾಡಿದ್ರೆ ಒಳ್ಳೇ ಅವಕಾಶಗಳಿರುತ್ತವೆ" ಎಂದಿದ್ದ ಶೇಖರ್.

"ನೀನು ಬಿ ಇ. ಅಥವಾ ಎಂ.ಬಿ. ಓದಲೇಬೇಕು. ಮೊದಲು ವಿತ್‌ಡ್ರಾ ಮಾಡಿಕೊ" ಎಂದು ಆದೇಶಿಸಿದ್ದಳು ಅಮೃತ. ಅವನು ವಿತ್‌ಡ್ರಾ ಮಾಡಿಕೊಂಡಾಗ ಶೇ. 70 ಬಂದಿತ್ತು. ಅಮೃತ 75,000 ರೂ. ಡೊನೇಷನ್ ಕೊಟ್ಟು, ಬಿ.ಇ.ಗೆ ಸೇರಿಸಿದ್ದಳು.

ಬಿ ಇ. ಸೇರಿದ ಮೇಲೆ ಅಲೋಕ ಮನೆ ಸೇರುವುದೇ ಅಪರೂಪವಾಗಿತ್ತು

ಹುಡುಗಿಯರನ್ನು ಚುಡಾಯಿಸುವುದರಲ್ಲಿ ಅವನು ಬಹಳ ಮುಂದು ಎಂದು ಶೇಖರನಿಗೆ ಚೆನ್ನಾಗಿ ಗೊತ್ತಿತ್ತು. ತಂದೆ-ತಾಯಿಗೆ ಕಾಣದಂತೆ ಸಿಗರೇಟು ಸೇದುತ್ತಿದ್ದ. ಅವನು ಆಗಾಗ್ಗೆ ಡ್ರಿಂಕ್ಸ್ ತೆಗೆದುಕೊಳ್ಳುತ್ತಾನೆಂಬ ಗುಮಾನಿಯೂ ಶೇಖರನಿಗಿತ್ತು. ಅಮೃತ ಅವನು ಕೇಳಿದಷ್ಟು ಹಣ ಕೊಡುತ್ತಿದ್ದಳು.

ಆಲೋಕನಿಗೆ ವಿಪರೀತ ಬಟ್ಟೆಯ ಶೋಕಿ. ಮನೆಯಲ್ಲಿದ್ದಷ್ಟು ಹೊತ್ತೂ ತನ್ನ ರೂಮಿನಲ್ಲಿ ಕ್ಯಾಸೆಟ್ ಹಾಕಿಕೊಂಡು ಕುಣಿಯುತ್ತಿರುತ್ತಿದ್ದ.

"ಮಮ್ಮಿ, ನನ್ನ ರೂಂಗೆ ಒಂದು ಟಿ ವಿ. ತರ್ತೀನಿ ಯಾವಾಗಲೂ ಹಾಲ್‌ನಲ್ಲಿ ಕುಳಿತು ನೋಡಕ್ಕಾಗಲ್ಲ" ಎಂದು ಹಠ ಹಿಡಿದು ಒಂದು ಕಲರ್ ಟಿ.ವಿ. ತನ್ನ ರೂಂನಲ್ಲಿ ಹಾಕಿಕೊಂಡಿದ್ದ. ಒಂದು ವಿ.ಸಿ.ಪಿ. ಕೊಂಡು ತಂದಿದ್ದ. ಕ್ರೀಂ, ಸೆಂಟ್, ಪೌಡರ್‌ಗಳಿಗೆ ಸಿಕ್ಕಾಪಟ್ಟೆ ಹಣ ಹಾಳು ಮಾಡುತ್ತಿದ್ದ. ಒಮ್ಮೆ ಶೇಖರ್ ತಡೆಯಲಾರದೆ ಹೇಳಿದ್ದ "ಆಲೋಕ್, ಇಷ್ಟೊಂದು ಹಣ ಹಾಳು ಮಾಡಬೇಡಪ್ಪ. ನೀನು ಇನ್ನೂ ವಿದ್ಯಾರ್ಥಿ ಅನ್ನುವುದನ್ನು ಮರೆಯಬೇಡ."

"ಡ್ಯಾಡಿ, ನೀನು ಹಣ ಸಂಪಾದಿಸಿ ನನಗೆ ಕೊಡ್ತಾ ಇದ್ರೆ ಆ ಮಾತು ಹೇಳಿದ್ರೆ ಚೆನ್ನಾಗಿರತ್ತೆ. ಇಲ್ಲದಿದ್ರೆ ಸುಮ್ಮನಿರು. ಮಮ್ಮಿ ಹಣ ಕೊಡ್ತಾಳೆ, ನಾನು ಖರ್ಚು ಮಾಡ್ತೀನಿ. ನನ್ನ ಖರ್ಚು ವೆಚ್ಚಗಳನ್ನು ಕೇಳುವುದಕ್ಕೆ ನಿನಗ್ಯಾವ ಅಧಿಕಾರವಿದೆ ?"

ಶೇಖರನಿಗೆ ಮಗನನ್ನು ಕೊಂದುಬಿಡಬೇಕೆನ್ನುವಷ್ಟು ಸಿಟ್ಟುಬಂದಿತ್ತು. ಆದರೇನು ಪ್ರಯೋಜನ ? ಅವನು ಮಾತು ಬೆಳೆಸದೆ ಸುಮ್ಮನಾಗಿದ್ದ.

ಐದು ವರ್ಷ ಕಳೆದರೂ ಮಗ ಬಿ.ಇ. ಮುಗಿಸದಿದ್ದಾಗ ಅಮೃತಳಿಗೆ ಆತಂಕವಾಗಿತ್ತು. ಅವನನ್ನು ಕೂಡಿಸಿಕೊಂಡು ಬುದ್ಧಿ ಹೇಳಲು ಅವಳಿಗೆ ಬಿಡುವೇ ಇರಲಿಲ್ಲ. ಅವಳು ಕೋಪ ತೋರಿಸುತ್ತಿದ್ದುದು ಗಂಡನ ಮೇಲೆ ಮಾತ್ರ. ಶೇಖರ್ ನಿರ್ಲಿಪ್ತನಂತಿದ್ದ.

"ಏನ್ರೀ ನನಗಂತೂ ಬಿಡುವಿಲ್ಲದಷ್ಟು ಕೆಲಸವಿರತ್ತೆ, ನೀವಾದ್ರೂ ಇರೋ ಒಬ್ಬ ಮಗನ ಕಡೆ ಗಮನ ಕೊಡಕ್ಕಾಗಲ್ವಾ ?"

"ಗಮನ ಕೊಡಕ್ಕೆ ಅವನೇನು ಎಳೀ ಮಗೂನಾ ? ಅವನಿಗೆ ನಿನ್ನ ಮಾತೊಂದ್ರೆ ವೇದವಾಕ್ಯ ಅಾನೆ ? ನೀನೇ ಬುದ್ಧಿ ಹೇಳು."

"ನನಗೆ ಬಿಡುವಿಲ್ಲಾಂತ ಬಡ್ಕೋತಾ ಇಲ್ವಾ ?"

"ತಾಯಿಯಾದ ನಿನಗೆ ಮಗನ ಜೊತೆ ಮಾತನಾಡುವುದಕ್ಕೆ ಬಿಡುವಿಲ್ಲ ಅಲ್ವಾ ? ನೂರಾರು ವಿದ್ಯಾರ್ಥಿಗಳಿಗೆ ಪಾಠ ಹೇಳ್ತೀಯ. ನಿನ್ನ ಮಗನನ್ನು ನಿನಗೆ ತಿದ್ದಕ್ಕಾಗಲಿಲ್ವಾ ? ನೀನು ಹಾಳ್ಮಾಡಿರೋದ್ರಿಂದಲೇ ಅವನು ಓದದೆ ಉಂಡಾಡಿಗುಂಡನ ತರಹ ತಿರುಗಾಡಿಕೊಂಡಿರೋದು ನೀನೇ ಬುದ್ಧಿ ಹೇಳು."

"ನಾನವನನ್ನು ಹಾಳ್ಮಾಡಿದ್ದೀನಾ ?"

"ಮತ್ತೇನು ಮಾಡಿದ್ದೀಯೆ ? ಮಕ್ಕಳು ಕೇಳಿದ್ದೆಲ್ಲಾ ತೆಗೆದು ಕೊಡೋದು ತಾಯಿಯ ಲಕ್ಷಣ ಅಂದ್ಕೊಂಡಿದ್ದೀಯಾ ? ನಿನಗೂ ದುಡ್ಡಿನ ಬೆಲೆ ಗೊತ್ತಿಲ್ಲ, ಅವನಿಗೂ ಗೊತ್ತಿಲ್ಲ. ಅವನು ಬಯಸಿದಷ್ಟು ಹಣ ಅನಾಯಾಸವಾಗಿ ಸಿಗ್ತಿರುವಾಗ ಅವನ್ಯಾಕೆ ಓದ್ತಾನೆ ? ಯಾಕೆ ಕೆಲಸಕ್ಕೆ ಸೇರ್ತಾನೆ ? ಹಣದಿಂದ ಹಾಳಾಗ್ತಿದ್ದಾನಷ್ಟೆ."

"ಅವನೇನು ಹಾಳಾಗಿರೋದು ?" ಸವಾಲು ಹಾಕುವಂತೆ ಕೇಳಿದ್ದಳು ಅಮೃತ.

"ಒಂದು ವಾರ ನಿನ್ನ ಮನೆಪಾಠಗಳಿಗೆ ರಜೆ ಕೊಟ್ಟು ಅವನನ್ನು ಗಮನಿಸು. ಆಗ ನಿನಗೇ ಗೊತ್ತಾಗುತ್ತೆ."

ಅವಳೇನು ಉತ್ತರ ಕೊಡಲು ಸಾಧ್ಯ ? 'ನಾನು ಎಲ್ಲಿ ತಪ್ಪಿದೆ ?' ಎಂದು ಮನಸ್ಸು ಯೋಚಿಸಿತ್ತು. ಅಂದಿನಿಂದ ಅವಳು ಮಗನ ಕಡೆ ಗಮನ ಹರಿಸಿದ್ದಳು. ಆಲೋಕನಿಗೆ ಕಾಲೇಜು ಇಲ್ಲದಿದ್ದುದರಿಂದ ಅವನು ಏಳುತ್ತಿದ್ದುದೇ ಹತ್ತು ಗಂಟೆಗೆ. ಎದ್ದು ಬಾಯಿ ಕೂಡ ತೊಳೆಯದೆ ಕಾಫಿ ಕುಡಿಯುತ್ತಿದ್ದ. ನಂತರ ಪೇಪರ್ ಓದಿ ಸ್ನಾನಮಾಡಿ ಫ್ಲಾಸ್ಕ್‌ನಲ್ಲಿದ್ದ ಕಾಫಿ ಮತ್ತೊಮ್ಮೆ ಕುಡಿದು ಹನ್ನೊಂದು ಗಂಟೆಗೆ ಮನೆಯಿಂದ ಹೊರಡುತ್ತಿದ್ದ. ಮಧ್ಯಾಹ್ನ ಮನೆಗೆ ಬಂದರೆ ಬಂದ, ಇಲ್ಲದಿದ್ದರೆ ಇಲ್ಲ. ರಾತ್ರಿ 11 ಅಥವಾ 12 ಗಂಟೆಗೆ ಮನೆಗೆ ಬಂದು, ಏನನ್ನೂ ತಿನ್ನದೆ, ಕುಡಿಯದೆ ಮಲಗಿಬಿಡುತ್ತಿದ್ದ. 'ಮಗುವಾಗಿದ್ದಾಗಲೂ ನಾನವನನ್ನು ಗಮನಿಸಲಿಲ್ಲ. ಈಗಲೂ ಗಮನಿಸಲಿಲ್ಲ. ಅದಕ್ಕೆ ಮಗ ಹೀಗೆ ಗೊತ್ತುಗುರಿಯಿಲ್ಲದೆ ತಿರುಗುತ್ತಿದ್ದಾನೆ'

ಎನ್ನಿಸಿತ್ತು. ಮಗ ಕುಡಿದು ಬರುತ್ತಾನೆಂಬ ಅನುಮಾನ ಮೂಡಿದಾಗ ಅವಳೆದೆಯ ಬಡಿತ ಜೋರಾಗಿತ್ತು.

ಒಂದು ರಾತ್ರಿ ಟ್ಯೂಷನ್ಸ್‌ಮುಗಿಸಿ ಅವಳು ಮಗನಿಗಾಗಿ ಕಾಯುತ್ತಾ ಕುಳಿತಳು. ಆ ದಿನ ಅಲೋಕ ಬಂದಾಗ ರಾತ್ರಿ 12 ಗಂಟೆ.

"ಅಲೋಕ ಯಾಕಿಷ್ಟು ಹೊತ್ತು ?"

ಅವನು ಉತ್ತರ ಕೊಡಲು ಅವಳ ಕಡೆ ತಿರುಗಿದೊಡನೆ ಗಪ್ಪೆಂದು ವಾಸನೆ ಮೂಗಿಗೆ ಬಂದು ಹೊಡೆಯಿತು.

"ಓ....ನೀನಾ ಮಮ್ಮಿ ? ನನ್ನನ್ನು ಇದುವರೆಗೂ ಯಾರೂ ಯಾಕೆ ಲೇಟು ಅಂತ ಕೇಳಿಲ್ಲ. ನೀನ್ಯಾಕೆ ಕೇಳ್ತೀಯ ?" ಅವನು ತೊದಲಿದ.

"ಕುಡಿದು ಬಂದಿದ್ದೀಯೇನೋ ?"

"ಹುಂ ಮಮ್ಮಿ, ದಿನಾ ಕುಡೀತೀನಿ. ನಿನಗೆ ಗೊತ್ತಿಲ್ವಾ ?"

"ಕತ್ತೆಭಡವ, ಹಾಗೆ ಹೇಳಕ್ಕೆ ನಾಚಿಕೆ ಆಗಲ್ವಾ ನಿನಗೆ ? ಯಾಕೋ ಕುಡಿಯುತ್ತೀಯಾ ?"

"ನಂಗೆ ಬೇಜಾರು, ಕುಡೀತೀನಿ. ನಂಗೆ ನಿದ್ರೆ ಬರ್ತಿದೆ, ಮಲಗ್ತೀನಿ. ಡೋಂಟ್ ಡಿಸ್ಟರ್ಬ್ ಮಿ."

ಅವನು ತೂರಾಡುತ್ತಾ ಮಂಚದ ಮೇಲೆ ಬಿದ್ದುಕೊಂಡಾಗ ಅವಳ ದುಃಖದ ಕಟ್ಟೆ ಒಡೆಯಿತು. ಅವಳು ಹೊರ ಕೋಣೆಯಲ್ಲಿ ಇಣುಕಿ ನೋಡಿದಳು, ಶೇಖರ್ ಆರಾಮವಾಗಿ ಮಲಗಿದ್ದ. ಅವನನ್ನು ಎಬ್ಬಿಸಿ ಜಗಳ ವಾಡಬೇಕೆಂದುಕೊಂಡವಳು. ಅದರಿಂದ ಏನೂ ಪ್ರಯೋಜನವಾಗಲಾರದೆಂದು ತಿಳಿದುಕೊಂಡು ಒಳಗೆ ನಡೆದಳು. ಮೊಟ್ಟಮೊದಲನೇ ಬಾರಿಗೆ ಅವಳಿಗೆ ತಾನು ಪ್ರಪಂಚದಲ್ಲಿ ಒಂಟಿ ಎನ್ನಿಸಿದಾಗ ಹೃದಯ ಭಾರವಾಗಿ ಕಣ್ತುಂಬಿಬಂತು.

ಮರುದಿನ ಪಿ.ಯು.ಸಿ. ವಿದ್ಯಾರ್ಥಿಗಳಿಗೆ 'ಗಣಿತ'ದ ಪರೀಕ್ಷೆಯಿತ್ತು. ಸಾಮಾನ್ಯವಾಗಿ ಅಂತಹ ದಿನಗಳಲ್ಲಿ ಅಮೃತ ಬೆಳಿಗ್ಗೆ ಬೇಗ ಎದ್ದು ಸ್ನಾನ ಮಾಡಿ ಸಿದ್ಧಳಾಗಿ 9-30ರವರೆಗೂ ಮನೆಯಲ್ಲಿದ್ದು ತನ್ನನ್ನು ನೋಡಲು ಬರುವ ವಿದ್ಯಾರ್ಥಿಗಳಿಗೆ ಶುಭ ಹಾರೈಸಿ ನಂತರ ಕಾಲೇಜಿಗೆ ಹೋಗಿ, ತನ್ನ ವಿದ್ಯಾರ್ಥಿಗಳನ್ನು ಭೇಟಿಮಾಡಿ, ಅವರು ಪರೀಕ್ಷೆ ಮುಗಿಸಿಕೊಂಡು

ಬರುವವರೆಗೂ ಕಾಲೇಜಿನಲ್ಲಿದ್ದು ವಾಪಸ್ಸಾಗುತ್ತಿದ್ದಳು. ಆದರೆ ಆ ದಿನ ಅವಳಿಗೆ ಯಾವ ಕೆಲಸ ಮಾಡುವುದಕ್ಕೂ ಮನಸ್ಸಾಗಲಿಲ್ಲ.

ಶೇಖರ್ ಬೆಳಗ್ಗೆ ಬೇಗ ಎದ್ದು ಸ್ನಾನಮಾಡಿ, ದೇವರ ಪೂಜೆಯಲ್ಲಿ ತೊಡಗಿದ್ದ. ಅವನಿಗಿರುವ ಮನಶ್ಶಾಂತಿ ತನಗಿಲ್ಲವಲ್ಲ ಎಂದು ಮನಸ್ಸಿಗೆ ಕಸಿವಿಸಿಯಾಯ್ತು.

ಮಗ ಏಳುವವೇಳೆಗೆ ಅಮೃತ ತಿಂಡಿ ಮಾಡಿದಳು.

ಅಲೋಕ ಎದ್ದವನೇ ಕಾಫಿ ಕುಡಿದು, ನಂತರ ½ ಗಂಟೆಯ ನಂತರ ಸ್ನಾನಮಾಡಿ, ತಿಂಡಿ ತಿನ್ನಲು ಕುಳಿತ.

"ನೀನೂ ತೊಗೋ ಮಮ್ಮಿ" ಎಂದ ಮಗರಾಯ. ಅವನು ತಿಂಡಿ ತಿನ್ನುವವರೆಗೆ ಸುಮ್ಮನಿದ್ದ ಅಮೃತ ಕೇಳಿದಳು "ನೆನ್ನೆ ರಾತ್ರಿ ನೀನು ಯಾವ ಸ್ಥಿತಿಯಲ್ಲಿದ್ದೆ ನೆನಪಿದೆಯಾ ?"

ತನ್ನ ಪ್ರಶ್ನೆ ಕೇಳಿ ಅವನು ಅವಮಾನದಿಂದ ತಲೆ ತಗ್ಗಿಸಬಹುದು ಎಂದುಕೊಂಡಿದ್ದಳು ಅಮೃತ. ಆದರೆ ಅವನು ಏನೂ ಆಗದವನಂತೆ ಹೇಳಿದ "ನೆನ್ನೆ ರಾತ್ರಿಯೇನು ಮಮ್ಮಿ, ಪ್ರತಿದಿನ ರಾತ್ರಿ ನಾನು ಅದೇ ಸ್ಥಿತಿಯಲ್ಲೇ ಇರೋದು."

"ಆ ರೀತಿ ಹೇಳಕ್ಕೆ ನಿನಗೆ ನಾಚಿಕೆಯಾಗಲ್ವಾ ?"

"ನಾಚಿಕೆ ಯಾಕೆ ಮಮ್ಮಿ ? ಪ್ರತಿದಿನ ರಾತ್ರಿ ನಾನು ಡ್ರಿಂಕ್ಸ್ ತೆಗೆದು ಕೊಳ್ತೀನಿ. ಇದು ಒಂದು ವರ್ಷದ ಅಭ್ಯಾಸ. ನಿನಗೆ ಹೊಸದಾಗಿ ಕಾಣ್ತಿದೆ ಅಷ್ಟೆ."

"ಕುಡಿಯೋದು ತಪ್ಪು ಅಲೋಕ. ಆದ್ದರಿಂದಲೇ ನಿನಗೆ ವಿದ್ಯೆ ತಲೆಗೆ ಹತ್ತುತ್ತಿಲ್ಲ. ಇನ್ನಾದರೂ ಒಳ್ಳೆಯ ಹುಡುಗ ಆಗು. ಈ ಕುಡಿತದ ಅಭ್ಯಾಸಬಿಡು. ಇನ್ನುಮೇಲೆ ಬಿ.ಇ. ಮುಗಿಸುವ ಯೋಚನೆ ಮಾಡು."

"ಸಾಧ್ಯವಿಲ್ಲ ಮಮ್ಮಿ. ಒಂದು ವರ್ಷದ ಅಭ್ಯಾಸನ್ನ ನೀನು ಹೇಳಿದ ತಕ್ಷಣ ಬಿಡಕ್ಕಾಗಲ್ಲ. ನಾನು ತುಂಬಾ ಮುಂದೆ ಹೋಗಿಬಿಟ್ಟಿದ್ದೀನಿ. ಅದಕ್ಕೆ ಕಾರಣ ನೀನು–ಈ ದರಿದ್ರ ಮನೆ."

"ಅಲೋಕ !"

"ಹೌದು ಮಮ್ಮಿ ನಿನಗೆ ನಿನ್ನ ಟ್ಯೂಷನ್ನೇ ಹೆಚ್ಚಾಯ್ತು. ಒಂದು

ದಿನವಾದರೂ ನೀನು ನನಗೋಸ್ಕರ ಪ್ರೀತಿಯಿಂದ ಊಟ-ತಿಂಡಿ ಮಾಡಿ ಹಾಕಿದ್ದೀಯಾ ?" ಮೂರು ಹೊತ್ತೂ ಕೆಲಸದವಳ ಜೊತೆ ಬಿಡ್ತಿದ್ದೆ. ಬೇಬಿ ಸಿಟ್ಟಿಂಗ್‌ನಲ್ಲಿ ಹಾಕ್ತಿದ್ದೆ. ಅಜ್ಜೀನ್ನೂ ಕಳುಹಿಸಿಬಿಟ್ಟೆ. ಡ್ಯಾಡೀನ್ನೂ ನನ್ನಿಂದ ದೂರ ಮಾಡ್ದೆ. ಹಸಿವೆ ಅಂದಾಗಲೆಲ್ಲಾ ಕೈಯ್ಯಲ್ಲಿ ದುಡ್ಡು ಕೊಟ್ಟು ಕಳುಹಿಸ್ತಿದ್ದೆ. ಪ್ರಪಂಚದಲ್ಲಿ ಎಲ್ಲಕ್ಕಿಂತ ಹಣ ಮುಖ್ಯ ಅನ್ನುವ ಪಾಠ ಕಲಿಸಿದವಳು ನೀನೇ ! ಈಗ ನನಗೇನು ಕಡಿಮೆಯಾಗಿರೋದು ? ನಾನ್ಯಾಕೆ ಓದಬೇಕು ? ನಾನ್ಯಾಕೆ ಕೆಲಸಕ್ಕೆ ಸೇರಬೇಕು ? ನನಗೀಗ ಓದುವ ಮೂಡೇ ಇಲ್ಲ. ಏ ಯಾವರ್ ಮೆಂ ಸಾರಿ."

"ಥೂ ಕೃತಜ್ಞ, ಸ್ವಾರ್ಥಿ. ನಿನಗಾಗಿ ಹಗಲೂ ರಾತ್ರಿ ದುಡಿದು ಸಂಪಾದಿಸ್ತಿದ್ದೇನೆ. ನೀನು ಅದಕ್ಕೆ ಬೆಲೆಯನ್ನೇ ಕೊಡುವುದಿಲ್ಲವಲ್ಲಾ ? ನೀನು ಹೀಗಾಗಿರುವುದಕ್ಕೆ ನಾನೇ ಕಾರಣ ಅಲ್ವಾ ? ಇವತ್ತಿನಿಂದ ನಿನಗೆ ನಾನು ಒಂದು ಪೈಸೆ ಕೊಡೋಲ್ಲ."

"ಸುಮ್ಮನೆ ನನ್ನನ್ನು ಹೆದರಿಸಬೇಡ ಮಮ್ಮಿ. ನನಗಿವತ್ತು ಸಾವಿರ ರೂ. ಬೇಕು ಕೊಡು."

"ಖಂಡಿತಾ ಕೊಡಲ್ಲ. ನನ್ನನ್ನೇ ಯಾಕೆ ಕೇಳ್ತೀಯಾ ? ಹೋಗಿ ನಿಮ್ಮ ಡ್ಯಾಡೀನ್ನ ಕೇಳು."

ಅಲೋಕ ಜೋರಾಗಿ ಚಪ್ಪಾಳೆ ತಟ್ಟಿ ನಕ್ಕ.

"ಈ ಮನೆಯಲ್ಲಿ ಡ್ಯಾಡಿಗೂ ಬೆಲೆಯಿದೆಯಾ ಮಮ್ಮಿ ? ಅವರು ನನಗೆ 5 ರೂಪಾಯಿ ಕೂಡ ಕೊಡಲ್ಲಾಂತ ನನಗೆ ಚೆನ್ನಾಗಿ ಗೊತ್ತಿದೆ. ನಿನ್ನ ಹಣ ನಮ್ಮ ನಡುವೆ ಗೋಡೆ ಎಬ್ಬಿಸಿಬಿಟ್ಟಿದೆ. ಡ್ಯಾಡಿ ನನ್ನ ಜೊತೆ ಮಾತಾಡೋದು ಬಿಟ್ಟು ಆರು ತಿಂಗಳಾಯ್ತು. ನಾನಾಗಿ ಏನಾದರೂ ಕೇಳಿದರೆ ಉತ್ತರ ಹೇಳ್ತಾರೆ. ನಿನಗೆ ಈ ವಿಚಾರ ಗೊತ್ತಿಲ್ಲಾಂತ ಕಾಣತ್ತೆ."

ಅಮೃತ ಮಾತನಾಡದೆ ಎದ್ದು ಹೋದಳು.

"ಮಮ್ಮಿ ಕೊನೆಯ ಸಲ ಕೇಳ್ತಿದ್ದೇನೆ, ಕೊಡ್ತೀಯೋ ಇಲ್ವೋ ?"

"ಏನು ಕೊಡೋದು ?"

"ಸಾವಿರ ರೂಪಾಯಿ."

"ಕೊಡಲ್ಲ, ಕೊಡಲ್ಲ. ನನ್ನ ಪ್ರಾಣ ಹೋದರೂ ಕೊಡಲ್ಲ."

"ನೀನು ಕೊಡದಿದ್ರೆ ಹೇಗೆ ತೊಗೋಬೇಕೂಂತ ನನಗೆ ಗೊತ್ತು" ಅವನು ತಿಂಡಿ ತಿನ್ನುವುದನ್ನು ಬಿಟ್ಟು ಎದ್ದುಹೋದ.

ಆ ದೆವ್ವದಂತಹ ಮನೆಯಲ್ಲಿ ಅಮೃತ ಬಹಳ ಹೊತ್ತು, ಯೋಚಿಸುತ್ತಾ ಕುಳಿತಳು. ನಂತರ ಎದ್ದು ಅಡಿಗೆ ಮಾಡಿದಳು. ಮಧ್ಯಾಹ್ನದ ಹೊತ್ತಿಗೆ ಅವಳ ಅನೇಕ ವಿದ್ಯಾರ್ಥಿಗಳು ಬಂದು ತಾವು ಪರೀಕ್ಷೆಯಲ್ಲಿ ಹೇಗೆ ಮಾಡಿದ್ದೇವೆಂದು ಹೇಳಿ ಹೋದರು. ಅಲೋಕ ಊಟಕ್ಕೆ ಬರಲಿಲ್ಲ.

ಸಾಯಂಕಾಲ ಶೇಖರ್ ಮನೆಗೆ ಬಂದಾಗ ಅಮೃತ ತಾನೇ ಕಾಫಿಮಾಡಿ ತಂದುಕೊಟ್ಟಳು.

"ನನಗೆ ಕಾಫಿ ಬೇಡ ಅಮೃತ" ಧ್ಯಾನಿಗೆ ಮುಖ ಒಡ್ಡಿ ಕುರ್ಚಿಗೆ ಒರಗಿ ಹೇಳಿದನವನು.

"ಯಾಕೆ ನನ್ನ ಕೈಯ್ಯಲ್ಲಿ ಕಾಫಿ ಕುಡಿಯಬಾರದಾ ? ನಾನೇನು ವಿಷ ಹಾಕಿಲ್ಲ ಕುಡಿಯಿರಿ."

"ಹಾಗಂತ ನಾನೆಲ್ಲಿ ಹೇಳಿದೆ ? ಹತ್ತು ನಿಮಿಷದ ಹಿಂದೆ ಕಾಫಿ ಕುಡಿದಿದ್ದೇನೆ. ಈಗ ಪುನಃ ಹೇಗೆ ಕುಡಿಯಲಿ ?"

"ಯಾಕೆ ಕುಡಿದ್ರಿ ?"

"ಇದು ಸುಮಾರು 20 ವರ್ಷದಿಂದ ಆಗಿರುವ ಅಭ್ಯಾಸ. ಮನೆಗೆ ಬಂದ ಮೇಲೆ ಕಾಫಿ ಬೆರೆಸಿಕೊಂಡು ಕುಡಿಯುವಷ್ಟು ತಾಳ್ಮೆ ಇರುವುದಿಲ್ಲ. ಆದ್ದರಿಂದ ದಾರಿಯಲ್ಲೇ ಕಾಫಿ ಕುಡಿದು ಬರ್ತೀನೆ."

"ಈಗೇನು ಮಾಡಲಿ ? ಈ ಕಾಫಿ ಚೆಲ್ಲಿಬಿಡಲಾ ?"

"ಕಷ್ಟಪಟ್ಟು ಮಾಡಿರುವ ಕಾಫಿ ಚೆಲ್ಲುವುದು ಯಾಕೆ ? ಇನ್ನೊಂದು ಲೋಟ ತೆಗೆದುಕೊಂಡು ಬಾ ಇಬ್ಬರೂ ಕುಡಿಯೋಣ."

ಅಮೃತ ಮರುಮಾತನಾಡದೆ ಒಳಗೆ ಹೋಗಿ ಲೋಟ ತಂದಳು. ಶೇಖರ್ ಕಾಫಿ ಕುಡಿದು ಲೋಟ ಕೆಳಗಿಡುತ್ತಾ ಹೇಳಿದ "ಅಮೃತ, ನಾನು ನಿನ್ನ ಹತ್ತಿರ ಕೊಂಚ ಮಾತಾಡಬೇಕಿತ್ತು."

"ಏನು ವಿಷಯ ?"

"ಶಂಕರ ಫೋನ್ ಮಾಡಿದ್ದ. ಅಮ್ಮ ನಿನ್ನ ಅಲೋಕನ್ನ ನೋಡ ಬೇಕೂಂತ ತುಂಬಾ ಹಂಬಲಿಸ್ತಿದ್ದಾಳಂತೆ."

ಕಾಷ್ಠ ಕೇಂದ್ರ ಗ್ರಂಥಾಲಯ
ಬೆಂಗಳೂರು.



"ಒಂದು ದಿನ ಹೋಗಿ ನೋಡಿಕೊಂಡು ಬಂದರಾಯ್ತು."

"ಹಾಗೆ ಹೋಗಿ ಬರುವುದರಿಂದ ಸಮಸ್ಯೆ ಪರಿಹಾರವಾಗಲ್ಲ. ಶಂಕರ ಅಮ್ಮನ ಬಹಳ ವರ್ಷಗಳಿಂದ ಇಟ್ಕೊಂಡಿದ್ದಾನೆ. ಈಗ ನಾವು ಇಟ್ಕೊಳ್ಳಬೇಕು."

"ಈ ಮನೆಯಲ್ಲಿ ಅವರನ್ನು ಇಟ್ಕೊಳ್ಳಬೇಕಾ ?

"ಯಾಕೆ ಹಾಗೆ ಕೇಳ್ತೀಯ? ಅವರನ್ನು ಯಾಕೆ ಇಟ್ಕೊಳ್ಳಬಾರದು? ಇದೇನು ಅವರಿಗೆ ಬೇರೆ ಮನೇನಾ ? ಇದೊಂದು ಮಗನ ಮನೆ ಅಲ್ವಾ ?"

"ಈ ಮನೆ ನಡೆಸ್ತಾ ಇರೋದು ನಾನೇ ಹೊರತು ನೀವಲ್ಲ. ಅವರಿಗೀಗ 74-75 ವರ್ಷ ಆಗಿಲ್ವಾ ? ಅವರಿಂದ ಏನೂ ಕೆಲಸಾನೂ ಆಗಲ್ಲ. ಅವರನ್ನು ಯಾರು ನೋಡಿಕೊಳ್ತಾರೆ ? ನನ್ನ ಕೈಲಿ ಅವೆಲ್ಲಾ ಆಗಲ್ಲ."

"ಅಮ್ಮ, ಹಾಸಿಗೆ ಹಿಡಿದು ಮಲಗಿಲ್ಲ. ಮನೆಮಟ್ಟಿಗೆ ಓಡಾಡ್ತಾಳೆ. ಅಡಿಗೆ-ತಿಂಡಿ ನಾನೇ ಮಾಡಿ ಹಾಕ್ತೀನೆ. ಮನೆಯಲ್ಲಿ ಒಬ್ಬರು ದೊಡ್ಡವರೂಂತ ಇರ್ತಾರೆ. ಕೆಲಸದ ಚಿನ್ನಮ್ಮನನ್ನು ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಅಮ್ಮನ ಜೊತೆ ಇರೂಂದ್ರೆ ಆಯ್ತು."

"ನೋಡಿ, ನಾನು ಇದಕ್ಕೆ ಒಪ್ಪಲ್ಲ. ಅವರ ಕೈಕಾಲು ಗಟ್ಟಿಯಾಗಿದುವವರೆಗೂ ತಮ್ಮ ಜೊತೆ ಇಟ್ಕೊಂಡು, ಅವರಿಂದ ಎಲ್ಲಾ ರೀತಿಯ ಉಪಕಾರ ಮಾಡಿಸಿಕೊಂಡು, ಈಗ ಅವರ ಶಕ್ತಿ ಉಡುಗಿದೆ ಅಂತ ಈ ಮನೆಗೆ ಸಾಗ್ಹಾಕಕ್ಕೆ ಶಂಕರ-ಅವನ ಹೆಂಡತಿ ಪ್ರಯತ್ನಿಸ್ತಿದ್ದಾರೆ ನಾನಿದಕ್ಕೆ ಒಪ್ಪಲ್ಲ."

"ನೀನು ತಪ್ಪು ತಿಳಿದಿದ್ದೀಯ ಕಣೆ. ಶಂಕರಂಗೆ ದಾವಣಗೆರೆಗೆ ವರ್ಗವಾಗಿದೆ. ಅವನು ಅಮ್ಮನ್ನ ತನ್ನ ಜೊತೆಯಲ್ಲಿ ಕರೆದುಕೊಂಡು ಹೋಗಕ್ಕೆ ಸಿದ್ಧವಾಗಿದ್ದಾನೆ. ಆದ್ರೆ ಅಮ್ಮಾನೇ ಹೋಗಕ್ಕೆ ಒಪ್ತಿಲ್ಲ. ಅಮ್ಮ ನಮಗೇನೂ ಉಪಕಾರನೇ ಮಾಡಿಲ್ವಾ ಅಮೃತ ? ನಿನ್ನನ್ನು ಸ್ವಂತ ಮಗಳ ತರಹ ನೋಡಿಕೊಳ್ತಿರಲಿಲ್ವಾ ? ಅಲೋಕನನ್ನ ಕೈಲಾಗದಿದ್ರೂ ಸಾಕಲಿಲ್ವಾ ? ನೀನು ದುಡುಕಿ ಮಾತಾಡಿದ್ದಕ್ಕೆ ತಾನೆ ಅಮ್ಮ ಶಂಕರನ ಮನೆಗೆ ಹೋಗಿದ್ದು? ಅಮ್ಮ ಇದ್ದಿದ್ರೆ ಅಲೋಕ ಈ ತರಹ ಆಗ್ತಿರಲಿಲ್ಲ."

"ನಿಮ್ಮನ್ನು ವೈಯಕ್ತಿಕ ವಿಚಾರದಲ್ಲಿ ತಲೆಹಾಕಕ್ಕೆ ಪ್ರಯತ್ನಿಸಿದ್ರಿಂದ

ಗ್ರಂಥ ಸ್ವಾಮ್ಯ ವಿಭಾಗ

ತಾನೇ ಹೀಗೆಲ್ಲಾ ಆಗಿದ್ದು ? ನಾನು ಏನೇ ಆಗಲಿ ಅವರನ್ನು ಇಲ್ಲಿಟ್ಟು ಕೊಳ್ಳಲು ಒಪ್ಪಲ್ಲ."

"ನೋಡು ಅಮೃತ, ಸುಮ್ಮನೆ ಹಠ ಮಾಡಬೇಡ. ವೃದ್ಧಾಪ್ಯದಲ್ಲಿ ತಾಯಿ-ತಂದೆಯರನ್ನು ನೋಡಿಕೊಳ್ಳುವುದು ಮಕ್ಕಳ ಕರ್ತವ್ಯ ಕಣೆ."

"ತಂದೆಯಾಗಿ ನಿಮ್ಮ ಕರ್ತವ್ಯ ಏನೂ ಇಲ್ವಾ ? ಆಲೋಕ ಹೇಗಾಗಿದ್ದಾನೆ ನೋಡಿ. ಅವನಿಗೆ ದೊಡ್ಡವರ ಮಾತು ಕೇಳಿ ಅಭ್ಯಾಸವೇ ಇಲ್ಲದಂತಾಗಿದೆ. ನೀವು ಅವನನ್ನು ಸರಿಯಾಗಿ ಬೆಳೆಸಿದ್ದಿದ್ರೆ ಈ ದಿನ ಇಷ್ಟು ತಾಪತ್ರಯವಾಗ್ತಿರಲಿಲ್ಲ. ನಿಮಗೆ ಮಗನ ಮೇಲೆ ಪ್ರೀತಿನೇ ಇಲ್ಲ. ಅವನು ಹೋದ ದಾರಿಗೆ ಬಿಟ್ಟುಬಿಟ್ರಿ. ಅವನೀಗ ನಮ್ಮ ಮಾತುಗಳಿಗೆ ಬೆಲೇನೇ ಕೊಡಲ್ಲ."

"ಅವನು ನನ್ನ ಮಾತು ಕೇಳುವುದು ನಿಲ್ಲಿಸಿ 12 ವರ್ಷವಾಯ್ತು. ಅವನು ಚಿಕ್ಕವನಾಗಿದ್ದಾಗ ನನ್ನನ್ನು ತುಂಬಾ ಹಚ್ಚಿಕೊಂಡಿದ್ದ. ನಾನು ಹಾಕಿದ್ದ ಗೆರೆ ದಾಟರಲಿಲ್ಲ. ನೀನು ಅವನಿಗೆ ಹಣದ ರುಚಿ ತೋರಿಸಿದೆ. ನಾನು ಅಷ್ಟೊಂದು ಹಣ ಖರ್ಚು ಮಾಡಬೇಡ ಅಂತ ಹೇಳಿದ್ರೆ ಅವನೆಲ್ಲಿ ಕೇಳ್ತಾನೆ ? ನನಗಿಂತ ನೀನೇ ಅವನಿಗೆ ಹೆಚ್ಚು ಪ್ರಿಯವಾದೆ. ಅವನು ಹಣ ಹಾಳು ಮಾಡುವುದನ್ನು ನೋಡಿ ನಾನು ಬೇಕಾದಷ್ಟು ಸಲ ಬುದ್ಧಿ ಹೇಳಿದೆ ಗೊತ್ತಾ ? 'ಮಮ್ಮಿ ಹಣ ಕೊಡ್ತಾಳೆ, ನಾನು ಖರ್ಚು ಮಾಡ್ತೀನಿ' ಅಂದ. ಒಂದು ಸಲ 'ನೀನ್ಯಾರು ನನ್ನನ್ನು ಕೇಳಕ್ಕೆ ?' ಅಂತಾನೂ ಪ್ರಶ್ನಿಸಿದ. ನಾನು ಅವನನ್ನು ಹೇಗೆ ತಿದ್ದಲು ಸಾಧ್ಯ ಹೇಳು ? ಮಕ್ಕಳ ಮನಸ್ಸು ಹಸಿ ಮಣ್ಣಿನಂತೆ ಇರತ್ತೆ. ಅವರು ಚಿಕ್ಕವರಾಗಿರುವಾಗಲೇ ನಾವದನ್ನು ತಿದ್ದಬೇಕು. ಈಗ ನಿನ್ನ ಮಗ ದೊಡ್ಡವನಾಗಿಬಿಟ್ಟ. ಅವನನ್ನು ನಾವೀಗ ಬದಲಾಯಿಸಲು ಸಾಧ್ಯನಾ ನೀನೇ ಹೇಳು."

"ಹೌದೂರಿ, ನಾನು ಕೆಟ್ಟವಳು. ಆಲೋಕ ಹಾಳಾಗಕ್ಕೆ ನಾನೇ ಕಾರಣ. ನಿಮ್ಮಮ್ಮ ಮನೆ ಬಿಟ್ಟು ಹೋಗುವುದಕ್ಕೆ ನಾನೇ ಕಾರಣ. ನೀವು ಸಂಸಾರದಲ್ಲಿ ನಿರಾಸಕ್ತಿ ತೋರಿಸುವುದಕ್ಕೆ ನಾನೇ ಕಾರಣ."

"ಹಾಗಲ್ಲ ಅಮ್ಮು.."

"ನೋಡಿ, ನೀವು ಏನು ಹೇಳಿದ್ರೂ ನಾನು ನನ್ನ ನಿರ್ಧಾರ ಬದಲಾಯಿ

ಸಲ್ಲ. ಇದು ನನ್ನ ಮನೆ ನಿಮ್ಮಮ್ಮ ಇಲ್ಲಿರಕೂಡದು. ಬೇಕಾದ್ರೆ ಅವರನ್ನು ಯಾವುದಾದರೂ ವೃದ್ಧಾಶ್ರಮಕ್ಕೆ ಸೇರಿಸಿ. ತಿಂಗಳಿಗಿಷ್ಟು ದುಡ್ಡು ಬಿಸಾಕಿದ್ರಾಯ್ತು."

"ಅಮ್ಮಂಗೆ ವೃದ್ಧಾಶ್ರಮದಲ್ಲಿರುವಂತಹ ಸ್ಥಿತಿ ಬಂದಿಲ್ಲ. ನಾನು ಅಮ್ಮನ ಪಾಲಿಗೆ ಇದ್ದೂ ಪ್ರಯೋಜನವಾಗಿಲ್ಲದಿದ್ರೂ, ಶಂಕರ ಇನ್ನೂ ಬದುಕಿದ್ದಾನೆ ಕಣೆ...."

"ನೀವು ಏನಾದ್ರೂ ಮಾಡಿಕೊಳ್ಳಿ. ನನಗೆ ಬೆಳಿಗ್ಗೆಯಿಂದ ಮನೆ ಯಲ್ಲಿದ್ದು ಬೇಜಾರಾಗಿದೆ. ಮಂಜು ಮನೆಗೆ ಹೋಗಿ ಬರ್ತೀನಿ" ಎಂದಳು ಅಮೃತ.

ಶೇಖರ್ ಮಾತಾಡಲಿಲ್ಲ. ಅವನ ತುಟಿಗಳ ಮೇಲೆ ವಿಷಾದದ ನಗೆ ಯೊಂದು ಮಿನುಗಿತು.

o o o o o

ದೇವರ ಮುಂದೆ ಕಣ್ಮುಚ್ಚಿ ಕುಳಿತಿದ್ದ ಮಂಜುಳ, ಶಾಸ್ತ್ರಿಗಳು "ಮಂಗಳಾರತಿ ಮಾಡಲಮ್ಮಾ?" ಎಂದು ಕೇಳಿದಾಗ, ಕಣ್ಣು ತೆರೆದು "ಮಾಡಿ ಶಾಸ್ತ್ರಿಗಳೇ" ಎಂದಳು. ಅವರು ಮಂಗಳಾರತಿ ಮಾಡಿ ಮುಗಿಸುವ ವೇಳೆಗೆ ಸಿರಿ ಬಂದು ತೀರ್ಥ-ಪ್ರಸಾದ ತೆಗೆದುಕೊಂಡಳು.

"ಬಾ ಸಿರಿ, ತಿಂಡಿ ಕೊಡ್ತೀನಿ. ಲಹರಿಯನ್ನು ಕೂಗು."

"ಅವಳೇನೋ ಬರೀತಾ ಇದ್ದಾಳಮ್ಮ, ಬರ್‍ತಾಳೋ ಇಲ್ವೋ?"

"ಒಂದು ಸಲ ಕೂಗಬಾರದಾ?"

"ಕೂಗಿದ್ರೆ ರೇಗ್ತಾಳಮ್ಮ ಸುಮ್ನೆ ಮೂಡ್ ಹಾಳಾಗತ್ತೆ. ನಂಗೆ ಕಾಲೇಜಿಗೆ ಹೊತ್ತಾಯ್ತು ತಿಂಡಿಕೊಡು ಬಾ."

"ಸಿರಿ, ಈ ಲೆಟರ್‌ನ ರಿಜಿಸ್ಟರ್ಡ್ ಪೋಸ್ಟ್ ಮಾಡ್ತೀಯಾ?" ಲಹರಿ ಅವಳ ಪಕ್ಕ ಬಂದು ಕುಳಿತು ಕೇಳಿದಳು.

"ಕೊಡು, ಮಾಡ್ತೀನಿ" ಸಿರಿ ಆ ಪತ್ರಗಳನ್ನು ಎಡಗೈನಲ್ಲಿ ತೆಗೆದು ಕೊಂಡು ಡ್ರೆಸಿಂಗ್ ಟೇಬಲ್ ಮೇಲಿಟ್ಟುಕೊಂಡಳು.

"ಏನು ಕಾಗದಗಳು ಅವು ?" ಮಂಜುಳಾ ಮಗಳಿಗೆ ತಿಂಡಿ ತಂದಿತ್ತು ಕೇಳಿದಳು.

"ನಾನು ಹರ್ಷ ಬಾಂಬೆಯ ಒಂದು ಫರ್ಮ್‌ಗೆ ಅಪ್ಲಿಕೇಷನ್ಸ್ ಹಾಕ್ತಿದ್ದೇವೆ ಮಮ್ಮಿ....ಕೆಲಸ ಸಿಕ್ಕಿದರೆ ಹೊರಟುಬಿಡ್ತೇವೆ."

"ಯಾಕೆ ಈ ಕೆಲಸ ಏನಾಗಿದೆ ?"

"ಇಲ್ಲಿ ಕೊಡುವ ಸಂಬಳ ಯಾವುದಕ್ಕಾಗುತ್ತೆ ಮಮ್ಮಿ ? ಅಲ್ಲಿ ತುಂಬಾ ಒಳ್ಳೆಯ ಪೇ ಕೊಡ್ತಾರೆ"

ಅಷ್ಟರಲ್ಲಿ ಸಿರಿ ಹೊರಟಳು. ಲಹರಿ ತನ್ನ ಪರ್ಸ್‌ನಿಂದ 50ರೂ ತೆಗೆದು ಅವಳ ಕೈಯಲ್ಲಿತ್ತಳು.

ಅವಳು ಹೋದ ಮೇಲೆ ಲಹರಿಯನ್ನು ಕೇಳಿದಳು "ನೀನಿವತ್ತು ಆಫೀಸ್‌ಗೆ ಹೋಗಲ್ವಾ ?"

"ಹರ್ಷ ಇವತ್ತು ರಜ ಹಾಕಿದ್ದಾನೆ. ಅದಕ್ಕೆ ನಾನೂ ರಜ ಹಾಕಿಬಿಟ್ಟೆ"

"ಯಾಕೆ ?"

"ಅವನಿಲ್ಲದಿದ್ರೆ ಆಫೀಸ್‌ನಲ್ಲಿ ಕೆಲಸ ಮಾಡುವುದಕ್ಕೆ ನನಗೆ ಮೂಡೇ ಇರೋದಿಲ್ಲ."

"ಹರ್ಷ ಒಳ್ಳೆಯ ಹುಡುಗನಾ ?"

"ತುಂಬಾ ಒಳ್ಳೆಯ ಹುಡುಗ."

"ನೀನವನನ್ನು ಪ್ರೀತಿಸ್ತಿದ್ದಿಯಾ ?"

ಮಂಜುಳ ನಿರೀಕ್ಷಿಸಿದಂತೆ ಅವಳು ನಾಚಲಿಲ್ಲ. ಅದರ ಬದಲು ಸಂಕೋಚವಿಲ್ಲದೆ ಹೇಳಿದಳು. ನಾನು ಅವನನ್ನು ತುಂಬಾ ಪ್ರೀತಿಸ್ತಿದ್ದೀನಿ ಮಮ್ಮಿ."

"ಅವನು ?"

"ಅವನಿಗೂ ನಾನೂಂದ್ರೆ ತುಂಬಾ ಇಷ್ಟ"

"ಅವನ ತಂದೆಗೇನು ಕೆಲಸ ?"

"ಯಾವುದೋ ಪ್ರೈವೇಟ್ ಫರ್ಮ್‌ನಲ್ಲಿ ಅಕೌಂಟೆಂಟ್. ಇವನೇ ದೊಡ್ಡವನು. ಇವನಿಗೊಬ್ಬ ತಮ್ಮ, ತಂಗಿ ಇದ್ದಾರೆ."

"ಹರ್ಷನ ತಮ್ಮ ಏನ್ಮಾಡ್ತಿದ್ದಾನೆ ?"

"ಬಿ.ಇ. ಮಾಡ್ತಿದ್ದಾನೆ. ತಂಗಿ ಪಿ.ಯು ಸಿ.ಯಲ್ಲಿದ್ದಾಳೆ. ಇವನಿಗೆ ತುಂಬಾ ಜವಾಬ್ದಾರಿ ಇದೆ ಮಮ್ಮಿ.

"ಅವರ್ಮನೇಲಿ ಹರ್ಷಂಗೆ ಮದುವೆ ಮಾಡಕ್ಕೆ ಸಿದ್ಧ ಇದಾರಾ ?"

"ಓ ಅವರೇನೋ ಸಿದ್ಧ ಇದ್ದಾರೆ. ಆದರೆ ಹರ್ಷಾನೇ ಒಪ್ತಾ ಇಲ್ಲ."

"ಯಾಕೆ ?"

"ನಮ್ಮಿಬ್ಬರಿಗೂ ಮದುವೆಯಲ್ಲಿ ನಂಬಿಕೇನೇ ಇಲ್ಲ ಮಮ್ಮಿ. ಈ ಮದುವೆ, ಮಕ್ಕಳು, ಸಂಸಾರ ಎಲ್ಲಾ ಬೋರ್ ಅನ್ನಿಸತ್ತೆ."

"ಹಾಗಂದ್ರೇನೆ ? ಅವನನ್ನು ಕಂಡ್ರೆ ಇಷ್ಟಾಂತ ಹೇಳ್ತೀಯ. ನೀನು ಹೇಳಿದ್ರೆ ಅವನು ಒಪ್ಪದೆ ಇರ್ತಾನಾ ? ನಾನು, ನಿಮ್ಮ ಡ್ಯಾಡಿ ಹೋಗಿ ಅವನ ತಂದೆ-ತಾಯಿ ಹತ್ರ ಮಾತಾಡ್ತೀವೆ "

"ನೋ ಮಮ್ಮಿ, ನಮ್ಮಿಬ್ಬರಿಗೂ ಮದುವೆ ಇಷ್ಟವಿಲ್ಲ. ನೀನು ನಮ್ಮ ಬಗ್ಗೆ ತಲೆ ಕೆಡಿಸಿಕೊಳ್ಳಬೇಡ. ಬೇಕಾದರೆ ಸಿರಿಗೆ ಮದುವೆ ಮಾಡು."

"ಇದು ಸರಿಯಾದುದಲ್ಲ ಲಹರಿ ನಿಮ್ಮ ಓಡಾಟಕ್ಕೆ ಒಂದು ಅರ್ಥ ಬೇಕು. ಒಂದು ಮುಕ್ತಾಯ ಬೇಕು. ನೀವಿಬ್ಬರೂ ಮದುವೆಯಿಲ್ಲದೆ ಹೀಗೆ ಒಟ್ಟಿಗೆ ಸುತ್ತಾಡ್ತಿದ್ರೆ ಏನು ಚೆನ್ನ ? ಜನ ಏನಂತಾರೆ ?"

"ಈ ಊರಲ್ಲಿ ಸುತ್ತಾಡಿದ್ರೆ ತಾನೆ ಜನ ಕಾಮೆಂಟ್ಸ್ ಮಾಡೋದು ? ಬಾಂಬೇಲಿ ಕೆಲಸ ಸಿಕ್ಕಿದ ತಕ್ಷಣ ನಾನು ಹೊರಟುಹೋಗ್ತೀನಿ. ಆಗ ಯಾರೂ ಏನೂ ಅನ್ನಲ್ಲ "

"ನೀನೊಬ್ಬಳೇ ಅಲ್ಲಿ ಹೇಗಿರ್ತೀಯಮ್ಮ ?"

"ಒಬ್ಬಳೇ ಎಲ್ಲಿರ್ತೀನಿ ಮಮ್ಮಿ ? ನಾನು ಹರ್ಷ ಸೇರಿ ಒಟ್ಟಿಗೆ ಮನೆ ಮಾಡಿಕೊಂಡು ಇರ್ತೀವೆ."

"ಲಹರಿ !"

"ಯಾಕಮ್ಮ ಕೂಗ್ತೀಯ ? ನಿನಗೆ ಇದೆಲ್ಲಾ ಅರ್ಥವಾಗಲ್ಲ. ಹೆಣ್ಣು ಮಕ್ಕಳಿಗೆ ಮದುವೆ ಮಾಡಿದ್ರೆ ಕರ್ತವ್ಯ ಮುಗಿತೂಂತ ನೀವು ಭಾವಿಸ್ತೀರ. ಮದುವೆ ಯಾಕೆ ಆಗತ್ಯ ಹೇಳು ಮನೆ ಮಾಡು, ಮಕ್ಕಳನ್ನು ನೋಡ್ಕೊ.

ಇದೇ ತಾನೆ ಸಂಸಾರ. ಅಂತಹ ಸಂಸಾರ ನಮಗೆ ಬೇಡ. ನಾವಿಬ್ಬರೂ ಒಬ್ಬರನ್ನೊಬ್ಬರು ಪ್ರೀತಿಸ್ತೇವೆ. ಒಟ್ಟಿಗೆ ಇರ್ತೇವೆ."

"ನೀನು ತಪ್ಪು ಮಾಡ್ತಿದ್ದೀಯ ಲಹರಿ. ಈಗ ನಿಮ್ಮಿಬ್ಬರ ನಡುವೆ ಇರೋದು ಪ್ರೀತಿಯಲ್ಲ, ಮೋಹ ! ಇದು ಶಾಶ್ವತ ಅಲ್ಲ. ನಿಮ್ಮ ನಡುವೆ ಪ್ರೀತಿಯ ಅನುಬಂಧ ಉಂಟಾಗಬೇಕಾದರೆ ನೀವು ಮದುವೆಯಾಗಲೇಬೇಕು."

"ಮದುವೆಯಿಂದ ಮನಸ್ಸುಗಳು ಹತ್ತಿರವಾಗುತ್ತೇಂತ ತಾನೆ ನೀನು ಹೇಳೋದು ? ನೀನು-ಡ್ಯಾಡಿ ಮದುವೆಯಾಗಿ 20 ವರ್ಷಗಳ ಮೇಲಾಗಿದೆಯಲ್ಲಾ, ನಿಮ್ಮ ಮನಸ್ಸುಗಳು ಏಕೆ ಹತ್ತಿರವಾಗಿಲ್ಲ ? ಡ್ಯಾಡಿ ಯಾಕೆ ಈಗಲೂ ಹೊಸ ಅನುಭವ ಬಯಸಿ ಹೊರಗಡೆಗೆ ಹೋಗ್ತಾರೆ ? ಮದುವೇಂತ ಆಗಿರೋದ್ರಿಂದ, ನಿನ್ನ ಕುತ್ತಿಗೆಗೆ ಡ್ಯಾಡಿ ತಾಳಿ ಕಟ್ಟಿರುವುದರಿಂದ, ನೀವು ಒಟ್ಟಿಗೆ ಇದ್ದೀರಿ ಅಲ್ವಾ ? ನಿಮ್ಮ ಮದುವೆ ಪ್ರೀತಿ-ಪ್ರೇಮದ ಅನುಬಂಧ ಇರುವಂತೆ ನನಗೆ ಭಾಸವಾಗ್ತಾನೇ ಇಲ್ಲ. ಡ್ಯಾಡಿ ಇಲ್ಲಿರೋದು ನಿನ್ನ ಹಣಕ್ಕೋಸ್ಕರ ಮಮ್ಮಿ. ನೀನೊಂದು ಪೆದ್ದು. ಆಸ್ತಿಯೆಲ್ಲಾ ನಿನ್ನ ಹೆಸರಿನಲ್ಲಿದ್ರೂ ಪೂರ್ವಕಾಲದ ಪುಟ್ಟ ತರಹ ಗಂಡನ ಮನೆ ದೇವಾಲಯ ಅಂದುಕೊಂಡು ಇಲ್ಲಿದ್ದೀಯ. ನಾನಾಗಿದ್ರೆ ಏನ್ಮಾಡ್ತಿದ್ದೆ ಗೊತ್ತಾ ?"

"ಏನ್ಮಾಡ್ತಿದ್ದೆ ?"

"ಡ್ಯಾಡೀನ್ನ ಮನೆ ಬಿಟ್ಟು ಓಡಿಸಿ ರಾಣಿ ತರಹ ಓಡಾಡಿಕೊಂಡಿರ್ತಿದ್ದೆ"

ಮಂಜುಳಾ ಮಾತಾಡಲಿಲ್ಲ. ಲಹರಿ ಅವಳ ಕೆನ್ನೆ ತಟ್ಟಿ ಹೇಳಿದಳು. "ನನ್ನ ಒಗ್ಗೆ ನೀನು ವರಿ ಮಾಡಬೇಡ ಮಮ್ಮಿ. ಬೇಕಿದ್ರೆ ನೀನು ಈ ದಿನವೇ ಸಿರಿಗೆ ಮದುವೆ ಮಾಡು ನನಗೇನೂ ಬೇಜಾರಿಲ್ಲ. ನನ್ನ ಮದುವೆಗೇಂತ ತೆಗೆದಿಟ್ಟಿರೋ ಹಣಾನ್ನ ನನಗೆ ಕೊಟ್ಟುಬಿಡು."

"ಅಷ್ಟೊಂದು ಹಣ ತೆಗೆದುಕೊಂಡು ಏನ್ಮಾಡ್ತೀಯ ?"

"ನಾನು, ಹರ್ಷ ಸೇರಿ ಒಂದು ಕಂಪ್ಯೂಟರ್ ಸೆಂಟರ್ ತೆಗೆಯುತ್ತೇವೆ. ಅಥವಾ ಇನ್ನೇನಾದ್ರೂ ಬಿಸಿನೆಸ್ ಪ್ರಾರಂಭಿಸ್ತೇವೆ."

"ಆಗಲಿ ಸಿರಿಗೆ ಮದುವೆಯಾದ ಮೇಲೆ ನಿನಗೆ ಹಣ ಕೊಡ್ತೇನೆ" ಎಂದಳು ಮಂಜುಳ.

ಮಗಳು ಹೊರಗೆ ಹೋದ ಮೇಲೆ ಮಂಜುಳ ಸೋಫಾಗೆ ಒರಗಿ ನಿಟ್ಟು ಸಿರು ಬಿಟ್ಟಳು. ಮಗಳು ಆಡಿದ ಮಾತುಗಳು ಅವಳ ಕಿವಿಯಲ್ಲಿ ಮತ್ತೆ ಮತ್ತೆ ಭೋರ್ಗರೆದು ಕಾದ ಸೀಸ ಸುರಿದ ಅನುಭವವಾಯಿತು'ಲಹರಿ ಯಾಕೆ ಹೀಗಾದಳು ? ವಿವಾಹವಿಲ್ಲದ ಸಂಬಂಧ ಅನೈತಿಕವೆಂದು ಅವಳಿಗೆ ತಿಳಿದಿಲ್ಲವೆ ? ಅಂತಹವರಿಗೆ ಈ ಸಮಾಜದಲ್ಲಿ ಯಾವ ಸ್ಥಾನವಿರುತ್ತದೆ ? ಇವಳು ಹೀಗಾದರೆ ಸಿರಿಯ ಗತಿಯೇನು ? ಅಪ್ಪ ನೋಡಿದ್ರೆ ಆ ರೀತಿ, ಹಿರಿಯ ಮಗಳು ನೋಡಿದ್ರೆ ಮದುವೆಯಿಲ್ಲದೆ ಯಾರ್ಯಾರ ಜೊತೇನೋ ಸುತ್ತುತ್ತಾ ಇದ್ದಾಳೆ ಇವಳು ಹೇಗೋ ? ಎಂದು ಮೂಗು ಮುರಿಯುದಿರುವರೆ ? ನಾನದಕ್ಕೆ ಅವಕಾಶ ಕೊಡಬಾರದು. ಗಂಡನ ಜೊತೆ ಈ ಬಗ್ಗೆ ಮಾತನಾಡಬೇಕು' ಎಂದು ಕೊಂಡಳು.

ರಾತ್ರಿಯ ಹೊತ್ತು ಮೋಹನ್ ಮನೆಗೆ ಬರುತ್ತಿದ್ದುದೇ ತಂಬಾ ತಡ ವಾಗಿ. ಆಗವನನ್ನು ಮಾತನಾಡಿಸಿದರೂ ಪ್ರಯೋಜನವಿರಲಿಲ್ಲ ಬೆಳಗ್ಗೆ ಎದ್ದಾಗ ಕುಡಿತದ ನಶೆ ಇಳಿದಿರುತ್ತಿತ್ತು. ಎಷ್ಟೋ ರಾತ್ರಿಗಳನ್ನು ಅವನು ಹೊರಗಡೆಯೇ ಕಳೆಯುತ್ತಿದ್ದ. ಒಮ್ಮೊಮ್ಮೆ ಹಲರಿ ಹೇಳುತ್ತಿದ್ದುದುಂಟು "ಮಮ್ಮಿ, ಈ ದಿನ ನಾನು ಹರ್ಷ ಎಂ.ಜಿ. ರೋಡಿನಲ್ಲಿ ಹೋಗ್ತಿದ್ದಾಗ ಡ್ಯಾಡೀನ್ನ ನೋಡ್ದೆ. ಅವರ ಜೊತೆ ಹೊಸಬಳು ಯಾವೋಳೋ ಇದ್ದಳು. ತುಂಬಾ ಚೆನ್ನಾಗಿದ್ದಳು. ಡ್ಯಾಡೀ ನನ್ನನ್ನು ನೋಡಿದರೂ ನೋಡದವರಂತೆ ಹೋದರು."

"ಮಮ್ಮಿ, ಇವತ್ತೇನಾಯ್ತು ಗೊತ್ತಾ ? ನಾನು ಹರ್ಷ ಹೋಟೆಲ್‌ಗೆ ಊಟಕ್ಕೆ ಹೋಗಿದ್ದೆವು. ಡ್ಯಾಡೀನೂ ಒಂದು ಕೋತೀನ್ನ ಕರೆದುಕೊಂಡು ಬಂದಿದ್ರು. ಅದು ಅದೆಷ್ಟು ಮೇಕಪ್ ಮಾಡ್ಕೊಂಡು ಬಂದಿತ್ತು ಗೊತ್ತಾ? ಥೂ, ನೀನು ಏನೇ ಅನ್ನು ಡ್ಯಾಡಿಗೆ ಕೊಂಚಾನೂ 'ಸೆನ್ಸ್ ಆಫ್ ಬ್ಯೂಟೀನೇ ಇಲ್ಲ.'

ಆಗೆಲ್ಲಾ ಮಂಜುಳಾಗೆ ನಾಚಿಕೆಯಿಂದ ತಲೆತಗ್ಗಿಸುವಂತಾಗುತ್ತಿತ್ತು. ಎದೆಯೆತ್ತರ ಬೆಳೆದು ನಿಂತಿರುವ ಮಕ್ಕಳಿದ್ದರೂ ಗಂಡನ 'ರಾಸಲೀಲೆ' ಸಾಗು ತ್ತಲೇ ಇದೆಯಲ್ಲಾ....ಎನ್ನಿಸುತ್ತಿತ್ತು.

"ನೀನ್ಯಾಕೆ ಅಷ್ಟೊಂದು ಬೇಜಾರು ಮಾಡಿಕೊಳ್ತೀಯ ಮಮ್ಮಿ !

ನಿನಗೆ ಕೊಂಚಾನೂ ಬುದ್ಧಿಯಿಲ್ಲ ನಾನೇ ನಿನ್ನ ಜಾಗದಲ್ಲಿದಿದ್ರೆ ಏನ್ಮಾಡ್ತಿದ್ದೆ ಗೊತ್ತಾ ?"

"ಏನ್ಮಾಡ್ತಿದ್ದೆ ?"

"ನಾನು ಬೇರೆ ಯಾರ ಜೊತೆಯಲ್ಲಾದ್ರೂ ತಿರುಗಾಡಿಕೊಂಡು ಆರಾಮ ವಾಗಿರ್ತಿದ್ದೆ. ನೀನು ಈ ವಯಸ್ಸಿನಲ್ಲೂ ಅದೆಷ್ಟು ಮುದ್ದಾಗಿದ್ದೀಯಾಂತ ನಿನಗೆ ಗೊತ್ತಾ ಮಮ್ಮೀ ? ನಿನಗೆ ನಮ್ಮಷ್ಟು ದೊಡ್ಡ ಮಕ್ಕಳಿದ್ದಾರೇಂತ ಹೇಳಕ್ಕೇ ಆಗಲ್ಲ."

"ಬಾಯ್ಮುಚ್ಚು, ಹೊಲಸು ಮಾತಾಡಬೇಡ" ಎಂದು ಮಂಜುಳಾ ಗದರಿಸುತ್ತಿದ್ದಳು.

ಮರುದಿನ ಬೆಳಗ್ಗೆ 9-30ರ ಹೊತ್ತಿಗೆ ತಾನೇ ಕಾಫಿ ತೆಗೆದುಕೊಂಡು 18 ವರ್ಷಗಳ ನಂತರ ಗಂಡನ ರೂಮ್‌ಗೆ ಕಾಲಿಟ್ಟಳು ಮಂಜುಳ. ಸಿರಿ, ಹುಟ್ಟಿದ ಮೇಲೆ ಅವರ ನಡುವೆ ಯಾವ ರೀತಿಯ ಸಂಬಂಧವೂ ಉಳಿದಿರಲಿಲ್ಲ. ಮೊದಮೊದಲು ಮಂಜುಳ ತನ್ನ ಹೀನ ಅದೃಷ್ಟಕ್ಕಾಗಿ ಕೊರಗುತ್ತಿದ್ದು ದುಂಟು. ಆದರೆ ಕ್ರಮೇಣ ಮಕ್ಕಳನ್ನು ನೋಡಿಕೊಂಡು ತನ್ನ ದುಃಖ ಮರೆತಿದ್ದಳು. ಆದರೆ ಲಹರಿ ಅಪ್ಪನ ಮಗಳಾಗಿ ಬೆಳೆದಿದ್ದರೆ ಸಿರಿ ಅಮ್ಮನ ಮಗಳಾಗಿ ಬೆಳೆದಿದ್ದಳು

ತಂದೆ ಕೊಸೆಯ ಹೆಸರಿಗೆ ಆಸ್ತಿಯನ್ನೆಲ್ಲಾ ಬರೆದ ಮೇಲೆ ಮೋಹನ ಹಲ್ಲುಕಿತ್ತಿದ ಹಾವಿನಂತಾಗಿದ್ದ. ಮಂಜುಳ ಯಾವ ಸಂದರ್ಭದಲ್ಲಿಯಾದರೂ ತನ್ನನ್ನು ಹೊರಗೆ ಹಾಕಬಹುದೆಂದು ಅವನಿಗೆ ಗೊತ್ತಿತ್ತು. ತನ್ನ ಸ್ನೇಹಿತರ ಮನೆಗಳಲ್ಲಿ ಮದುವೆ, ಮುಂಜಿ ಮುಂತಾದ ಸಮಾರಂಭಗಳಿದ್ದಾಗ ಹೆಂಡತಿ ಯನ್ನು ತನ್ನ ಜೊತೆ ಕರೆದೊಯ್ಯುತ್ತಿದ್ದ. ಅಲ್ಲಿ ತುಂಬಾ ಚೆನ್ನಾಗಿ ನಾಟಕ ವಾಡುತ್ತಿದ್ದ. ಮನೆಗೆ ಬಂದೊಡನೆ ಮತ್ತೆ ದೂರವಾಗುತ್ತಿದ್ದರು.

ಮಂಜುಳ ರೂಮು ಪ್ರವೇಶಿಸಿದಾಗ, ಮೋಹನನಿಗೆ ಆಗತಾನೆ ಎಚ್ಚರ ವಾಗಿತ್ತು. ಅವನು ರಾತ್ರಿಯ ಅನುಭವ ಮೆಲಕು ಹಾಕುತ್ತಾ ಮಲಗಿದ್ದ. ಹಿಂದಿನ ದಿನ ಸಾಯಂಕಾಲ ಅವನು 'ಕ್ಲಿನಿಕ್'ನಲ್ಲಿದ್ದಾಗ, ಅವನ ಗೆಳೆಯ ಧಾಸ್ ಬಂದು ಅವನನ್ನು ಕರೆದಿದ್ದ.

"ನನ್ನ ಪರಿಚಯದವರಿಗೊಬ್ಬರಿಗೆ ಹುಷಾರಿಲ್ಲ. ನಾನು ಎಂಟೂವರೆಗೆ ಬರ್ತೀನಿ. ಅವರ ಮನೆಗೆ ಹೋಗೋಣ."

"ಅವರನ್ನೇ ಇಲ್ಲಿಗೆ ಕರ್ಕೊಂಡು ಬರಬೇಕಿತ್ತು."

"ಅವರು ಬರುವಂತಿಲ್ಲ. ಅಷ್ಟರೊಳಗೆ ಪೇಷಂಟ್ಸ್‌ಗಳನ್ನು ಕಳುಹಿಸಿಬಿಡು."

"ಓ.ಕೆ" ಎಂದಿದ್ದ ಮೋಹನ್ ಹೇಳಿದ್ದಂತೆ ದಾಸ್ 8-30ಗೆ ಬಂದಿದ್ದ.

"ಅವರ ಮನೆ ಎಲ್ಲಿ ?"

"ಪೀಣ್ಯದ ಬಳಿ"

ಅತನೇ ಡ್ರೈವ್ ಮಾಡಿದ್ದ. ಕಾರು ದೊಡ್ಡ ಬಂಗಲೆಯೊಂದರ ಮುಂದೆ ನಿಂತಿತ್ತು.

"ಈ ಮನೆ ಒಬ್ಬ ಸೈಂಟಿಸ್ಟ್‌ದು. ಅವರ ಹೆಂಡತಿಗೆ ಹುಷಾರಿಲ್ಲ."

"ಐಸೀ."

"ಇದುವರೆಗೂ ಅಮೇರಿಕಾದಲ್ಲಿದ್ದು ಇಲ್ಲಿಗೆ ಬಂದು ಎರಡು ವರ್ಷಗಳಾದವು. ಮನೆಯ ಒಳಗಡೆಯೇ ಬಾರ್, ಲ್ಯಾಬ್ ಇದೆ. ಪಕ್ಕದಲ್ಲಿ ಸ್ವಿಮ್ಮಿಂಗ್ ಪೂಲ್ ಇದೆ."

ಹಾಲ್‌ನಲ್ಲಿ ಡಾ|| ವಿಜಯಸಾರಥಿಯ ಫೋಟೋ ಹಾಕಿ ಹಾರ ಹಾಕಲಾಗಿತ್ತು.

"ಈತ ಕಣ್ಮುಚ್ಚಿ ಒಂದು ವರ್ಷವಾಯ್ತು. ಮಿಸೆಸ್ ರಾವ್ ಮಾತ್ರ ಇಲ್ಲಿದ್ದಾರೆ."

"ಮಕ್ಕಳು ?"

"ಈ ದಂಪತಿಗಳಿಗೆ ಮಕ್ಕಳಿಲ್ಲ."

ಅಷ್ಟರಲ್ಲಿ ಆಕೆ ಹೊರಗೆ ಬಂದಿದ್ದರು. ಆ ನಗೆ, ನಿಲುವು ತನಗೆ ಚಿರ ಪರಿಚಿತ ಎನ್ನಿಸಿದಾಗ ಮೋಹನ ತಕ್ಷಣ ಕೇಳಿದ "ನೀವು...."

"ನೆನಪಾಯ್ತ ನಾನು ಮೋಹಿನಿ....."

"ಓ ಮೈಗಾಡ್" ಅವನು ತನ್ನ ಕಾಲೇಜಿನ ದಿನಗಳನ್ನು ನೆನಪು ಮಾಡಿಕೊಳ್ಳುತ್ತಾ ಉದ್ಗಾರವೆಳೆದಿದ್ದ.

"ಸಾರಿ ಮೋಹನ್. ನಮ್ಮ ಜೀವನದಲ್ಲಿ ಏನೇನೋ ಆಗಿಹೋಯ್ತು."

ಅವಳು ತನ್ನ ಜೊತೆ ಓಡಾಡಿ, ತನಗೆ ಕೈಕೊಟ್ಟು ಇದ್ದಕ್ಕಿದ್ದಂತೆ ಮದುವೆಯಾಗಿ ಅಮೇರಿಕಕ್ಕೆ ಹಾರಿದ್ದು ನೆನಪಾಗಿ ಮನದಲ್ಲಿ ಕಸಿವಿಸಿಯಾಗಿ ನುಡಿದ "ಹಳೆಯದೆಲ್ಲಾ ಈಗ್ಯಾಕೆ ?"

"ನನಗೆ ಯಾಕೋ ನಿನ್ನನ್ನು ನೋಡಬೇಕು ಅನ್ನಿಸಿತು. ಅದಕ್ಕೆ ಡಾ॥ ದಾಸ್ ಕೈಯಲ್ಲಿ ಹೇಳಿ ಕಳುಹಿಸಿದೆ. ಬನ್ನಿ ಊಟ ಮಾಡೋಣ."

ಅವನು ಮರುಮಾತಾಡದೆ ಊಟಕ್ಕೆ ಎದ್ದಿದ್ದ. ಅವಳು ಸೊಗಸಾದ ಊಟ ಸಿದ್ಧಮಾಡಿದ್ದಳು. ಪೂರಿ ಸಾಗು ಸೂಪ್ ಫ್ರೈಡ್ರೈಸ್ ಮೊಸರನ್ನ ಗೋಭೀ ಮಂಚೂರಿಯು-ಒಂದಕ್ಕಿಂತ ಒಂದು ರುಚಿಯಾಗಿದ್ದವು.

"ಮೋಹನ್, ನನಗೆ ನಿನ್ನ ಫೋನ್ ನಂಬರ್ ಕೊಡು. ನಿನ್ನನ್ನು ನೋಡಬೇಕು ಅನ್ನಿಸಿದಾಗ ಫೋನ್ ಮಾಡ್ತೀನಿ."

"ಯಾಕೆ, ಈ ಕೋಟೆ ಬಿಟ್ಟು ನೀನು ಹೊರಗೆ ಬರುವುದಿಲ್ಲವೇನು ?" ಅವನು ಕೇಳಿದ್ದ.

"ನೀನು ಕರೆದರೆ ಬರ್ತೀನಿ" ಅವಳ ಮಾತಿನಲ್ಲಿ ನೂರರ್ಥಗಳು ತುಂಬಿದ್ದವು. 42-43ರ ಅಂಚಿನಲ್ಲಿದ್ದರೂ ಅವಳು ಇಂದಿಗೂ ಅದೇ ವೈಮಾಟ ಹೊಂದಿದ್ದಳು. ಕಣ್ಣುಗಳಲ್ಲಿ ಅಂದಿನ ಮಿಂಚು ಇಲ್ಲದಿದ್ದರೂ, ನಗೆಯಲ್ಲಿ ಅದೇ ಸೆಳೆತವಿತ್ತು. ಅವಳು ಒಮ್ಮೆ 'ಇರು' ಎಂದಿದ್ದರೆ ಅವನು ಇದ್ದು ಬಿಡುತ್ತಿದ್ದನೇನೋ ? ಆದರೆ ಅವಳು ಬಾಯಿಮಾತಿಗೂ 'ಇರು' ಎಂದಿರಲಿಲ್ಲ.

ಅವನು ಅವಳ ಜೊತೆ ಕಳೆದಿದ್ದ ಕಾಲೇಜಿನ ದಿನಗಳನ್ನು ನೆನಪು ಮಾಡಿಕೊಳ್ಳುತ್ತಾ ಮಲಗಿದ್ದಾಗ ಮಂಜುಳ ಒಳಗೆ ಬಂದಿದ್ದಳು.

"ಓ ನೀನಾ ?" ಅವಳ ಧ್ವನಿಯಲ್ಲಿ ಆಶ್ಚರ್ಯವಿತ್ತು.

"ನಿಮ್ಮ ಜೊತೆ ಕೊಂಚ ಮಾತಾಡಬೇಕಿತ್ತು"

"ನಾವಿಬ್ಬರೂ ಒಟ್ಟಿಗೆ ಕುಳಿತು ಮಾತನಾಡುವಂತಹ ವಿಚಾರವೇನಿದೆ ? ನಾವಿಬ್ಬರೂ ಒಂದೇ ಮನೆಯಲ್ಲಿರೋದ್ರಿಂದ ಗಂಡ-ಹೆಂಡತಿ ಅಂತ ಅನ್ನಿಸಿಕೊಳ್ತಿದ್ದೇವೆಯೇ ಹೊರತು ಆ ಸಂಬಂಧ ಸತ್ತು ಎಷ್ಟೋ ವರ್ಷಗಳಾಗಿವೆ."

"ಒಂದೇ ಮನೆಯಲ್ಲಿರೋದ್ರಿಂದ್ರ ಮಾತ್ರ ನಾವು ಗಂಡ-ಹೆಂಡತಿ

ಅನ್ನಿಸಿಕೊಳ್ತಿಲ್ಲ. ನಮ್ಮ ಮಕ್ಕಳ ಬಯೋಡೇಟಾದಲ್ಲಿ ತಂದೆ-ತಾಯಿ ಅನ್ನುವ ಕಾಲಂಗಳಲ್ಲಿ ನಮ್ಮಿಬ್ಬರ ಹೆಸರುಗಳಿವೆ. ನೀವು ಸಮಾಜದ ಗಣ್ಯ ವ್ಯಕ್ತಿಗಳ ಮನೆಗಳಿಗೆ ಪಾರ್ಟಿಗೆ ಹೋದಾಗ ನಾನೇ ನಿಮ್ಮ ಜೊತೆ ಬರಬೇಕೇ ಹೊರತು, ನಮ್ಮ ಪ್ರೇಯಸಿಯರಲ್ಲ."

"ಬಾಯ್ಮುಚ್ಚು"

"ನಾನು ಇಷ್ಟು ದಿನ ಬಾಯ್ಮುಚ್ಚಿ ಕೂತಿದ್ದಕ್ಕೇ ಈಗ ಹೀಗಾಗಿರೋದು."

"ಏನಾಯ್ತೂಂತ ಹೀಗೆ ಒದ್ದಾಡ್ತಿದ್ದೀಯ ?"

"ಮದುವೆ ವಯಸ್ಸಿಗೆ ಬಂದಿರುವ ಮಗಳೊಬ್ಬಳು ನಿಮಗಿದ್ದಾಳೆ ಅನ್ನುವ ನೆನಪಾದರೂ ಇದೆಯಾ ?"

"ಓ....ಲಹರಿ ವಿಚಾರ ಹೇಳ್ತಿದ್ದೀಯಾ ?"

"ಹೌದು, ಅವಳು ಆ ಹರ್ಷನ ಜೊತೆ ಬೆಳಗ್ಗೆಯಿಂದ ರಾತ್ರಿಯವರೆಗೂ ಸುತ್ತಾಡ್ತಿದ್ದಾಳೆ."

"ಸುತ್ತಾಡಲಿ ಬಿಡು"

"ಅವಳು ಅವನನ್ನು ಪ್ರೀತಿಸ್ತಿದ್ದಾಳಂತೆ."

"ವೆರಿಗುಡ್-ವೆರಿಗುಡ್."

"ಆದರೆ ಅವಳು ಅವನನ್ನು ಮದುವೆಯಾಗಲ್ಲವಂತೆ."

"ಮತ್ತೇನು ಮಾಡ್ತಾಳಂತೆ ?"

"ಅವನ ಜೊತೆ ಇರ್‍ತಾಳಂತೆ. ಬಾಂಬೆಯಲ್ಲಿ ಕೆಲಸ ಸಿಕ್ಕಿದ್ರೆ ಅವನ ಜೊತೆಯಲ್ಲೇ ವಾಸ ಮಾಡ್ತಾಳಂತೆ. ಅವನ ಜೊತೆಯಲ್ಲೇ...."

"ಸಂಸಾರ ಮಾಡ್ತಾಳಂತೆ, ಅಷ್ಟೇ ತಾನೆ ?" ಅವನು ನಗುತ್ತಾ ಕೇಳಿದ.

"ಹೌದು, ಅವಳು ಹಾಗ್ಮಾಡಿದ್ರೆ ನಾವು ತಲೆ ಎತ್ತಿಕೊಂಡು ಬಾಳೋದು ಹೇಗೆ ?"

"ಅವಳು ನನ್ನ ಮಗಳು ಕಣೆ. ಅವಳಿಗೂ ನನ್ನ ಹಾಗೆ ಮದುವೆ, ಸಂಸಾರ, ಮಕ್ಕಳು ಯಾವುದೂ ಇಷ್ಟವಿಲ್ಲ. ನಾನೊಂದು ಪೆದ್ದು. ನಿನ್ನನ್ನು ಕಟ್ಟಿಕೊಂಡೆ. ಅವಳು ಜಾಣೆ. ಮದುವೆಯ ಬಂಧನವೇ ಬೇಡಾಂತಿದ್ದಾಳೆ."

"ನಿಮಗೂ, ಅವಳಿಗೂ ವ್ಯತ್ಯಾಸವಿಲ್ವಾ? ನೀವು ಗಂಡಸರು ಹೇಗಿದ್ರೂ, ಏನ್ಮಾಡಿದ್ರೂ ನಡೆಯುತ್ತೇರಿ. ಆದರೆ ಹೆಣ್ಣುಮಕ್ಕಳು ಹಾಗಿರಬಾರದೂರಿ. ಲಹರಿ ಹೀಗೆ ಮಾನ-ಮರ್ಯಾದೇನ್ನ ಗಾಳಿಗೆ ತೂರಿಬಿಟ್ಟರೆ. ನಾಳೆ ನಮ್ಮ ಸಿರೀನ್ನ ಯಾರ್ರೀ ಮದುವೆಯಾಗ್ತಾರೆ?"

"ಅದಕ್ಕೆ ನಾನೇನು ಮಾಡಲಿ?"

"ಈ ಭಾನುವಾರ ಕೊಂಚ ಬಿಡುವು ಮಾಡಿಕೊಳ್ಳಿ. ನಾನು-ನೀವು ಹರ್ಷನ ಮನೆಗೆ ಹೋಗಿ, ಅವನ ತಾಯಿ-ತಂದೆ ಹತ್ತಿರ ಮಾತನಾಡಿಕೊಂಡು ಬರೋಣ. ಅವರು ಮಗನಿಗೆ ಬುದ್ಧಿ ಹೇಳ್ತಾರೆ. ಹರ್ಷ ಹೇಳಿದ್ರೆ ಇವಳೂ ಮದುವೆಗೆ ಒಪ್ತಾಳೆ."

"ನಾನು ಅವರ ಮನೆಗೆ ಬರಬೇಕಾ?"

"ಯಾಕೆ ಬರಬಾರದು?"

"ನನ್ನ ಅಂತಸ್ತೇನು, ಅವನ ಅಂತಸ್ತೇನು? ನನ್ನಂತಹ ಪ್ರಸಿದ್ಧ ಡಾಕ್ಟರ್ ಹೋಗಿ ಆ ಜುಜುಬಿ ಗುಮಾಸ್ತನ್ನ ನಮ್ಮ ಮನೆ ಹೆಣ್ಣನ್ನ ತೆಗೆದುಕೊಂಡು ಋಣ್ಯಕಟ್ಟಿಕೊಳ್ಳಿ ಅಂತ ಬೇಡಿಕೊಳ್ಳಬೇಕೆ? ಇಂಪಾಸಿಬಲ್ ಅವಳು ಆರಾಮವಾಗಿ ಇರಲಿ ಬಿಡೆ, ಮದುವೆ ಮುಂಜಿ ಏನೂ ಬೇಡ."

"ಇದೇನ್ರಿ, ನೀವು ಹೀಗಂತೀರಾ?"

"ಇನ್ನೇನು ಹೇಳಲಿ? ಈ ಮದುವೆಗಳಿಂದ ಏನು ಪ್ರಯೋಜನ? ಫಾರಿನ್‌ನಲ್ಲಿ ಗಂಡು ಹೆಣ್ಣುಗಳು ಎಷ್ಟು ಸ್ವೇಚ್ಛೆಯಿಂದ ಇರ್ತಾರೆ ಗೊತ್ತಾ? ನೀನು ಅವಳ ಸ್ವಾತಂತ್ರ್ಯಕ್ಕೆ ಅಡ್ಡಿ ಬರಬೇಡ. ಅವಳು ಹೇಗೆ ಬೇಕೋ ಹಾಗಿರಲಿ ಬಿಡು."

ಗಂಡನ ಮಾತು ಕೇಳಿ ಮಂಜುಳ 'ಹೀಗೂ ಉಂಟೆ' ಎಂದುಕೊಂಡಳು. ಅವಳ ಮನಸ್ಸು ಕದಡಿದ ಕೊಳವಾಯ್ತು. ಇಂತಹ ಗಂಡ ಮಗಳು ಇರುವಾಗ ತಾನು ನೆಮ್ಮದಿಯಿಂದ ಇರುವುದು ಕನಸು-ಎನ್ನಿಸಿದಾಗ ಅವಳು ನಿಟ್ಟುಸಿರು ಬಿಡುತ್ತಾ ಮಹಡಿ ಇಳಿದಳು.

ಬೇಸಿಗೆ ರಜ ಶುರುವಾಗಿತ್ತು. ಅಮೃತಳಿಗೆ ಈಗ ಬಿಡುವು. ಅವಳು ಬಾಂಬೆಗೆ ಹೋಗಿ ಬರುವುದು ಎಂದುಕೊಂಡಿದ್ದಳು. ಆದರೆ ಅಶೋಕ, ಶೇಖರ ಇಬ್ಬರೂ ಆಸಕ್ತಿ ತೋರಿರಲಿಲ್ಲ. ಆದ್ದರಿಂದ ಒಂದು ವಾರದ ಮಟ್ಟಿಗೆ ತಾನೊಬ್ಬಳೇ ಮೈಸೂರಿಗೆ ಹೋಗಿ ಬರುವುದೆಂದುಕೊಂಡಳು.

ದೊಡ್ಡ ತಂಗಿಗೆ ಇಂಜಿನಿಯರ್ ಜೊತೆ ಮದುವೆಯಾಗಿ ಒಂದು ಗಂಡು, ಒಂದು ಹೆಣ್ಣು ಮಕ್ಕಳಿದ್ದರು. ದೊಡ್ಡ ತಮ್ಮ ಭಿಲಾಯ್‌ನಲ್ಲಿದ್ದ. ಅವನಿಗೆ ಮದುವೆಯಾಗಿತ್ತು, ಆದರೆ ಮಕ್ಕಳಿರಲಿಲ್ಲ. ಎರಡನೆಯ ತಮ್ಮ ಅಮೇರಿಕಾದಲ್ಲಿದ್ದ. ಅಲ್ಲಿಯ ಹುಡುಗಿಯೊಬ್ಬಳನ್ನು ಮದುವೆಯಾಗಿದ್ದ. ಕೊನೆಯವಳು ತಾನು ಪ್ರೀತಿಸಿದ್ದ ಬೆಂಗಾಲಿಯೊಬ್ಬನನ್ನು ಮದುವೆಯಾಗಿದ್ದಳು. ಆತ C.F.T.R.I ನಲ್ಲಿ ಸೈಂಟಿಸ್ಟ್ ಆಗಿದ್ದರು. ಅವಳಿಗೆ ಹೆಣ್ಣು ಮಕ್ಕಳಿದ್ದರು. ಅವಳು ಬ್ಯಾಂಕ್‌ನಲ್ಲಿ ಕೆಲಸದಲ್ಲಿದ್ದಳು. ತಾಯಿ ತಂದೆ ಇನ್ನೂ ಅದೇ ಬಾಡಿಗೆ ಮನೆಯಲ್ಲಿದ್ದರು. ಭಿಲಾಯ್‌ನಲ್ಲಿದ್ದ ಮಗ ಅವರನ್ನು ಕರೆದೊಯ್ಯಲು ಸಿದ್ಧನಾಗಿದ್ದ. ಆದರೆ ಇವರು ಹೋಗಲು ಸಿದ್ಧರಿರಲಿಲ್ಲ. ಕೊನೆಯ ತಂಗಿಯೇ ಈಗ ತಾಯಿ-ತಂದೆಯರ ಯೋಗ ಕ್ಷೇಮದ ಹೊಣೆ ಹೊತ್ತಿದ್ದಳು.

ನಾಲ್ಕು ದಿನ ಕಳೆಯುವಷ್ಟರಲ್ಲಿ ಅಮೃತಾಗೆ ಮೈಸೂರು ಬೇಸರ ತಂದಿತು.

"ನಿನ್ನ ಮಗ ಏನ್ಮಾಡ್ತಿದ್ದಾನೆ ? ಬಿ.ಇ. ಮುಗೀತಲ್ವಾ ? ಎಂ.ಇ.ಗೆ ಯಾಕೆ ಸೇರಿಸಲಿಲ್ಲ ?" ಗೊತ್ತಿದ್ದೋ ಗೊತ್ತಿಲ್ಲದೆಯೋ ಎಲ್ಲರೂ ಕೇಳಿದ್ದರು. ತನ್ನ ಮಗ ಇನ್ನೂ ಬಿ.ಇ. ಮುಗಿಸೇ ಇಲ್ಲವೆಂದು ಹೇಳಲು ಅಮೃತಾಗೆ ನಾಚಿಕೆಯಾಗಿತ್ತು.

"ರಾಜು ಅಮೇರಿಕಾದಲ್ಲಿದ್ದಾನಲ್ಲಾ-ಅವನು ಮನಸ್ಸು ಮಾಡಿದರೆ ನಿನ್ನ ಮಗನ್ನ ಸ್ಪಾನ್ಸರ್ ಮಾಡಬಹುದು. ವಿಚಾರಿಸು" ಎಂದಿದ್ದಳು ತಂಗಿ.

"ಅಶೋಕನ್ನ ಫಾರಿನ್‌ಗೆ ಕಳುಹಿಸುವುದಾದರೆ, ಮದುವೆ ಮಾಡಿ ಕಳುಹಿಸು. ಈಗಿನ ಕಾಲದಲ್ಲಿ ಯಾರನ್ನೂ ನಂಬಕ್ಕಾಗಲ್ಲ" ಎಂದಿದ್ದರು ತಾಯಿ.

ಅವಳಿಗೆ ಅವರೆಲ್ಲರ ಮಾತು ಕೇಳಿ ತಲೆ ಚಚ್ಚಿಕೊಳ್ಳುವಂತಾಗಿತ್ತು.

ತನ್ನಂತಹ ಬುದ್ಧಿವಂತೆಯ ಮಗ ಇನ್ನೂ ಬಿ ಇ. ಪಾಸು ಮಾಡಿಲ್ಲ ಎಂದರೆ ಅವಮಾನ ಎಂದುಕೊಂಡು ಮಗನದು ಬಿ ಇ. ಆಗಿದೆಯೆಂದು ಎಲ್ಲರಿಗೂ ಪತ್ರ ಬರೆದಿದ್ದಳು.

"ನಿನ್ಮಗ ಎಲ್ಲಮ್ಮ ಕೆಲ್ಸ ಮಾಡ್ತಿದ್ದಾನೆ !" ತಂದೆ ಕೇಳಿದ್ದರು.

"ಬಿಸಿನೆಸ್ ಮಾಡ್ತೀನೀಂತ ಓಡಾಡ್ತಿದ್ದಾನೆ ?" ಎಂದು ಮತ್ತೊಂದು ಸುಳ್ಳಿನ ಮೂಟೆ ಉರುಳಿಸಿದ್ದಳು. ಅವಳಿಗೆ ಮೈಸೂರು ಬೇಸರವೆನ್ನಿಸಿ, ಬೆಂಗಳೂರಿಗೆ ಹಿಂದಿರುಗಿದ್ದಳು. ತಂಗಿಯರನ್ನು ಬಾಯಿಮಾತಿಗೂ 'ಬೆಂಗಳೂರಿಗೆ ಬನ್ನಿ' ಎಂದು ಕರೆದಿರಲಿಲ್ಲ. ದೊಡ್ಡ ತಂಗಿ ತಾಯಿಯ ಬಳಿ ಹೇಳುವುದು ಅವಳ ಕಿವಿಗೆ ಬಿದ್ದಿತ್ತು.

"ಹುಡುಗರು ಬೆಂಗಳೂರಿಗೆ ಹೋಗೋಣಾಂತಿದ್ದಾರಮ್ಮ. ನನಗೆ ಹೋಗಕ್ಕೇ ಇಷ್ಟವಿಲ್ಲ ಅಲ್ಲಿಗೆ ಹೋದ್ರೆ ಅಕ್ಕನ ಮನೆಯಲ್ಲೇ ಇಳಿದುಕೊಳ್ಳಬೇಕು. ಅವರ್ಮನೆಗೆ ಹೋಗಕ್ಕೇ ಬೇಜಾರಾಗತ್ತಮ್ಮ. ನಮ್ಮ ಮದುವೆಯಾದ ಹೊಸದರಲ್ಲಿ ಹೋಗಿದ್ದಾಗ ಆದ ಅನುಭವ ಮರೆಯುವಂತೆಯೇ ಇಲ್ಲ. ಯಾರೇ ಮನೆಗೆ ಹೋದರೂ ಇವಳು ಮಹಾರಾಣಿ ತರಹ ಇರ್ತಾಳೆ. ಪಾಪ ಆ ವಯಸ್ಸಾದ ಅತ್ತೆ, ಭಾವ ಎಲ್ಲಾ ಕೆಲಸ ಮಾಡ್ತಾರೆ. ಭಾವ ಆಗಿದ್ದಕ್ಕೆ ಇವಳ ಜೊತೆ ಸಂಸಾರ ಮಾಡಿಕೊಂಡಿದ್ದಾರೆ. ಇನ್ಯಾರಾದ್ರೂ ಆಗಿದ್ದಿದ್ರೆ ಇಷ್ಟು ಹೊತ್ತಿಗೆ ಓಡಿಹೋಗ್ತಿದ್ರು."

"ಅವಳು ಇಲ್ಲಿದ್ದಾಗ ಯಾವ ಕೆಲಸ ಮಾಡ್ತಿದ್ಳು ರಾಧ ? ಅವಳು ಸಂಪಾದಿಸಕ್ಕೆ ಶುರು ಮಾಡಿದ ಮೇಲೆ ತಿಂಡಿ-ಊಟ ಮಾಡಿದ ತಟ್ಟೆ ಕೂಡ ತೆಗೆಯುತ್ತಿರಲಿಲ್ಲ. ವಯಸ್ಸಾದ ನನ್ನ ಕೈಲೇ ಎಂಜಲು ತಟ್ಟೆ ತೊಳೆಸೋಳು ತಾಯಿಯಾದರೇನು, ಅತ್ತೆಯಾದರೇನು ಚಾಕರಿ ಮಾಡಕ್ಕೆ ?"

"ನಮ್ಮನೆಯಂತಹ ಮನೆ ಅವಳಿಗೆ ಸಿಗಬೇಕಿತ್ತು. ಆಗ ಗೊತ್ತಾಗೋದು ಇವಳ ಬಂಡವಾಳ....."

"ಯಾಕಮ್ಮ ನೀನು ಸುಖವಾಗಿದ್ದೀಯೋ ಇಲ್ವೋ ?" ತಾಯಿ ಆತಂಕದಿಂದ ಪ್ರಶ್ನಿಸಿದ್ದರು. ತಂಗಿಯ ಉತ್ತರ ಕೇಳಲು ಅವಳ ಕಿವಿಗಳು ಕಾತುರಗೊಂಡಿದ್ದವು.

"ಛಿ, ಛಿ, ನನ್ನ ಸುಖಕ್ಕೇನಮ್ಮಾ ಕಡಮೆಯಾಗಿರೋದು ? ನಮ್ಮತ್ತೆ

ತುಂಬಾ ಒಳ್ಳೆಯವರು. ಅವರಿಗೂ ವಯಸ್ಸಾಗಿರೋದ್ರಿಂದ ನಾನೇ ಅವರನ್ನು ಯಾವ ಕೆಲಸಕ್ಕೂ ಬಿಡಲ್ಲ ಆದ್ರೆ ನಮ್ಮನೆಗೆ ಹೋಗಿ ಬರುವವರು ತುಂಬಾ ಜಾಸ್ತಿ. ಅತ್ತಿಗೆ-ನಾದಿನಿಯರು, ಅವರು-ಇವರು ಬರ್ತಾನೇ ಇರ್ತಾರೆ. ನಾನು ಯಾವ ಕಾರಣಕ್ಕೂ ಮುಖ ಸೊಟ್ಟಗೆ ಮಾಡುವಂತಿಲ್ಲ. ನಿನ್ನ ಅಳಿಯಂಗೆ ಸ್ನೇಹಿತರು ಹೆಚ್ಚು. ಆದರೆ ಯಾರೂ ನನ್ನ ಸ್ವಾತಂತ್ರ್ಯಕ್ಕೆ ಅಡ್ಡ ಬಂದಿಲ್ಲ. ಅವರೆಲ್ಲರಿಗೂ ನನ್ನನ್ನು ಕಂಡ್ರೆ ತುಂಬಾ ಇಷ್ಟ."

"ಸುಕನ್ಯ ಬಂದಾಗಲೆಲ್ಲಾ ಹೇಳ್ತಾನೇ ಇರ್ತಾಳಮ್ಮ. ಒಟ್ಟಿನಲ್ಲಿ ನೀನು ಪುಣ್ಯ ಮಾಡಿದ್ದೆ."

"ಚಂದ್ರಿಕಾಗೆ ಎಲ್ಲಾದ್ರೂ ನೋಡಿದ್ದೀಯಾಂತ. ಯಾವುದಾದರೂ ವರ ಇದ್ರೆ ಹೇಳು. ನಾವುಗಳೇ ನಿಂತು ಮದುವೆ ಮಾಡೋಣಾಂತ ಒಂದು ಸಲ ಅಕ್ಕನಿಗೆ ಕಾಗದ ಬರೆದಿದ್ದೆನಮ್ಮ. ಅಕ್ಕ ಉತ್ತರಾನೇ ಕೊಡಲಿಲ್ಲ.

"ಹೋಗಲಿ ಬಿಡು. ಈಗ ಚಂದ್ರಾಗೇನು ಕಡಿಮೆಯಾಗಿರೋದು ?" ಎಂದಿದ್ದರು ತಾಯಿ.

ಅಮೃತಾಗೆ ತಾನು ಅವರೆಲ್ಲರಿಗಿಂತ 'ಬೇರೆ' ಎನ್ನುವ ಭಾವನೆ ಮೂಡಿ ಮರುದಿನವೇ ಊರಿಗೆ ಹಿಂದಿರುಗಿದ್ದಳು. ಅವಳು ಬೆಂಗಳೂರಿಗೆ ಬಂದಾಗ ಅಲೋಕ ಊರನಲ್ಲಿರಲಿಲ್ಲ

"ಅಲೋಕ ಎಲ್ಲಿ ?"

"ನನಗೇನು ಗೊತ್ತು, ಅವನ ವಿಚಾರ ?"

"ಅವನು ನಿಮ್ಮ ಹತ್ತಿರ ಏನೂ ಹೇಳಲಿಲ್ವಾ ?"

"ಅವನು ಯಾವತ್ತು ತಾನೆ ಏನಾದ್ರೂ ಹೇಳಿದ್ದಾನೆ ?" ಪ್ರಶ್ನೆಗೆ ಪ್ರಶ್ನೆಯೇ ಉತ್ತರವಾಗಿತ್ತು. ಅವಳು ಅವನ ಸ್ನೇಹಿತರಿಗೆ ಫೋನ್ ಮಾಡಿ ವಿಚಾರಿಸಿದಳು. ಅಲೋಕನ ಆತ್ಮೀಯ ಗೆಳೆಯ ವಿಕ್ಕಿ ಹೇಳಿದ "ರಾಕೇಶ್, ಅರ್ಜುನ್, ಅಲೋಕ, ಮಧು, ರಾಬರ್ಟ್ ಎಲ್ಲರೂ ಗೋವಾಗೆ ಹೋಗಿದ್ದಾರಂತೆ."

"ನೀನ್ಯಾಕೆ ಹೋಗಲಿಲ್ಲ ?"

"ನಮ್ಮ ತಾಯಿ ಒಪ್ಪಲಿಲ್ಲ."

ಅವಳಿಗೆ ಆಶ್ಚರ್ಯವಾಗಿತ್ತು. ಗೋವಾಗೆ ಹೋಗಲು ಅಲೋಕನ ಬಳಿ

ಅಷ್ಟೊಂದು ಹಣ ಎಲ್ಲಿತ್ತು ? ಎಂಬ ಪ್ರಶ್ನೆಯೂ ಉದ್ಭವಿಸಿತ್ತು. ಅಂದು ಸಾಯಂಕಾಲ ಅವಳು ಗಂಡನನ್ನು ಕೇಳಿದ್ದಳು.

"ನೀವೇನಾದ್ರೂ ಅಲೋಕನಿಗೆ ಹಣ ಕೊಟ್ಟಿದ್ರಾ ?"

"ನಾನು ಬರಿಗೈ ಪುರಂದರದಾಸಾಂತ ಅವನಿಗೆ ಗೊತ್ತು ಕಣೆ. ಅದಕ್ಕೆ ಅವನು ನನ್ನನ್ನು ಏನೂ ಕೇಳಲ್ಲ."

ಅವಳು ಮಾತಾಡಲಿಲ್ಲ.

ನಾಲ್ಕು ದಿನ ಕಳೆದರೂ ಮಗ ಮನೆಗೆ ಬರದಿದ್ದಾಗ ಅವಳೆದೆ ನಗಾರಿಯಾಯ್ತು. ಗಂಡ ಏನೂ ಆಗದವನಂತೆ ತಿರುಗಾಡಿಕೊಂಡಿರುವುದು ಅವಳ ಕಣ್ಣು ಕುಕ್ಕಿತು.

"ಏನ್ರಿ, ನಿಮಗೆ ಮಗನ ಮೇಲೆ ಪ್ರೀತೀನೇ ಇಲ್ಲವೇನ್ರಿ ? ಅಲೋಕನ ಬಗ್ಗೆ ಏನೂ ತಿಳಿಯದಿದ್ದರೂ ಆರಾಮವಾಗಿದ್ದೀರಿ" ಬೇಕೆಂದೇ ಕೆಣಕಿದಳು ಅವನನ್ನು. ಮಗ ಗೋವೆಗೆ ಹೋಗಿರುವ ವಿಚಾರ ತಿಳಿಸಲಿಲ್ಲ.

"ನಾನು ಮತ್ತೇನು ಮಾಡಲಿ ಅಮೃತ ? ನೀನಾಗಲಿ, ನಿನ್ನ ಮಗನಾಗಲಿ ನನ್ನನ್ನು ಈ ಮನೇಲಿ ಮನುಷ್ಯಾಂತ ಪರಿಗಣಿಸಿದ್ದೀರಾ ? ಏನಾದರೂ ತರಬೇಕಾದರೆ ನನ್ನ ಅಭಿಪ್ರಾಯ ಕೇಳ್ತೀರಾ ? ಒಂದೇ ಛಾವಣಿಯ ಕೆಳಗೆ ಇದ್ದರೂ ನಾವು ಅಪರಿಚಿತರಂತೆ ಇದ್ದೇವೆ ನಿಮ್ಮ ಬಗ್ಗೆ ಈಗ ನನಗೆ ಯಾವ ಭಾವನೆಯೂ ಇಲ್ಲ. ಪ್ರೀತಿ–ವಿಶ್ವಾಸ ಕೊಟ್ಟು ಪಡೆಯಬೇಕೆ ಹೊರತು, ಅದು ಏಕಮುಖವಾಗಿದ್ದರೆ ಏನೂ ಪ್ರಯೋಜನವಿಲ್ಲ."

"ಈ ಮನೆಯಲ್ಲಿ ನಿಮಗೇನು ಕಡಿಮೆಯಾಗಿರೋದು?"

"ನಿನಗೇನು ಕಡಿಮೆಯಾಗಿದೆಯೋ ಅದೇ ನನಗೂ ಕಡಿಮೆಯಾಗಿದೆ."

"ನನಗೇನು ಕಡಿಮೆಯಾಗಿದೆ ?"

"ಇಷ್ಟೆಲ್ಲಾ ಇದ್ದೂ ನೀನು ಸುಖವಾಗಿದ್ದೀಯ ? ನೆಮ್ಮದಿಯಿಂದ ಇದ್ದೀಯಾ ?"

ಅವಳು ಭುಜ ಕುಣಿಸಿದಳು.

"ಹೋಗಲಿ ಬಿಡು. ಅಲೋಕ ಎಲ್ಲಿಗೆ ಹೋಗಿದ್ದಾನೆ ?"

"ಅವನು ಗೋವಾಕ್ಕೆ ಹೋಗಿದ್ದಾನಂತೆ. ಅವನಿಗೆ ಯಾರು ಹಣ ಕೊಟ್ಟರು ?"

ಶೇಖರ್ ಉತ್ತರ ಕೊಡಲಿಲ್ಲ; ಅವಳು ತನ್ನ ಗಾಡ್ರೇಜ್ ತೆಗೆದಾಗ ಅವಳ ಪ್ರಶ್ನೆಗೆ ಉತ್ತರ ಸಿಕ್ಕಿತು. ಅವಳ ಎರಡೆಳೆಯ ಹವಳ-ಮುತ್ತಿನ ಸರ ಕಾಣಲಿಲ್ಲ.

"ರೀ; ನನ್ನ ಸರ ಕಾಣ್ತಾ ಇಲ್ಲ. ಅಶೋಕ ತೆಗೆದುಕೊಂಡುಹೋದಾಂತ ಕಾಣತ್ತೆ."

ಶೇಖರ್‌ಗೆ ಅವಳ ಮಾತು ಕೇಳಿ ಆಶ್ಚರ್ಯವಾಗಲಿಲ್ಲ. ಮಗ ಹಣ ಕ್ಕಾಗಿ ಏನಾದರೂ ಮಾಡುತ್ತಾನೆಂದು ಅವನಿಗೆ ಗೊತ್ತಿತ್ತು.

"ಒಂದೊಂದು ಸಲ ಅವನು ಸಾಲ ಮಾಡ್ಕೊಂಡು ಹೋಗಿರಬಹುದು ಅನ್ನಿಸತ್ತೆ. ಚಿನ್ನಿ ಯಾಕೆ ಸರ ತೊಗೊಂಡಿರಬಾರದು?"

"ಇರೋರು ಮೂವರಲ್ಲಿ ಕದ್ದವರು ಯಾರೂಂತ? ನೀನು ಎಲ್ಲರ ಮೇಲೂ ಅನುಮಾನ ಪಡಬೇಡ. ಆ ಹುಡುಗಿ ಅಂತಹವಳಲ್ಲ. ನೀನು ಗಾಡ್ರೇಜ್ ಬೀರು ಸರಿಯಾಗಿ ಲಾಕ್ ಮಾಡಿ ಹೋಗದಿದ್ದುದು ನಿನ್ನ ತಪ್ಪು.

"ನೀವು ಮನೆಯಲ್ಲಿದ್ದವರು ನೋಡಿಕೊಳ್ಳಬೇಕಾಗಿತ್ತು."

"ನಾನು ನಿನ್ನ ರೂಂಗೆ ಯಾಕೆ ಹೋಗಲಿ? ಬೆಲೆ ಬಾಳುವ ಸಾಮಾನು ಗಳನ್ನು ಜೋಪಾನವಾಗಿಟ್ಟುಕೊಳ್ಳಬೇಕೂಂತ ಬ್ಯಾಂಕ್‌ನಲ್ಲಿ ಲಾಕರ್ ತೊಗೊಂಡಿದ್ದೀಯಲ್ಲಾ-ಅದರಲ್ಲಿಟ್ಟು ಹೋಗಬೇಕಿತ್ತು."

ಅಮೃತ ಉತ್ತರ ಕೊಡದೆ ಬಾಯಿ ಮುಚ್ಚಿಕೊಂಡಳು. ತನ್ನ ಮಗನ ಕಲ್ಯಾಣಗುಣಗಳು ಒಂದೊಂದೇ ಬೆಳಕಿಗೆ ಬರುತ್ತಿರುವಂತೆ ಅವಳಿಗೆ ಭಾಸ ವಾಗಿತ್ತು.

ಒಂದು ವಾರದವರೆಗೂ ಏನೂ ನಡೆಯಲಿಲ್ಲ. ಅವಳು ಆರಾಮವಾಗಿ ಟಿ.ವಿ. ನೋಡಿಕೊಂಡು, ಕಾದಂಬರಿಗಳನ್ನು ಓದಿಕೊಂಡು ಕಾಲ ಕಳೆದಳು. ತಂಗಿ ತಾಯಿಯ ಬಳಿ ಹೇಳಿದ್ದ ಮಾತುಗಳ ಮನದಲ್ಲಿ ಹಸಿಯಾಗಿದ್ದುದ ರಿಂದ ಹಾಗೂ ಬಿಡುವು ಇದ್ದುದರಿಂದ ತಾನೇ ಅಡಿಗೆಮನೆಯ ಚಾರ್ಜ್ ತೆಗೆದುಕೊಂಡಳು. ಕಾಲೇಜಿಗೆ ರಜವಿದ್ದುದರಿಂದ ಹಾಗೂ ಅವಳು ಹೆಚ್ಚಾಗಿ ಮನೆಯಲ್ಲೇ ಇರುತ್ತಿದ್ದುದರಿಂದ, ಅವಳಿಗೆ ಗಂಡನ ದಿನಚರಿ ಗಮನಿಸಲು ಅವಕಾಶವಾಯಿತು.

ಶೇಖರ್ ಬೆಳಗ್ಗೆ ಐದು ಗಂಟೆಗೇ ಎದ್ದು ಅರ್ಧ ಗಂಟೆ ವ್ಯಾಯಾಮ ಮಾಡುತ್ತಿದ್ದ. ನಂತರ ಐದೂವರೆಯ ಹೊತ್ತಿಗೆ ವಾಕಿಂಗ್‌ಗೆ ಹೊರಟು ಆರೂವರೆಗೆ ವಾಪಸ್ಸಾಗುತ್ತಿದ್ದ. ಮನೆಗೆ ಬಂದೊಡನೆ ಬಾಯ್ಲರ್ ಸ್ವಿಚ್ ಹಾಕಿ ಕಾಫಿ ಮಾಡುತ್ತಿದ್ದ. ಸ್ನಾನ ಮಾಡಿ ಒಂದು ಗಂಟೆ ಪೇಪರ್ ಓದು ತ್ತಿದ್ದ. ಅಡಿಗೆಯ ಕೆಲಸ ತಪ್ಪಿದ್ದರಿಂದ ಕೋಟಕ್ಕೆ ನೀರು ಹಾಯಿಸುತ್ತಿದ್ದ. ಒಂಭತ್ತೂ ಕಾಲಿಗೆ ಊಟಕ್ಕೆ ಕುಳಿತುಕೊಳ್ಳುತ್ತಿದ್ದ. ಹತ್ತು ಗಂಟೆಗೆ ಆಫೀಸ್‌ಗೆ ಹೊರಡುತ್ತಿದ್ದ. ಸ್ನಾನವಾದ ಮೇಲೆ ಅರ್ಧ ಗಂಟೆ ದೇವರ ಪೂಜೆ ಮಾಡುತ್ತಿದ್ದ.

ಸಾಯಂಕಾಲ ಆಫೀಸಿನಿಂದ ಬಂದೊಡನೆ ಕೈಕಾಲು ತೊಳೆದು ಕಾಫಿ ಕುಡಿಯುತ್ತಿದ್ದ. ಆಮೇಲೆ ಬಟ್ಟೆ ಬದಲಾಯಿಸಿ ಶುಭ್ರವಾದ ಬಿಳಿ ಪಂಚೆ, ಜುಬ್ಬ ಧರಿಸಿ ಮತ್ತೆ ಹೊರಗೆ ಹೊರಡುತ್ತಿದ್ದ. ಅವನು ಹೊರಡುವ ವೇಳೆಗೆ ಆರೂವರೆಯಾಗಿರುತ್ತಿತ್ತು. ಆಗಲೇ ದೇವರಿಗೆ ದೀಪ ಹಚ್ಚುತ್ತಿದ್ದ. ವಾಪಸ್ಸು ಬರುವಾಗ ಹೂವು, ಹಣ್ಣು, ತರಕಾರಿ ತರುತ್ತಿದ್ದ. ನಂತರ ಸಾಯಂಕಾಲದ ಪೇಪರ್ ಓದುತ್ತಿದ್ದ. 10-30ರವರೆಗೂ ಟಿ.ವಿ. ನೋಡಿ ಮಲಗುತ್ತಿದ್ದ. ಅವನ ಮುಖದಲ್ಲಿ ಒಂದು ರೀತಿಯ ಶಾಂತಿ ನೆಲೆಸಿರುವಂತೆ ಅವಳಿಗೆ ಭಾಸ ವಾಗುತ್ತಿತ್ತು. ಸಾಮಾನ್ಯವಾಗಿ ಸಾಯಂಕಾಲಗಳಲ್ಲಿ ಅವನು ದೇವ ಸ್ಥಾನಕ್ಕೋ, ಉಪನ್ಯಾಸ ಕೇಳುವುದಕ್ಕೋ ಹೋಗುತ್ತಿದ್ದ. ಸೋಮವಾರ ಈಶ್ವರನ ದೇವಾಲಯಕ್ಕೆ, ಗುರುವಾರ ರಾಘವೇಂದ್ರ ಮಠಕ್ಕೆ ಶನಿವಾರ ಆಂಜನೇಯನ ಗುಡಿ, ಭಾನುವಾರ ರಾಮಕೃಷ್ಣಾಶ್ರಮಕ್ಕೆ ಹೋಗುವ ಪರಿ ಪಾಠ ಇಟ್ಟುಕೊಂಡಿದ್ದ. ಗಂಡನಂತೆ ತನಗೆ ಶಾಂತಿ, ನೆಮ್ಮದಿಗಳಿಂದ ಇರಲು ಸಾಧ್ಯವಾಗುತ್ತಿಲ್ಲವಲ್ಲಾ ಎಂದು ಒದ್ದಾಡುತ್ತಿದ್ದಳು. 'ಅಲೋಕ ಇವರಿ ಗೇನೂ ಅನ್ನಿಸಲ್ಲವೆ ? ಅವನ ಬಗ್ಗೆ ಇವರಿಗೆ ಚಿಂತೆಯೇ ಇಲ್ಲವೆ ?' ಎಂದುಕೊಳ್ಳು ತ್ತಿದ್ದಳು.

ಶೇಖರ ಹೆಂಡತಿ ಭಾವಿಸಿದಂತೆ ಖಂಡಿತಾ ನೆಮ್ಮದಿಯಿಂದಿರಲಿಲ್ಲ. ಅವ ನನ್ನು ಆಗಾಗ್ಗೆ ತಾಯಿಯ ಯೋಚನೆ ಕಾಡುತ್ತಿತ್ತು. ಶಂಕರ ದಾವಣಗೆರೆಗೆ ಹೊರಟುಹೋಗಿದ್ದ, ಅವನ ಹೆಂಡತಿ ವಸಂತಳಿಗೆ ಇನ್ನೂ ವರ್ಗ ಸಿಕ್ಕಿರಲಿಲ್ಲ.

ಅದಕ್ಕಾಗಿ ಸರೋಜಮ್ಮ ಅಲ್ಲೇ ಇದ್ದರು. ಇವತ್ತಲ್ಲ ನಾಳೆ ಅವರನ್ನು ಶಂಕರ ಅಣ್ಣನ ಮನೆಗೆ ಕರೆತಂದು ಬಿಡುವುದರಲ್ಲಿ ಸಂದೇಹವಿರಲಿಲ್ಲ. ಹೆಂಡತಿ ತನ್ನ ತಾಯಿಯನ್ನು ಇಟ್ಟುಕೊಳ್ಳಲು ಸಿದ್ಧಳಿಲ್ಲ ಎಂದು ಅರಿವಾದ ಮೇಲೆ ಅವನು ಮುಂದೇನು ಗತಿ ? ಎಂಬ ಚಿಂತೆಯಲ್ಲಿ ಮುಳುಗಿದ್ದ.

ಅಲೋಕನ ಚಿಂತೆಯೂ ಶೇಖರನನ್ನು ಕಾಡುತ್ತಿತ್ತು. ಮಗ ಕೇಳಿದಷ್ಟು ಹಣ ಕೊಟ್ಟು ಹೆಂಡತಿ ಅತನನ್ನು ಹಾಳು ಮಾಡಿದ್ದಾಳೆಂದು ಅವನಿಗೆ ಗೊತ್ತಿತ್ತು. ಆದರೆ ಯಾರಿಗೆ ಬುದ್ಧಿ ಹೇಳಲು ಸಾಧ್ಯ ? ಹಣ ಕೊಡಬೇಡವೆಂದು ಹೆಂಡತಿಗೆ ಹೇಳಲು ಸಾಧ್ಯವೆ ? ಅಥವಾ ನೀನು ಮಾಡುತ್ತಿರುವುದು ತಪ್ಪೆಂದು ಮಗನಿಗೆ ಹೇಳಲು ಸಾಧ್ಯವೆ ? ನನಗೀಗ ಬೆಲೆ ಕೊಡುವವರು ಯಾರು ? ಹೆಂಡತಿಯ ದೃಷ್ಟಿಯಲ್ಲಿ ನಾನೊಬ್ಬ 'ಅಪ್ರಯೋಜಕ ಗಂಡ' ಮಗನ ದೃಷ್ಟಿಯಲ್ಲಿ ನಾನೊಬ್ಬ 'ಹಣ ಕೊಡಲಾರದ ಅಪ್ಪ' ಹೆಂಡತಿ-ಮಗ ಯಾರಿಗೂ ನನ್ನ ಮೇಲೆ ಗೌರವವಿಲ್ಲ. 'ನಾನು ಇಲ್ಲಿ ಯಾಕಿರಬೇಕು ?' ಎಂದು ಹಲವಾರು ಬಾರಿ ತನ್ನನ್ನು ತಾನು ಪ್ರಶ್ನಿಸಿಕೊಳ್ಳುತ್ತಿದ್ದ. ಅವನು ಮನಸ್ಸು ಮಾಡಿದ್ದರೆ ಎಂದೋ ಆ ಮನೆ ತೊರೆದು ಹೋಗಬಹುದಿತ್ತು, ಆದರೆ ಮರ್ಯಾದೆಗೆ ಹೆದರಿ ಅವನು ಹೆಂಡತಿಯ ಜೊತೆ ವಾಸ ಮಾಡುತ್ತಿದ್ದ ತಾವಿಬ್ಬರೂ ಬೇರೆಯಾದರೆ ತಮ್ಮ ಕುಟುಂಬದಲ್ಲಾಗಲಿ, ಹೆಂಡತಿಯ ಕುಟುಂಬದಲ್ಲಾಗಲಿ ತಮಗೆ ಮೊದಲಿನ ಮರ್ಯಾದೆ ಇರುವುದಿಲ್ಲವೆಂದು ಅವನಿಗೆ ಗೊತ್ತಿತ್ತು. 'ಗಂಡ ಬಿಟ್ಟವಳು' ಎಂಬ ಅಪಾದನೆಗೆ ಹೆಂಡತಿ ಗುರಿಯಾಗುತ್ತಾಳೆಂಬ ಶಂಕೆಯೂ ಅವನಿಗೆ ಇತ್ತು. ಆದರೆ ಇತ್ತೀಚೆಗೆ ಅವನಿಗೆ ಮನೆಯ ವಾತಾವರಣ ಬಹಳ ಬೇಸರ ತರಿಸಿತ್ತು. ಅವನು ಸಾಧ್ಯವಾದಷ್ಟು ಮನೆಯಿಂದ ಹೊರಗೆ ಇರುವುದಕ್ಕೆ ಇಷ್ಟಪಡುತ್ತಿದ್ದ. ಆದ್ದರಿಂದಲೇ ಅವನು ಸಾಯಂಕಾಲದ ಹೊತ್ತು ಮನೆಯಲ್ಲೇ ಇರುತ್ತಿರಲಿಲ್ಲ. ತಮ್ಮ ದಾಂಪತ್ಯ ಜೀವನಕ್ಕೆ ಅರ್ಥವೇ ಇಲ್ಲ ಎನ್ನಿಸುತ್ತಿತ್ತು. ತಮ್ಮ ನಡುವೆ ಪ್ರೀತಿ, ವಿಶ್ವಾಸ, ನಂಬಿಕೆ ಏನೂ ಉಳಿದಿಲ್ಲ. ಮಗ ಎಂಬ ಮಮತೆ ನನ್ನಲ್ಲಿ ಕಡಿಮೆಯಾಗುತ್ತಿದೆ. ಹೆಂಡತಿಯ ಬಗ್ಗೆ ಇದ್ದ ಮಧುರ ಭಾವನೆಗಳು ಸತ್ತುಹೋಗಿವೆ. ಹೆಂಡತಿ-ಮಗ ಇದ್ದರೂ ತಾನು ಒಂಟಿ ಅನ್ನಿಸುತ್ತಿತ್ತು. ವಿಶಾಲವಾದ ಮನೆ ಕಟ್ಟಿಸಿದ ಅಷ್ಟು ತಾಗಿ ವಿಶಾಲವಾದ ಮನಸ್ಸಿರಲಿಲ್ಲ. ಅವನ ಕಡೆಯವರಾಗಲಿ,

ಅವರ ಮನೆಗೆ ಬರುತ್ತಿರಲಿಲ್ಲ. ಮನೆಯಲ್ಲಿದ್ದ ಮೂವರದೂ ಮೂರು ದಾರಿಯಾಗಿತ್ತು. ಅವರು ಯಾವ ವಿಚಾರವನ್ನಾಗಲಿ ಒಟ್ಟಿಗೆ ಕುಳಿತು ಚರ್ಚಿಸುತ್ತಿರಲಿಲ್ಲ. ಒಬ್ಬರ ಕೆಲಸ, ಅವರ ಓಡಾಟ, ವಹಿವಾಟು ಬೇರೊಬ್ಬರಿಗೆ ತಿಳಿದಿರುತ್ತಿರಲಿಲ್ಲ. ಸಂಬಳ ಬಂದೊಡನೆ ಅಮೃತ ಅಂಗಡಿಯವರಿಗೆ ಹೇಳಿ 25 ದಿನಗಳಿಗಾಗುವ ಸಾಮಾನು ತರಿಸಿ ಹಾಕುತ್ತಿದ್ದಳು. ಆ ಸಾಮಾನು ಮುಗಿದ ಮೇಲೆ ಶೇಖರ ತಾನು ಸಾಮಾನು ತರಿಸಿ ಹಾಕುತ್ತಿದ್ದ. ಬೆಳಿಗ್ಗೆ ಡೈರಿಹಾಲು ತೆಗೆದುಕೊಳ್ಳುತ್ತಿದ್ದರು. ಅಮೃತ ಕೂಪನ್ ತಂದಿಡುತ್ತಿದ್ದಳು. ಸಾಯಂಕಾಲ ತೆಗೆದುಕೊಳ್ಳುವ ಕೈಹಾಲಿನ ದುಡ್ಡನ್ನು ಶೇಖರ ಕೊಡುತ್ತಿದ್ದ. ವಿದ್ಯುತ್ ಬಿಲ್, ಗ್ಯಾಸ್, ನೀರಿನ ಟ್ಯಾಕ್ಸ್–ಅಮೃತ ಕೊಡುತ್ತಿದ್ದಳು. ಪೇಪರ್, ಕಾಫಿಪುಡಿ, ರೇಷನ್, ಸಕ್ಕರೆ, ತರಕಾರಿ, ತೆಂಗಿನಕಾಯಿ ಇತ್ಯಾದಿಯ ಖರ್ಚು ಶೇಖರನದಾಗಿತ್ತು.

ಅಲೋಕ ಮಾತ್ರ ಯಾವ ತರಲೆ–ತಾಪತ್ರಯಗಳನ್ನೂ ತಲೆಗೆ ಹಚ್ಚಿಕೊಳ್ಳುತ್ತಿರಲಿಲ್ಲ. ತಂದೆಯ ಬಗ್ಗೆ ಅವನಿಗೆ ಪ್ರೀತಿ-ಗೌರವಗಳೇ ಇರಲಿಲ್ಲ. ಪೆಟ್ರೋಲ್ ಖರ್ಚಿಗೆ ಹಣ ಬೇಕಾದಾಗ ಅವನಿಗೆ ಅಮ್ಮನ ನೆನಪಾಗುತಿತ್ತು. ಹಣ ಇದ್ದಾಗ ಅವನೇ ರಾಜ. ಮನೆ–ಮಠ ಮರೆಯುತ್ತಿದ್ದ.

ಹೆಂಡತಿ ಶಾಂತವಾಗಿರುವುದನ್ನು ನೋಡಿದಾಗ ಶೇಖರನಿಗೆ ತಾಯಿಯ ವಿಚಾರ ಪ್ರಸ್ತಾಪ ಮಾಡಬೇಕು ಎನ್ನಿಸುತಿತ್ತು. ಆದರೆ ಆ ಬಗ್ಗೆ ಈಗಾಗಲೇ ಚರ್ಚೆ ಆಗಿದ್ದರಿಂದ ಅವನು ಅದನ್ನು ಪುನಹ ಪ್ರಸ್ತಾಪಿಸಲು ಹಿಂಜರಿಕೆಯಾಗುತಿತ್ತು. ಆದರೂ ಮತ್ತೊಮ್ಮೆ ಕೇಳಿದ.

"ಅಮೃತ, ಅಮ್ಮನ್ನ ಕರ್ಕೊಂಡು ಬರೋಣವಾ ?"

"ನೋಡಿ, ನಾನು ಈ ವಿಚಾರದಲ್ಲಿ ನನ್ನ ಅಭಿಪ್ರಾಯ ಹೇಳಿದ್ದಾಯಿತು. ಅವರು ಇಲ್ಲಿರೋದು ನನಗೆ ಇಷ್ಟವಿಲ್ಲ. ಬೇಕಾದರೆ ವೃದ್ಧಾಶ್ರಮಕ್ಕೆ ಸೇರಿಸಿ ಅಥವಾ ಬೇರೆ ಮನೆ ಮಾಡಿ ಇಡಿ. ಒಬ್ಬ ಕೆಲಸದವಳನ್ನು ಗೊತ್ತು ಮಾಡೋಣ. ನಮ್ಮ ಮನೆಯಿಂದ ಊಟ–ಕಾಫಿ–ತಿಂಡಿ ತೆಗೆದುಕೊಂಡು ಹೋಗಿ ಕೊಡಿ."

"ಕೆಲಸದವಳು ನೋಡಿಕೊಂಡ್ರೆ ನಾನು ನೋಡಿಕೊಂಡಂತೆ ಆಗುತ್ತದೆ ಏನೆ ಅಮೃತ ?"

"ಅದೆಲ್ಲಾ ನನಗೆ ಗೊತ್ತಿಲ್ಲ. ಅವರು ಮಾತ್ರ ಇಲ್ಲಿಗೆ ಬಂದಿರಕೂಡದು" ಕಡ್ಡಿ ಮುರಿದಂತೆ ಹೇಳಿದಳು ಅಮೃತ.

"ನಿನಗೆ ಯಾರೇ 'ಅಮೃತ' ಅಂತ ಹೆಸರಿಟ್ಟವರು ? ನಿನ್ನ ಉದ್ದಕ್ಕೂ ವಿಷಾನೇ ತುಂಬಿದೆ ! ಹೆಂಗಸಾ ನೀನು ? ಛೆ, ನಿನ್ನನ್ನು ಮದುವೆಯಾಗುವ ಬದಲು ಒಬ್ಬ ಹಳ್ಳಿಯ ಹುಡುಗಿಯ ಕೈ ಹಿಡಿದಿದ್ದಿದ್ರೆ ಅಂಬಲಿಯನ್ನಾದ್ರೂ ಕುಡಿದುಕೊಂಡು ನಾನು ಸುಖವಾಗಿರ್ತಿದ್ದೆ."

ಗಂಡನ ಮಾತು ಕೇಳಿ ಕಪಾಳಕ್ಕೆ ಹೊಡೆದಂತಾದರೂ ಅಮೃತ ತನ್ನ ಹಠಬಿಡಲಿಲ್ಲ. ಅದೇ ದಿನ ರಾತ್ರಿ ಅವಳ ಕುಮಾರ ಕಂಠೀರವ ಊರಿಗೆ ಬಂದಿಳಿದ.

"ಹಾಯ್ ಮಮ್ಮಿ, ನಿನಗೆ ಹೇಳಿ ಹೋಗಕ್ಕಾಗಲಿಲ್ಲ, ವೆರಿ ಸಾರಿ"

"ಫೋನ್ ಮಾಡಬಹುದಿತ್ತಲ್ಲಾ ?"

"ಅಜ್ಜಿ ಮನೆಯಲ್ಲಿ ಫೋನ್ ಇಲ್ಲವಲ್ಲಾ....ಅದಕ್ಕೆ ತಿಳಿಸಲಿಲ್ಲ."

ಅವನ ಸ್ನಾನ, ಊಟ ಮುಗಿಯಿತು.

"ಮಮ್ಮಿ, ನಂಗೆ ತುಂಬಾ ಆಯಾಸವಾಗಿದೆ. ನಾನು ಮಲಗ್ತೀನೆ, ಎಬ್ಬಿಸಬೇಡ"

ಅಮೃತ ಮಗನನ್ನು ಆಗ ಏನೂ ಕೇಳಲಿಲ್ಲ. ರಾತ್ರಿಯೆಲ್ಲಾ ಪ್ರಯಾಣ ಮಾಡಿ ಆಯಾಸವಾಗಿರಬಹುದು ಎಂದುಕೊಂಡಳು

ಒಂದು ಘಂಟೆಗೆ ಮಲಗಿದವನು ಸಾಯಂಕಾಲ ಆರೂವರೆ ಗಂಟೆಗೆ ಎದ್ದ. ಅವನು ಮುಖ ತೊಳೆದು ಕಾಫಿ ಕುಡಿಯುತ್ತಿದ್ದಾಗ ಅಮೃತ ಕೇಳಿದಳು "ಇವತ್ತೇನು ಪ್ರೋಗ್ರಾಂ ನಿನ್ನದು ?"

"ಏನಿಲ್ಲ ಮಮ್ಮಿ. ಏನಾದ್ರೂ ರುಚಿಯಾಗಿ ಮಾಡಿಹಾಕು. ಹೊಟ್ಟೆ ತುಂಬಾ ತಿನ್ನುತ್ತೀನೆ. ಯಾಕೋ ಗೋವಾದಲ್ಲಿ ಊಟ ಸರಿಹೋಗಲೇ ಇಲ್ಲ."

"ಅಲೋಕ್, ಒಂದು ಪ್ರಶ್ನೆ ಕೇಳಲಾ ?"

"ಕೇಳು ಮಮ್ಮಿ"

"ಗೋವಾಕ್ಕೆ ಹೋಗಕ್ಕೆ ನಿನ್ನ ಹತ್ತಿರ ಹಣ ಎಲ್ಲಿತ್ತು ?"

"ಅಶೋಕ್‌ನ ಹತ್ತಿರ ಸಾಲ ಮಾಡ್ದೆ."

"ಎಷ್ಟು ಸಾಲ ಮಾಡ್ದೆ ?"

"ಐದು ಸಾವಿರ."

"ಸಾಲ ಮಾಡಿದೆಯೋ, ಸರ ಮಾರಿದೆಯೋ !"

"ಮಮ್ಮಿ !"

"ಬೀರುವಿನಲ್ಲಿದ್ದ ಎರಡು ಎಳೆಯ ಸರ ನೀನು ತಾನೇ ಕದ್ದಿದ್ದು ?"

"ಹೌದು ಮಮ್ಮಿ. ಇದ್ದಕ್ಕಿದ್ದ ಹಾಗೆ ಗೋವಾ ಪ್ರೋಗ್ರಾಂ ಫಿಕ್ಸ್ ಆಯ್ತು. ಡ್ಯಾಡಿ ಹತ್ತಿರ ಅಷ್ಟು ಹಣ ಇರಲ್ಲಾಂತ ನನಗೆ ಗೊತ್ತಿತ್ತು. ನನಗೆ ಏನೂ ಮಾಡಕ್ಕೂ ತೋಚಲಿಲ್ಲ ನಿನ್ನ ಬೀರು ತೆರೆದೆ. ಸರ ಕಾಣಿಸ್ತು, ಮಾರಿ ದುಡ್ಡು ತೆಗೆದುಕೊಂಡೆ" ಯಾವ ಅಳುಕೂ ಇಲ್ಲದೆ ಹೇಳಿದ ನವನು.

"ನಿನಗೇನೋ ನಮ್ಮ ಮನೆಯಲ್ಲಿ ಕಡಿಮೆಯಾಗಿರೋದು ? ನಿನ್ನ ಮನೆಯಲ್ಲೇ ಕಳ್ಳತನ ಮಾಡಕ್ಕೆ ನಿನಗೆ ನಾಚಿಕೆಯಾಗಲ್ವಾ ? ನಿನ್ನನ್ನು ಸಾಕಿದ್ದು ಹಾವಿಗೆ ಹಾಲೆರೆದಂತಾಯ್ತು" ಅವಳು ಕಿರುಚಾಡಿದಳು.

"ಯಾಕಮ್ಮ ಹಾಗೆ ಕಿರುಚ್ತೀಯ ? ನೀನು ಸಂಪಾದಿಸ್ತಿರೋದು ಯಾರಿಗೆ, ನನಗೆ ತಾನೆ ? ನನ್ನ ಅಕೌಂಟ್‌ನಲ್ಲಿ ಒಂದೈವತ್ತು ಸಾವಿರ ರೂಪಾಯಿ ಹಾಕು. ಇನ್ನೊಂದು ವರ್ಷ ನಿನ್ನನ್ನು ನಾನು ಯಾವುದಕ್ಕೂ ಪೀಡಿಸಲ್ಲ. ಎಲ್ಲಾ ಹಣಾನೂ ನೀನು ನಿನ್ನ ಅಕೌಂಟ್‌ನಲ್ಲೇ ಇಟ್ಕೊಂಡಿದ್ರೆ ನಾನು ಏನು ಮಾಡಲಿ ?"

"ನಾನೇ ಯಾಕೆ ಯಾವಾಗಲೂ ನಿನಗೆ ಹಣ ಕೊಡಬೇಕು ? ನಿಮ್ಮ ಡ್ಯಾಡಿಯನ್ನೂ ಕೇಳು."

"ಅವರ ಹತ್ತಿರ ಏನಿರತ್ತಮ್ಮ ? ನೀನೇ ಹೇಳ್ತಿದ್ದೆ, ನಿಮ್ಮ ಡ್ಯಾಡಿಗೆ ಸಂಬಳ ಕಡಿಮೆ, ಅವರನ್ನು ಯಾವುದಕ್ಕೂ ಕೇಳಬೇಡಾಂತ. ಮೊದಲೆಲ್ಲಾ ನೀನೇ ಹಣಕೊಟ್ಟು ಈಗ ಹೀಗೆ ಹೇಳಿದ್ರೆ ನಾನೇನು ಮಾಡಲಮ್ಮ ?"

"ಈ ಮನೆಗೋಸ್ಕರ ಎಷ್ಟು ದುಡಿದ್ರೂ ಪ್ರಯೋಜನವಿಲ್ಲ. ನಿನ್ನ ಉದ್ಧಕ್ಕೂ ಹಣ ಸುರಿದೆ ಆದರೆ ಏನಾಯ್ತು ? ನಿನಗೆ ತಾಯಿ ಅನ್ನುವ ಗೌರವಾನೇ ಇಲ್ಲ ನನ್ನಾವತ್ತೋ ಮನುಷ್ಯನಾಗೋದು ?"

"ಮಮ್ಮಿ, ನೀನು ಡ್ಯಾಡಿ ಹೇಳಿದ ಹಾಗೆ ಕಾಲೇಜಿನಲ್ಲಿ ಮಾತ್ರ ಪಾಠ ಮಾಡಿಕೊಂಡು ಇದ್ದಿದ್ರೆ ಈ ಸಮಸ್ಯೆಗಳು ಬರ್ತಾಲ್ಲಾನೇ ಇರಲಿಲ್ಲ. ಮಿಂಚಿಹೋಯ್ತು. ಈಗ ಏನೂ ಮಾಡಕ್ಕಾಗಲ್ಲ."

"ಏನೋ ಹಾಗಂದ್ರೆ ?"

"ಅಜ್ಜ ಈ ಮನೆ ಬಿಟ್ಟು ಹೋದ್ಮೇಲೇನಾಯ್ತು ಜ್ಞಾಪಿಸ್ಕೋ. ಡ್ಯಾಡಿ ಅಡಿಗೆ ಮಾಡ್ಕೊಂಡು ನನ್ನನ್ನೂ ನೋಡಿಕೊಳ್ತಿದ್ರೆ, ಹೊರತು ನೀನ್ಯಾವತ್ತೂ ನನ್ನನ್ನು ನೋಡಿಕೊಳ್ಳಲಿಲ್ಲ. ಹಣದಿಂದ ಎಲ್ಲಾ ಕೊಂಡುಕೊಳ್ಳಬಹುದೂಂತ ಕಲಿಸಿದವಳೇ ನೀನು. ಎಲ್ಲರ ಮನೆ ಇದ್ದ ಹಾಗೆ ನಮ್ಮ ಮನೆ ಇದೆಯಾ ? ಹಣ ಸಂಪಾದಿಸೋದು ನಿನ್ನ ಕೆಲಸವಾಯ್ತು. ಖರ್ಚು ಮಾಡೋದು ನನ್ನ ಕೆಲಸವಾಯ್ತು. ನೀನು ಸಂಪಾದಿಸೋದು ಯಾರಿಗಾಗಿ ? ಡ್ಯಾಡಿ ನಿನ್ನ ಹಣಾನ್ನ ಕಡೆಗಣ್ಣಿನಿಂದಲೂ ನೋಡಲ್ಲ. ನಿನಗೆ ಯಾವುದರಲ್ಲೂ ಆಸಕ್ತಿ ಇಲ್ಲ. ನಿನ್ನ ಬಲವಂತಕ್ಕೆ ಬಿ.ಇ ಗೆ ಸೇರಿ ಅದನ್ನು ಪೂರೈಸದೆ ಒದ್ದಾಡ್ತಿರುವ ನನಗೆ ತಾನೆ ಹಣ ಬೇಕು ಧಾರಾಳವಾದ ಮನಸ್ಸಿನಿಂದ ಹಣ ಕೊಡು."

ಅಮೃತ ಮಗನಾಡಿದ ಮಾತುಗಳಿಂದ ಚೇತರಿಸಿಕೊಳ್ಳುವಷ್ಟರಲ್ಲಿ ಅವನು ಚಪ್ಪಲಿ ಮೆಟ್ಟಿಕೊಂಡು ಹೊರಟ ಅವಳು ಫ್ಯಾನ್ ಗಾಳಿಗೆ ಮುಖವೊಡ್ಡಿ ಕುಳಿತುಕೊಂಡಳು. ಮಗನ ಮಾತುಗಳು ನೆನಪಾಗಿ ಹೊಟ್ಟೆಯಲ್ಲಿ ವಿಚಿತ್ರ ರೀತಿಯ ಸಂಕಟವಾಯಿತು. ತನ್ನ ಕೆಲಸ, ತಾನು ಸಂಪಾದಿಸಿದ್ದ ಹಣ, ತಾನು ಕಟ್ಟಿಸಿರುವ ಮನೆ ಇತ್ಯಾದಿ ವಿಚಾರಗಳ ಹೆಮ್ಮೆ ಪಡುತ್ತಾ ಗಗನದಲ್ಲಿ ಹಾರಾಡುತ್ತಿದ್ದವಳು, ಈಗ ಧೊಪ್ಪೆಂದು ಪ್ರಪಾತಕ್ಕೆ ಬಿದ್ದಂತೆ ಒದ್ದಾಡಿದಳು. ತಲೆಯನ್ನು ಯಾರೋ ನೂರಾರು ಸುತ್ತಿಗೆಗಳಿಂದ ಹೊಡೆಯುತ್ತಿರುವಂತೆ ಅವಳಿಗೆ ಭಾಸವಾಯ್ತು.

ಅವಳು ಕಳೆದುಹೋದ ದಿನಗಳ ಬಗ್ಗೆ ಯೋಚಿಸುತ್ತಾ ಕುಳಿತಿದ್ದಾಗ ಮನೆಯ ಮುಂದೆ ಆಟೋ ಬಂದು ನಿಂತಂತೆ ಆಯ್ತು. ಅವಳು ಕುತೂಹಲದಿಂದ ಇಣುಕಿದಳು. ಶಂಕರ ತಾನು ಮೊದಲು ಇಳಿದು ಸೂಟ್‌ಕೇಸ್ ಇಳಿಸಿಕೊಂಡು ನಂತರ ತಾಯಿಯ ಕೈಹಿಡಿದು ಇಳಿಸಿದ. ಅವರನ್ನು ನೋಡು

ತ್ರಿದ್ದಂತೆ ದೇವರ ಕೋಣೆಯಿಂದ ಶೇಖರ್ ಹೊರಗೆ ಬಂದ. ಅವನನ್ನೊಮ್ಮೆ ತೀಕ್ಷ್ಣವಾಗಿ ದೋಡಿ,ಅಮೃತ ಬಿರುಗಾಳಿಯಂತೆ ಬಾಗಿಲ ಕಡೆಗೆ ಧಾವಿಸಿದಳು.

"ಶಂಕರ, ನೀನು ಯಾಕೆ ನಿಮ್ಮಮ್ಮನ ಇಲ್ಲಿಗೆ ಕರೆದು ತಂದೆ ?"

"ಅಮ್ಮ ನಮ್ಮ ಜೊತೆ ಬರಕ್ಕೆ ಒಪ್ಲಿಲ್ಲ ಅತ್ತಿಗೆ. ವಸಂತಗೂ ವರ್ಗ ಸಿಕ್ಕಿದೆ. ನಾವು ನಾಳೆ ಈ ಊರು ಬಿಡ್ತಿದ್ದೇವೆ. ಅದಕ್ಕೆ ಇಲ್ಲಿಗೆ ಕರೆದು ಕೊಂಡು ಬಂದೆ."

"ಇಲ್ಲಿಗ್ಯಾಕೆ ಕರೆದುಕೊಂಡು ಬಂದೆ? ಅವರನ್ನು ಇಟ್ಕೊಳ್ಳುವುದಕ್ಕೆ ನಾನು ಸಿದ್ಧಳಿಲ್ಲ"

"ನಾನು ಸಿದ್ಧನಾಗಿದ್ದೇನೆ. ಶಂಕರು, ನೀನು ನಿಶ್ಚಿಂತೆಯಿಂದ ಅಮ್ಮನ್ನ ಇಲ್ಲಿ ಬಿಟ್ಟು ಹೊರಡು. ನಾನೆಲ್ಲಾ ವ್ಯವಸ್ಥೆ ಮಾಡ್ತೇನೆ."

"ಅಣ್ಣ...."

"ಅಮೃತ, ಮೊದಲು ಅಮ್ಮಂಗೆ,ಶಂಕರೂಗೆ ಕಾಫಿ ಕೊಡು. ಅಮ್ಮನ ವಿಚಾರ ಈಗ ಬಿಡು."

ಅಮೃತ ಒಳಗೆದ್ದು ಹೋದಳು. ಸೊಸೆ ತಮ್ಮನ್ನು ಒಂದಕ್ಷರವೂ ಮಾತನಾಡಿಸದಿದ್ದಾಗ ಸರೋಜಮ್ಮ ತುಂಬಾ ನೊಂದುಕೊಂಡರು.

"ಶೇಖರೂ, ನನ್ನನ್ನು ಯಾವುದಾದ್ರೂ ಅನಾಥಾಲಯಕ್ಕೋ,ವೃದ್ಧಾಶ್ರಮಕ್ಕೋ ಸೇರಿಸಿಬಿಡಪ್ಪ. ನನ್ನ ಆಗಮನದಿಂದ ನಿಮ್ಮ ಮನೆಯ ಶಾಂತಿ ಹಾಳಾಗಬಾರದು."

"ಶಾಂತಿ ಇದ್ದರೆ ತಾನೆ ಹಾಳಾಗುವ ಚಿಂತೆ ? ನೀನು ಯೋಚಿಸಬೇಡ. ಖಂಡಿತ ನಾನು ನಿನ್ನನ್ನು ಈ ಮನೆಯಲ್ಲಿ ಇಟ್ಕೊಳ್ಳಲ್ಲ. ಇನ್ನೊಂದು ವಾರದಲ್ಲಿ ನೀನು ಎಲ್ಲಿರಬೇಕೂಂತ ತೀರ್ಮಾನಿಸ್ತೇನೆ"

ಗಂಡನ ಮಾತು ಕೇಳಿ ಅಮೃತಾಗೆ ಕೊಂಚ ಸಮಾಧಾನವಾಯ್ತು. ಕಾಫಿ ತಂದವಳು ಬಾಯುಉಪಚಾರಕ್ಕಾಗಿ ಅತ್ತೆಯನ್ನು 'ಹೇಗಿದ್ದೀರ ?' ಎಂದು ಕೇಳಿದಳು. ಶಂಕರನ ಜೊತೆ ತುಂಬಾ ಹೊತ್ತು ಮಾತಾಡಿದಳು. ಊರು ಬಿಟ್ಟು ಹೋಗುತ್ತಿರುವ ಅವರನ್ನು ಊಟಕ್ಕೂ ಕರೆಯಲಿಲ್ಲ. ಮತ್ತೆ ಅತ್ತೆಯ ಬಗ್ಗೆ ಗಂಡನನ್ನು ಪ್ರಶ್ನಿಸಲಿಲ್ಲ. ವಾರದ ನಂತರ ವೃದ್ಧಾಶ್ರಮದಲ್ಲಿ ಬಿಡಬಹುದೆಂದುಕೊಂಡಳು.

ಒಂದು ವಾರ ಕಳೆಯಿತು. ಅಮೃತಳ ಗೊಣಗಾಟ ಶುರುವಾಯಿತು. ಅಲೋಕನಂತೂ ಅಜ್ಜಿಯನ್ನು ಮಾತಾಡಿಸುತ್ತಲೇ ಇರಲಿಲ್ಲ. ಯಾರೂ ಅವರನ್ನು ಊಟ-ತಿಂಡಿಗೆ ಕರೆಯುತ್ತಿರಲಿಲ್ಲ. ಶೇಖರ್ ಅಡಿಗೆ ಮಾಡಿ ತಾಯಿಗೆ ಬಡಿಸಿ, ಮಧ್ಯಾಹ್ನಕ್ಕೆ ಹಣ್ಣು, ಬಿಸ್ಕತ್, ಬ್ರೆಡ್ ಇಟ್ಟು ಫ್ಲಾಸ್ಕ್ ನಲ್ಲಿ ಕಾಫಿ ಹಾಕಿ ಹೋಗುತ್ತಿದ್ದ. ರಾತ್ರಿ ತಾನೇ ಬಿಸಿ ಅನ್ನ ಮಾಡಿ ಬಡಿಸುತ್ತಿದ್ದ.

ವಾರ ಕಳೆದರೂ ಗಂಡ ಅತ್ತೆಯ ಬಗ್ಗೆ ಮಾತನಾಡದಿದ್ದಾಗ ಅಮೃತ ಗಂಡನನ್ನು ಕೇಳಿದಳು, "ನಿಮ್ಮಮ್ಮನ್ನ ಶಾಶ್ವತವಾಗಿ ಇಲ್ಲೇ ಇಟ್ಟುಕೊಳ್ಳ ಬೇಕೂಂತ ಇದ್ದಿರೇನು ?"

"ಹಾಗೇನಿಲ್ಲ ಅಮೃತ. ಅಮ್ಮ ಈ ಭಾನುವಾರ ಇಲ್ಲಿಂದ ಹೋಗ್ತಾರೆ" ಅವಳು 'ಎಲ್ಲಿಗೆ ?' ಎಂದು ಕೇಳಲಿಲ್ಲ. ಅವನೂ ಹೇಳಲಿಲ್ಲ. ಭಾನುವಾರ ಹತ್ತು ಗಂಟೆಯ ಹೊತ್ತಿಗೆ ಅವಳು ತನ್ನ ಸಹೋದ್ಯೋಗಿ ಮನೆಯ ಗೃಹ ಪ್ರವೇಶಕ್ಕೆ ಹೊರಟಳು. ಅವಳು ಹೋದ ಮೇಲೆ ಶೇಖರ್ ಒಂದು ರಿಕ್ಷಾ ತಂದು, 2 ಸೂಟ್‌ಕೇಸ್‌ಗಳನ್ನು ಅದರಲ್ಲಿಟ್ಟು ತಾಯಿಗೆ ಹೇಳಿದ.

"ಬಾಮ್ಮ ಹೋಗೋಣ"

"ಎಲ್ಲಿಗಪ್ಪ ?"

"ಚಾಮರಾಜಪೇಟೆಯಲ್ಲಿ ಒಂದು ಸಣ್ಣ ಮನೆ ಮಾಡಿದ್ದೇನೆ. ನಾನು, ನೀನು ಅಲ್ಲಿರೋಣ."

"ನಾನು ಬರಲ್ಲ ಶೇಖರು. ನಾನು ಹೇಳುವ ಮಾತು ಕೇಳು. ನನ್ನ ನ್ನೊಂದು ವೃದ್ಧಾಶ್ರಮಕ್ಕೆ ಸೇರಿಸಿಬಿಡು. ನೀನು ಆರಾಮವಾಗಿ ಇಲ್ಲಿರು."

"ಅದೆಲ್ಲಾ ಚರ್ಚಿಸೋಕೆ ಇಲ್ಲಿ ಟೈಮಿಲ್ಲ. ನೀನು ಮೊದಲು ಹತ್ತು."

ಸರೋಜಮ್ಮ ಮಾತಾಡದೆ ಆಟೋ ಹತ್ತಿದರು. ಅವನು ಚೆನ್ನಿಯ ಕೈಗೆ ಒಂದು ಕಾಗದ ಕೊಟ್ಟು ಹೇಳಿದ "ನಿಮ್ಮ ಅಮ್ಮಾವ್ರಿಗೆ ಕೊಡು."

ಅವಳು ಅನುಮಾನದಿಂದ ಕೇಳಿದಳು "ಊರಿಗೋಯ್ತಿದ್ದೀರಾ ಬುದ್ಧಿ ?"

"ಹೌದಮ್ಮ. ನಮ್ಮಮ್ಮನ್ನ ಕರೆದುಕೊಂಡು ತೀರ್ಥಯಾತ್ರೆಗೆ ಹೊರಟಿದ್ದೇನೆ."

ಅಮೃತ ಗೃಹಪ್ರವೇಶದಿಂದ ಹಿಂದಿರುಗಿದಾಗ ಮೂರು ಗಂಟೆಯ ಸಮಯ ವಾಗಿತ್ತು. ಅವಳು ಮನೆ ದೂರವೆಂದುಕೊಂಡು ವೆಹಿಕಲ್ ತೆಗೆದುಕೊಂಡು ಹೋಗಿರಲಿಲ್ಲ. ಮನೆಗೆ ಬಂದವಳೇ ಏನು, ಎತ್ತ ಎಂದು ವಿಚಾರಿಸದೆ ಮಲಗಿದ್ದಳು.

"ಅಮ್ಮಾವ್ರೆ, ಬುದ್ಧೋರು ಒಂದು ಕಾಗದ ಕೊಟ್ಟವ್ರೆ. ಟಿ.ವಿ. ಅತ್ರ ಮಡಗವ್ನಿ. ಬಾಕಿಲಾಕಿಕೊಳ್ಳಿ" ಎನ್ನುತ್ತಾ ಚೆನ್ನಿ ಹೊರಗೆ ನಡೆದಾಗಲೂ ಅವಳು ಆ ಮಾತುಗಳತ್ತ ಗಮನ ಕೊಡಲಿಲ್ಲ.

ಸಾಯಂಕಾಲ ಐದೂವರೆಗೆ ಎದ್ದು ಮುಖ ತೊಳೆದು, ಕಾಫಿ ಕುಡಿದು, ಟಿ.ವಿ. ಆನ್ ಮಾಡಲು ಹೋದಾಗ ಅಲ್ಲಿದ್ದ ಕಾಗದ ಕಣ್ಣಿಗೆ ಬಿತ್ತು. ಅವಳು ಕುತೂಹಲದಿಂದ ಪತ್ರ ಬಿಚ್ಚಿದಳು

"ಅಮೃತ,

ನಾನು, ಅಮ್ಮ ಬೇರೆ ಮನೆಗೆ ಹೋಗುತ್ತಿದ್ದೇವೆ. ವಯಸ್ಸಾಗಿರುವ ಅಮ್ಮನನ್ನು ನೋಡಿಕೊಳ್ಳುವುದು ನನ್ನ ಕರ್ತವ್ಯ ಎಂದು ನಾನು ಭಾವಿಸಿದ್ದೇನೆ. ಈ ವಯಸ್ಸಿನಲ್ಲಿ ನಾನವರಿಗೆ ನೋವು ಕೊಡಲಾರೆ. ನಿನಗೆ ಹೇಳದೆ ಹೋಗುತ್ತಿರುವುದಕ್ಕೆ ಕ್ಷಮಿಸು.

ಶೇಖರ್"

ಪತ್ರದಲ್ಲಿ ಕೇವಲ ನಾಲ್ಕೇ ಸಾಲುಗಳಿದ್ದರೂ, ಅವಳ ಹೃದಯ ಅದನ್ನ ಓದಿ ತತ್ತರಿಸಿತು. ಶೇಖರ್ ಮನೆ ಬಿಟ್ಟು ಹೋಗಬಹುದೆಂದು ಅವಳು ಕನಸಿನಲ್ಲೂ ಯೋಚಿಸಿರಲಿಲ್ಲ. ಆ ರಾತ್ರಿ ಅಲೋಕನೂ ಮನೆಗೆ ಬರಲಿಲ್ಲ. ಅಮೃತ ಒಂದು ಕ್ಷಣ ಕಣ್ಣು ಮುಚ್ಚಲಿಲ್ಲ.

ಮರುದಿನ ಬೆಳಗ್ಗೆ ಚೆನ್ನಿ ಕೆಲಸಕ್ಕೆ ಬರುತ್ತಿದ್ದಂತೆ ಕೇಳಿದಳು.

"ಬುದ್ಧೋರು ಎಲ್ಲಿಗ್ಹೋದ್ರು ಚೆನ್ನಿ ?"

"ಅದೇನೋ ಯಾತ್ರೆ ಅಂದ್ರವ್ವ. ನಂಗೇನೂ ತಿಳೀದು."

ಅವಳು ಹತಾಶಳಾಗಿ ಅಂದು ರಜ ಹಾಕಿ, ಅವನು ಕೆಲಸ ಮಾಡುತ್ತಿದ್ದ ಪೋಸ್ಟ್ ಆಫೀಸಿಗೆ ಫೋನ್ ಮಾಡಿದಳು.

"ಮಿ॥ ಚಂದ್ರಶೇಖರ್ ಇದ್ದಾರಾ ?"

"ಅವರು ಬಂದಿಲ್ಲ ಮೇಡಂ."

"ನಾಳೆ ಸಿಕ್ತಾರಾ ?"

"ಅವರು 2 ತಿಂಗಳು ರಜ ಹಾಕಿದ್ದಾರೆ. ಬೇರೆ ಊರಿಗೆ ವರ್ಗಕ್ಕೆ ಪ್ರಯತ್ನಿಸುತ್ತಿದ್ದಾರೆ."

"ಅವರ ಮನೆ ವಿಳಾಸ ಹೇಳ್ತೀರಾ ?"

"ಒಂದು ನಿಮಿಷ ಇರಿ ಮೇಡಂ" ಎಂದ ಆ ವ್ಯಕ್ತಿ ಅವಳ ಮನೆಯ ವಿಳಾಸವನ್ನೇ ಕೊಟ್ಟ. ಗಂಡ ಇರುವ ವಿಳಾಸ ತಿಳಿಯದೆ ಅಮೃತಾಗೆ ಹುಚ್ಚು ಹಿಡಿದಂತಾಯ್ತು.

'ಈ ವಿಶಾಲವಾದ ಬೆಂಗಳೂರಿನಲ್ಲಿ ಇವರನ್ನು ಎಲ್ಲಿ ಹುಡುಕಲಿ ?" ಎಂಬ ಚಿಂತೆ ಕಾಡಿದಾಗ ಅವಳಿಗೆ ಅಳು ಉಕ್ಕಿ ಬಂತು.

ಸಿರಿ ಬಸ್‌ಗಾಗಿ ಕಾಯುತ್ತಾ ನಿಂತಿದ್ದಳು. ಜುಲೈ ತಿಂಗಳ ಕೊನೆಯ ವಾರ. ಮಳೆ ಬರುವ ಸೂಚನೆಯಿತ್ತು. ಅವಳ ಜೊತೆಯಲ್ಲಿದ್ದ ಗೆಳತಿಯರು ತಮ್ಮ ಬಸ್ ಬಂದೊಡನೆ ಹೊರಟುಹೋಗಿದ್ದರು. ಅಂದು ಅವಳು ಗೆಳತಿಯರ ಜೊತೆ 'ಅಗ್ನಿಸಾಕ್ಷಿ' ಸಿನಿಮಾ ನೋಡಲು ಮ್ಯಾಟ್ನಿಗೆ ಬಂದಿದ್ದಳು ಮಳೆ ಹನಿಯಲು ಆರಂಭವಾದಾಗ ಅವಳಿಗೆ ತುಂಬಾ ಗಾಬರಿಯಾಯಿತು. ಆಟೋದಲ್ಲಿ ಒಬ್ಬಳಿಗೆ ಹೋಗಲು ಧೈರ್ಯವಾಗಲಿಲ್ಲ. ಅವಳು ಹೆದರಿಕೊಂಡು ಮುದುರಿ ನಿಂತಿದ್ದಾಗಲೇ ಅವಳ ಮುಂದೆ ಬೈಕ್ ನಿಂತಿತು.

"ಹಾಯ್ ಸಿರಿ, ಇದೇನು ನೀವಿಲ್ಲಿ ಒಬ್ಬರೇ ನಿಂತಿದ್ದೀರಿ ?"

"ಸಿನಿಮಾಕ್ಕೆ ಬಂದಿದ್ದೆ. ಫ್ರೆಂಡ್ಸೆಲ್ಲಾ ಹೊರಟುಹೋದರು. ನನಗೆ ಬಸ್ ಸಿಗಲಿಲ್ಲ."

"ಒಬ್ಬರಿಗೆ ಆಟೋದಲ್ಲಿ ಹೋಗಲು ಭಯವಾಯ್ತಾ ? ಬನ್ನಿ ನಾನು ನಿಮ್ಮನ್ನು ಡ್ರಾಪ್ ಮಾಡ್ತೀನಿ."

ಅವಳು ಹೆಚ್ಚು ಉಪಚಾರ ಮಾಡಿಸಿಕೊಳ್ಳದೆ ಬೈಕ್ ಹತ್ತಿದಳು. ಗೌರವ್ ಎಂ.ಬಿ. ಮುಗಿಸಿ ಹೌಸ್ ಸರ್ಜನ್ ಆಗಿದ್ದ. ಒಂದು ವರ್ಷದ ಹಿಂದೆ ಅಂತರ ಕಾಲೇಜು 'ಭಾವಗೀತೆ'ಸ್ಪರ್ಧೆಯಲ್ಲಿ ಅವರು ಭೇಟಿಯಾಗಿದ್ದರು.

ಹುಡುಗಿಯರ ವಿಭಾಗದಲ್ಲಿ ಸಿರಿಗೆ ಮೊದಲ ಬಹುಮಾನ ಬಂದಿದ್ದರೆ, ಹುಡುಗರ ವಿಭಾಗದಲ್ಲಿ "ಗೌರವ್‌ಗೆ ಮೊದಲ ಬಹುಮಾನ ಬಂದಿತ್ತು. ಸ್ಪರ್ಧೆಯ ಫಲಿತಾಂಶ ತಿಳಿದ ಮೇಲೆ ಸಿರಿ ಗೆಳತಿಯರಿಗೆ ಸಿಹಿ–ಖಾರ ಕೊಡಿ ಸಲು ಪಕ್ಕದ ಹೋಟೆಲ್‌ಗೆ ನುಗ್ಗಿದ್ದಳು. ಅಲ್ಲಿಗೆ ಗೌರವ್ ತಂಡವೂ ಬಂದಿತ್ತು. ಇಬ್ಬರೂ ಸೇರಿ 2 ಗುಂಪಿನವರಿಗೂ ಟ್ರೀಟ್ ಕೊಟ್ಟಿದ್ದರು. ಮೂರು ತಿಂಗಳ ಹಿಂದೆ ಮೆಡಿಕಲ್ ಎಕ್ಸಿಬಿಷನ್‌ನಲ್ಲಿ ಅವರು ಭೇಟಿಯಾಗಿ ದ್ದರು. ತಿಂಗಳ ಹಿಂದೆ ಅವಳ ಕಾಲೇಜಿನಲ್ಲಿ ನಡೆಸಿದ್ದ 'ಫನ್ ಫೇರ್'ಗೆ ಅವನು ಬಂದಿದ್ದ.

"ನೀವು ಮಾತನಾಡದೆ ಕುಳಿತರೆ ಹೇಗೆ ? ನಿಮ್ಮ ಮನೆಯ ಗುರುತು ಹೇಳಿ."

ಅವಳು ತಮ್ಮ ಮನೆಗೆ ಗೈಡ್ ಮಾಡಿದಳು. ಅವನು ಬಂಗಲೆಯ ಹೊರಗೆ ಬೈಕ್ ನಿಲ್ಲಿಸಿದ.

"ಒಳಗೆ ಬನ್ನಿ"

"ಇವತ್ತು ಬೇಡ. ಇನ್ನೊಂದು ದಿನ ಬರ್ತೀನೆ"

"ದಯವಿಟ್ಟು ಬನ್ನಿ. ನಮ್ಮಾಯಿ ಪರಿಚಯ ಮಾಡಿಸ್ತೀನೆ."

ಅವನು ಅವಳನ್ನು ಹಿಂಬಾಲಿಸುತ್ತಾ ಕೇಳಿದ "ಡಾಕ್ಟರ್ ಮೋಹನ್ ನಿಮಗೇನಾಗಬೇಕು ?"

"ಅವರು ನಮ್ಮ ತಂದೆ."

"ಓ. ಐ ಸೀ...."

ಗಂಟೆ ಎಂಟಾದರೂ ಮಗಳು ಮನೆಗೆ ಬರಲಿಲ್ಲವೆಂದು ಮಂಜುಳಾ ತುಂಬಾ ಗಾಬರಿಯಾಗಿದ್ದಳು. ಅವಳು ಸುರಕ್ಷಿತವಾಗಿ ಮನೆ ತಲುಪಿದ್ದನ್ನು ಕಂಡು ಅವಳ ಮನಸ್ಸಿಗೆ ನೆಮ್ಮದಿಯಾಯ್ತು. ಅವಳು ಆ ಯುವಕನನ್ನು "ಬನ್ನಿ ಒಳಗೆ" ಎಂದು ಕರೆದಳು. ಸಿರಿ ಗೌರವನನ್ನು ತಾಯಿಗೆ ಪರಿಚಯಿ ಸಿದಳು. "ಕಾಫಿ ತರ್ತೀನೆ" ಎನ್ನುತ್ತಾ ಮಂಜುಳಾ ಒಳಗೆ ನಡೆದಳು.

ಪಕ್ಕನೆ ದೀಪ ಹೋಯಿತು ಸಿರಿ ಎದ್ದು ಹತ್ತಿರದಲ್ಲೇ ಇದ್ದ ಮೇಣದ ಬತ್ತಿ ಹಚ್ಚಿದಳು. ಆ ಮಂದ ಪ್ರಕಾಶದಲ್ಲಿ ಅವನು ತನ್ನ ಎದುರಿಗೆ ಕುಳಿ ತಿದ್ದ ಚೆಲುವೆಯನ್ನು ಮನದಣಿಯ ನೋಡಿದ. ಮಸ್ಟರ್ಡ್ ಬಣ್ಣದ

ಪ್ರಿಂಟೆಡ್ ಸಿಲ್ಕ್ ಸೀರೆಯುಟ್ಟು, ಒಪ್ಪುವ ಬ್ಲೌಸ್ ಹಾಕಿದ್ದ ಸಿರಿ ತುಂಬಾ ಮುದ್ದಾಗಿ ಕಾಣುತ್ತಿದ್ದಳು. ಕೆದರಿದ್ದ ಕೂದಲು, ಕೆಂಪು ಬಿಂದಿ, ಅದರ ಕೆಳಗೆ ಕಂಡೂ ಕಾಣದಂತೆ ಇಟ್ಟಿದ್ದ ದೇವರ ಕುಂಕುಮ. ಅವಳಿಗೆ ಅಪೂರ್ವ ಶೋಭೆ ನೀಡಿದ್ದವು. ಭಾವಪೂರ್ಣ ಕಣ್ಣುಗಳು, ನೀಟಾದ ಮೂಗು, ಪುಟ್ಟ ಬಾಯಿ, ಅರೆಬಿರಿದ ಗುಲಾಬಿ ಮೊಗ್ಗಿನಂತಿದ್ದ ತುಟಿಗಳು, ಮಟ್ಟಸ ವಾದ ಎತ್ತರ, ಅದಕ್ಕೆ ತಕ್ಕ ದಪ್ಪ—ಅವಳನ್ನು ಚೆಲುವೆಯರ ಗುಂಪಿಗೆ ಸೇರಿ ಸಿದ್ದವು.

ಅವನು ತನ್ನನ್ನೇ ನೆಟ್ಟ ನೋಟದಿಂದ ನೋಡುತ್ತಿರುವುದನ್ನು ಕಂಡು ಅವಳ ಎದೆಯು ಬಡಿತ ಜೋರಾಗಿ, ಹಣೆಯಲ್ಲಿ ಬೆವರು ಮೂಡಿತು. ಅವಳು ನಾಚಿ ತಲೆ ತಗ್ಗಿಸಿದಾಗ, ಮುಖಕ್ಕೆ ರಕ್ತ ನುಗ್ಗಿದಂತಾಗಿ ಮುಖ ಕೆಂದಾವರೆ ಯಾಯಿತು.

ಕಾಫಿ—ತಿಂಡಿ ತಂದ ಮಂಜುಳ, ಮಾತು ಮರೆತು ಕುಳಿತಿದ್ದ. ಆ ಜೋಡಿಯನ್ನು ನೋಡಿ ಒಂದು ಕ್ಷಣ ವ್ಯಮರೆತಳು. ತಕ್ಷಣ ಎಚ್ಚೆತ್ತು ಕೊಂಡು ಹೇಳಿದಳು. "ಮೊದಲು ಕಾಫಿ ಕುಡಿದುಬಿಡಿ. ಆಮೇಲೆ ತಿಂಡಿ ತಿನ್ನಬಹುದು."

ಗೌರವ್ ಕಾಫಿ ಕುಡಿದು ಬಿಗುಮಾನ ತೋರದೆ ತಟ್ಟೆಯಲ್ಲಿದ್ದ ಕೋಡುಬಳೆ, ಕೊಬ್ಬರಿ ಮಿಠಾಯಿ ಖಾಲಿ ಮಾಡಿದ. ಅವನು ಹೊರಡು ತ್ತಿದ್ದಂತೆ ಮಂಜುಳ ಮಗಳನ್ನು ಕೇಳಿದಳು "ಸಿರಿ, ಆ ಹುಡುಗ ಯಾರು ?"

"ಆಗಲೇ ಹೇಳಿದ್ನಲ್ಲಮ್ಮ....?"

"ನಾನು ಆ ವಿಚಾರವಲ್ಲ ಕೇಳ್ತಿರೋದು. ಅವನ ತಂದೆ-ತಾಯಿ ಬಗ್ಗೆ ನಿನಗೇನು ಗೊತ್ತು ?"

"ನನಗೆ ಗೌರವ್ ಪರಿಚಯವಾಗಿದ್ದೇ ಕಳೆದ ವರ್ಷ. ಆಮೇಲೆ ಒಂದೆರಡು ಸಲ ಭೇಟಿಯಾಗಿರಬಹುದು. ಇವತ್ತು ಒಬ್ಳೇ ಇದ್ದೀನಲ್ಲಾಂತ ಅವನ ಜೊತೆ ಬಂದೆ. ಅವರ ಮನೆ ವಿಚಾರ ತಿಳಿದುಕೊಳ್ಳುವಷ್ಟು ಪರಿಚಯ ನನಗಿಲ್ಲ."

ಮಗಳ ಧ್ವನಿಯಲ್ಲಿ ಬೇಸರದ ಎಳೆ ಗುರುತಿಸಿದ ಮಂಜುಳ ಕ್ಷಮೆ ಯಾಚಿಸುವ ಧ್ವನಿಯಲ್ಲಿ ಹೇಳಿದಳು.

"ತಪ್ಪು ತಿಳಿಯಬೇಡ ಸಿರಿ. ನಿಮ್ಮಕ್ಕನ ರೀತಿ–ನೀತಿ ನೋಡಿದ ಮೇಲೆ ನನಗೊಂದು ತರಹ ಭಯ. ಏನಾದರಾಗಲಿ ನೀನು ನಿನ್ನ ಹುಷಾರಲ್ಲಿರು."

"ಆಯ್ತಮ್ಮ" ಎಂದಳು ಸಿರಿ. ಆದರೆ ಅವಳ ಮನಸ್ಸಿನಲ್ಲಿ ಮಾತ್ರ ಗೌರವ್ ನಿಧಾನವಾಗಿ ಅಡಿಯಿಟ್ಟಿದ್ದ. ಅವನ ನೆನಪಿನಲ್ಲೇ ಅವಳು ಆ ರಾತ್ರಿ ಕಳೆದಳು.

ಮರುದಿನ ಅವಳು ಕಾಲೇಜ್‌ನಿಂದ ಹೊರಗೆ ಬರಿದಾಗ, ಕಾಲೇಜ್ ಬಸ್ಟಾಪ್ ಬಳಿ ನಿಂತಿದ್ದ ಗೌರವ್ ಕಾಣಿಸಿದ. ಹೃದಯ ಅವನ ಜೊತೆ ಮಾತ ನಾಡಲು ಬಯಸಿದರೂ, ತಾಯಿ ಹೇಳಿದ ನುಡಿಗಳು ನೆನಪಾಗಿ ಅವಳು ನೋಡಿದರೂ ನೋಡದವಳಂತೆ ಮುಂದೆ ನಡೆದಳು. ಒಂದು ವಾರ ಹೀಗೆ ಕಳೆಯಿತು. ಆದರೆ ಅವಳು ಮಾತ್ರ ಅವನನ್ನು ಮಾತಾಡಿಸಲಿಲ್ಲ. ಮತ್ತೆ ಒಂದು ವಾರ ಅವನು ಕಾಣಿಸಲಿಲ್ಲ. 'ಗೌರವ್‌ಗೆ ನನ್ನ ಬಗ್ಗೆ ತುಂಬಾ ಸಿಟ್ಟು ಬಂದಿರಬೇಕು. ಅದಕ್ಕೆ ಬಂದಿಲ್ಲ' ಎಂದುಕೊಂಡಳು ಸಿರಿ. ಹದಿನೈದು ದಿನಗಳು ಉರುಳಿದವು. ಸಿರಿ ಗೌರವನ ನೆನಪಿನಲ್ಲೇ ಕಾಲ ಕಳೆದಳು. ಅವಳ ಮನ ಅವನನ್ನು ನೋಡಲು ಕಾತರಿಸುತ್ತಿತ್ತು.

ಅಂದು ಸೋಮವಾರ. ಅವಳು ಕಾಲೇಜಿನ ಬಳಿ ಬಂದಾಗ ಗೌರವ್ ಅವಳ ಬಳಿ ಬಂದು ಕರೆದ.

"ಸಿರಿ, ನನ್ನ ಜೊತೆ ಬನ್ನಿ."

"ಯಾಕೆ ?"

"ನಾನು ನಿಮ್ಮ ಹತ್ತಿರ ಮಾತನಾಡಬೇಕು"

"ನನಗೆ ಭಯವಾಗುತ್ತೆ."

"ಭಯಪಡಕ್ಕೆ ನಾನೇನು ಹುಲೀನಾ ? ಸಿಂಹಾನಾ ? ನಾನೇನು ನಿಮ್ಮನ್ನು ತಿಂದುಬಿಡಲ್ಲ ಹತ್ತಿ."

"ಉಹುಂ, ನಾನು ಬರಲ್ಲ."

"ಬರದೆ ಇದ್ರೆ ಹೊತ್ತುಕೊಂಡು ಹೋಗ್ತೀನಿ."

ಸುತ್ತ ಮುತ್ತಲಿದ್ದವರು ತಮ್ಮನ್ನು ನೋಡುತ್ತಿದ್ದಾರೆ ಎನ್ನಿಸಿದಾಗ ಸಿರಿ ಮಾತನಾಡದೆ ಬೈಕ್ ಏರಿದಳು.

ಅವನು ಅವಳನ್ನು ಎಂ.ಜಿ. ರೋಡ್‌ನಲ್ಲಿದ್ದ ಒಂದು ಹೋಟೆಲ್‌ಗೆ ಕರೆದೊಯ್ದು ಫ್ಯಾಮಿಲಿ ರೂಂನಲ್ಲಿ ಕುಳಿತು ಕೇಳಿದ.

"ಸಿರಿ, ನೀವ್ಯಾಕೆ ನನ್ನನ್ನು ನೋಡಿದರೂನೋಡದವರಂತೆ ವರ್ತಿಸಿದ್ರಿ"

"ನನಗೆ ಭಯವಾಯ್ತು."

"ನನಗೆಷ್ಟು ಸಿಟ್ಟು ಬಂದಿತ್ತು ಗೊತ್ತಾ ? ನಿಮ್ಮನ್ನು ಮರೆಯಬೇಕು ಅಂದುಕೊಂಡು 15 ದಿನಗಳಿಂದ ಈ ಕಡೆ ಸುಳಿಯಲಿಲ್ಲ. ಆದರೆ ನಿಮ್ಮನ್ನು ಮರೆಯಕ್ಕಾಗಲಿಲ್ಲ. ನಾನು ನಿಮ್ಮಿಂದ ದೂರವಾಗಬೇಕೂಂತ ಪ್ರಯತ್ನಿಸಿದಷ್ಟೂ ನೀವು ಹತ್ತಿರವಾದ್ರಿ. ಕೂತರೆ ನಿಂತರೆ ನೀವೇ ನನ್ನನ್ನು ಕಾಡ್ತಿದ್ದೀರಿ. ಹೇಳಿ ಸಿರಿ, ಈಗ ನಾನೇನು ಮಾಡಲಿ ?"

"ನಂಗೊತ್ತಿಲ್ಲ" ಮುದ್ದುಮುದ್ದಾಗಿ ಹೇಳಿದಳವಳು.

"ನಾನು ನಿಮ್ಮನ್ನು ತುಂಬಾ ಪ್ರೀತಿಸ್ತಿದ್ದೇನೆ. ಹೇಳಿ ಸಿರಿ, ನೀವು ನನ್ನನ್ನು ಪ್ರೀತಿಸ್ತಿಲ್ವಾ ?"

"ನನಗೆ ಪ್ರೀತಿಸಕ್ಕೆ ಭಯ. ಪ್ರೀತಿಸಿದವರನ್ನು ಮದುವೆಯಾಗೋದು ತುಂಬಾ ಕಷ್ಟ."

"ನಿಮಗೆ ಒಂದು ಸಲವೂ ನನ್ನ ನೆನಪಾಗಲಿಲ್ವಾ ?"

"ಪ್ರತಿದಿನ, ಪ್ರತಿ ಕ್ಷಣ ನಾನು ನಿಮ್ಮನ್ನು ನೆನೆಸುತ್ತಿದ್ದೆ."

"ಹಾಗಾದ್ರೆ ನನಗೋಸ್ಕರ ಕಾಯ್ತೀರಾ ? ನಾನು ಎಂ.ಎಸ್. ಮಾಡಿ ನಿಮ್ಮನ್ನು ಮದುವೆಯಾಗ್ತೀನಿ."

"ನಮ್ಮಕ್ಕನ ಮದುವೆಯಾಗದೆ, ನನ್ನ ಮದುವೆಯಾಗಲ್ಲ. ಆದ್ದರಿಂದ ಕಾಯೋದು ಕಷ್ಟವಾಗಲಾರದು."

"ಹಾಗಾದ್ರೆ ನಾನು ನಿಮಗೆ ಒಪ್ಪಿಗೆಯಾ ?" ಅವನು ಮೇಜಿನ ಮೇಲಿದ್ದ ಅವಳ ಕೈ ಹಿಡಿದು ಕೇಳಿದ. ಅವಳು ನಸುನಕ್ಕಳು.

"ಸಿರಿ, ನಾನು ಇನ್ಮೇಲೆ ನೀನು ಅಂತ ಕರೆಯಲಾ ?"

"ಓಕೆ ಬಾಬಾ ಗ್ರ್ಯಾಂಟೆಡ್"

"ಥ್ಯಾಂಕ್ ಯು ಯಾರ್" ಅವನು ತನ್ನ ಕೈಯನ್ನು ತುಟಿಯ ಬಳಿಗೆ ಕೊಂಡೊಯ್ದು ಫ್ಲೈಯಿಂಗ್ ಕಿಸ್ ತೂರಿಬಿಟ್ಟ.

"ಗೌರವ್, ನಿಮಗೆ ನಮ್ಮ ಮನೆಯ ವಿಚಾರ ಏನೂ ಗೊತ್ತಿಲ್ಲ. ಅದನ್ನೆಲ್ಲಾ ನಾನು ಒಂದು ದಿನ ಹೇಳ್ತೀನಿ. ಆಮೇಲೆ ಮದುವೆಯ ಬಗ್ಗೆ ಚಿಂತೆ ಮಾಡಿ."

"ನನ್ನ ಬಗ್ಗೆ ನಿನಗೇನು ಗೊತ್ತಿದೆ ಸಿರಿ ?"

"ಏನೂ ಗೊತ್ತಿಲ್ಲ."

"ನಮ್ತಾಯಿ-ತಂದೆ ನಾಗಪುರದಲ್ಲಿ ನಮ್ಮಕ್ಕನ ಬಳಿ ಇದ್ದಾರೆ. ಅಕ್ಕ-ಭಾವ ಇಬ್ಬರೂ ಇಂಜಿನಿಯರ್ಸ್. ಅವರಿಗೆ ಇಬ್ಬರು ಮಕ್ಕಳು. ಹೆಣ್ಣು ಮಗು ನಾರ್ಮಲ್ ಆಗಿದೆ. ಆದರೆ ಗಂಡುಮಗು 'ಮೆಂಟಲಿ ರಿಟಾರ್ಟೆಡ್'. ಅವನನ್ನು ನೋಡಿಕೊಳ್ಳಲು ಅಮ್ಮ ಅಲ್ಲಿರಲೇಬೇಕು. ಅಪ್ಪ ಅಮ್ಮನ್ನ ಬಿಟ್ಟು ಬಂದಿರುವುದಕ್ಕೆ ಒಪ್ಪಲ್ಲ."

"ಹಾಗಾದ್ರೆ ನೀವಿಲ್ಲಿ ಯಾರ ಜೊತೆ ಇದ್ದೀರಾ ?"

"ನಮ್ಮ ಅಣ್ಣ-ಅತ್ತಿಗೆಯ ಜೊತೆ ಇದ್ದೇನೆ. ಅಣ್ಣ ಲೆಕ್ಚರರ್, ಅತ್ತಿಗೆ ಬ್ಯಾಂಕ್ ಉದ್ಯೋಗಿ. ಅವರಿಗೆ ಇಬ್ಬರು ಹೆಣ್ಣುಮಕ್ಕಳಿದ್ದಾರೆ. ನಾನವರ ಮಗನಂತೆ."

"ಅವರು ನಮ್ಮ ಮದುವೆಗೆ ಒಪ್ತಾರಾ ?"

"ಅಣ್ಣನದು ಲವ್ ಮ್ಯಾರೇಜ್, ಆದ್ದರಿಂದ ಖಂಡಿತಾ ಒಪ್ತಾರೆ."

"ನಿಮ್ತಾಯಿ-ತಂದೆ ?"

"ಅವರಂತಹ ತಾಯಿ-ತಂದೆಯರನ್ನು ಪಡೆಯಲು ನಾನು ತುಂಬಾ ಪುಣ್ಯ ಮಾಡಿದ್ದೆ. ಅವರು ಯಾವತ್ತೂ ನನ್ನ ಆಸೆ ಆಕಾಂಕ್ಷೆಗಳಿಗೆ ಅಡ್ಡಿ ಬರಲ್ಲ."

"ನನ್ನ ವಿಚಾರ ಹೇಳಬೇಕೂಂದ್ರೆ ನಮಗೆ ಬೇಕಾದಷ್ಟು ಆಸ್ತಿ ಇದೆ. ಆದರೆ ನಮ್ಮ ತಂದೆಗೆ ಒಳ್ಳೆಯ ಹೆಸರಿಲ್ಲ. ಅವರಿಗೆ ನಮ್ಮ ತಾಯಿಯ ತಲೆ ಕಂಡ್ರೆ ಆಗಲ್ಲ. ಅಮ್ಮ ಅವರ ದೃಷ್ಟಿಯಲ್ಲಿ 'ಹಳ್ಳಿ ಗುಗ್ಗು' ನಾನು ಅಮ್ಮನ ಮಗಳು. ನಮ್ಮಕ್ಕ ಲಹರಿಗೆ ಸ್ವಾತಂತ್ರ್ಯ–ಸ್ವೇಚ್ಛೆಗೆ ವ್ಯತ್ಯಾಸ ತಿಳಿದಿಲ್ಲ. ಅವಳಿಗೆ ಮದುವೆ, ಸಂಸಾರದಲ್ಲಿ ಆಸಕ್ತಿಯಿಲ್ಲ. ಹರ್ಷ ಎನ್ನುವ ಒಬ್ಬ ಇಂಜಿನಿಯರ್ ಜೊತೆ ತುಂಬಾ ತಿರುಗ್ತಿದ್ದಾಳೆ. ಡಾ|| ಮೋಹನ್ ಮಗಳು

ಲಹರಿಯ ತಂಗಿಯಾದ ಈ ಸಿರಿಯನ್ನು ಯಾರು ಮದುವೆಯಾಗ್ತಾರೆ ?' ಅನ್ನುವ ಚಿಂತೆ ಅಮ್ಮನಿಗೆ."

"ನಿನಗೆ ಆ ಚಿಂತೆ ಬೇಡ. ನಾನಿದ್ದೇನಲ್ಲಾ ?" ಎಂದ ಗೌರವ್.

ಅವಳು ಅಂದೇ ತಾಯಿಯ ಬಳಿ ಹೇಳಿದಳು. ಮಂಜುಳಾಗೆ ಅವಳು ಹೇಳಿದ್ದನ್ನು ಕೇಳಿ ಸಮಾಧಾನವಾಯ್ತು.

"ಸಿರಿ, ಬೆಂಕಿ ಮುಂದೆ ಬೆಣ್ಣೆ ಇದ್ದರೆ ಬೆಣ್ಣೆ ಕರಗದೆ ಇರುವುದಿಲ್ಲ. ನೀನು ನಿನ್ನ ಎಚ್ಚರಿಕೆಯಲ್ಲಿ ಇರಬೇಕು. ಅವನ ಕೋರ್ಸ್ ಮುಗಿದ ತಕ್ಷಣ, ನಾನವನ ತಾಯಿ–ತಂದೆ ಹತ್ರ ಮಾತಾಡ್ತೀನಿ."

"ಗೌರವ್ ಎಂ.ಎಸ್. ಮಾಡಬೇಕೂಂತಿದ್ದಾರೆ."

"ಮಾಡೋದಾದ್ರೆ ಮಾಡಲಿ. ಎಂ.ಎಸ್. ಮಾಡಿದ ಮೇಲೆ ಕೆಲಸ ಕ್ಕಾಗಿ ಅಲೆಯುವುದು ಬೇಡ. ನನ್ನ ಬಳಿ ಇರುವ ಈ ಆಸ್ತಿ–ಪಾಸ್ತಿ ಯಾರಿ ಗೋಸ್ಕರ ? ನಿನಗೆ, ಲಹರಿಗೆ ಹಂಚಿಬಿಡ್ತೀನೆ. ಗೌರವ್‌ಗೆ ಒಂದು ನರ್ಸಿಂಗ್ ಹೋಂ ಹಾಕಿಸಿಕೊಡೋಣ."

ಸಿರಿಗೆ ತುಂಬಾ ಖುಷಿಯಾಯಿತು. ಆಗಾಗ್ಗೆ ಅವಳು ಗೌರವ್‌ನನ್ನು ಭೇಟಿಯಾಗುತ್ತಿದ್ದಳು. ಅವನು ಒಂದೊಂದು ದಿನ ತಾನೇ ಬಂದು ಅವಳನ್ನು ಹೊರಗೆ ಕರೆದೊಯ್ಯುತ್ತಿದ್ದ. ಅವಳನ್ನು ಕರೆದೊಯ್ದು ಅಣ್ಣ–ಅತ್ತಿಗೆ ಯರಿಗೆ ಪರಿಚಯಿಸಿದ್ದ. ಮಂಜುಳ ಕೂಡ ಹೋಗಿ ಅವರ ಪರಿಚಯ ಮಾಡಿ ಕೊಂಡು ಬಂದಿದ್ದಳು. ಅವಳ ಮನಸ್ಸಿಗೆ ಈಗ ಕೊಂಚ ಸಮಾಧಾನ ಸಿಕ್ಕಿತ್ತು.

ಲಹರಿ ಮಾತ್ರ ಎಂದಿನಂತೆ ಇದ್ದಳು. ಅವಳು, ಹರ್ಷ ಸಧ್ಯಕ್ಕೆ ಬಾಂಬೆಗೆ ಹೋಗುವ ಕನಸನ್ನು ಕೈಬಿಟ್ಟಿದ್ದರು. ಬೆಂಗಳೂರಿನಲ್ಲೇ ಒಂದು ಕಂಪ್ಯೂಟರ್ ಕೇಂದ್ರ ಆರಂಭಿಸಬೇಕೆಂದುಕೊಳ್ಳುತ್ತಿದ್ದರು.

ಒಂದು ಸಾಯಂಕಾಲ ಲಹರಿ ಎಂದಿಗಿಂತ ಬೇಗ ಮನೆಗೆ ಬಂದಳು. ಮಂಜುಳಾಗೆ ಆಶ್ಚರ್ಯವಾದರೂ ತೋರಿಸಿಕೊಳ್ಳದೆ ಸುಮ್ಮನಿದ್ದಳು.

"ಮಮ್ಮಿ, ನಾನು ತಾತನ ವಿಲ್ ನೋಡಬೇಕು."

"ಯಾಕೆ ?"

"ಈ ಆಸ್ತಿಯಲ್ಲಿ ನನಗೆ–ಸಿರಿಗೆ ಸಮವಾದ ಪಾಲು ಸಿಗುತ್ತದೆ ಅಲ್ವಾ ?"

"ಆ ವಿಚಾರ ಈಗ ಯಾಕೆ ?"

"ಮಮ್ಮಿ, ನಾನು ಹರ್ಷ ಸೇರಿ ಒಂದು ಕಂಪ್ಯೂಟರ್‌ಸೆಂಟರ್ ಆರಂಭಿಸ ಬೇಕೊಂತ ಇದ್ದೇವೆ. ನಮಗೆ ಅದಕ್ಕೆ ಹಣ ಬೇಕು. ನಾನು ಮೊದಲು 2½–3 ಲಕ್ಷ ಹಾಕಬೇಕು."

"ಹರ್ಷ ಎಷ್ಟು ಹಾಕ್ತಿದ್ದಾನೆ ?"

"ಅವನ ಹತ್ತಿರ ಹಣ ಎಲ್ಲಿದೆ ಮಮ್ಮಿ ? ಅವನು ತಂಗಿಗೆ ಮದುವೆ ಮಾಡಬೇಕೊಂತ ಓಡಾಡ್ತಿದ್ದಾನೆ. ನಾವೇ ಹಣ ಹಾಕಬೇಕು."

"ಬಿಸಿನೆಸ್‌ನಲ್ಲಿ ಪಾರ್ಟನರ್ಸ್ ಅಂದ್ರೆ ಇಬ್ಬರೂ ಸಮವಾಗಿ ಹಣ ಹಾಕ ಬೇಕು. ಅದರ ಬದಲು ನೀನೊಬ್ಬಳೇ ಹಣ ಹಾಕುವುದು ಎಲ್ಲಿಯ ನ್ಯಾಯ?"

"ನ್ಯಾಯ-ಅನ್ಯಾಯದ ಪ್ರಶ್ನೆ ಎತ್ತಬೇಡ. ನನಗೆ ಇನ್ನೊಂದು ವಾರದಲ್ಲಿ ಹಣ ಬೇಕು. ಇಲ್ಲದಿದ್ರೆ ನಾನು ಕೋರ್ಟಿಗೆ ಹೋಗ್ತೀನಿ."

"ಅದರಿಂದ ಏನೂ ಪ್ರಯೋಜನವಾಗಲ್ಲ. ಆಸ್ತಿಯೆಲ್ಲಾ ನನ್ನ ಹೆಸರಿ ನಲ್ಲಿದೆ. ಒಂದು ವೇಳೆ ನಾನು ಅಕಾಲ ಮರಣಕ್ಕೆ ತುತ್ತಾದರೆ ಮಾತ್ರ ನಿಮಗೆ ಈ ಆಸ್ತಿ ಸೇರುತ್ತದೆಯೇ ಹೊರತು, ನಾನು ಬದುಕಿರುವಾಗ ನಿಮ್ಮ ಕೈಗೆ ಬರಲ್ಲ...."

"ನೀನು ಸಾಯುವವರೆಗೂ ನಾನು ಕಾಯುಕ್ಕಾಗತ್ತೇನು ? ನೀನೇನು ಬೆವರು ಸುರಿಸಿ, ಸಂಪಾದಿಸಿದ ಆಸ್ತಿಯೇನಿದು ? ನಾನು ನಿನ್ನ ಮಗಳು. ಆ ಕನಿಕರದಿಂದಾದ್ರೂ ಹಣ ಕೊಡು."

"ನಾನು ಹಣ ಕೊಡಬೇಕಾದ್ರೆ ಒಂದು ಕಂಡೀಷನ್ ಇದೆ."

"ಏನದು ?"

"ನೀನು, ಹರ್ಷ ಮದುವೆಯಾಗಿ. ನನ್ನ ಆಸ್ತಿಯನ್ನು ಸಮಪಾಲು ಮಾಡಿ, ನಿನಗೆ; ಸಿರಿಗೆ ಹಂಚಿಬಿಡ್ತೀನಿ."

"ಅದು ಸಾಧ್ಯವಿಲ್ಲ. ನನ್ನ ವೈಯಕ್ತಿಕ ವಿಚಾರದಲ್ಲಿ ನೀನು ಪ್ರವೇಶಿಸ ಬೇಡ ಮಮ್ಮಿ."

"ನಿನ್ನ ಹರ್ಷ ಈಗ ನಾಯಿಮರಿ ತರಹ ನಿನ್ನ ಹಿಂದೆ-ಮುಂದೆ

ಸುತ್ತಾಡ್ತಿದ್ದಾನೆ. ನಾಳೆ ಚೆನ್ನಾಗಿ ಬಿಸಿನೆಸ್ ನಡೆಯಲಿಕ್ಕಾರಂಭಿಸಿದ ಮೇಲೆ ಅವನು ನಿನ್ನಿಂದ ದೂರವಾದ್ರೆ ನೀನೇನು ಮಾಡ್ತೀಯಾ ?"

"ಅವನ್ಯಾಕೆ ದೂರವಾಗ್ತಾನೆ ?"

"ಅವನ ಮನೆಯವರು ಅವನು ಮದುವೆ ಬೇಡಾಂದ್ರೆ ಸುಮ್ಮನಿದ್ದು ಬಿಡ್ತಾರಾ ? ಅವರ ಒತ್ತಾಯಕ್ಕಾದ್ರೂ ಅವನು ಮದುವೆಯಾಗಲೇ ಬೇಕಾಗುತ್ತದೆ."

"ಹಾಗೇನಾದ್ರೂ ಆದ್ರೆ ನಾನು ಬದುಕಿರಲ್ಲ. ನಾನವನನ್ನು ತುಂಬಾ ಪ್ರೀತಿಸ್ತೀನೆ, ಆರಾಧಿಸ್ತೀನೆ. ಸಾಯುವವರೆಗೂ ನಾವು ಒಟ್ಟಿಗೆ ಇರ್ತೀವೆ. ನೀನು ಏನೇನೋ ಹೇಳಿ ನನ್ನ ತಲೆ ಕೆಡಿಸಬೇಡ. ವಾರದಲ್ಲಿ ನೀನು ನನಗೆ 3 ಲಕ್ಷ ಕೊಡಲೇಬೇಕು. ಇಲ್ಲದಿದ್ರೆ ಹಣಕ್ಕೋಸ್ಕರ ನಾನು ಏನು ಮಾಡಕ್ಕೂ ಸಿದ್ಧ."

"ಏನೇ ಹಾಗಂದ್ರೆ ? ಹಣಕ್ಕೋಸ್ಕರ ನೀನು ನನ್ನನ್ನು ಕೊಲೆ ಮಾಡ್ತಿಯೇನೆ ?" ಕೆರಳಿ ಕೇಳಿದಳು ಮಂಜುಳ.

"ಮಮ್ಮಿ, ನಾನು ಹರ್ಷನಿಗೋಸ್ಕರ ಏನಾದ್ರೂ ಮಾಡಕ್ಕೆ ಸಿದ್ಧ. ಅವನು ಪೆಚ್ಚುಮುಖ ಹಾಕಿಕೊಂಡ್ರೆ ನನಗೆ ನೋಡಕ್ಕಾಗಲ್ಲ. ಅವನ ಆಸೆ ಈಡೇರಿಸುವುದಕ್ಕೆ ನಾನು ಕಳ್ಳತನಾನೂ ಮಾಡ್ತೀನಿ, ಕೊಲೇನೂ ಮಾಡ್ತೀನಿ."

ಲಹರಿ ತಾಯಿಯ ಪ್ರತಿಕ್ರಿಯೆ ಗಮನಿಸದೆ ಎದ್ದುಹೋದಳು. ಮಂಜುಳ ಮಗಳ ಮಾತು ಕೇಳಿ ಸ್ತಂಭೀಭೂತಳಾದಳು. ಹಣಕ್ಕಾಗಿ ತಾಯಿಯನ್ನೇ ಕೊಲೆ ಮಾಡಲು ಸಿದ್ಧಳಾಗಿರುವ ಈ ಹುಡುಗಿ ಹರ್ಷನನ್ನು ಅದೆಷ್ಟು ಪ್ರೀತಿಸುತ್ತಿರಬಹುದು ? ಇವಳ ಪ್ರೀತಿಗೆ ಸ್ಪಂದಿಸದಿರುವನೆ ಅವನು ? ಈ ಹುಡುಗಿ ತನ್ನ ಹಣವನ್ನೆಲ್ಲಾ ಅವನಿಗಾಗಿ ಖರ್ಚುಮಾಡಿ, ದುಃಖ ಅನುಭವಿಸು ತ್ತಾಳೇನೋ ಅನ್ನಿಸುತ್ತಿತ್ತು. 'ಒಂದು ವೇಳೆ ಅವನು ಇವಳಿಗೆ ಮೋಸ ಮಾಡಿದರೆ ಗತಿಯೇನು ?' ಎಂಬ ಯೋಚನೆಯೂ ಅವಳನ್ನು ಕಾಡತೊಡ ಗಿತು.

ವಾರದಲ್ಲಿ ಮಂಜುಳ ತನ್ನ ಫಿಕ್ಸೆಡ್ ಡಿಪಾಸಿಟ್ ಮೇಲೆ ಸಾಲ ತೆಗೆದು ಕೊಂಡು 3 ಲಕ್ಷ ರೂಪಾಯಿ ಮಗಳ ಕೈಗೆ ಕೊಟ್ಟಳು. ಒಂದು ತಿಂಗಳಲ್ಲಿ

ಹೆಚ್.ಎಲ್. ಕಂಪ್ಯೂಟರ್ ಸೆಂಟರ್ ಆರಂಭವಾಯ್ತು. ಪ್ರಾರಂಭೋತ್ಸವಕ್ಕೆ ಲಹರಿ ಕಡೆಯಿಂದ ಮಂಜುಳ-ಸಿರಿ ಹೋಗಿ ಬಂದರು. ಆದರೆ ಹರ್ಷನ ಕಡೆ ಯಿಂದ ಯಾರೂ ಬರಲಿಲ್ಲ.

ಒಂದೆರಡು ತಿಂಗಳು ಉರುಳಿತು. ಲಹರಿಯ ಬೇಡಿಕೆಗಳಿಗೆ ಕೊನೆ ಮೊದಲಿರಲಿಲ್ಲ. ಕಂಪ್ಯೂಟರ್ ಸೆಂಟರ್ ಬಾಡಿಗೆ ತಿಂಗಳಿಗೆ 5000 ರೂ. ಬಾಡಿಗೆಗೆ ಜಾಗ ತೆಗೆದುಕೊಳ್ಳುವಾಗ 50,000 ರೂ. ಅಡ್ವಾನ್ಸ್ ಮಂಜುಳ ಕೊಡಬೇಕಾಯ್ತು. ಹಠ ಮಾಡಿ ಫೋನ್ ಹಾಕಿಸಿದಳು. ಫರ್ನೀಚರ್ ಕೊಂಡಳು. ಅವಳು ಹರ್ಷ ಸೇರಿ ಕಂಪ್ಯೂಟರ್ ಕೊಳ್ಳಲು 10 ಲಕ್ಷ ರೂ. ಲೋನ್‌ಗೆ ಅಪ್ಲೈ ಮಾಡಿದರು. ಮಂಜುಳ ಷೂರಿಟಿಯಾಗಿ ನಿಲ್ಲಬೇಕಾ ಯಿತು. ಅವಳ ಅಕೌಂಟ್, ಡಿಪಾಜಿಟ್ಸ್ ಬ್ಯಾಂಕ್‌ನಲ್ಲಿದ್ದುದರಿಂದ, ಅಲ್ಲಿಯ ಮ್ಯಾನೇಜರ್‌ಗೆ ಅವಳ ಸ್ಥಿರ-ಚರ ಆಸ್ತಿಗಳ ಪರಿಚಯವಿದ್ದುದರಿಂದ, ಲೋನ್ ಸಿಗುವುದು ಕಷ್ಟವಾಗಲಿಲ್ಲ.

ಮಗಳು ಕೇಳಿದಾಗಲೆಲ್ಲಾ ಹೀಗೆ ಹಣ ಕೊಡುತ್ತಾ ಹೋದರೆ ತನ್ನ ಆಸ್ತಿಯೆಲ್ಲಾ ಮಂಜಿನಂತೆ ಕರಗಿ ಹೋಗುವುದರಲ್ಲಿ ಸಂಶಯವಿಲ್ಲ ಎನ್ನಿಸಿತು. ಅವಳು ತಮ್ಮ ಫ್ಯಾಮಿಲಿ ಡಾಕ್ಟರ್ ಕೃಷ್ಣಕಾಂತನನ್ನು ಭೇಟಿ ಮಾಡಿದಳು.

"ನಾನು ಈ ಆಸ್ತಿಯನ್ನೆಲ್ಲಾ ಮಾರಿ, ಬಂದ ಹಣವನ್ನು ನನ್ನ ಇಬ್ಬರು ಮಕ್ಕಳಿಗೆ ಹಂಚಿಬಿಡೋಣಾಂತ ಇದ್ದೇನೆ. ನಿಮ್ಮ ತಂದೆಯವರಿಗೆ ಈ ವಿಚಾರ ಗೊತ್ತಿತ್ತು. ನಮ್ಮ ಮಾವನವರ ವಿಲ್ ಪ್ರಕಾರ ನಾನು ಈ ಆಸ್ತಿ ಮಾರು ವಂತಿಲ್ಲ. ನಾನು ಸತ್ತ ನಂತರವೇ ಈ ಹಣ ನನ್ನ ಹೆಣ್ಮಕ್ಕಳಿಗೆ ಸೇರುತ್ತದೆ. ಆದ್ರೆ ಅವರಿಗೆ ಈಗ ಹಣದ ಅವಶ್ಯಕತೆಯಿದೆ. ಏನ್ಮಾಡೋದು ಹೇಳಿ?"

"ನಾನು ಯೋಚನೆ ಮಾಡಿ ಹೇಳ್ತೀನಮ್ಮ ಇಂತಹ ಒಳ್ಳೆಯ ಆಸ್ತಿ ಯಾಕೆ ಮಾರ್ತೀರಿ? ಈ ಆಸ್ತಿ ಸಂಪಾದಿಸುವುದಕ್ಕೆ ನಿಮ್ಮ ಮಾವ ತುಂಬಾ ಕಷ್ಟಪಟ್ಟಿದ್ದಾರೇಂತ ನಮ್ಮ ತಂದೆಯವರು ಹೇಳ್ತಿದ್ರು" ಎಂದರಾತ.

ಆದರೆ ಪುನಃ ಈ ಸಮಸ್ಯೆಗಳ ಬಗ್ಗೆ ತಲೆ ಕೆಡಿಸಿಕೊಳ್ಳಲು ಅವಕಾಶವೇ ಬರಲಿಲ್ಲ. ಆ ತಿಂಗಳ ಕೊನೆಯಲ್ಲಿ ಮಂಜುಳ ತಾಯಿ-ತಂದೆ ಮಗಳ ಮನೆಗೆ ಬಂದರು. ಅವರಿಗೆ ಮಗಳ ಕಷ್ಟ-ಸುಖಗಳ ಅರಿವಿತ್ತು. ಲಹರಿಯ ಚಿಂತೆ ಅವಳನ್ನು ಹಗಲೂ ರಾತ್ರಿ ಕಾಡುತ್ತಿದೆಯೆಂದು ಅವರಿಗೆ ಗೊತ್ತಿತ್ತು.

"ಮಂಜು, ನಮ್ಮ ಮನೆ, 2 ಸೈಟು, ಒಡವೆ, ಬೆಳ್ಳಿಪಾತ್ರೆ, ಟಿ. ನರಸೀಪುರದ ಹತ್ತಿರ ಇರುವ 8 ಎಕರೆ ಗದ್ದೆ ನಿನ್ನ ಹೆಸರಿಗೆ ಮಾಡಿದ್ದೇವೆ. ಈ ವಿಚಾರ ನೀನು ಈಗಲೇ ಮಕ್ಕಳಿಗೆ ಹೇಳಬೇಡ. ಈ ಆಸ್ತಿಯನ್ನು ಲಹರಿ ಕರಗಿಸಿದರೂ, ಸಿರಿಗೆ ನಮ್ಮ ಆಸ್ತಿ ಇರುತ್ತದೆ. ನೀನು ಸಿರಿ ಬಗ್ಗೆ ಚಿಂತೆ ಮಾಡಬೇಡ." ಎಂದರು.

"ಆಸ್ತಿಯನ್ನೆಲ್ಲಾ ನನ್ನ ಹೆಸರಿಗೆ ಯಾಕೆ ಮಾಡಿದ್ರಿ ? ಯಾವುದಾದರೂ ಅನಾಥಾಲಯಕ್ಕೆ ಬರೆಯಬೇಕಿತ್ತು."

"ನಮ್ಮ ಕೈಲಾದಷ್ಟು ಅನಾಥಾಶ್ರಮ, ವೃದ್ಧಾಶ್ರಮಗಳಿಗೆ ಕೊಟ್ಟಿದ್ದೇವಮ್ಮ. ಕೈ–ಕಾಲಿನಲ್ಲಿ ಶಕ್ತಿ ಇರುವವರೆಗೂ ಮೈಸೂರಿನಲ್ಲಿರುತ್ತೇವೆ. ಆಮೇಲೆ ನೀನೇ ನಮ್ಮನ್ನು ನೋಡಿಕೊಳ್ಳಬೇಕು."

"ಈಗಲೇ ಬಂದುಬಿಡಿ. ನನಗೂ ಸಹಾಯವಾಗುತ್ತೆ."

"ಬೇಡ ಬೇಡ, ಈಗ ಬರಲ್ಲ" ಎಂದರವರು.

ಲಹರಿ-ಹರ್ಷರ ಓಡಾಟ ಮಿತಿ ಮೀರಿದಾಗ ಮಂಜುಳ ಗಂಡನ ಬಳಿ ತಾನಾಗಿ ಹೇಳಿದಳು. "ನೋಡಿ, ನೀವು ಲಹರಿಗೆ ಮದುವೆ ಮಾಡಕ್ಕೆ ಸಿದ್ಧರಿಲ್ಲ. ಹರ್ಷನ ಜೊತೆ ಈ ವಿಚಾರ ಮಾತಾಡಕ್ಕೂ ನೀವು ಸಿದ್ಧರಿಲ್ಲ. ಅವಳು ಲಂಗು-ಲಗಾಮಿಲ್ಲದೆ ಸುತ್ತುತ್ತಿದ್ದಾಳೆ. ನನಗಿನ್ನು ಸುಮ್ಮನಿರಕ್ಕಾಗಲ್ಲ. ನಾನೇ ಹೋಗಿ ಅವನ ತಾಯಿ–ತಂದೇನ್ನ ಭೇಟಿಯಾಗಿ ಬರ್ತೀನಿ."

"ಲಹರಿಗೆ ಮದುವೇನೇ ಇಷ್ಟವಿಲ್ಲ. ಏನು ಮಾಡುವ ಹಾಗಿದ್ದೀಯ ನೀನು ?"

"ಕಡೆಯ ಪ್ರಯತ್ನ ಮಾಡಿಬಿಡ್ತೀನಿ. ಈ ವರ್ಷದಲ್ಲಿ ಸಿರಿ ಮದುವೆ ನಡೆಯಲೇಬೇಕು. ಅಕ್ಕನಿಗೆ ಮದುವೆ ಮಾಡದೆ, ತಂಗಿಗೆ ಮದುವೆ ಮಾಡಕ್ಕೆ ನನ್ನ ಮನಸ್ಸು ಒಪ್ತಿಲ್ಲ."

"ಏನಾದ್ರೂ ಮಾಡ್ಕೋ. ನಿನ್ನ ತಂಟೆಗೆ, ನಿನ್ನ ಮಕ್ಕಳ ತಂಟೆಗೆ ನಾನು ಬರಲ್ಲ."

"ಸಿರಿ ಮದುವೆಯಾದ್ರೆ ನೀವೇ ಧಾರೆ ಎರೆದುಕೊಡಬೇಕಾಗುತ್ತೆ. ಅವಳ ಮದುವೆಯಾಗ್ತಿರುವ ಹಾಗೇ ಈ ಮನೆ ಮಾರಿಬಿಡ್ತೀನಿ."

"ಬುದ್ಧಿ ಇದೆಯೇನೆ ನಿನಗೆ ? ಈ ಮನೆ ಮಾರಿಬಿಟ್ರೆ ನಾನೆಲ್ಲಿರೋದು ? ನೀನು ಬೇರೆ ಏನನ್ನಾದ್ರೂ ಮಾಡ್ಕೊ. ಆದ್ರೆ ಈ ಮನೆ ಮಾತ್ರ ಮಾರ ಬೇಡ."

"ಯಾಕೆ ?"

"ನಮ್ಮಾ್ತಯಿ-ತಂದೆ ಬಾಳಿ ಬದುಕಿದ ಮನೆಯಿದು. ನಾನು ಇಲ್ಲೇ ಇರೋದು."

"ದಿನವ 24 ಗಂಟೆಯಲ್ಲಿ 18 ಗಂಟೆ ಹೊರಗೇ ಇರ್ತೀರ. ನಿಮಗೆ ಏಕೆ ಮನೆ ?"

"ನನಗೆ ಬೇಕೇಬೇಕು ನಾಳೆ ಲಹರಿ ತಾನೆ ಒಬ್ಬಳೇ ಎಲ್ಲಿರ್ತಾಳೆ ?"

ಮಂಜುಳ ಮಾತಾಡಲಿಲ್ಲ. ಅವಳ ತುಟಿಗಳ ಮೇಲೆ ವಿಷಾದದ ನಗೆಯೊಂದು ತೇಲಿಬಂತು. 'ನೀನು ಮನೆ ಮಾರಿದ್ರೆ ಲಹರಿ ಎಲ್ಲಿರ್ತಾಳೆ ? ನಾನೆಲ್ಲಿರಬೇಕು ? ಎಂದು ಕೇಳಿದನೇ ಹೊರತು ನೀನೆಲ್ಲಿರ್ತೀಯಾ ? ಎಂದು ಬಾಯಿಮಾತಿಗೂ ಕೇಳಲಿಲ್ಲ.

ಲಹರಿ ತನ್ನ ಬಿಸಿನೆಸ್‌ನಲ್ಲಿ ಸಂಪೂರ್ಣವಾಗಿ ಮುಳುಗಿಹೋಗಿದ್ದಳು. ಅವಳು ಮನೆ ಸೇರುವುದೇ ಅಪರೂಪವಾಗಿತ್ತು. ಬೆಳಗ್ಗೆ 9 ಗಂಟೆಗೆ ಹರ್ಷ ಬೈಕ್ ತೆಗೆದುಕೊಂಡು ಬರುತ್ತಿದ್ದ. ಹೆಚ್ಚು ಕಡಿಮೆ ಪ್ರತಿದಿನ ಅವನಿಗೆ ಅಲ್ಲಿ ತಿಂಡಿ ಕೊಡಲಾಗುತ್ತಿತ್ತು. ಅವನ ಜೊತೆ ಅವಳು ಹೊರಗೆ ಹೊರಟರೆ ಅವಳು ವಾಪಸ್ಸು ಬರುತ್ತಿದ್ದುದ್ದು ರಾತ್ರಿ 11-30, 12 ಗಂಟೆಗೆ. ಒಮ್ಮೊಮ್ಮೆ ಮಧ್ಯಾಹ್ನ ಹರ್ಷನನ್ನೂ ಕರೆದುಕೊಂಡು ಊಟಕ್ಕೆ ಬರುತ್ತಿದ್ದಳು. ಆದರೆ ಆಗ ಬಾಯ್ಮುಚ್ಚಿಕೊಂಡಿರುತ್ತಿರಲಿಲ್ಲ ಅಡಿಗೆಯ ಮೇಲೆ ನೂರೆಂಟು ಕಾಮೆಂಟ್ಸ್ ಮಾಡಿ, ತಟ್ಟೆ ಲೋಟ ಎಸೆದು, ತಾಯಿಯನ್ನು ಗದರಿಸಿ ಹೋಗುತ್ತಿದ್ದಳು. ಹರ್ಷ ಮೂಕ ಪ್ರೇಕ್ಷಕನಂತೆ ಕುಳಿತಿರುತಿದ್ದ. ಅವನ ಮನೆಗೆ ಹೋಗಿ ಮದುವೆಯ ವಿಚಾರ ಪ್ರಸ್ತಾಪ ಮಾಡುವುದೋ-ಬೇಡವೋ ಎಂದು ಯೋಚನೆ ಮಾಡುತ್ತಿರುವಾಗಲೇ ಒಂದು ಭಾನುವಾರ ರಾತ್ರಿ ಒಂದು ಘಟನೆ ನಡೆಯಿತು.

ಅಂದು ಸಾಯಂಕಾಲ ಗೌರವ್ ಬಂದು ಸಿರಿಯನ್ನು ತನ್ನ ಮನೆಗೆ ಕರೆದೊಯ್ದಿದ್ದ. ಅವನ ತಾಯಿ ತಂದೆ ಊರಿಗೆ ಬಂದಿದ್ದರು. ಅವರು ಸಿರಿಯನ್ನು

ನೋಡಲು ಬಯಸಿದ್ದರು. ಅವಳು ಗೌರವ್ ಜೊತೆ 8 ಗಂಟೆಗೆ ವಾಪ ಸ್ಸಾಗಿದ್ದಳು. ತಾಯಿ–ಮಗಳು ಒಟ್ಟಿಗೆ ಊಟ ಮುಗಿಸಿದರು. ರಾತ್ರಿ 12 ಹೊಡೆದರೂ ಅಪ್ಪನಾಗಲಿ, ಮಗಳಾಗಲಿ ಮನೆಗೆ ಬಂದಿರಲಿಲ್ಲ.

ಗೌರವ್ ಕನಸು ಕಾಣುತ್ತಾ ಮಲಗಿದ್ದ ಸಿರಿಗೆ ಕಾಲಿಂಗ್‌ಬೆಲ್ ಶಬ್ದ ದಿಂದ ಎಚ್ಚರವಾಯಿತು. ರಂಗ ಕೀ ಹೋಲ್‌ನಿಂದ ನೋಡಿ ಬಾಗಿಲು ತೆಗೆದ ಇಬ್ಬರು ಗಂಡಸರು ಲಹರಿ, ಹರ್ಷನ ಜೊತೆ ನಿಂತಿದ್ದರು ರಂಗ ಗಾಬರಿ ಯಿಂದ "ಅಮ್ಮ" ಎಂದು ಕೂಗಿದಾಗ ಮಂಜುಳ ಹೊರಗೆ ಬಂದಳು.

"ನೋಡಿ ತಾಯಿ, ಇವರಿಬ್ರೂ ಬಾರ್‌ನಲ್ಲಿ ಕಂಠಮಟ್ಟ ಕುಡಿದು ಬಿದ್ದಿದ್ರು. ಬಾರ್ ಯಜಮಾನ ಇವರಿಬ್ಬರನ್ನೂ ಆಚೆ ಹಾಕಿ ಬಾಗಿಲು ಹಾಕಬೇಕೊಂತಿದ್ದ. ನಾವು ಕಾರ್‌ನಲ್ಲಿ ಕರ್ಕೊಂಡು ಬಂದೆವು. ಬೆಳಗ್ಗೆ ಹೋಗಿ ಬಾರ್ ಹತ್ತಿರ ಇರುವ ಬೈಕ್ ತೆಗೆದುಕೊಳ್ಳೋಕೆ ಹೇಳಿ" ಎಂದ ರೆಡ್ ಟೀಶರ್ಟ್‌ಧಾರಿ.

"ಕುಡಿಯಬೇಕು ಅನ್ನಿಸಿದ್ರೆ ಮನೆಯಲ್ಲೇ ಕುಳಿತು ಕುಡಿಯಕ್ಕೆ ಹೇಳಿ. ಮರ್ಯಾದಸ್ಥರ ಮನೆ ಹೆಣ್ಮಕ್ಕಳು ಹೀಗಿರ್ತಾರಾ ? ಇದೆಲ್ಲಾ ಏನು ಚೆನ್ನಾಗಿರತ್ತೆ ? ನೀವು ಕೊಂಚ ಬುದ್ಧಿ ಹೇಳಿ" ಎಂದ ಮತ್ತೊಬ್ಬ.

ಮಂಜುಳ ಉತ್ತರಿಸಲಾರದೆ ನಾಚಿಕೆಯಿಂದ ತಲೆ ತಗ್ಗಿಸಿದಳು.

ಮಂಜುಳ ಮಗಳನ್ನು ಕರೆದುಕೊಂಡು ಹೋಗಿ ರೂಂನಲ್ಲಿ ಮಲಗಿ ಸಿದಳು.

"ರಂಗ, ಹರ್ಷನ್ನ ಗೆಸ್ಟ್ ರೂಂನಲ್ಲಿ ಮಲಗಿಸು" ಎಂದು ಹೇಳಿ ತನ್ನ ರೂಂಗೆ ಹೋಗಿ ಬಾಗಿಲು ಹಾಕಿಕೊಂಡಳು ಆ ವೇಳೆಗೆ ಸಿರಿಯೂ ಎದ್ದಿದ್ದಳು.

"ಇದೇನಮ್ಮಾ ಲಹರಿ ಹೀಗಾಗಿಬಿಟ್ಟಿದ್ದಾಳೆ ?"

"ನಾನು ಉತ್ತರ ಕೊಡುವ ಸ್ಥಿತಿಯಲ್ಲಿಲ್ಲಮ್ಮ. ದಯವಿಟ್ಟು ನೀನು ನನ್ನನ್ನು ಏನೂ ಕೇಳಬೇಡ" ಎಂದಳು ಮಂಜುಳ ಬೇಸರದಿಂದ.

ಸಿರಿ ಮಾತಾಡಲಿಲ್ಲ.

ಮರುದಿನ ಲಹರಿಗೆ ಎಚ್ಚರವಾದಾಗ, ಗಂಟೆ ಎಂಟೂವರೆ ದಾಟಿತ್ತು.

ಆಗ ಅವಳಿಗೆ ತಾವು ರಾತ್ರಿ ಬಾರ್‌ನಲ್ಲಿ ಕುಳಿತಿದ್ದುದು ನೆನಪಾಯ್ತು. ಅವಳು ರಂಗನನ್ನು ಕೂಗಿದಳು.

"ರಂಗ, ಹರ್ಷ ಎಲ್ಲಿ ?"

"ಗೆಸ್ಟ್ ರೂಂನಲ್ಲಿದ್ದಾರೆ."

"ನಾನು ಮುಖ ತೊಳೆದು ಬರ್ತೀನಿ. ಕಾಫಿ ತೆಗೊಂಡು ಬಾ."

ಅವಳು ಕಾಫಿ ಕುಡಿದು ಹರ್ಷನನ್ನು ಎಬ್ಬಿಸಿದಳು. ಅವನು ಕಾಫಿ ಕುಡಿದು ಹೊರಟಾಗ ಮಂಜುಳ ಎದುರಾದಳು.

"ಏನಪ್ಪಾ, ನೀನು ಒಳ್ಳೆಯ ಹುಡುಗಾಂತ ಲಹರಿಯನ್ನು ನಿನ್ನ ಜೊತೆ ಕಳುಹಿಸಿದ್ರೆ ನೀನು ಹೀಗಾ ಮಾಡೋದು ? ನಿಮ್ಮ ನಡವಳಿಕೆಗೆ ಅರ್ಥವಿದೆ ಯೇನು ? ಇಂತಹ ಓಡಾಟ ಯಾಕೆ ಬೇಕು ? ನಾನು ನಿಮ್ತಂದೆ ಹತ್ತಿರ ಮಾತಾಡ್ತೀನಿ. ನೀನು ಲಹರಿಯನ್ನು ಮದುವೆಯಾಗು."

"ಆಂಟಿ, ನಾನು ಕ್ಲಬ್‌ಗೆ, ಬಾರ್‌ಗೆ ಹೋಗುವುದನ್ನು ಕಲಿತಿರುವುದೇ ಲಹರಿಯಿಂದ. ಅವಳಿಗಾಗಲಿ, ನನಗಾಗಲಿ ಮದುವೆಯಲ್ಲಿ ಕೊಂಚವೂ ಆಸಕ್ತಿಯಿಲ್ಲ. ವಿ ಆರ್ ಜಸ್ಟ್ ಫ್ರೆಂಡ್ಸ್."

"ಇಂತಹ ಸ್ನೇಹ ಹುಡುಗ–ಹುಡುಗಿಯರ ನಡುವೆ ಚೆನ್ನಾಗಿರಲ್ಲ."

"ನಿಮ್ಮ ಮಗಳಿಗೆ ನೀವು ಮೊದಲು ಬುದ್ಧಿ ಹೇಳಿ. ಮೂರು ಕಾಸೂ ಇಲ್ಲದ ನನಗೆ ಹಣ ನೀಡಿ, ಈ ಸಮಾಜದಲ್ಲಿ ನಾನು ನನ್ನ ಕಾಲಿನ ಮೇಲೆ ನಿಂತುಕೊಳ್ಳುವಂತೆ ಮಾಡಿದ್ದಾಳೆ. ನಾನವಳ ಮಾತು ಮೀರಲಾರೆ. ಸಾರಿ ಆಂಟಿ."

ಮಂಜುಳಾಗೆ ಅವನ ಮಾತು ಕೇಳಿ ತಲೆ ಚಚ್ಚಿಕೊಳ್ಳುವಂತಾಯ್ತು.

ಒಂದು ವಾರ ಕಳೆಯಿತು. ಅಂದು ಭಾನುವಾರ ಬೆಳಗ್ಗೆ ಸಿರಿ ಗೌರವನನ್ನು ತಿಂಡಿಗೆ ಕರೆದಿದ್ದಳು. ಅವನಿಗಾಗಿ ಪೂರಿ ಸಾಗು, ಸಿಹಿ ಪೊಂಗಲ್, ಪಕೋಡ ಮಾಡಿದ್ದಳು. ಗೌರವ್ ತಿಂಡಿ ತಿಂದು ಸಿರಿಯನ್ನು ಕರೆದುಕೊಂಡು ಹೊರಟ. ಅವರು ಹೋದ ಸ್ವಲ್ಪ ಹೊತ್ತಿಗೆ ಹರ್ಷ ಬಂದ. ಅವನಿಗೂ ಅಲ್ಲೇ ತಿಂಡಿ ಆಯಿತು. ಇಬ್ಬರೂ ಹೊರಗೆ ಹೊರಟರು. ಅವರು ಪುನಃ ಬಂದಾಗ ಸಾಯಂಕಾಲ ಐದು ಗಂಟೆಯಾಗಿತ್ತು. ರಂಗ ಇಬ್ಬರಿಗೂ ಕಾಫಿ ಕೊಟ್ಟ.

ಲಹರಿ ಹರ್ಷನನ್ನು ಕರೆದುಕೊಂಡು ತನ್ನ ಬೆಡ್‌ರೂಂಗೆ ಹೋಗಿ ಬಾಗಿಲು ಹಾಕಿಕೊಂಡಳು. ಅವರು ಹೊರಗೆ ಬಂದಾಗ 7 ಗಂಟೆಯಾಗಿತ್ತು. ಲಹರಿಯ ಉಡುಪುಗಳು ಅಸ್ತವ್ಯಸ್ತವಾಗಿದ್ದವು. ಮಂಜುಳ ಮಗಳ ವರ್ತನೆಯಿಂದ ತಾಳ್ಮೆ ಕಳೆದುಕೊಂಡು, ಹರ್ಷ ಹೊರಗೆ ಹೋಗುತ್ತಿದ್ದಂತೆ ಕೇಳಿದಳು "ಇದೇನೆ ಲಹರಿ, ಮರ್ಯಾದಸ್ಥ ಮನೆಯ ಹೆಣ್ಣು ಮಕ್ಕಳು ನಡೆದುಕೊಳ್ಳುವ ರೀತೀನಾ ಇದು ? ಇದನ್ನು ಮನೆ ಅಂದ್ಕೊಂಡಿದ್ದೀಯಾ ? ಹೋಟೆಲ್ ಅಂದ್ಕೊಂಡಿದ್ದೀಯೋ ?"

"ನಾವು ಪ್ರತಿ ವಾರ ಹೋಟೆಲ್‌ಗೇ ಹೋಗ್ತಿದ್ದೆವು ಮಮ್ಮಿ. ಅಲ್ಲಿ ಒಂದು ರೂಂಗೆ ಗಂಟೆಗೆ 200 ರೂ. ಬಾಡಿಗೆ ಕೊಡಬೇಕು. ದಿನಕ್ಕೆ 600 ರೂ. ಖರ್ಚು ಮಾಡಕ್ಕೆ ನಮಗೇನು ಹುಚ್ಚಾ ? ಈ ಮನೆಯಲ್ಲಿ ನನಗೂ ಪಾಲಿದೆ ತಾನೆ ? ಅದಕ್ಕೆ ಹರ್ಷನ್ನ ಕರೆದುಕೊಂಡು ಬಂದೆ."

"ನೀನು ಮಾಡ್ತಿರೋದು ತಪ್ಪಲ್ವಾ ಲಹರಿ ?"

"ಯಾವುದು ತಪ್ಪಮ್ಮಾ ? ನೀನಿನ್ನೂ ಆರನೇ ಶತಮಾನದಲ್ಲಿ ಇದ್ದೀಯ ಇದು 20ನೇ ಶತಮಾನ. ಅಮೇರಿಕಾ, ಇಂಗ್ಲೆಂಡ್‌ಗಳಲ್ಲಿ ಗಂಡು-ಹೆಣ್ಣು ಎಷ್ಟು ಫ್ರೀಯಾಗಿ ಬಿಹೇವ್ ಮಾಡ್ತಾರೆ ಗೊತ್ತಾ ?"

"ಇದು ಅಮೇರಿಕಾನೂ ಅಲ್ಲ, ಇಂಗ್ಲೆಂಡೂ ಅಲ್ಲ-ಭಾರತ. ಹೆಣ್ಣು ಮಕ್ಕಳು ನಮ್ಮ ದೇಶದಲ್ಲಿ ಶೀಲ ಉಳಿಸಿಕೊಳ್ಳೋಕೆ ಪ್ರಾಣ ತ್ಯಾಗ ಮಾಡಲಿಕ್ಕೂ ಹೇಸದವರಲ್ಲ. ಇಂತಹ ಪವಿತ್ರ ದೇಶದಲ್ಲಿ ಹುಟ್ಟಿ, ಈ ರೀತಿ ವರ್ತಿಸುವುದಕ್ಕೆ ನಾಚಿಕೆಯಾಗಲ್ವಾ ನಿನಗೆ ?"

"ಮಮ್ಮಿ, ನಿಮಗೇನು ಗೊತ್ತು ? ಹಸಿವೆ ನೀರಡಿಕೆ ತರಹ...."

"ಮುಚ್ಚು ಬಾಯಿ ಮುಂದೆ ಮಾತಾಡಬೇಡ ನಿನ್ನ ಅಭಿಪ್ರಾಯ ಮತ್ತು ನನ್ನ ಅಭಿಪ್ರಾಯಗಳ ನಡುವೆ ಹೊಂದಾಣಿಕೆಯೇ ಇಲ್ಲದಿರುವಾಗ ಮಾತಾಡಿ ಪ್ರಯೋಜನವೇನು ?"

ಲಹರಿ ಉತ್ತರಿಸದೆ ಮತ್ತೆ ರೂಮು ಸೇರಿದಳು.

ಮಂಜುಳ ಮತ್ತೆ ಸುಮ್ಮನೆ ಕೂಡಲಿಲ್ಲ. ಹರ್ಷ ಬಂದಾಗ ಸೂಕ್ಷ್ಮವಾಗಿ ಅವನ ಮನೆ ಎಲ್ಲಿದೆಯೆಂದು ತಿಳಿದುಕೊಂಡಳು. ಆದಷ್ಟು ಬೇಗ ಅವನ ತಾಯಿ-ತಂದೆಯರನ್ನು ಭೇಟಿ ಮಾಡಬೇಕೆಂದುಕೊಂಡಳು.

ಒಂದು ಭಾನುವಾರ ಹತ್ತು ಗಂಟೆಗೆ ಮಂಜುಳ ಸಿರಿಯನ್ನು ಕರೆದು ಕೊಂಡು ರಾಜಾಜಿನಗರದಲ್ಲಿ ಭಾಷ್ಯಂ ಸರ್ಕಲ್ ಬಳಿ ಇದ್ದ ಅವನ ಮನೆಗೆ ಹೊರಟಳು. ಅವರ ಮನೆಯ ಮುಂಬಾಗಿಲು ಹಾಕಿತ್ತು. ಸಿರಿ ಕಾಲಿಂಗ್ ಬೆಲ್ ಒತ್ತಿದಳು.

ಬಾಗಿಲು ತೆರೆದ ವೃಂದಮ್ಮ ರೇಷ್ಮೆ ಸೀರೆಯುಟ್ಟು, ತುರುಬು ಕಟ್ಟಿ, ದುಂಡು ಕುಂಕುಮವಿಟ್ಟುಕೊಂಡು ಕಳೆಕಳೆಯಾಗಿ ಕಾಣುತ್ತಿದ್ದ ಮುತ್ತೈದೆ ಯನ್ನು ಕಂಡು ಆಶ್ಚರ್ಯವಾದರೂ ತೋರಿಸಿಕೊಳ್ಳದೆ ಒಳಗೆ ಕರೆದರು.

"ಬನ್ನೀಮ್ಮ ಯಾರು ಬೇಕು ?"

"ನೀವು ಗೋಪಾಲರಾಯರ ಕುಟುಂಬಾನಾ ?"

"ಹೌದು, ಬನ್ನಿ ಕುಳಿತುಕೊಳ್ಳಿ"

ತಾಯಿ–ಮಗಳು ಹಾಲ್‌ನಲ್ಲಿದ್ದ ಸೋಫಾದಲ್ಲಿ ಕುಳಿತರು.

"ನಾನು ನಿಮ್ಮ ಹತ್ತಿರ ಮಾತಾಡಬೇಕಿತ್ತು. ನನ್ನ ಹೆಸರು ಮಂಜುಳ. ನಮ್ಮ ಯಜಮಾನರು ಡಾಕ್ಟರ್. ಇವಳು ನನ್ನ ಎರಡನೆಯ ಮಗಳು ಸಿರಿ. ಎಲೆಕ್ಟ್ರಾನಿಕ್ಸ್ ಬಿ ಎಸ್.ಸಿ ಮಾಡುತ್ತಿದ್ದಾಳೆ.

ನಸುಗುಲಾಬಿ ಪ್ರಿಂಟೆಡ್ ಸಿಲ್ಕ್‌ನಲ್ಲಿ ಮುದ್ದಾಗಿ ಕಾಣುತ್ತಿದ್ದವಳನ್ನು ಆಕೆ ಮೆಚ್ಚುಗೆಯಿಂದ ನೋಡಿದರು.

"ನಮ್ಮ ಯಜಮಾನರು ದೇವರಪೂಜೆ ಮಾಡ್ತಿದ್ದಾರೆ, ಬರ್ತಾರೆ ಕುಳಿತಿರಿ" ಎಂದಾಕೆ ಒಳಗಡೆಗೆ ನಡೆದರು.

ಮಂಜುಳ ಒಮ್ಮೆ ಸುತ್ತಲೂ ಕಣ್ಣು ಹಾಯಿಸಿದಳು. ಮನೆ ನೋಡು ತ್ತಿದ್ದಂತೆ, ಅವರು ಅಂತಹ ಅನುಕೂಲಸ್ಥರಲ್ಲ ಎಂದು ಅರಿವಾಯ್ತು. ಒಂದು ರೂಮು ಒಂದು ಹಾಲು ಇದ್ದ ಮನೆಯದು. ಹಾಲ್‌ಗೆ ಸೇರಿದಂತೆ ಒಂದು ಚಿಕ್ಕ ಹಜಾರವಿತ್ತು. ಅಲ್ಲಿ ಅಡಿಗೆಮನೆ, ಬಚ್ಚಲುಮನೆಗಳಿರಬಹುದು ಎಂದು ಕೊಂಡಳು.

ದೇವರ ಕೋಣೆಯಲ್ಲಿದ್ದ ರಾಯರು ಹೊರಗೆ ಬಂದರು. ಮಂಜುಳ ಎದ್ದುನಿಂತು "ನಮಸ್ಕಾರ" ಎಂದಳು.

"ನಮಸ್ಕಾರ ಕುಳಿತುಕೊಳ್ಳಿ. ನನಗೆ ನೀವ್ಯಾರೋ ತಿಳಿಯಲಿಲ್ಲ. ನಮ್ಮಾಕೆ ಹೇಳಿದ್ರು ಡಾ|| ಮೋಹನ್ ಯಾರೂಂತ ನೆನಪಾಗ್ತಿಲ್ಲ."

"ನಾವ್ಯಾರು ಈ ಮೊದಲು ಭೇಟಿಯಾಗಿಲ್ಲ. ಆದರೆ ನನ್ನ ದೊಡ್ಡ ಮಗಳ ಪರಿಚಯ ನಿಮಗಿದೆ."

"ನಿಮ್ಮ ಮೊದಲ ಮಗಳ ಹೆಸರೇನು ?"

"ಲಹರಿ...."

"ಓ, ನೀವು ಲಹರಿ ತಾಯೀನಾ ? ಏನು ಬಂದಿದ್ದು ?" ಆತನ ಧ್ವನಿ ಲಹರಿಯ ಹೆಸರು ಕೇಳುತ್ತಿದ್ದಂತೆ ಗಡಸಾಗಿದ್ದು, ಅಲ್ಲಿ ಕುಳಿತಿದ್ದ ಇಬ್ಬರು ಹೆಂಗಸರ ಗಮನಕ್ಕೂ ಬಂದಿತು.

"ಹೌದು, ನಾನು ಲಹರಿಯ ತಾಯಿ. ನಿಮ್ಮ ಮಗ, ಲಹರಿ ಒಬ್ಬರನ್ನೊಬ್ಬರು ಇಷ್ಟಪಟ್ಟಿದ್ದಾರೆ. ದಯವಿಟ್ಟು ನೀವು ಈ ಮದುವೆಗೆ ಒಪ್ಪಿಗೆ ಕೊಡಿ."

"ನಿಮಗೆ ಗಂಡುಮಕ್ಕಳಿದ್ದಾರಾ ?" ಆತ ಕೇಳಿದರು.

ಅವರ ಪ್ರಶ್ನೆಯ ಉದ್ದೇಶ್ಯ ಅರಿಯದೆ ಮಂಜುಳ ಹೇಳಿದಳು.

"ಇಲ್ಲ. ನಮಗೆ ಇರೋದೇ ಇಬ್ಬರು ಹೆಣ್ಣುಮಕ್ಕಳು. ನಮ್ಮ ಆಸ್ತಿ ಅವರಿಬ್ಬರಿಗೇ ಸೇರುತ್ತದೆ."

"ನಿಮ್ಮ ಆಸ್ತಿ-ಪಾಸ್ತಿ ಏನೂ ನಮಗೆ ಬೇಡ ತಾಯಿ. ಒಂದು ಪಕ್ಷ ನಿಮಗೆ ಗಂಡುಮಕ್ಕಳಿದ್ದಿದ್ದರೆ ಲಹರಿಯಂತಹ ಹುಡುಗಿಯನ್ನು ನಿಮ್ಮ ಸೊಸೆ ಮಾಡಿಕೊಳ್ತಿದ್ರಾ ?"

ಮಂಜುಳ ಉತ್ತರ ಕೊಡಲಿಲ್ಲ.

"ನಿಮ್ಮ ಮಗಳಲ್ಲಿ ಯಾವ ಒಳ್ಳೆಯ ಗುಣವಿದೇಂತ ನಾವು ನಿಮ್ಮ ಮಗಳನ್ನು ಸೊಸೆ ಮಾಡಿಕೊಳ್ಳಬೇಕು ? ಆ ಹುಡುಗಿಗೆ ಹಿರಿಯರ ಬಗ್ಗೆ ಭಯಭಕ್ತಿಗಳಿಲ್ಲ. ಹಿರಿಯರ ಬಗ್ಗೆ ತುಂಬಾ ತಿರಸ್ಕಾರ ತೋರಿಸ್ತಾಳೆ. ನಮ್ಮ ಸಂಸ್ಕೃತಿಯ ಬಗ್ಗೆ ಅಭಿಮಾನವಿಲ್ಲ. ಹಣದಿಂದ ಎಲ್ಲಾ ಕೊಳ್ಳಬಹುದೂಂತ ಭಾವಿಸಿದ್ದಾಳೆ. ನನ್ನ ಚಿನ್ನದಂತಹ ಮಗನನ್ನು ಹಾಳ್ಮಾಡಿದ್ದಾಳೆ. ಅವಳ ಪರಿಚಯವಾದ ಮೇಲೆ ಅವನು ಕ್ಲಬ್‌ಗೆ ಹೋಗೋದು ಕಲಿತ, ರೇಸ್‌ಗೆ ಹೋಗೋದು, ಕುಡಿತ ಅಭ್ಯಾಸ ಮಾಡಿಕೊಂಡ ಈಗವನು ಅವಳು ಕುಣಿಸಿದಂತೆ ಕುಣಿಯುವ ಬೊಂಬೆಯಾಗಿದ್ದಾನೆ. ದಯವಿಟ್ಟು ನೀವು ಮದುವೆ ವಿಚಾರ ಪ್ರಸ್ತಾಪಿಸಬೇಡಿ."

"ಅವರಿಬ್ಬರೂ ತುಂಬ ಮುಂದುವರಿದುಬಿಟ್ಟಿದ್ದಾರೆ."

"ಅದು ಅವರ ಕರ್ಮ. ನಿಮ್ಮ ಮೊದಲನೇ ಮಗಳು ಈ ಮಗು ತರಹ ಇದ್ದಿದ್ರೆ ಖಂಡಿತಾ ನಾನು ಈ ಮದುವೆಗೆ ಒಪ್ತಿದ್ದೆ. ದಯವಿಟ್ಟು ನನ್ನನ್ನು ಕ್ಷಮಿಸಿ."

ಬಂದ ದಾರಿಗೆ ಸುಂಕವಿಲ್ಲವೆಂದುಕೊಂಡು ಮಂಜುಳ ವಾಪಸ್ಸಾದಳು. ಮಗಳಿಗೆ ತಾನು ಹರ್ಷನ ಮನೆಗೆ ಹೋಗಿದ್ದ ವಿಚಾರ ತಿಳಿದರೆ ಮತ್ತೇನು ರಾಮಾಯಾಣ ಮಾಡುತ್ತಾಳೋ ? ಎಂದು ಭಯವೂ ಆಯಿತು

ಹದಿನೈದು ದಿನಗಳು ಉರುಳಿದವು. ಒಂದು ಬೆಳಗ್ಗೆ ತಿಂಡಿ ತಿನ್ನು ವಾಗ ಲಹರಿ ಹೇಳಿದಳು.

"ಮುಂದಿನ ತಿಂಗಳ ಹೊತ್ತಿಗೆ ನನಗೆ ಕೊಂಚ ಹಣಬೇಕಾಗುತ್ತೆ ಮಮ್ಮಿ"

"ಯಾಕೆ ?"

"ನಮ್ಮ ಈ ಕಂಪ್ಯೂಟರ್ ಸೆಂಟರ್ ಚೆನ್ನಾಗಿ ಕೆಲಸ ಮಾಡ್ತಿದೆ. ಅದ್ದ ರಿಂದ ಮದ್ರಾಸ್‌ನಲ್ಲಿ ಒಂದು ಬ್ರಾಂಚ್ ಆರಂಭಿಸೋಣಾಂತ ಇದ್ದೇವೆ. ಅದಕ್ಕೆ ಹಣ ಬೇಕಾಗಬಹುದು."

"ಆ ಬ್ರಾಂಚ್ ಯಾರು ನೋಡಿಕೊಳ್ತಾರೆ ?"

"ಹರ್ಷ ನೋಡಿಕೊಳ್ತಾನೆ ಅಲ್ಲಿ ಅವನ ತಾಯಿ ಅಣ್ಣ ಇದ್ದಾರಂತೆ. ಅವರು ತಮ್ಮ ಮನೆ ಮಹಡಿ ಮೇಲಿನ ಹಾಲ್‌ನ ನಮ್ಮ ಬ್ರಾಂಚ್‌ಗೆ ಕೊಡಲು ಒಪ್ಪಿದ್ದಾರಂತೆ."

"ಅವರಿಗೆ ಏನು ಕೆಲಸ ?"

"ಅತನಿಗ್ಯಾಕಮ್ಮ ಕೆಲಸ ? ಅತ ತುಂಬಾ ದೊಡ್ಡ ಬಿಸಿನೆಸ್‌ಮೆನ್. ಅವರಿಗೆ ಹರ್ಷನನ್ನು ಕಂಡರೆ ತುಂಬಾ ಇಷ್ಟವಂತೆ. ಅವರಿಂದ ನಮಗೆ ತುಂಬಾ ಸಹಾಯವಾಗುತ್ತೆ."

"ಅವರ ಮನೆಯಲ್ಲಿ ಯಾರ್‍ಯಾರಿದ್ದಾರೆ ?"

"ಅವರ ಹೆಂಡತಿ, ಇಬ್ಬರು ಮಕ್ಕಳಿದ್ದಾರೆ. ಮಗಳು ಇಂಜನಿಯರ್. ಮಗ ಓದ್ತಿದ್ದಾನೆ."

"ಮಗಳಿಗೆ ಮದುವೆಯಾಗಿದೆಯಾ?"

ತಾಯಿಯ ಪ್ರಶ್ನೆ ಕೇಳಿ ಲಹರಿ ಬಿದ್ದುಬಿದ್ದು ನಕ್ಕಳು.

"ನಿನ್ನ ಅನುಮಾನ ಏನೂಂತ ಅರ್ಥವಾಯ್ತು ಮಮ್ಮಿ. ಹರ್ಷ ಆ ಹುಡುಗೀನ್ನ ಮದುವೆಯಾದ್ರೆ ಗತಿಯೇನೂಂತ ನಿನ್ನ ಯೋಚನೆ ಅಲ್ವಾ? ಆ ತರಹ ಆಗುವ ಸಾಧ್ಯತೆಯೇ ಇಲ್ಲ."

"ಯಾಕೆ?"

"ಮೊದಲನೆಯದಾಗಿ ಹರ್ಷನಿಗೆ ಮದುವೆಯಲ್ಲಿ ನಂಬಿಕೆಯಿಲ್ಲ. ಎರಡನೆಯದಾಗಿ ಆ ಹುಡುಗಿ ರಾಧಾ ತುಂಬಾ ಕಪ್ಪಂತೆ. ಮೂರನೆಯದಾಗಿ ಅವನು ಆ ರೀತಿ ಮದುವೆಯಾಗುವುದಾದರೆ ನನ್ನನ್ನೇ ಆಗ್ತಾನೆ. ಅವನನ್ನು ಇದುವರೆಗೂ ಮೇಲೆತ್ತಿರೋದು ನಾನೇ ಹೊರತು ರಾಧ ಅಲ್ಲ."

"ನನಗೇನೋ ನೀನು ತುಂಬಾ ದುಡುಕ್ತಿದ್ದೀಯ ಅನ್ನಿಸತ್ತೆ. ಆಮೇಲೆ ತುಂಬಾ ಪಶ್ಚಾತ್ತಾಪಪಡ್ತೀಯ."

"ನನಗೆ ಅವನಲ್ಲಿ ನಂಬಿಕೆಯಿದೆ ಮಮ್ಮಿ. ಪ್ಲೀಸ್ ಏನೇನೋ ಹೇಳಿ ನನ್ನ ತಲೆ ಕೆಡಿಸಬೇಡ."

ಮಂಜುಳಾಗೆ ಮಾತನಾಡಲು ಮತ್ತೇನೂ ಉಳಿಯಲಿಲ್ಲ. ಆದರೂ ಒಂದು ಮಾತು ಹೇಳಿದಳು.

"ನೀನಂತೂ ಮದುವೆಯಾಗಲ್ಲ. ಸಿರಿಗೆ ಮದುವೆ ಮಾಡಬೇಕೂಂತಿದ್ದೀನಿ. ನೀನು ನಗ್ತಾ ನಗ್ತಾ ಓಡಾಡು."

"ಹಾಗೇ ಮಾಡು ಮಮ್ಮಿ. ನಾನೇ ಓಡಾಡಿ ಏರ್ಪಾಡು ಮಾಡ್ತೀನಿ" ಎಂದಳು ಲಹರಿ.

ಒಂದು ತಿಂಗಳು ಹೇಗೆ ಕಳೆಯಿತೋ ಅಮೃತಾಗೆ ತಿಳಿಯಲಿಲ್ಲ. ಶೇಖರ್ ಕೆಲಸ ಮಾಡುತ್ತಿದ್ದ ಪೋಸ್ಟ್ ಆಫೀಸ್‌ನಲ್ಲಿ ಅವನ ವಿಳಾಸ ಸಿಕ್ಕಿರಲಿಲ್ಲ.

"ಅವರು ಬಂದ್ರೆ ಈ ನಂಬರ್‌ಗೆ ಫೋನ್ ಮಾಡಲು ಹೇಳಿ" ಎಂದು ಹೇಳಿ ನಂಬರ್ ಕೊಟ್ಟು ಬಂದಿದ್ದಳು. ಆದರೆ ಈವರೆಗೆ ಫೋನ್ ಬಂದಿರಲಿಲ್ಲ. ಒಂದು ಸಲ ಅವಳು ಶೇಖರ್ ಬಗ್ಗೆ ವಿಚಾರಿಸಿ ಪೋಸ್ಟ್ ಆಫೀಸಿನಿಂದ ಹೊರಗೆ ಬಂದವಳು, ಮನಿಯಾರ್ಡರ್ ಫಾರಂ ಕೊಳ್ಳಲು ಹಿಂತಿರುಗಿದ್ದಳು. ಆಗ

ಶೇಖರನ ಸಹೋದ್ಯೋಗಿಗಳು ಆಡುವ ಮಾತುಗಳು ಅವಳ ಕಿವಿಗೆ ಬಿದ್ದು ಅವಳ ಮನಶ್ಶಾಂತಿ ಕೆಡಿಸಿದ್ದುವು.

"ಶೇಖರನಂತಹ ಒಳ್ಳೆಯ ವ್ಯಕ್ತಿಗೆ ಇಂತಹ ಬಜಾರಿ ಹೆಂಡತಿ ಸಿಗ ಬಾರದಿತ್ತು."

"ಶೇಖರ್ ಈಕೆಯ ಕಾಟ ತಡೆಯಲಾರದೆ ದೇರೆ ಹೋದರಂತೆ."

"ಈಕೆಗೆ ತಾನೇ ಸಂಪಾದಿಸ್ತಿರೋದೂಂತ ತುಂಬಾ ಕೊಬ್ಬಂತೆ. ಶೇಖರನ್ನ ಜವಾನನ ತರಹ ಟ್ರೀಟ್ ಮಾಡ್ತಿದ್ದರಂತೆ."

"ಮಗನ್ನ ಮುದ್ದು ಮಾಡಿ ಹಣ ಕೊಟ್ಟು ಹಾಳ್ಮಾಡಿದ್ದಾಳೆ. ಆ ಮಗ ಮೂರೂ ಹೊತ್ತು ರೇಸು, ಕುಡಿತ, ಇಸ್ಪೀಟು–ಇವುಗಳಲ್ಲಿ ಮುಳುಗಿ ರ್‍ತಾನೆ. ಹಣದಿಂದ ಎಲ್ಲಾ ಸುಖ ಸಿಗತ್ತೆ ಅನ್ನುವುದು ಸುಳ್ಳಲ್ವಾ ?"

"ಮಾತೆತ್ತಿದರೆ 'ನಾನು ಕಟ್ಟಿಸಿದ ಮನೆ' ಅಂತಿದ್ದಳಂತೆ. ಅದಕ್ಕೆ ಶೇಖರ ಆ ಮನೆಯನ್ನೇ ಬಿಟ್ಟುಹೋದ."

ಅಮೃತಾಗೆ ಅವರ ಮಾತು ಕೇಳಿ ಬೆಟ್ಟದಷ್ಟು ಸಿಟ್ಟು ಬಂತು. ಆದರೆ ಆ ರೀತಿ ಸಿಟ್ಟು ಮಾಡಿಕೊಂಡು ಏನು ಪ್ರಯೋಜನ ? ಅವರು ಹೇಳಿದ್ದರಲ್ಲಿ ಉತ್ಪ್ರೇಕ್ಷೆ ಇರಲಿಲ್ಲ. ಅವಳು ಅಲ್ಲಿಂದ ನೇರವಾಗಿ ಮಂಜುಳ ಮನೆಗೆ ಹೋಗಿದ್ದಳು ಅಂದು ಅಲ್ಲೇ ಊಟವಾಗಿತ್ತು. ಅವಳು ಅಲ್ಲಿರುವಾಗಲೇ ಲಹರಿ ಹರ್ಷ ಬಂದು ಹೋಗಿದ್ದರು.

"ಮಂಜು, ಲಹರಿ ಮದುವೆ ಯಾವಾಗ ?"

"ನನಗೇನು ಗೊತ್ತು ? ಅವಳು ಮಾಡಿಕೊಂಡಾಗ ಮಾಡೋದು."

"ಆ ಹುಡುಗನ ಜೊತೆ ತುಂಬಾ ತಿರುಗ್ತಿದ್ದಾಳಲ್ವಾ ?"

"ಆ ತಿರುಗಾಟಕ್ಕೆ ಅರ್ಥವೇ ಇಲ್ಲ. ನಾನೇ ಹತ್ತಾರು ಸಲ ಮದುವೆ ಯಾಗಕ್ಕೆ ಹೇಳಿಯಾಯ್ತು. ಅವಳು ಮದುವೆಗೆ ಒಪ್ಪಲ್ಲ. 'ನಂಗೆ ಮದುವೇಲಿ ನಂಬಿಕೆ ಇಲ್ಲ' ಅಂತಾಳೆ. ಹೀಗೆ ಆರಾಮವಾಗಿ ಓಡಾಡಿಕೊಂಡಿರೋದು ಅವಳಿಗೆ ಇಷ್ಟ."

"ಮೋಹನ್ ಏನಂತಾರೆ ?"

"ಅವರಿಗೆ ಲಹರಿ ಮಾಡೋದೆಲ್ಲಾ ಸರಿ ಅನ್ನಿಸತ್ತೆ. ಮಗಳಿಗೆ ಮದುವೆ

ಅನ್ನುವ ಆಸೆ ನನಗೆ ಮಾತ್ರ ಇರೋದು. ಅವರಿಗೆ ಆ ಆಸೇನೂ ಇಲ್ಲ, ಜವಾಬ್ದಾರೀನೂ ಇಲ್ಲ."

"ಸಿರಿ, ಸಮಾಚಾರವೇನು ?"

"ಸಿರಿ ಮದುವೆ ಸೆಟ್ಲ್ ಆಗಿದೆ. ಹುಡುಗ ಡಾಕ್ಟರ್. ಈ ವರ್ಷದಲ್ಲಿ ಅವಳ ಮದುವೆ ಮಾಡಿಬಿಡ್ತೀನಿ. ಅಲೋಕ ಹೇಗಿದ್ದಾನೆ ?"

"ಅವನು ಲಹರಿ ತರಹ ಆರಾಮವಾಗಿದ್ದಾನೆ. ಒಂದು ವ್ಯತ್ಯಾಸವೇನು ಗೊತ್ತಾ ? ಲಹರಿ ಬಿ.ಇ. ಮುಗಿಸಿದ್ದಾಳೆ. ಇವನು ಅದನ್ನು ಪೂರೈಸುವ ಯೋಚನೆಯೇ ಮಾಡಿಲ್ಲ."

"ಶೇಖರ್ ಹೇಗಿದ್ದಾರೆ ?"

ಮಂಜುಳನ ಪ್ರಶ್ನೆ ಕೇಳಿ ಅಮೃತ ಅವಳತ್ತ ನೋಡಿದಳು. ಅವಳ ಪ್ರಶ್ನೆಯಲ್ಲಿ ವ್ಯಂಗ್ಯವಿರಲಿಲ್ಲ.

"ಮಂಜು, ಶೇಖರ್ ಈಗ ನಮ್ಮ ಜೊತೆ ಇಲ್ಲ."

"ಯಾಕೆ ?!"

"ಅವರು ಅವರ ತಾಯೀನ್ನ ನಮ್ಮನೆಗೆ ಕರೆದುಕೊಂಡು ಬರ್ತೀನಿ ಅಂತ ಹೇಳಿದ್ರು ನಾನು ಒಪ್ಪಲಿಲ್ಲ. ಯಾವುದಾದರೂ ವೃದ್ಧಾಶ್ರಮಕ್ಕೆ ಸೇರಿಸಿ, ಹಣ ಕೊಟ್ಟರಾಯ್ತು ಎಂದೆ. ಅದಕ್ಕವರು ಒಪ್ಪಲಿಲ್ಲ. ತಾಯಿ ಜೊತೆ ಬೇರೆ ಹೊರಟುಹೋದರು."

"ನಾಳೆ ಅಲೋಕ ಹೆಂಡತಿ ಮಾತು ಕೇಳಿಕೊಂಡು ನಿನ್ನನ್ನು ದೂರ ಮಾಡಿದ್ರೆ ನಿನಗೆ ಬೇಜಾರಾಗಲ್ವಾ ?"

"ಅವನು ದೂರ ಮಾಡ್ತಾನಾ ? ನನ್ನ ಆಸ್ತಿ–ಪಾಸ್ತಿ ಬೇಕಾದ್ರೆ ಅವನು ನನ್ನ ಮನೇಲ್ಲೆ ಇರಬೇಕು."

"ಅವನಿಗೆ ಬುದ್ಧಿವಂತೆಯಾಗಿರೋ ಹೆಂಡತಿ ಸಿಗಬಹುದು. ಅವಳೇ ಶ್ರೀಮಂತೆ ಇರಬಹುದು. ಹಣದಲ್ಲಿ ಕೊಂಡುಕೊಳ್ಳಲಾಗದೇ ಇರುವ ವಸ್ತುಗಳು ಈ ಪ್ರಪಂಚದಲ್ಲಿ ತುಂಬಾ ಇದೆ ಅಮೃತ. ನೀನದನ್ನು ಈಗಲೂ ಅರ್ಥ ಮಾಡಿಕೊಂಡಿಲ್ಲ."

"ನಾನು ಆ ಮನೆಗಾಗಿ ಅದೆಷ್ಟು ದುಡಿದೆ. ಅವನನ್ನು ಸುಖದ ಸುಪ್ಪತ್ತಿಗೆಯಲ್ಲಿ ತೇಲಾಡಿಸಿದೆ. ನೀನೂ ನನ್ನನ್ನು ಹೀಗಂತಿಯಲ್ಲಾ ?"

"ನನ್ನನ್ನು ನೋಡು ಅಮೃತ, ನನಗೇನು ಕಡಿಮೆಯಾಗಿದೆ ? ಈ ಮನೆ ಈ ಫರ್ನೀಚರ್, ಲಕ್ಷಾಂತರ ರೂಪಾಯಿ, ಬೆಲೆ ಬಾಳುವ ಈ ಆಸ್ತಿ ಎಲ್ಲಾ ನನ್ನದೆ ! ನಾನು ಸುಖವಾಗಿದ್ದೀನಾ ? ಊಹುಂ. ನಮ್ಮ ಮನೆಯ ಕೆಲಸದ ಹೆಲುವಿ ನನಗಿಂತ ತುಂಬಾ ನೆಮ್ಮದಿಯಿಂದ ಇದ್ದಾಳೆ ಅನ್ನಿಸತ್ತೆ."

"ಮಂಜು !"

"ಎಲ್ಲರಿಗೂ ಗೊತ್ತಿರುವ ವಿಷಯ ಇದು. ಒಳ್ಳೆಯ ಗಂಡ ಸಿಗುವುದಕ್ಕೆ ಪುಣ್ಯ ಮಾಡಿರಬೇಕು. ಮೋಹನ್‌ಗೆ ಈ ಮದುವೆ ಇಷ್ಟಾನೇ ಇರಲಿಲ್ಲ. ಅವರಿಗೆ ಹೊಸ ಅನುಭವ ಬೇಕು. ಪ್ರತಿದಿನ ಹೊಸ ಹುಡುಗಿಯರ ಸ್ನೇಹ ಬೇಕು. ಅವರು ಮನೆಯಲ್ಲಿರೋದೇ ಇಲ್ಲ. ಹೆಂಡತಿ, ಮಕ್ಕಳ ಮೇಲೆ ಪ್ರೀತಿ ಇಲ್ಲವೇ ಇಲ್ಲ. ನಾಳೆ ನಾನು ಸತ್ತರೂ ಅಳಲ್ಲ. ಶೇಖರ್‌ಗೆ ಈ ದುರ್ಗುಣಗಳಿವೆಯಾ ? ಆತನ್ನ ನೋಡಿದ್ರೆ ತುಂಬಾ ನಿಧಾನಿ ಅನ್ನಿಸಿತ್ತು."

ಅಮೃತ ಮಾತಾಡಲಿಲ್ಲ.

"ನಾವಿಬ್ರು ಒಟ್ಟಿಗೆ ಆಡಿದವರು, ಒಟ್ಟಿಗೆ ಬೆಳೆದವರು. ಶೇಖರ್‌ನ ನೀನು ಸರಿಯಾಗಿ ನೋಡಿಕೊಳ್ಳಲಿಲ್ಲಾಂತ ನನಗೆ ಅನ್ನಿಸತ್ತೆ. ಹೆಂಡತಿ ಯಾದವಳು ಮನೆಯ ಮೇಲೆ ಪ್ರೀತಿ ಬೆಳೆಸಿಕ್ಕೊಳ್ಳಬೇಕು ಅಮೃತ. ನೀನು ಆ ರೀತಿಯ ಪ್ರೀತಿ ಬೆಳೆಸಿಕೊಳ್ಳಲಿಲ್ಲ. ನಿಮ್ಮತ್ತೆ ಅಡಿಗೆ-ತಿಂಡಿ ಎಲ್ಲಾ ಮಾಡೋರು ನೀನು ಅಪರೂಪಕ್ಕಾದ್ರೂ ಆ ಕೆಲಸ ಮಾಡಬೇಕಿತ್ತು. ನೀನು ಓದು, ಕೆಲಸ, ಟ್ಯೂಷನ್ಸ್ ಇವುಗಳಲ್ಲಿ ಮುಳುಗಿಹೋದೆ. ಬೇಕಾದಷ್ಟು ಹಣ ಸಂಪಾದಿಸಿದೆ. ಆದರೆ ನೀನು ಸಾಧಿಸಿದ್ದೇನು ? ಶೇಖರ್ ನಿನ್ನನ್ನು ತುಂಬಾ ಪ್ರೀತಿಸ್ತಾರೆ. ಅವರು ಮನಸ್ಸು ಮಾಡಿದ್ದಿದ್ರೆ ಯಾವತ್ತೊ ನಿನ್ನನ್ನು ಬಿಟ್ಟು ಹೋಗಬಹುದಿತ್ತು. ನೀನು ಕೂಡ ಅವರಿಲ್ಲದೆ ಜೀವನ ನಡೆಸಲಾರೆ. ಅಮೃತ ಈಗಲೂ ಕಾಲ ಮಿಂಚಿಲ್ಲ. ಶೇಖರ್‌ನ ಕರೆದು ಕೊಂಡು ಬಾ. ನಿಮ್ಮತ್ತೆಗೂ ನಿಮ್ಮ ಮನೆಯಲ್ಲಿ ಆಶ್ರಯ ಕೊಡು."

ಅಮೃತ ಮುಖ ಮುಚ್ಚಿಕೊಂಡು ಅತ್ತಳು. ಮಂಜುಳ ಅವಳನ್ನು ಸಮಾಧಾನಮಾಡುವ ತಂಟೆಗೆ ಹೋಗಲಿಲ್ಲ.

ಒಂದೆರಡು ವಾರ ಉರುಳಿತು. ಅಮೃತಳಿಗೆ ಈಗ ಟ್ಯೂಷನ್ಸ್ ಹೇಳುವುದರಲ್ಲಿ ಆಸಕ್ತಿ ಉಳಿದಿರಲಿಲ್ಲ. ಆರೋಗ್ಯ ಚೆನ್ನಾಗಿಲ್ಲವೆಂದು ನೆಪ ಹೇಳಿ

ಕೇವಲ 2 ಬ್ಯಾಚ್‌ಗಳಿಗೆ ಮಾತ್ರ ಪಾಠ ಹೇಳುತ್ತಿದ್ದಳು.

ಒಂದು ದಿನ ಅವಳು ಮಧ್ಯಾಹ್ನ ಮಲಗಿದ್ದಾಗ ಫೋನ್ ಮೊಳಗಿತು. ಅವಳು ರಿಸೀವರ್ ಕೈಗೆ ತೆಗೆದುಕೊಂಡು "ಹಲೋ" ಎಂದಳು.

"ನಾನು ಶ್ಯಾಮಲ ಮಾತಾಡ್ತಿರೋದು. ನೀವು ಈಗ ಬಿಡುವಾಗಿದ್ರೆ ಬರೋಣಾಂತಿದ್ದೇವೆ."

"ಬನ್ನಿ ಶ್ಯಾಮಲ. ನಮ್ಮನೆಗೆ ಬರಕ್ಕೆ ನೀವು ಪರ್ಮೀಷನ್ ಕೇಳ ಬೇಕಾ ?"

"ನಾನು ನಿಮ್ಮ ಹತ್ರ ಮಾತನಾಡಬೇಕು. ನೀವು ಬಿಡುವಾಗಿದ್ರೆ ಒಳ್ಳೆಯದಲ್ವೆ ?"

"ಬನ್ನಿ" ಎಂದು ಹೇಳಿದಳು ಅಮೃತ. ಆದರೂ ಅವಳಿಗೆ ಒಂದು ರೀತಿಯ ಕಸಿವಿಸಿ. ಶ್ಯಾಮಲಳ ಮಾತೆಂದರೆ ಕಡ್ಡಿ ಮುರಿದಂತೆ ನಿಷ್ಠೂರಕ್ಕೆ ಹೆದರುವಳಲ್ಲ ಅವಳು. ಜೊತೆಗೆ ಅಲೋಕ ಅವರ ಮನೆಯಲ್ಲೇ ಬೆಳೆದಿದ್ದ. ಅವಳ ಬಳಿ ಕಟುವಾಗಿ ಮಾತನಾಡುವುದು ಸಾಧ್ಯವಿರಲಿಲ್ಲ. ಅವಳು ಒಲ್ಲದ ಮನದಿಂದಲೇ ಶ್ಯಾಮಲಳನ್ನು ಸ್ವಾಗತಿಸಿದಳು. ಅಲೋಕನೂ ಮನೆ ಯಲ್ಲಿದ್ದ.

"ಏನಪ್ಪ ದೊರೆ, ಬಿ.ಇ. ಮುಗಿಸಿ ಬೇಗ ಮದುವೆ ಊಟ ಹಾಕಿಸು. ಸುಮ್ನೆ ನಮ್ಮನ್ನು ಕಾಯಿಸಬೇಡ" ಎಂದಳು ಶ್ಯಾಮಲ. ಬೇರೆಯವರ ಎದುರು ಹೇಳಿದಂತೆ 'ಅವನ ಬಿ ಇ ಮುಗಿಯಿತು, ಕೆಲಸ ಹುಡುಕುತ್ತಿದ್ದಾನೆ' ಎಂದು ಹೇಳಲು ಸಾಧ್ಯವಾಗಲಿಲ್ಲ.

ಅಮೃತ ಅವಳಿಗೆ ಚಿಪ್ಸ್, ಕೊಬ್ಬರಿ ಮಿಠಾಯಿ, ಬಾಳೆಹಣ್ಣು ಕೊಟ್ಟಳು. ಕಾಫಿ ಹೀರುತ್ತಾ ಕುಳಿತಿದ್ದಾಗ ಅಲೋಕ ಹೊರಗೆ ಹೋಗಲು ಎದ್ದ.

"ಅಲೋಕ, ಹೊರಟುಬಿಡಬೇಡ. ನಾನು ನಿಮ್ಮಗಳ ಜೊತೆ ಮಾತಾಡ ಬೇಕು. ಆಮೇಲೆ ನೀನು ನಮ್ಮ ಮನೆಗೆ ಡ್ರಾಪ್ ಕೊಡು. ಈಗ ಕೂತ್ಕೋ"

ಅಲೋಕ ಮರುಮಾತಿಲ್ಲದೆ ಕುಳಿತ.

"ಏನು ಅಮ್ಮ-ಮಗ ಸೇರಿಕೊಂಡು ಶೇಖರಣ್ಣನ್ನ ಓಡಿಸಿಬಿಟ್ರಾ ?"

ಅಮೃತ ಉತ್ತರ ಕೊಡುವಷ್ಟರಲ್ಲಿ ಅಲೋಕ ಪ್ರಶ್ನಿಸಿದ.

"ಏನಾಂಟಿ, ನೀವೂ ಹೀಗಂತೀರ ?"

"ಎಲ್ಲರೂ ಗುಸುಗುಸು ಅನ್ನುವ ವಿಚಾರನ್ನಾ ನಾನು ನೇರವಾಗಿ ಕೇಳ್ತಿದ್ದೀನಿ. ಶೇಖರ, ಅವರಮ್ಮನ ಜೊತೆ ಮನೆ ಬಿಟ್ಟುಹೋಗಕ್ಕೆ ಕಾರಣ ವೇನು ?"

"ನಿಮಗೆ ಗೊತ್ತಿಲ್ಲದೆ ಇರೋದು ಏನಿದೆ ಶ್ಯಾಮಲಾ ? ನಮ್ಮತ್ತೆ ಅಲೋಕ ಚಿಕ್ಕ ಮಗುವಿದ್ದಾಗ ಮನೆಬಿಟ್ಟು ಶಂಕರೂ ಮನೆ ಸೇರಿದವರು, ಈಗ ನಮ್ಮನೆಗೆ ವಾಪಸ್ಸು ಬಂದ್ರು. ನಾನವರನ್ನು ನಮ್ಮ ಜೊತೆ ಇಟ್ಟು ಕೊಳ್ಳೋಕೆ ಇಷ್ಟಪಡಲಿಲ್ಲ."

"ಅವರು ಮಗನ ಮನೆಗೆ ಬಂದಿದ್ರಲ್ಲಿ ತಪ್ಪೇನಿದೆ ?"

"ಕೈಕಾಲು ಗಟ್ಟಿಯಿರುವಾಗ ಅಲ್ಲಿದ್ದು, ಈಗ ಕೈಲಾಗದಿದ್ದಾಗ ಇಲ್ಲಿಗೆ ಬಂದ್ರೆ ಬೇಜಾರಾಗಲ್ವಾ ?"

"ಅವರು ಕೈಕಾಲು ಗಟ್ಟಿ ಇರುವಾಗ ಇಲ್ಲೇ ಇದ್ರಲ್ಲಾ ಅಮೃತ ? ಮಗ-ಮೊಮ್ಮನಿಗಾಗಿ ಬೇಕಾದಷ್ಟು ಮಾಡಲಿಲ್ವೆ ? ಅಲೋಕನ್ನ ಚೆನ್ನಾಗಿ ನೋಡಿಕೊಳ್ಳಲಿಲ್ವೆ ? ಅವರು ಇದ್ದಾಗ ನೀನ್ಯಾವತ್ತು ಅಡಿಗೆಮನೆಗೆ ಹೋಗ್ತಿದ್ರಿ ? ಕೈಲಾಗದಿದ್ರೂ ಕೂಡಿಸಿ ಮಾಡಲಿಲ್ವೆ ?"

ಅಮೃತ ಉತ್ತರ ಕೊಡಲಿಲ್ಲ.

"ಅಲೋಕ, ನೀನು ಚಿಕ್ಕ ಮಗುವಾಗಿದ್ದಾಗ ನಿನ್ನನ್ನು ಸಾಕಿದವರೇ ನಿಮ್ಮಜ್ಜಿ. ನಿಮ್ತಂದೆ, ನೀನು ನಡೆದರೆ ಎಲ್ಲಿ ಸವೆದುಹೋಗ್ತಿಯೋಂತ ಒದ್ದಾಡ್ತಿದ್ರು. ಮೂರುಹೊತ್ತು ನಿನ್ನನ್ನು ಎತ್ತಕೊಂಡು ತಿರುಗಿಸೋರು. ವಾಕಿಂಗ್ ಕರ್ಕೊಂಡು ಹೋಗೋರು. ಕಥೆ ಹೇಳಿ ಊಟ ಮಾಡಿಸೋರು. ನಿನ್ನ ಜೊತೆ ಕ್ರಿಕೆಟ್ ಆಡೋರು. ದುಡ್ಡಿಲ್ಲ ಅನ್ನುವ ಕಾರಣಕ್ಕೆ ನೀನವರನ್ನು ದೂರ ಮಾಡುವುದಾ ?"

"ಡ್ಯಾಡೀನ್ನ ನಾವೇನೂ ಗೋಳಾಡಿಸ್ತಿರಲಿಲ್ಲ ಆಂಟಿ."

"ಅವರನ್ನು ಮನುಷ್ಯರು ಅಂತ ನೀವೆಲ್ಲಿ ಪರಿಗಣಿಸಿದ್ರಿ ? ಅವರ ಮಾತಿಗೆಲ್ಲಿ ಬೆಲೆ ಕೊಡ್ತಿದ್ರಿ ? ಸತ್ಯ ಯಾವಾಗಲೂ ಕಹಿ ಅಮೃತ. ಶೇಖರನ್ನ ದೂರ ಮಾಡಿಕೊಳ್ಳಬೇಡಿ ಹೋಗಿ ಕರ್ಕೊಂಡು ಬನ್ನಿ ಒಂದು ಮನೆ

ಸ್ವರ್ಗವಾಗಬೇಕಾದರೆ ಹೆಂಡತಿಯಾದವಳು ತನ್ನ ಕರ್ತವ್ಯ ಮಾಡಬೇಕು. ಶೇಖರ್ ಇಲ್ಲದೆ ನೀವು ಸುಖವಾಗಿದ್ದೀರಾ ?"

ಅಮೃತ ಏನು ಉತ್ತರ ಕೊಡಲು ಸಾಧ್ಯ ?

ಶೇಖರ್ ನಿಧಾನಿ. ಅವನು ಮನಸ್ಸು ಮಾಡಿದ್ದಿದ್ರೆ ಬೇರೆ ಮದುವೆ ಮಾಡಿಕೊಳ್ಳಬಹುದಿತ್ತು. ಅವರಂತಹವರಲ್ಲ. ನಿಮ್ಮಿಬ್ಬರಲ್ಲಿ ಅವರು ಜೀವ ಇಟ್ಟುಕೊಂಡಿದ್ದಾರೆ. ಅವರನ್ನು ಕರ್ಕೊಂಡು ಬನ್ನಿ. ನಾನು ಮೂರನೆ ಯುವಳು ಇಷ್ಟೆಲ್ಲಾ ಹೇಳಬಾರದಿತ್ತೇನೋ ? ಬೇಜಾರಾಗಿದ್ರೆ ಕ್ಷಮಿಸಿಬಿಡಿ."

ಅಮೃತ ಶ್ಯಾಮಲಾಗೆ ಕುಂಕುಮ ಕೊಟ್ಟು ಕಳುಹಿಸಿದಳು.

ಅಲೋಕ ಶ್ಯಾಮಲಾಳನ್ನು ಬಿಟ್ಟು ಬಂದಾಗ ಅಮೃತ ಕುಳಿತಲ್ಲೇ ಕುಳಿತಿದ್ದಳು. ಅವನು ಫ್ಲಾಸ್ಕ್‌ನಲ್ಲಿದ್ದ ಕಾಫಿ ಬಗ್ಗಿಸಿ ಕುಡಿದು, ತನ್ನ ಮಂಚದ ಮೇಲೆ ಉರುಳಿಕೊಂಡ. ಅವನಿಗೆ ಶ್ಯಾಮಲಾ ಹೇಳಿದ ಮಾತುಗಳು ನೆನಪಾದವು. ಅವನು ತಂದೆಯನ್ನು ನೆನಪು ಮಾಡಿಕೊಂಡ. ಅವರು ತನ್ನನ್ನು ಎತ್ತಿಕೊಂಡು ಮುದ್ದಿಸುತ್ತಿದ್ದುದು, ತನ್ನನ್ನು ತಿರುಗಾಡಿಸುತ್ತಿದ್ದುದು, ಊಟ ತಿನ್ನಿಸುತ್ತಿದ್ದುದು ನೆನಪಾದಾಗ ಅವನಿಗೆ ಕಸಿವಿಸಿಯಾಯಿತು. ಅವನು ಎಂಟನೇ ತರಗತಿಗೆ ಬರುವವರೆಗೂ ತಾವೇ ನಿಂತು ಊಟ ಬಡಿಸುತ್ತಿದ್ದರು. ರಾತ್ರಿಯ ಹೊತ್ತು ಒಳ್ಳೆಯ ಕಥೆ ಹೇಳುತ್ತಿದ್ದರು. ತಂದೆ ತನ್ನನ್ನು ಎಷ್ಟು ಪ್ರೀತಿಸುತ್ತಿದ್ದರೆಂದು ನೆನಪಾದಾಗ ಅವನ ಕಣ್ಣುಗಳು ತೇವವಾದವು. ಮಮ್ಮಿ ಹಣದ ಆಸೆ ತೋರಿಸಿ, ನನ್ನನ್ನು ಹಾಳ್ಮಾಡಿ ನನ್ನ ಹಾಗೂ ಡ್ಯಾಡಿ ನಡುವೆ ಗೋಡೆ ಆಗಿಬಿಟ್ಟಳು. ಆದ್ದರಿಂದ ಹೆಂಡತಿ, ಮಗ ಇಬ್ಬರೂ ಅವರಿಗೆ ಬೇಡವಾಗಿಬಿಟ್ಟೆವು. ಅವರಿಗೆ ಈ ಮನೇಲಿ ಯಾವ ಸುಖವಿತ್ತು ? ಇಷ್ಟು ಅನುಕೂಲ ಇದ್ರೂ ಮಮ್ಮಿ ಒಬ್ಬ ಅಡಿಗೆಯವರನ್ನು ತಂದಿಡಲಿಲ್ಲ. ನಾನೂ ಅವರ ಮಾತುಗಳಿಗೆ ಬೆಲೆ ಕೊಡ್ತಿರಲಿಲ್ಲ. ಮಮ್ಮೀನೂ ಅವರಿಗೆ ಕೇರ್ ಮಾಡುತ್ತಿರಲಿಲ್ಲ. ಡ್ಯಾಡಿ ಬಿ ಇ ಓದಬೇಡಾಂತ ಹೇಳಿದ್ರೂ ಅಮ್ಮನ ಹಠಕ್ಕೆ ಮಣಿದು ಬಿ ಇ ಸೇರಿದೆ. ಅದರಿಂದ ನಾನು ಸಾಧಿಸಿದ್ದೇನು ? ಮಮ್ಮಿಯ ಪ್ರಭಾವಕ್ಕೆ ಸಿಕ್ಕದೆ ಇದ್ದಿದ್ದರೆ ನಾನೊಬ್ಬ ಸಾಚಾ ಮನುಷ್ಯನಾಗಿರ್ತಿದ್ದೆ. ಈ ಕುಡಿತ, ರೇಸು ಯಾವುದರ ಹುಚ್ಚೂ ಇರ್ತಿರಲಿಲ್ಲ. ನಾನು ತಡವಾಗಿ ಮನೆಗೆ

ಬಂದಾಗ ಮಮ್ಮಿ, ಕೆನ್ನೆಗೊಂದು ಬಾರಿಸಿ, 'ಯಾಕೋ ಲೇಟು ?' ಎಂದು ಕೇಳಿದ್ದಿದ್ರೆ ನಾನಿವತ್ತು ಹೀಗಾಗ್ತಿರಲಿಲ್ಲ. ಛೆ, ಏನಾಗಿಹೋಯ್ತು ?'

ಅವನ ಮನಸ್ಸು ತಂದೆಯ ನೆನಪಿನಿಂದ ಒದ್ದಾಡಿತು. ಅವನಿಗೆ ತಕ್ಷಣ ಗೆಳೆಯ ರೋಹಿತ್‌ನ ನೆನಪಾಯ್ತು. ರೋಹಿತ್ ತಂದೆ ಒಬ್ಬ ಸರ್ಕಾರಿ ನೌಕರ. ಕೆ.ಇ.ಬಿ.ಯಲ್ಲಿ ಗುಮಾಸ್ತರು. ರೋಹಿತ್ ಹಿರಿಯ ಮಗ. ಅವನ ತಂಗಿ ರಾಗಿಣಿ ಪಿ.ಯು.ಸಿ. ಓದುತ್ತಿದ್ದಳು. ರೋಹಿತ್‌ನ ತಾಯಿ ಕೆಲಸದಲ್ಲಿರಲಿಲ್ಲ. ಆದರೆ ಮನೆಯಲ್ಲಿ ಹತ್ತು ಮಕ್ಕಳಿಗೆ ಪಾಠ ಹೇಳುತ್ತಿದ್ದರು. ಬಟ್ಟೆ ಹೊಲೆಯುತ್ತಿದ್ದರು. ಯಾರೇ ಅವರ ಮನೆಗೆ ಹೋಗಲಿ, ಕೈಲಾದಷ್ಟು ಉಪಚಾರ ಮಾಡುತ್ತಿದ್ದರು. ಎಷ್ಟೋ ಸಲ ರೋಹಿತನ ಜೊತೆ ಅಲೋಕ ನನ್ನೂ ಕೂಡಿಸಿ ಕೈತುತ್ತು ಹಾಕುತ್ತಿದ್ದರು. ಅವರ ಮನೆಗೆ ಹೆದಾಗ ಅವನಿಗೊಂದು ರೀತಿಯ ನೆಮ್ಮದಿ ಸಿಗುತ್ತಿತ್ತು. ರೋಹಿತ್ ಆಗಾಗ್ಗೆ, 'ನಮ್ಮಮ್ಮನಿಂದ ನಮ್ಮನೆ ಸ್ವರ್ಗವಾಗಿದೆ ಅಲೋಕ್. ಅವರಿಲ್ಲದ್ದಿದ್ರೆ ನಾವೇ ನಾಗ್ತಿದ್ದೆವೋ ನಮಗೆ ತಿಳಿಯದು. ನಮ್ತಂದೆ ಅನ್ನ, ಬಟ್ಟೆ ಕೊಟ್ಟರೆ, ನಮ್ಮಮ್ಮ ಬೆವರು ಸುರಿಸಿ ನಮ್ಮನ್ನು ಸಾಕಿದ್ದಾರೆ. ಅವರಿಗೆ ಅದೆಷ್ಟು ತಾಳ್ಮೆ ಗೊತ್ತಾ ?' ಎಂದು ಹೇಳುತ್ತಿದ್ದುದುಂಟು. ರೋಹಿತ್ ಎಂ.ಟೆಕ್. ಮಾಡಿ ತಿಂಗಳಿಗೆ 20,000 ರೂ. ಸಂಪಾದಿಸ್ತಿದ್ದಾನೆ. ಆದರೆ ನಾನೇನು ಮಾಡ್ತಿದ್ದೇನೆ ?

ಅವನು ಎದ್ದು ಹೊರಗೆ ಬಂದ. ಅಮೃತ ಟಿ ವಿ. ನೋಡುತ್ತಾ ಕುಳಿತಿದ್ದಳು. ಅವನು ತಾಯಿ ಪಕ್ಕ ಕುಳಿತು ಹೇಳಿದ.

"ಮಮ್ಮಿ, ನನ್ನ ಕೈಲಿ ಬಿ.ಇ. ಮುಗಿಸಕ್ಕಾಗಲ್ಲ. ಸಂಗೀತಾದ್ರೂ ಬೇರೆ ಕೆಲಸ ಕೊಡಿಸು."

"ಬಿ.ಇ. ಮುಗಿಸು, ಕೆಲಸ ಸಿಗುತ್ತೆ."

"ನನಗದರಲ್ಲಿ ಆಸಕ್ತಿ ಇಲ್ಲ. ನನಗೊಂದು ಎಲೆಕ್ಟ್ರಾನಿಕ್ ಗೂಡ್ಸ್‌ದು ಅಂಗಡಿ ಹಾಕಿಕೊಡು."

"ಸಂಗೀನು ಮಾಡಕ್ಕೂ ತೋಚ್ತಿಲ್ಲ ಅಲೋಕ್. ಮೊದಲು ನಿಮ್ಮ ಡ್ಯಾಡಿ ಎಲ್ಲಿದ್ದಾರೇಂತ ಹುಡುಕು."

"ಮಮ್ಮಿ, ಅವರು ಎಲ್ಲಿದ್ದಾರೋ ಅಲ್ಲೇ ಸುಖವಾಗಿದ್ದಾರೆ ಬಿಡು. ಅವರನ್ನು ಹುಡುಕೋದು ಯಾಕೆ ?"

"ಯಾಕೆ ಹಾಗಂತೀಯೋ ?"

"ಮಮ್ಮಿ, ಒಂದು ಸಲ ನೀನು ಯೋಚಿಸು. ಡ್ಯಾಡಿಗೆ ಈ ಮನೆಯಲ್ಲಿ ಯಾವ ಸುಖವಿತ್ತು ? ನೀನು ಗಂಡಾಂತ ಅವರಿಗೆ ಕೊಂಚಾನೂ ಬೆಲೆ ಕೊಡ್ತಿರಲಿಲ್ಲ. ನಾನೂ ಅಷ್ಟೆ, ನಿನ್ನ ಹಣದ ಪ್ರಭಾವಕ್ಕೆ ಸಿಲುಕಿ ಡ್ಯಾಡೀನ್ನ ದೂರ ಮಾಡಿಕೊಂಡೆ. ಹೇಳು ಮಮ್ಮಿ ಡ್ಯಾಡಿ ಇಲ್ಲದ ನಮ್ಮ ಬದುಕಿಗೆ ಅರ್ಥವಿದೆಯಾ ? ಅಜ್ಜಿ, ಡ್ಯಾಡಿ ನನ್ನನ್ನು ಅದೆಷ್ಟು ಪ್ರೀತಿಸ್ತಿದ್ದರು ! ಆದ್ರೆ ಅದರ ಬದಲು ನಾನವರಿಗೆ ಏನು ಕೊಟ್ಟೆ ? ಮಮ್ಮಿ ನಂಗೆ ಡ್ಯಾಡಿ ಬೇಕು. ನೀನು ಡ್ಯಾಡೀನ್ನ, ಅಜ್ಜೀನ್ನ ಕರೆದುಕೊಂಡು ಬಾ."

"ನಾನು ಹೋಗಿ ಅವರನ್ನು ಕರೆಯಬೇಕಾ ?"

"ಹೌದು ಮಮ್ಮಿ ಅವರು ಹೊರಗೆ ಹೋಗಕ್ಕೆ ನೀನೇ ಕಾರಣ. ನೀನು ಹೋಗಿ ಕರೆದರೆ ಅವರು ಬರಲ್ಲ ಅನ್ನಲಾರರು."

"ನನಗೆ ಅವರಿರುವ ಜಾಗವೇ ಗೊತ್ತಿಲ್ಲವಲ್ಲಾ ಅಲೋಕ್ ?"

"ನಾನು ಪತ್ತೆ ಮಾಡ್ತೀನಿ. ನೀನು ಯೋಚಿಸಬೇಡ" ಎಂದ ಅಲೋಕ್.

ತಂದೆ ಪ್ರತಿ ತಿಂಗಳ ಮೊದಲ ವಾರದಲ್ಲಿ ಡಾ|| ದೇಶಪಾಂಡೆ ಬಳಿ ಬಂದು ಔಷಧಿ ತೆಗೆದುಕೊಂಡು ಹೋಗುತ್ತಿರಬಹುದೆಂದು ಗುಮಾನಿ ಬಂದಾಗ ಅವನು ನೇರವಾಗಿ ಹೋಗಿ ಡಾಕ್ಟರನ್ನು ಭೇಟಿ ಮಾಡಿದ.

"ಇತ್ತೀಚಿಗೆ ನಮ್ಮ ತಂದೆ ಆರೋಗ್ಯ ಸರಿಯಾಗಿಲ್ಲ. ಬಿ.ಪಿ. ಕಂಟ್ರೋಲ್‌ಗೇ ಬರ್‍ತಿಲ್ಲ. ತುಂಬಾ ಹೊಟ್ಟೆನೋವು ಬರತ್ತೆ ಅಂತಿರ್ತಾರೆ. ನೆನ್ನೆ ತಾನೆ ಬಂದಿದ್ರು ನಾನೇ ಸ್ಕ್ಯಾನಿಂಗ್‌ಗೆ ಬರೆದುಕೊಟ್ಟಿದ್ದೇನೆ. ರಿಪೋರ್ಟ್ ತೆಗೆದುಕೊಂಡು ಬುಧವಾರ ಬರ್‍ತಾರೆ."

ಬುಧುವಾರ ಅಲೋಕ ತಂದೆಯನ್ನು ನೋಡಿದ ಆದರೆ ಮಾತಾಡಿಸ ಲಿಲ್ಲ. ಅವರು ಆಟೋ ಹತ್ತಿ ಹೊರಟಾಗ ತನ್ನ ಬೈಕ್‌ನಲ್ಲಿ ಅವರನ್ನು ಹಿಂಬಾಲಿಸಿ ಮನೆ ನೋಡಿಕೊಂಡು ಬಂದ.

ಮರುದಿನ ಬೆಳಿಗ್ಗೆ ತಾಯಿಯನ್ನು ಚಾಮರಾಜಪೇಟೆಯಲ್ಲಿ ಒಂದು ಸಣ್ಣ ಮನೆಯ ಮುಂದೆ ಇಳಿಸಿ ಹೇಳಿದ.

"ಮಮ್ಮಿ, ಡ್ಯಾಡಿ ಈ ಮನೆಯಲ್ಲಿದ್ದಾರೆ. ನೆನ್ನೆ ಸಾಯಂಕಾಲ ಮತ್ತೊಮ್ಮೆ ನೋಡಿಕೊಂಡು ಹೋದೆ. ನೀನು ವಾಪಸ್ಸು ಹೋಗುವಾಗ ಆಟೋದಲ್ಲಿ ಹೋಗು. ನಾನು, ನನ್ನ ಸ್ನೇಹಿತರು ಇವತ್ತು ಬನ್ನೇರುಘಟ್ಟಕ್ಕೆ ಹೋಗ್ತಿದ್ದೇನೆ."

"ನೀನೂ ಒಳಗೆ ಬಾರೋ."

"ಉಹುಂ, ನೀನು ಹೋಗಿ ಬಾ."

ಅವಳು ಮುಚ್ಚಿದ್ದ ಬಾಗಿಲು ತಟ್ಟಿದಳು. ಬಾಗಿಲು ತೆರೆದ ಶೇಖರ್ ಹೆಂಡತಿಯನ್ನು ನೋಡಿ ಅವಕ್ಕಾಗಿ ನಿಂತ.

"ಒಳಗೆ ಬರಬಹುದಾ ?"

"ಬಾ. ಅಮ್ಮ, ನಿನ್ನ ಸೊಸೆ ಬಂದಿದ್ದಾಳೆ ನೋಡು."

"ನಾನು ನಿಮ್ಮ ಹತ್ತಿರ ಮಾತಾಡಕ್ಕೆ ಬಂದಿದ್ದೇನೆ."

"ಒಳಗೆ ಬಂದು ಕೂತ್ಕೋ."

ಅವಳು ಅಲ್ಲಿದ್ದ ಎರಡು ಗಾಡ್ರೇಜ್ ಕುರ್ಚಿಗಳೊಂದನ್ನು ಪಕ್ಕಕ್ಕೆ ಸರಿಸಿ ಕುಳಿತಳು. ಅವನು ಅವಳ ಎದುರಿಗೆ ಕುಳಿತ.

"ನೀವು ಮಾಡಿದ್ದು ಸರೀನಾ ?"

"ನಾನು ಏನ್ಮಾಡ್ದೆ ?"

"ನನಗೆ ಹೇಳದೆ, ಕೇಳದೆ ಯಾಕೆ ಮನೆ ಬಿಟ್ಟು ಬಂದ್ರಿ ?"

"ನೀನು ನನಗೆ ಹೇಳದೆ ಎಷ್ಟೋ ಕೆಲಸ ಮಾಡಿದ್ದೀಯ. ಅದಕ್ಕೆಲ್ಲಾ ವಿವರಣೆ ನಾನು ಕೇಳಿದ್ದೀನಾ ?"

"ನೀವು ಮನೆ ಬಿಟ್ಟು ಬರಬಾರದಿತ್ತು."

"ನೀನು ಬುದ್ಧಿವಂತೆ. ಕೈ ತುಂಬಾ ಹಣ ಸಂಪಾದಿಸ್ತಿದ್ದೀಯ. ನಿನ್ನ ಹತ್ತಿರ ಮನೆ ಇದೆ, ಹಣ ಇದೆ. ಅಲೋಕ ನಿನ್ನ ಜೊತೆ ಇದ್ದಾನೆ. ಆದರೆ ನನ್ನ ಅಮ್ಮಂಗೆ ಯಾರಿದ್ದಾರೆ ? ಶಂಕರೂ ಇದುವರೆಗೂ ಅವರನ್ನು ನೋಡಿಕೊಂಡಿದ್ದಾನೆ. ನಾನು ಹಿರಿಯ ಮಗನಾಗಿ ನನ್ನ ಕರ್ತವ್ಯ ಮಾಡೋದು ಬೇಡವಾ ? ನನಗೆ ಆ ಮನೆಯಲ್ಲಿ ನನ್ನ ಅಮ್ಮನನ್ನು ಇಟ್ಟುಕೊಳ್ಳುವ

ಸ್ವಾತಂತ್ರ್ಯ ಇಲ್ಲದಿರುವಾಗ ನಾನಲ್ಲಿ ಹೇಗಿರಲಿ ನೀನೇ ಹೇಳು. ಅದಕ್ಕೆ ಹೊರಟು ಬಂದೆ."

"ನನ್ನ ಬಗ್ಗೆ ನಿಮಗೆ ಯೋಚನೆ ಬರಲಿಲ್ವಾ? ಅಲೋಕನ ಸ್ವಭಾವ ನಿಮಗೆ ಗೊತ್ತಿದೆ. ನಾನು ಒಂಟಿಯಾಗಿಬಿಡ್ತೀನೇಂತ ನಿಮಗೆ ಒಂದು ಸಲವೂ ಅನ್ನಿಸಲಿಲ್ಲವಾ?"

"ನಾನು 20-22 ವರ್ಷದಿಂದ ಒಂಟಿಯಾಗೇ ಇಲ್ವಾ ಅಮೃತ? ನಾವಿಬ್ಬರೂ ಒಂದೇ ಮನೆಯಲ್ಲಿದ್ರೂ ನೀನೆಲ್ಲಿ ನನಗೆ ಹತ್ತಿರವಾಗಿದ್ದೆ? ನನಗೂ 20 ವರ್ಷಗಳ ಹಿಂದೆ ಆಸೆ-ಆಕಾಂಕ್ಷೆಗಳಿದ್ದವು. ಹೆಂಡತಿ, ಮಗನ ಜೊತೆ ಸುತ್ತಾಡಬೇಕು, ಅವರ ಜೊತೆ ಹಾಯಾಗಿ ಕಾಲ ಕಳೆಯಬೇಕು ಅನ್ನುವ ಹಂಬಲ ನನಗೂ ಇತ್ತು. ಆದರೆ ನಿನಗೆ ನಿನ್ನ ಪಾಠ, ಹಣ ಇವಷ್ಟೇ ಮುಖ್ಯವಾಯ್ತು. ಬೆಳಗ್ಗೆ ಒಂದು ಕಪ್ ಕಾಫಿ ಮಾಡಿಕೊಡಕ್ಕೂ ನಿನಗೆ ಬಿಡುವಿರ್ತಿರಲಿಲ್ಲ. ಗಂಡಸಾಗಿ ನಾನು 2 ಹೊತ್ತು ಅಡಿಗೆ ಕೆಲಸ ಮಾಡ ಬೇಕಿತ್ತು. ನೀನು 'ನನ್ನ ಸಂಪಾದನೆ, ನನ್ನ ಸೈಟು, ನನ್ನ ಮನೆ' ಅಂತ ಬೀಗ್ತಾ ಇದ್ದಾಗ ನನ್ನಲ್ಲಿ ನಾನು ಏನೂ ಪ್ರಯೋಜನವಿಲ್ಲದವನು ಅನ್ನುವ ಕೀಳರಿಮೆ ಬೆಳೆಯಿತು. ನಾವು ಒಟ್ಟಿಗೆ ಇರೋದ್ರಲ್ಲಿ ಅರ್ಥವಿಲ್ಲ ಅಮೃತ."

"ನೋಡಿ, ನಾನು ನನಗೋಸ್ಕರ ಇಷ್ಟೆಲ್ಲಾ ಮಾಡಿದ್ನಾ? ನಾವೆಲ್ಲಾ ಸುಖವಾಗಿರಬೇಕು ಅನ್ನುವ ಉದ್ದೇಶ್ಯದಿಂದ ತಾನೆ ನಾನು ದುಡಿಯುತ್ತಾ ಇರೋದು? ಇತ್ತೀಚೆಗೆ ಅಲೋಕನಿಗೆ ನನ್ನ ಮಾತೂಂದ್ರೆ ಲಕ್ಷ್ಯವೇ ಇಲ್ಲ. ನೀವೂ ಹೀಗೆ ಬಂದುಬಿಟ್ರೆ ನಾನೇನು ಮಾಡಲಿ? ನೀವಲ್ಲಿಗೆ ಬನ್ನಿ."

"ನಿನ್ನ ದುಡಿತ, ನಿನ್ನ ಸಂಪಾದನೆಗಳಿಂದ ನೀನು ಸುಖವಾಗಿದ್ದೀಯಾ ಅಮೃತ? ಕಷ್ಟ-ಸುಖ ಹಂಚಿಕೊಳ್ಳುವ ಗಂಡನ ಬಗ್ಗೆಯೇ ನಿನಗೆ ಅಲಕ್ಷ್ಯ. ನಮಗಿರೋನು ಒಬ್ಬನೇ ಮಗ. ಅವನನ್ನು ಯಾರ ಇಚ್ಛೆಯಂತೆ ಬೆಳೆಸಿದೆ? ಅವನ ಬಗ್ಗೆ ಯಾವುದೇ ನಿರ್ಧಾರ ತೆಗೆದುಕೊಳ್ಳಬೇಕಾದಾಗ ನನ್ನನ್ನು ಕೇಳಿ ದೆಯಾ? ನಾನು ಯಾರಿಗೋಸ್ಕರ ಅಲ್ಲಿಗೆ ಬಂದಿರಲಿ? ನಿನಗಿಂತ ಕಡಿಮೆ ಓದಿರುವ ನನ್ನ ಬಗ್ಗೆ ನಿನಗೆ ತಿರಸ್ಕಾರ. ನನ್ನ ಸಂಬಳ ಕಡಿಮೆ ಇರೋ ದ್ರಿಂದ, ಅವನು ಕೇಳಿದಷ್ಟು ಹಣ ಕೊಡುವುದಕ್ಕೆ ನನ್ನ ಕೈಲಿ ಸಾಧ್ಯವಿಲ್ಲ ದಿರುವುದರಿಂದ, ಅಲೋಕಂಗೆ ನನ್ನ ಬಗ್ಗೆ ಅಲಕ್ಷ್ಯ. ಇವನ್ಯಾರು ಹಂಗೆ

ಹೇಳಕ್ಕೆ ಅನ್ನುವ ಧೋರಣೆ. ಯಾರಿಗೂ ಬೇಡದ ವ್ಯಕ್ತಿಯಾಗಿ ಆ ಮನೆ ಯಲ್ಲಿರುವುದಕ್ಕಿಂತ ಬೇರೆ ಹೋಗಿರೋದು ಒಳ್ಳೆಯದೂಂತ ನನಗೆ ಎಷ್ಟೋ ದಿನಗಳಿಂದ ಅನ್ನಿಸ್ತಿತ್ತು. ಅಮ್ಮನ ಕಾರಣದಿಂದ ಅದಕ್ಕೆ ಅವಕಾಶ ಸಿಕ್ತು. ನಾನಿಲ್ಲಿ ಅಮ್ಮನ ಮಗನಾಗಿ ಆರಾಮವಾಗಿದ್ದೇನೆ. ದಯವಿಟ್ಟು ನನ್ನನ್ನು ನನ್ನ ಪಾಡಿಗೆ ಬಿಟ್ಟುಬಿಡು "

"ಇದೇ ನಿಮ್ಮ ಕೊನೆಯ ನಿರ್ಧಾರಾನಾ ?"

ಅಷ್ಟರಲ್ಲಿ ಕಾಫಿ ತಂದ ಸರೋಜಮ್ಮ ಹೇಳಿದರು.

"ಬೇಡಪ್ಪ, ಹಠ ಮಾಡಬೇಡ. ನಾವು ಮಕ್ಕಳಿಗೆ ಮದುವೆ ಮಾಡು ವುದು ಅವರು ಸುಖವಾಗಿ ಸಂಸಾರ ಮಾಡುವುದನ್ನು ನೋಡುವುದಕ್ಕೇ ಹೊರತು, ಅವರ ಸಂಸಾರ ಒಡೆಯುವುದಕ್ಕಲ್ಲ. ನನ್ನನ್ನು ಯಾವುದಾದ್ರೂ ವೃದ್ಧಾಶ್ರಮಕ್ಕೆ ಸೇರಿಸಿಬಿಟ್ಟು, ನೀನು ಅಲ್ಲಿಗೇ ಹೋಗು."

"ಸಾಧ್ಯವಿಲ್ಲಮ್ಮ, ನಿನ್ನನ್ನು ಬಿಟ್ಟು ನಾನೆಲ್ಲಿಗೂ ಹೋಗಲ್ಲ."

"ನೋಡಿ, ಆಗಿದ್ದು ಆಗಿಹೋಯ್ತು. ಅತ್ತೇನ್ನೂ ಕರೆದುಕೊಂಡು ನೀವು ಅಲ್ಲಿಗೇ ಬನ್ನಿ. ಒಟ್ಟಿಗೆ ಸುಖವಾಗಿರೋಣ."

"ಇಲ್ಲ ಅಮೃತ. ನಾನಲ್ಲಿಗೆ ಬರಬೇಕಿದ್ರೆ ನೀನು ನನ್ನ ಕೆಲವು ಕಂಡೀಷನ್ಸ್‌ಗಳಿಗೆ ಒಪ್ಪಬೇಕು."

"ಏನು ನಿಮ್ಮ ಕಂಡೀಷನ್ಸ್ ?"

"ನೀನು ಮೊದಲು ಗೃಹಿಣಿಯಾಗಿರಬೇಕು. ನನ್ನನ್ನಾಗಲಿ, ನಮ್ಮಮ್ಮ ನ್ನಾಗಲಿ ಅಡಿಗೆಯವರ ತರಹ, ಜವಾನರ ತರಹ ನೋಡಿಕೊಳ್ಳಬಾರದು. ಎರಡನೆಯದಾಗಿ ನೀನು ಪಾಠ ಹೇಳೋದು ಬಿಡಬೇಕು. ನೀನು ಹಣ ಕೊಡ್ತಿರೋದ್ರಿಂದ ಅಲೋಕ ಹಾಳಾಗ್ತಿದ್ದಾನೆ. ಅವನು ನನಗೂ ಮಗ. ಅವನ ಬಗ್ಗೆ ನೀನೊಬ್ಬಳೇ ನಿರ್ಧಾರ ತೆಗೆದುಕೊಳ್ಳುವುದನ್ನು ಬಿಡಬೇಕು."

ಅವಳು ತಕ್ಷಣ ಉತ್ತರ ಕೊಡಲಿಲ್ಲ. ಎರಡು ನಿಮಿಷ ಬಿಟ್ಟು ಹೇಳಿ ದಳು. "ನಾನಿನ್ನು ಬರ್ತೇನೆ."

ಶೇಖರನ ತುಟಿಗಳ ಮೇಲೆ ವಿಷಾದದ ನಗೆಯೊಂದು ತೇಲಿತು.

ಅಮೃತ ಆ ದೊಡ್ಡ ಹಾಲ್‌ನಲ್ಲಿ ಒಬ್ಬಳೇ ಕುಳಿತಿದ್ದಳು. ಅವಳು ಕುಳಿತಿದ್ದ ಉಯ್ಯಾಲೆಯಂತೆ ಅವಳ ಮನಸ್ಸು ತೂಗಾಡುತ್ತಿತ್ತು. ಶೇಖರನ ಮನೆಯಿಂದ ಬಂದ ಮೇಲೆ ಅವಳ ಮನಸ್ಸು ತಾನು ನಡೆದು ಬಂದ ದಾರಿಯನ್ನು ನೆನಪು ಮಾಡಿಕೊಂಡಿತು. ಶೇಖರ್ ಹೇಳಿದ್ದರಲ್ಲಿ ಕೊಂಚವೂ ಉತ್ಪ್ರೇಕ್ಷೆ ಇರಲಿಲ್ಲ. ಮದುವೆಯಾದ ಒಂದೆರಡು ವರ್ಷಗಳು ಮಾತ್ರ ಅವಳಿಗೆ 'ದಾಂಪತ್ಯ ಜೀವನ'ದಲ್ಲಿ ಆಸಕ್ತಿ ಇತ್ತು ನಂತರ ಅವಳಲ್ಲಿ ಒಂದು ರೀತಿಯ ಅಸಹನೆ ಮನೆ ಮಾಡಿತ್ತು. 'ನನ್ನ ಗಂಡ ನನ್ನ ಬುದ್ಧಿವಂತಿಕೆಗೆ ಸರಿಯಾದ ವ್ಯಕ್ತಿಯಲ್ಲ' ಎನ್ನುವ ಭಾವನೆ ಬೆಳೆದಿತ್ತು. ಎಂ.ಎಸ್.ಸಿ ಮಾಡಬೇಕು, ಲೆಕ್ಚರರ್ ಆಗಬೇಕು, ಮನೆಪಾಠ ಹೇಳಿ ಹೇರಳವಾಗಿ ಸಂಪಾದಿಸಬೇಕು' ಅನ್ನುವ ಉತ್ಸಾಹದಲ್ಲಿ ಅವಳು ತಾನೊಬ್ಬಳು ಗೃಹಿಣಿ ಅನ್ನುವುದನ್ನು ಮರೆತಿದ್ದಳು. ಅವಳ ಸಹೋದ್ಯೋಗಿ ಅಂಬುಜಾ ಒಳ್ಳೆಯ ಫಿಸಿಕ್ಸ್ ಲೆಕ್ಚರರ್ ಎಂದು ಹೆಸರು ಮಾಡಿದ್ದಳು ತನ್ನ ಬಳಿ ಪಾಠಕ್ಕೆ ಬರುತ್ತಿದ್ದ ವಿದ್ಯಾರ್ಥಿಗಳನ್ನು ಅವಳ ಬಳಿ ಪಾಠಕ್ಕೆ ಕಳುಹಿಸಬೇಕೆಂದುಕೊಂಡಾಗ ಅಂಬುಜಾ ಅವಳ ಸಲಹೆಯನ್ನು ನಯವಾಗಿ ನಿರಾಕರಿಸಿದ್ದಳು.

"ನನಗೆ ಪಾಠ–ಗೀಠ ಹೇಳಕ್ಕೆ ಇಷ್ಟವಿಲ್ಲ ಕಣೆ. ನನ್ನ ಗಂಡ ಕೆ.ಇ ಬಿ. ಯಲ್ಲಿದ್ದಾರೆ. ಇಬ್ಬರು ಚಿಕ್ಕ ಮಕ್ಕಳಿದ್ದಾರೆ. ಮಕ್ಕಳನ್ನು ಚಿಕ್ಕವಯಸ್ಸಿನಿಂದ ಸರಿಯಾಗಿ ನೋಡಿಕೊಳ್ಳದಿದ್ರೆ ಅವರು ಹಾಳಾಗಿಹೋಗ್ತಾರೆ."

"ನಿನ್ನ ಗಂಡ ನೋಡಿಕೊಳ್ತಾರೆ ಬಿಡು."

"ಒಂದೆರಡು ದಿನ ನೋಡಿಕೊಳ್ಳಬಹುದು. ಆದ್ರೆ ಪ್ರತಿದಿನ ನೋಡಿಕೊಳ್ಳಕ್ಕೆ ಅವರಿಗೂ ಬೇಜಾರಾಗಲ್ವಾ ? ನಾನು ಹತ್ತು ನಿಮಿಷ ಹೊರಗೆ ಹೋದ್ರೆ ನಮ್ಮತ್ತೆಯವರು ಒದ್ದಾಡ್ತಾರೆ. ಇನ್ನು ಮನೆ–ಮಕ್ಕಳ ಜವಾಬ್ದಾರಿ ತೆಗೆದುಕೊಳ್ತಾರಾ ?"

"ನಿಮ್ಮಿಬ್ಬರ ಸಂಬಳದಲ್ಲಿ ಆರಾಮವಾಗಿರಕ್ಕೆ ಆಗತ್ತೇನೆ ? ಬೆಂಗಳೂರು ತುಂಬಾ ದುಬಾರಿ ಅಲ್ವಾ ?"

"'ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು' ಅನ್ನುವುದನ್ನು ನಾನು, ನಮ್ಮವರು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದೇವೆ. ಸಂಸಾರ ಸುಖ,ನೆಮ್ಮದಿ ಬಲಿಕೊಟ್ಟು ಹಣ ಸಂಪಾದಿಸಿ ಏನು ಪ್ರಯೋಜನ ?" ಎಂದಿದ್ದಳು. ಅವಳ

ಇಬ್ಬರು ಮಕ್ಕಳು ಈಗ ದೊಡ್ಡ ಹುದ್ದೆಯಲ್ಲಿದ್ದರು. ಮಗ ಐ.ಎ.ಎಸ್. ಮಾಡಿದ್ದ, ಮಗಳು ಡಾಕ್ಟರಾಗಿದ್ದಳು.

"ನೀವು ಒಳ್ಳೆಯ ಲೆಕ್ಚರರ್ ಇರಬಹುದು, ಆದರೆ ಒಳ್ಳೆಯ ಗೃಹಿಣಿ ಅಲ್ಲ" ಎಂದಿದ್ದಳು ಒಮ್ಮೆ ಶ್ಯಾಮಲ. ಶೇಖರ ಪಾಡುವ ಪಾಡು ನೋಡಿ.

ಅವಳಿಗೆ ಮೊದಲ ಬಾರಿಗೆ ತಾನಿಟ್ಟ ಹೆಜ್ಜೆ ತಪ್ಪು ಅನ್ನಿಸಿತು. ಹಣದಾಸೆಯಿಂದ ಜೀವನದ ಅಮೂಲ್ಯ ಕ್ಷಣಗಳನ್ನು ಕಳೆದುಕೊಂಡಿದ್ದೇನೇನೋ? ಅನ್ನಿಸಿತು. ಯಾವುದಾದರೂ ಟ್ಯುಟೋರಿಯಲ್ಸ್‌ನಲ್ಲಿ ವಾರಕ್ಕೆ ಮೂರು ದಿನ ದುಡಿದಿದ್ದರೂ ಆಗುತ್ತಿತ್ತು. ನಾನು ಮಾಡಿದ್ದೇನು? ಗಂಡನ ವಿಶ್ವಾಸ ಕಳೆದುಕೊಂಡೆ, ಮಗನನ್ನೂ ಹಾಳು ಮಾಡಿಬಿಟ್ಟೆ. ತವರಿನವರನ್ನೂ, ಅತ್ತೆ ಮನೆಯವರನ್ನೂ ದೂರ ಮಾಡಿಕೊಂಡೆ.

ಅವಳು ಕಣ್ಮುಚ್ಚಿ ತನ್ನಲ್ಲೇ ಹೇಳಿಕೊಂಡಳು. 'ದೇವರೇ, ನನ್ನಲ್ಲೇ ಏಕೆ ಈ ಬೇಗುದಿ? ನನ್ನ ಮನದಲ್ಲೇ ಯಾಕಿಷ್ಟು ಗೊಂದಲ? ಯಾಕೋ ಎಲ್ಲವೂ ಯಾಂತ್ರಿಕ ಅನ್ನಿಸಿದೆ. ಬದುಕು ಬೇಕು ನನಗೆ. ಚೈತನ್ಯ ತುಂಬಿದ ಬದುಕು! ಶಾಂತಿ ನೀಡುವ ಬದುಕು!

'ಅಮೃತ, ಶೇಖರ್ ಹೇಳಿದ ಕಂಡೀಷನ್ಸ್‌ಗೆ ಒಪ್ಪಿ ಅವರಿಬ್ಬರನ್ನೂ ವಾಪಸ್ಸು ಕರೆದುಕೊಂಡು ಬಾ' ಎಂದಿತು ಅವಳ ಮನಸ್ಸು.

'ಶೇಖರನಿಲ್ಲದ ಈ ಮನೆಯಲ್ಲಿ ಇರುವುದು ಅಸಾಧ್ಯ' ಎಂದು ಎರಡು ತಿಂಗಳಿಂದ ಅನ್ನಿಸುತ್ತಿತ್ತು. ಒಬ್ಬ ವ್ಯಕ್ತಿ ಹತ್ತಿರವಿರುವಾಗ ಅವನ ಬೆಲೆ ತಿಳಿಯುವುದಿಲ್ಲ. ಅವನು ಹೋದ ಮೇಲೆ ಆ ವ್ಯಕ್ತಿಯು ಇಲ್ಲದ ಕೊರತೆ ಕಾಣುವುದು' ಎನ್ನಿಸಿತು.

"ಅಮೃತ, ಫ್ಲಾಸ್ಕ್‌ನಲ್ಲಿ ಕಾಫಿ ಇದೆ ತೊಗೋ"

"ಅಮೃತ, ನೀರು ಕಾದಿದೆ. ಸ್ನಾನ ಮಾಡಿಬಿಡು"

"ಅಮೃತ, ಬಿಸಿಯಾಗಿ ಅನ್ನ ಆಗಿದೆ. ನೀನು ಊಟ ಮಾಡು."

"ಅಮೃತ, ಹಾಲು ಕಾದಿದೆ, ಕುಡಿದುಬಿಡು"

ಎಂದೆಲ್ಲಾ ಹೇಳುತ್ತಿದ್ದ ಶೇಖರ್ ಇದ್ದಕ್ಕಿದ್ದಂತೆ ತನಗೂ, ಹೆಂಡತಿಗೂ ಸಂಬಂಧವೇ ಇಲ್ಲದಂತೆ ವರ್ತಿಸಲು ತಾನೇ ಕಾರಣವೇನೋ ಅನ್ನಿಸಿತು.

ಹಣದಿಂದ ಸುಖ, ನೆಮ್ಮದಿ, ಶಾಂತಿ ಕೊಳ್ಳಲು ಸಾಧ್ಯವೇ ಇಲ್ಲವೆನ್ನುವುದು ಅವಳಿಗೆ ಮೊದಲ ಬಾರಿಗೆ ಅರ್ಥವಾಯಿತು.

'ನಾನು ಜೀವನದಲ್ಲಿ ಸಾಧಿಸಿದ್ದೇನು ?' ಎಂದು ಪ್ರಶ್ನಿಸಿಕೊಂಡಾಗ, ಅವಳು ಉತ್ತರಕ್ಕಾಗಿ ಹುಡುಕಾಡುವಂತಾಯ್ತು. ಗಂಡ ಹೇಳಿದಂತೆ ಟ್ಯೂಷನ್ಸ್ ಹೇಳುವುದನ್ನು ಬಿಡಬೇಕು ಎಂಬ ನಿರ್ಧಾರ ಮನದಲ್ಲಿ ಮೂಡಿದಾಗ ಅವಳಿಗೆ ದುಃಖಕ್ಕಿಂತ ಸಂತೋಷವಾಯ್ತು.

'ನಾಳೆ ಅಲೋಕನ ಜೊತೆ ಹೋಗಿ, ಅವರಿಬ್ಬರನ್ನೂ ಕರೆತರಬೇಕು' ಎಂದುಕೊಂಡಾಗ ಮನಸ್ಸಿಗೆ ಹಾಯೆನಿಸಿತು.

ಅವಳು ಎದ್ದು ಕೈ ಕಾಲು ತೊಳೆದುಕೊಂಡು, ದೇವರಿಗೆ ದೀಪ ಹಚ್ಚಿದಳು. ಅಷ್ಟರಲ್ಲಿ ಫೋನ್ ರಿಂಗಾಯಿತು.

"ಹಲೋ, ಅಮೃತ ಸ್ಪೀಕಿಂಗ್...."

"ಆಂಟಿ, ನಾನು ರಜತ್...."

"ಏನಪ್ಪ ವಿಷಯ ?"

"ಬನ್ನೇರುಘಟ್ಟದಿಂದ ವಾಪಸ್ಸು ಬರುವಾಗ ಬೈಕ್ ಮರಕ್ಕೆ ಡಿಕ್ಕಿ ಹೊಡೆದು, ಅಲೋಕ್ ನಿಮ್ಹಾನ್ಸ್‌ನಲ್ಲಿದ್ದಾನೆ. ನೀವು ತಕ್ಷಣ ಬನ್ನಿ."

ಸುದ್ದಿ ಕೇಳಿ ಅವಳ ಎದೆಗೆ ಬೆಂಕಿ ಬಿದ್ದಂತಾಯ್ತು. ಅವಳು ತಕ್ಷಣ ಆಟೋ ಮಾಡಿಕೊಂಡು ಶೇಖರನ ಮನೆ ತಲುಪಿದಳು. ಇಬ್ಬರೂ ನಿಮ್ಹಾನ್ಸ್ ತಲುಪಿದಾಗ ರಾತ್ರಿ ಎಂಟು ಗಂಟೆ. ರಜತ್ ಅವರಿಗಾಗಿ ಕಾಯ್ತಿದ್ದ.

"ತಲೆಗೆ ಏಟು ಬಿದ್ದಿದೆ ಆಂಟಿ. ಇನ್ನೂ ಜ್ಞಾನ ಬಂದಿಲ್ಲ."

ಶೇಖರ್ ಅಳುತ್ತಿದ್ದ ಹೆಂಡತಿಯನ್ನು ಕಾರಿಡಾರ್‌ನಲ್ಲಿ ಬಿಟ್ಟು ಒಳಗೆ ಹೋಗಿ ಡಾ॥ ಬಾಲಸುಬ್ರಹ್ಮಣ್ಯಂ ಅವರನ್ನು ಭೇಟಿ ಮಾಡಿದ.

"ನಮ್ಮ ಹುಡುಗನ ಸ್ಥಿತಿ ಹೇಗಿದೆ ಡಾಕ್ಟರ್ ?"

"ಅವನಿಗೆ ಜ್ಞಾನ ಬರುವವರೆಗೂ ಏನೂ ಹೇಳಕ್ಕಾಗಲ್ಲ."

"ಜೀವಕ್ಕೆ ಅಪಾಯವಿದೆಯಾ ಡಾಕ್ಟ್ರೇ ?"

"ನಾವು ಹೇಗ್ರಿ ಹೇಳಕ್ಕಾಗುತ್ತದೆ ? ಒಬ್ಬನೇ ಮಗಾಂತ ಹಣ ಕೊಟ್ಟು ಹಾಳು ಮಾಡಿಬಿಡ್ತೀರ. ಅವನಿಗೆ ಯಾಕೆ ಆಕ್ಸಿಡೆಂಟ್ ಆಯ್ತು ಗೊತ್ತಿದೆಯಾ ? ಕಂಠಪೂರ್ತಿ ಕುಡಿದಿದ್ದ. ಮೈಮೇಲೆ ಎಚ್ಚರವಿಲ್ಲದೆ ಬೈಕು

ಬಿಟ್ರೆ ಮತ್ತೇನಾಗುತ್ತೆ ? ಮಕ್ಕಳನ್ನು ಸರಿಯಾಗಿ ಬೆಳೆಸುವುದಕ್ಕಾಗದಿದ್ದ ಮೇಲೆ ನಿಮಗ್ಯಾಕ್ರೀ ಮಕ್ಕಳು ?"

ಶೇಖರ್ ಏನು ಉತ್ತರ ಕೊಡಲು ಸಾಧ್ಯ ? ಆ ರಾತ್ರಿ ಗಂಡ-ಹೆಂಡತಿ ಅಲ್ಲೇ ಇದ್ದರು ಮರುದಿನ ಬೆಳಗ್ಗೆ ಹನ್ನೊಂದೂವರೆ ಹೊತ್ತಿಗೆ ಅಲೋಕ ನಿಗೆ ಜ್ಞಾನ ಬಂತು.

"ಡ್ಯಾಡಿ-ಡ್ಯಾಡಿ" ಎಂದು ಅವನು ನರಳಿದಾಗ ಶೇಖರನ ಕರುಳು ಮಿಡಿ ಯಿತು. ಆದರೆ ಅಮೃತಳ ಮುಖ ಪೆಚ್ಚಾಯಿತು. ಎಲ್ಲರೂ 'ಅಮ್ಮ' ಎಂದು ಹಂಬಲಿಸುವಾಗ ಈ ಹುಡುಗನಿಗೆ ನನ್ನ ನೆನಪೂ ಆಗಲಿಲ್ಲವೆ ? ಎನ್ನಿಸಿತು.

ಶೇಖರ ಅವಳ ಅಳಲನ್ನು ಅರ್ಥ ಮಾಡಿಕೊಂಡವನಂತೆ ಭುಜ ತಟ್ಟಿದ. ಜ್ಞಾನ ಬಂದೊಡನೆ ತಂದೆ-ತಾಯಿಗಳನ್ನು ಒಟ್ಟಿಗೆ ನೋಡಿ ಅವನು ತುಟಿ ಅರಳಿಸಿದ

"ಹೇಗಿದ್ದೀಯಾ ಮರಿ ?" ಶೇಖರ್ ಮಗನ ತಲೆ ಸವರಿ ಕೇಳಿದ.

"ಸಾರಿ ಡ್ಯಾಡಿ ನಾನು ನಿಮಗೆ ತುಂಬಾ ತೊಂದರೆ ಕೊಟ್ಟುಬಿಟ್ಟೆ."

"ನೀವು.... ನೀವು...."

"ಷ್. ಮಾತಾಡಬೇಡ ರೆಸ್ಟ್ ತೊಗೋ."

"ಡ್ಯಾಡಿ ನೀವಿಲ್ಲೇ ಇರಿ."

ಶೇಖರ್ ಅವನ ಕೈ ಹಿಡಿದುಕೊಂಡು, ಪಕ್ಕದ ಕುರ್ಚಿಯಲ್ಲಿ ಕುಳಿತ. ಅಲೋಕ ಅಲ್ಲಿ ಒಂದು ವಾರವಿರಬೇಕಾಯಿತು. ಅಮೃತ ಬೆಳಗ್ಗೆಯಿಂದ ರಾತ್ರಿಯುವರೆಗೂ ನೋಡಿಕೊಳ್ಳುತ್ತಿದ್ದಳು. ಶೇಖರ ರಾತ್ರಿ ತಾನೇ ಮಲಗು ತ್ತಿದ್ದ.

"ನಾಳೆ ನೀವು ನಿಮ್ಮ ಹುಡುಗನನ್ನು ಮನೆಗೆ ಕರೆದೊಯ್ಯಬಹುದು." ಎಂದು ಡಾಕ್ಟರ್ ಹೇಳಿದಾಗ, ತಂದೆ-ತಾಯಿಗಳಿಗೆ ಕುಣಿದಾಡುವಷ್ಟು ಸಂತಸ ವಾಯಿತು. ಈ ವಿಚಾರ ಅಲೋಕನ ಕಿವಿ ಮುಟ್ಟಲು ತಡವಾಗಲಿಲ್ಲ.

"ಡ್ಯಾಡಿ, ನಾನು ಚಾಮರಾಜಪೇಟೆಯ ಮನೆಗೇ ಬರ್ತೀನಿ" ಅಲೋಕ ಹಠ ಹಿಡಿದ. ಶೇಖರ ಉತ್ತರಿಸದೆ ಹೆಂಡತಿಯ ಮುಖ ನೋಡಿದ. ಅವಳು ಅಳು ತಡೆಯುವ ಪ್ರಯತ್ನದಲ್ಲಿದ್ದಳು.

"ಮಮ್ಮಿ, ನಾನು ಚಾಮರಾಜಪೇಟೇಲ್ಲಿ ಹದಿನೈದು ದಿನಗಳಿದ್ದು ಆಮೇಲೆ ಬರ್ತೀನಿ. ಅಲ್ಲಾದ್ರೆ ಡ್ಯಾಡಿ ನನ್ನ ಜೊತೆ ಯಾವಾಗ್ಲೂ ಇರ್ತಾರೆ. ಒಂದು ವೇಳೆ ಅವರು ಕೆಲಸಕ್ಕೆ ಹೋದ್ರೆ ಅಜ್ಜಿ ಇದ್ದು ನನ್ನನ್ನು ನೋಡಿ ಕೊಳ್ತಾರೆ"

"ಬೇಡ ಅಲೋಕ್. ನೀನಲ್ಲಿಗೆ ಬಂದ್ರೆ ಮಮ್ಮಿ ಒಂಟಿಯಾಗಿಬಿಡ್ತಾಳೆ." ಶೇಖರ್ ಹೇಳಿದ.

"ಮಮ್ಮಿಗೆ ನನ್ನನ್ನು ನೋಡಿಕೊಳ್ಳಕ್ಕೆ ಬಿಡುವೆಲ್ಲಿರತ್ತೆ ಡ್ಯಾಡೀ. ಅವರಿಗೆ ನಿಮ್ಮ ಹಾಗೆ ನೋಡಿಕೊಳ್ಳೋಕ್ಕೆ ಬರಲ್ಲ. ನಾನು ನಿಮ್ಮ ಜೊತೇನೇ ಇರ್ತೀನಿ."

ಅವನ ಮನದ ತೆರೆಯ ಮೇಲೆ ತಂದೆ ತನ್ನ ಜೊತೆ ಆಡುತ್ತಿದ್ದ ರೀತಿ, ಕಥೆ ಹೇಳಿ ಅವರು ತಿನ್ನಿಸುತ್ತಿದ್ದ ಬಗೆ ತನಗೇನಾದರೂ ಕೊಂಚ ಹುಷಾರು ತಪ್ಪಿದರೂ ರಜ ಹಾಕಿ, ಹಗಲೂ ರಾತ್ರಿ ತನ್ನನ್ನು ನೋಡಿಕೊಳ್ಳುತ್ತಿದ್ದ ದಿನಗಳು—ಎಲ್ಲವೂ ನೆನಪಾಗಿ ಕಣ್ಣು ತುಂಬಿ ಬಂತು.

"ನಾವೆಲ್ಲಾ ಒಟ್ಟಿಗೆ ಇರೋಣ. ಅಲೋಕ್, ಅಜ್ಜಿ-ಡ್ಯಾಡಿ ನಮ್ಮನೇಗೇ ಬರ್ತಾರೆ. ನಾನು ಇನ್ನು ಮೇಲೆ ಟ್ಯೂಷನ್ಸ್ ಹೇಳಲ್ಲ ನಿನಗಿಷ್ಟವಿಲ್ಲದಿದ್ರೆ ಕೆಲಸಾನೂ ಬಿಟ್ಟುಬಿಡ್ತೀನಿ. ಸದ್ಯಕ್ಕಂತೂ ರಜ ಹಾಕಿ ನಿನ್ನನ್ನು ನೋಡಿ ಕೊಳ್ತೀನಿ" ಮಗನ ತಲೆ ಸವರುತ್ತಾ ಹೇಳಿದಳು ಅಮೃತ. ಹೆಂಡತಿಯ ಮಾತುಗಳು ಶೇಖರನ ಕಿವಿಗೆ ಅಮೃತ ಸಿಂಚನದಂತಿದ್ದವು.

ಅಮೃತ, ಅಲೋಕನಿಗೆ ಅಪಘಾತವಾದ ವಿಚಾರವನ್ನು ಯಾರಿಗೂ ತಿಳಿಸಿರಲಿಲ್ಲ. ಅವನು ಮನೆಗೆ ಬಂದ ಮೇಲೆ ಮಂಜುಳಾಗೆ ಮಾತ್ರ ತಿಳಿಸಿ ದಳು. ವಿಷಯ ತಿಳಿದೊಡನೆ ಮಂಜು, ಸಿರಿ ಓಡಿಬಂದರು. ಬೆಳಗ್ಗೆಯಿಂದ ಸಾಯಂಕಾಲದವರೆಗೂ ಅಲ್ಲೇ ಇದ್ದರು. ಅಮೃತಳೇ ಅಡಿಗೆ ಮಾಡಿ ಬಡಿಸಿದಳು.

"ಅಲೋಕ್, ಮುಂದೇನು ಮಾಡ್ತೀಯ ?"

"ಗೊತ್ತಿಲ್ಲ ಆಂಟಿ"

"ನಾನೊಂದು ಮಾತು ಹೇಳಲಾ ?"

"ಹೇಳಿ ಆಂಟಿ"

"ಬಿ.ಇ. ಮುಗಿಸು,ಆಮೇಲೆ ಬಿಸಿನೆಸ್ ಮಾಡು. ಐದುವರ್ಷ ಓದಿದ್ದು ವ್ಯರ್ಥವಾಗಬಾರದು. ನೀನು ದಡ್ಡನಲ್ಲ, ಮನಸ್ಸು ಮಾಡಿದ್ರೆ ನೀನು ಖಂಡಿತ ಬಿ.ಇ. ಮುಗಿಸ್ತೀಯ."

"ಆಗಲಿ ಆಂಟಿ, ಪ್ರಯತ್ನಪಡ್ತೀನಿ."

ಮಂಜುಳಳ ಬುದ್ಧಿವಾದ ವ್ಯರ್ಥವಾಗಲಿಲ್ಲ. ಜೊತೆಗೆ ಅಮೃತ-ಶೇಖರ್ ಕೂಡ ಒತ್ತಾಯಿಸಿದರು. ಒಂದು ಮಧ್ಯಾಹ್ನ ತಾಯಿ ಹತ್ತಿರದಲ್ಲಿಲ್ಲದಿರುವಾಗ ಅಲೋಕ ತಂದೆಯನ್ನು ಕೇಳಿದ.

"ಡ್ಯಾಡಿ, ನಾನು ಬಿ.ಇ. ಮುಗಿಸಬೇಕೂಂತ ನಿಮಗೂ ಇಷ್ಟಾನಾ ?"

"ಹೌದಪ್ಪ, ನೀನು ಇಂಜಿನೀಯರ್ ಆಗುವುದನ್ನು ನಾವಿಬ್ರೂ ನೋಡಬೇಕು. ನಿಮ್ಮಮ್ಮ ಅಷ್ಟೆಲ್ಲಾ ಕಷ್ಟಪಟ್ಟು ಹಣ ಸಂಪಾದಿಸಿದ್ದು ನಿನಗೋಸ್ಕರಾನೇ ಅಲ್ವಾ ? ನೀನು ಬಿ.ಇ. ಮುಗಿಸಿದ್ರೆ ಖಂಡಿತ ನನಗಿಬ್ಬರಿಗೂ ಸಂತೋಷವಾಗತ್ತೆ."

"ಆಗಲಿ ಡ್ಯಾಡಿ, ಖಂಡಿತ ನಾನು ಓದ್ತೀನಿ" ಎಂದ ಅಲೋಕ ದೃಢ ಚಿತ್ತದಿಂದ.

ಶೇಖರ್ ಅವನ ಭುಜ ತಟ್ಟಿದ.

ಲಹರಿ ಒಂದು ವಾರದಿಂದ ತಾನಾಗಿ ಉಳಿದಿರಲಿಲ್ಲ. ಹರ್ಷ ಮದ್ರಾಸ್‌ಗೆ ಹೋಗಿ ಎರಡು ತಿಂಗಳುಗಳಾಗಿದ್ದವು ಹೋದ ಕೂಡಲೇ ಫೋನ್ ಮಾಡಿದ್ದ. ನಂತರ ವಾರಕ್ಕೆ 2 ದಿನ ಫೋನ್ ಮಾಡುತ್ತಿದ್ದ. ಲಹರಿ ಪ್ರತಿದಿನ ರಾತ್ರಿ 9-30ರ ಮೇಲೆ ಫೋನ್ ಮಾಡುತ್ತಿದ್ದಳು. ಅವನು ಅಲ್ಲಿಯ ಮಾವನ ಮನೆಯ ನಂಬರ್ ಕೊಟ್ಟಿದ್ದ. ಆದರೆ ವಾರದಿಂದ ಅವನು ಫೋನ್ ಮಾಡಿರಲಿಲ್ಲ. ಇವಳು ಎಷ್ಟು ಸಲ ಫೋನ್ ಮಾಡಲು ಪ್ರಯತ್ನಿಸಿದರೂ ಪ್ರಯೋಜನವಾಗಿರಲಿಲ್ಲ. ಯಾರೋ 'ರಾಂಗ್ ನಂಬರ್' ಎಂದು ಹೇಳಿ ಫೋನ್ ಕೆಳಗಿಡುತ್ತಿದ್ದರು. ಲಹರಿಗೆ ಹರ್ಷನ ಧ್ವನಿ ಕೇಳದೆ ಹುಚ್ಚು ಹಿಡಿದಂತಾಗಿತ್ತು ಅವಳಿಗೆ. ತನ್ನ 'ಕಂಪ್ಯೂಟರ್ ಸೆಂಟರ್'ಗೆ ಹೋಗಲೂ ಇಚ್ಛೆಯೇ ಇರಲಿಲ್ಲ.

ಊಟ–ತಿಂಡಿಗಳಲ್ಲಿ ಆಸಕ್ತಿ ಇರಲಿಲ್ಲ. ತನ್ನ ಅಳಲನ್ನು ಯಾರ ಬಳಿ ಹೇಳಿಕೊಳ್ಳಬೇಕೋ ಅವಳಿಗೆ ತಿಳಿದಿರಲಿಲ್ಲ. ಹರ್ಷನನ್ನು ಮದ್ರಾಸ್‌ಗೆ ಕಳುಹಿಸುವ ಮೊದಲು ತಾಯಿ ಹೇಳಿದ್ದ ಮಾತುಗಳು ನೆನಪಾಗಿ ಅವಳ ಮನದಲ್ಲಿ ಆತಂಕ ಮೂಡಿತ್ತು.

ಅವಳು ತನ್ನ ಡ್ಯಾಡಿಯನ್ನು ಒಂದು ದಿನ ಬೆಳಗ್ಗೆ ಕೇಳಿದಳು.

"ಡ್ಯಾಡಿ, ಹರ್ಷನಿಂದ ಯಾವ ಸಮಾಚಾರಾನೂ ಇಲ್ಲ. ಏನಾಗ್ಹೋದು ?"

"ಯಾವ ಹರ್ಷ ಡಿಯರ್ ?"

"ನನ್ನ ಪಾರ್ಟನರ್...."

"ಓ, ಅವನಾ ? ಎಲ್ಲಿಗೆ ಹೋಗಿದ್ದಾನೆ ?" ಮುಖಕ್ಕೆ ಕ್ರೀಂ ಹಚ್ಚಿಕೊಳ್ಳುತ್ತಾ ಕೇಳಿದರವರು.

"ನಮ್ಮ ಬ್ರಾಂಚ್ ಮದ್ರಾಸ್‌ನಲ್ಲಿ ಪ್ರಾರಂಭ ಮಾಡ್ತಿದ್ದೇವೆ. ಅದಕ್ಕೋಸ್ಕರ ಅವನು ಅಲ್ಲೇ ಇದ್ದಾನೆ."

"ಅವನಿಂದ ನಿನಗೆ ಯಾವ ಸಮಾಚಾರ ತಿಳಿಯಬೇಕು ?"

"ಇದೇನು ಡ್ಯಾಡಿ ಹೀಗೆ ಕೇಳ್ತೀರಾ ?"

"ನಿಮ್ಮ ಸೆಂಟರ್ ಬಗ್ಗೆ ದಿನಾ ಫೋನ್ ಮಾಡುವಂತಹದ್ದು ಏನಿರತ್ತೆ? ವಿಷಯ ಇದ್ರೆ ಅವನೇ ತಿಳಿಸ್ತಾನೆ. ಅವನಿಗೆ ಅಲ್ಲಿ ಬೇರೆ ಯಾವುದಾದರೂ ಹುಡುಗಿಯರ ಪರಿಚಯವಾಗಿರಬೇಕು, ಸ್ನೇಹವಾಗಿರಬೇಕು. ಆರಾಮವಾಗಿರಲಿಬಿಡು. ನೀನ್ಯಾಕೆ ಅವನ ಬಗ್ಗೆ ತಲೆ ಕೆಡಿಸಿಕೊಳ್ತೀಯ ? ನೀನೂ ಬೇರೆ ಯಾರನ್ನಾದ್ರೂ ನೋಡ್ಕೋ."

"ಡ್ಯಾಡಿ, ನೀವು ಹೀಗೆ ಹೇಳಬಾರದು."

"ನಾನು ಹೇಳಿದ್ರಲ್ಲಿ ತಪ್ಪೇನಿದೆ ? ಸುಮ್ಮನೆ ಸೆಂಟಿಮೆಂಟಲ್ ಫೂಲ್ ತರಹ ಬಿಹೇವ್ ಮಾಡಬೇಡ. ಹೋಗು ಎಂಜಾಯ್ ಮಾಡು."

ಅವಳಿಗೆ ತಂದೆಯ ಮಾತು ಕೇಳಿ ತಲೆ ಚಚ್ಚಿಕೊಳ್ಳುವಂತಾಯಿತು. ಅವಳು ಕಂಪ್ಯೂಟರ್ ಸೆಂಟರ್‌ಗೆ ಬಂದಾಗ ದಿವ್ಯ ಹೇಳಿದಳು.

"ನೆನ್ನೆ ಸಾಯಂಕಾಲ ನಾನು, ರವಿ ಎಂ.ಜಿ. ರೋಡ್‌ಗೆ ಹೋಗಿದ್ದೆವು ಕಣೆ. ಅಲ್ಲಿ ಹರ್ಷನನ್ನು ನೋಡಿದಂತಾಯ್ತು."

ದಿವ್ಯ ಬಿ.ಇ. ಮಾಡಿದ್ದಳು. ಲಹರಿಯ ಕ್ಲಾಸ್‌ಮೇಟ್. ಅವಳ ಗಂಡ ರವಿ ಪ್ರೈವೇಟ್ ಫರ್ಮ್‌ನಲ್ಲಿ ಇಂಜಿನಿಯರ್ ಆಗಿದ್ದ. ಹರ್ಷ ಹೋದ ಮೇಲೆ, ಅವನ ಜಾಗಕ್ಕೆ ಲಹರಿ ದಿವ್ಯಾಳನ್ನು ತೆಗೆದುಕೊಂಡಿದ್ದಳು.

ದಿವ್ಯಾಳ ಮಾತು ಕೇಳಿ ಲಹರಿ ಜೋರಾಗಿ ನಕ್ಕು ಹೇಳಿದಳು.

"ಹರ್ಷ ಬೇಗಳೂರಿಗೆ ಬಂದ್ರೆ ನನ್ನನ್ನು ನೋಡದೇ ಹೋಗ್ತಾನೇನೇ ? ನೀನು ಯಾರನ್ನು ನೋಡಿದೆಯೋ ಏನೋ ?"

"ಅವನ್ಯಾವುದೋ ಪರ್ಸನಲ್ ಕೆಲಸಕ್ಕೆ ಬಂದಿರಬಹುದು. ನಿನ್ನನ್ನು ನೋಡಕ್ಕಾಗದೆ ವಾಪಸ್ಸಾಗಿರಬಹುದು "

"ಅವನ ಜೊತೆ ಯಾರಿದ್ರು ?"

"ಒಂದು ಹುಡುಗಿ ಇದ್ದಳು. ಕೊಂಚ ಕಪ್ಪು ಅನ್ನಿಸಿದ್ರೂ ತುಂಬಾ ಕಳೆಕಳೆಯಾಗಿದ್ದಳು."

"ನಿನಗೆಲ್ಲೋ ಭ್ರಮೆ ನೆನ್ನೆ ರಾತ್ರಿ ನಾನು ಹರ್ಷನ ಜೊತೆ ಮಾತ ನಾಡಿದ್ದೇನೆ. ಅವನು 'ಈ ತಿಂಗಳು ಬರಕ್ಕಾಗಲ್ಲ, ಮುಂದಿನ ತಿಂಗಳು ಬರ್ತೀನಿ' ಅಂತ ಹೇಳಿದ." ಲಹರಿ ಆರಾಮವಾಗಿ ಸುಳ್ಳಿನ ಮೂಟೆ ಉರುಳಿ ಸಿದಳು.

ಗೆಳತಿಯ ಎದುರಿಗೆ ಸುಳ್ಳು ಹೇಳಿದರೂ, ಅವಳ ಮನಸ್ಸಿಗೆ ಸಮಾ ಧಾನವಾಗಲಿಲ್ಲ. ತಾಯಿ ಹೇಳಿದ್ದಂತೆ ಹರ್ಷ ತನಗೆ ಮೋಸ ಮಾಡುತ್ತಿದ್ದಾ ನೇನೋ ? ಎನ್ನಿಸಿತು. ಅಂದು ರಾತ್ರಿ ಅವಳು ಫೋನ್ ಮಾಡಿದಾಗ ಹರ್ಷನೇ ರಿಸೀವ್ ಮಾಡಿದ.

"ಹರ್ಷ, ನೀನು ಯಾಕೆ 8–10 ದಿನಗಳಿಂದ ಫೋನ್ ಮಾಡಲಿಲ್ಲ ?"

"ನಾನು ಊರಿನಲ್ಲಿರಲಿಲ್ಲ ಲಹರಿ."

"ಎಲ್ಲಿಗೆ ಹೋಗಿದ್ದೆ ?"

"ಬಾಂಬೆಗೆ ಹೋಗಿದ್ದೆ."

"ಯಾಕೆ ?"

"ಕಂಪ್ಯೂಟರ್ಸ್ ಕೊಂಡುಕೊಳ್ಳಬೇಕಲ್ವಾ ? ಆ ವಿಚಾರ ಮಾತಾಡು ವುದಿತ್ತು."

"ನೀನು ಬೆಂಗಳೂರಿಗೆ ಬಂದಾಗ ಆ ವಿಚಾರ ಮಾತಾಡೋಣ. ನೀನು ನೀನು ಬೆಂಗಳೂರಿಗೆ ಬಂದು ಹೋದೆಯಾ ?"

"ಯಾವಾಗ ?"

"ಮೊನ್ನೆ."

"ಏನು ಪ್ರಶ್ನೆ ಕೇಳ್ತಿದ್ದೀಯ ಲಹರಿ ? ಬೆಂಗಳೂರಿಗೆ ಬಂದ್ರೆ ನಾನು ನಿನ್ನನ್ನು ವಿಸಿಟ್ ಮಾಡದೆ ಇರ್ತೀನಾ ?"

"ಬೆಂಗಳೂರಿಗೆ ಯಾವಾಗ ಬರ್ತೀಯಾ ?"

"ನಾನೀಗ ತುಂಬಾ ಬಿಜಿ. ಮುಂದಿನ ವಾರ ಬರ್ತೀನಿ"

"ನಾನೇ ಒಂದು ಸಲ ಬರಲಾ ?"

"ಖಂಡಿತ ಬೇಡ. ನಮ್ಮ ಮಾವನ ಮನೆಯವರು ತುಂಬಾ ಸಂಪ್ರದಾಯಸ್ಥರು. ಅವರಿಗೆ ನಿನ್ನ ಬರುವಿಕೆ ಇಷ್ಟವಾಗಲ್ಲ."

"ನಾನೇನು ನಿಮ್ಮ ಮಾವನ ಮನೆಯಲ್ಲಿ ಉಳಿದುಕೊಳ್ಳೋಲ್ಲ. ಹೋಟೆಲ್‌ನಲ್ಲಿರುತ್ತೇನೆ."

"ಬ್ರಾಂಚ್ ಓಪನಿಂಗ್ ಸೆರಮನಿಗೆ ನೀನು ಬರಲೇಬೇಕಲ್ಲವಾ ? ಈಗ ಯಾಕೆ ಬರ್ತೀಯಾ ?"

"ಹಾಗೇ ಆಗಲಿ, ಈಗ ಬರಲ್ಲ" ಎಂದಳು ಲಹರಿ. ಅವನು ಬೆಂಗಳೂರಿಗೆ ಬಂದಿರಲಿಲ್ಲ ಎನ್ನುವ ವಿಷಯ ಕೇಳಿ ಅವಳಿಗೆ ತುಂಬಾ ಸಮಾಧಾನವಾಯ್ತು.

ಅಂದೇ ರಾತ್ರಿ ಲಹರಿ ತಾಯಿಗೆ ಹರ್ಷ ಫೋನ್ ಮಾಡಿದ್ದ ವಿಚಾರ ತಿಳಿಸಿದಳು.

"ಇನ್ನೊಂದು ಬ್ರಾಂಚ್ ತೆಗೆಯೋದೂಂದ್ರೆ ಸುಲಭ ಅಲ್ಲ. ಅದಕ್ಕೆ ಪುನಃ ಹಣ ಹಾಕಬೇಕಾಗುತ್ತೆ. ನೀನು ಹರ್ಷ ಮದುವೆ ಮಾಡಿಕೊಂಡ್ರೆ ನಾನು ದುಡ್ಡು ಕೊಡ್ತೇನೆ. ಇಲ್ಲದಿದ್ರೆ ಒಂದು ಪೈಸೆ ಕೊಡಲ್ಲ. ನೀನು ನನ್ನನ್ನು ಕೊಂದರೂ ಚಿಂತೆಯಿಲ್ಲ. ನಾನು ಮಾತ್ರ ಹಣ ಕೊಡಲ್ಲ."

"ಯಾಕೆ ಮಮ್ಮಿ ಹಾಗಂತೀಯ ? ಈ ಆಸ್ತಿ ನಿನ್ನೊಬ್ಬಳದೇನೂ ಅಲ್ಲ."

"ಕಾನೂನಿನ ಪ್ರಕಾರ ಈ ಆಸ್ತಿ ನನ್ನದು ಮಾತ್ರ. ನಾನು ಯಾರಿಗಾದ್ರೂ ಕೊಡಬಹುದು. ನಿನಗೆ 8-10 ಲಕ್ಷ ಕೊಟ್ಟಿದ್ದಾಗಿದೆ. ಈಗ ಪುನಃ

ನಿನಗೆ ಹಣ ಎಲ್ಲಿಂದ ತರಲಿ ? ಸಿರಿಗೇನೂ ಕೊಡುವುದು ಬೇಡ್ವಾ ? ಮುಂದೆ ನನ್ನ ಜೀವನಕ್ಕೆ ಹಣ ಬೇಡ್ವಾ ?"

"ನೀನೇನಾದ್ರೂ ದುಡ್ಡು ಕೊಡದಿದ್ರೆ ನಾನು ವಿಷ ತೆಗೆದುಕೊಂಡು ಪ್ರಾಣ ಬಿಟ್ಟುಬಿಡ್ತೇನೆ."

"ಸಾಯುವವನ ಆಯುಸ್ಸು ನಮ್ಮ ಕೈಯ್ಯಲ್ಲಿರುತ್ತದೆಯೆ ? ನಿನ್ನಿಷ್ಟ ಬಂದಂತೆ ಮಾಡು." ಮಂಜುಳ ಕೂಡ ಹಠ ಬಿಡದೆ ಹೇಳಿದಳು. ಆದರೂ ಅವಳಿಗೆ ಒಳಗೊಳಗೆ ಭಯವಿತ್ತು.

'ಲಹರಿ ವಿಚಿತ್ರ ಸ್ವಭಾವದ ಹುಡುಗಿ. ಏನು ಮಾಡಿಕೊಂಡುಬಿಡುತ್ತಾಳೋ ?' ಎನ್ನಿಸುತ್ತಿತ್ತು. ಆದರೆ ಹಾಗೇನೂ ಆಗಲಿಲ್ಲ.

ಹರ್ಷ ಮದ್ರಾಸ್‌ಗೆ ಹೋದಮೇಲೆ ಲಹರಿಯ ಸ್ವಭಾವ ಕೊಂಚ್ಚಬದಲಾಗಿತ್ತು. ಅವಳ ಹೊರಗಿನ ಓಡಾಟ ಕಡಿಮೆಯಾಗಿತ್ತು. ಅವಳು ಬೆಳಿಗ್ಗೆ 8-30 ಗಂಟೆಗೆ ಎದ್ದು ಕಾಫಿ ಕುಡಿದು, ನಂತರ ಸ್ನಾನ ಮಾಡಿ ತಿಂಡಿ ತಿನ್ನುತ್ತಿದ್ದಳು. ಹತ್ತು ಗಂಟೆಯ ಹೊತ್ತಿಗೆ ಮನೆ ಬಿಡುತ್ತಿದ್ದಳು. ಅವಳು ಹೊರಟಾಗ ಮಂಜುಳ ಒಂದು ಕಪ್ ಹಾರ್ಲಿಕ್ಸ್ ಕೊಟ್ಟು, ಮಧ್ಯಾಹ್ನಕ್ಕೆ ಬಾಕ್ಸ್‌ನಲ್ಲಿ ಏನಾದರೂ ಹಾಕಿ ಕೊಡುತ್ತಿದ್ದಳು ಹರ್ಷನ ಬದಲು ಕೆಲಸ ಮಾಡುತ್ತಿದ್ದ ದಿವ್ಯಾ ಬೆಳಿಗ್ಗೆ 8-10.30ರವರೆಗೂ ಕಂಪ್ಯೂಟರ್ ಸೆಂಟರ್ ನೋಡಿಕೊಳ್ಳುತ್ತಿದ್ದಳು. ಲಹರಿ ಹಾಗೂ ಪ್ರದೀಪ್ 10.30 ರಿಂದ 4 ಗಂಟೆಯವರೆಗೂ ಕೆಲಸ ಮಾಡುತ್ತಿದ್ದರು. ದಿವ್ಯಾ 4 ಗಂಟೆಯಿಂದ 7 ಗಂಟೆಯವರೆಗೂ ನೋಡಿಕೊಳ್ಳುತ್ತಿದ್ದಳು. ಸಾಯಂಕಾಲ ಲಹರಿ ಮನೆಗೆ ಬರುವ ವೇಳೆಗೆ ಮಂಜುಳ ಬಿಸಿಯಾಗಿ ಏನಾದರವೆ ತಿಂಡಿ ಮಾಡಿಟ್ಟಿರುತ್ತಿದ್ದಳು. ತಿಂಡಿ ತಿಂದು ಲಹರಿ ಆರು ಗಂಟೆಯವರೆಗೆ ಮಲಗಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಳು. ನಂತರ 9.30ರವರೆಗೂ ಟಿ.ವಿ. ನೋಡುತ್ತಿದ್ದಳು. 9.30ಕ್ಕೆ ಮೂವರೂ ಒಟ್ಟಿಗೆ ಕುಳಿತು ಊಟ ಮಾಡುತ್ತಿದ್ದರು. ಈ ಸಮಯದಲ್ಲಿ ಅಕ್ಕ-ತಂಗಿಯರು ತುಂಬಾ ಮಾತಾಡುತ್ತಿದ್ದರು ಸಾಮಾನ್ಯವಾಗಿ ರಾತ್ರಿ

10 ಗಂಟೆಯ ಮೇಲೆ ಅವಳು ಮದ್ರಾಸ್‌ಗೆ ಫೋನ್ ಮಾಡುತ್ತಿದ್ದಳು ಈಗ ಬಾರ್, ಕ್ಲಬ್, ಪಾರ್ಟಿ, ಪಿಕ್‌ನಿಕ್ ಇತ್ಯಾದಿಗಳಿಗೆ ಹೋಗುವುದು ತಪ್ಪಿತ್ತು ಹರ್ಷ ಮದ್ರಾಸ್‌ಗೆ ಹೋದಮೇಲೆ ಒಂದೆರಡು ಸಲ ಒಂಟಿಯಾಗಿ ಬಾರ್‌ಗೆ, ಕ್ಲಬ್‌ಗೆ ಹೋಗಿ ಬಂದಿದ್ದಳು. ಹರ್ಷನ ಕೆಲವು ಗೆಳೆಯರೇ ಅವಳ ಜೊತೆ ತುಂಬಾ ಅಸಹ್ಯವಾಗಿ ನಡೆದುಕೊಂಡಿದ್ದರು ನಂತರ ಮನೆಗೇ ತಂದು ಕುಡಿಯುಲು ಮನಸ್ಸಿಗೆ ಹಿತವಾಗಿರಲಿಲ್ಲ.

ಈ ಅವಧಿಯಲ್ಲಿ ಲಹರಿಗೆ ತಾಯಿ-ತಂಗಿಯರನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಲು ಅವಕಾಶ ಸಿಕ್ಕಿತು. ತಾಯಿಯ ಶಾಂತ ಸ್ವಭಾವ, ತಂದೆಯ ಲಂಪಟತನ, ತಂಗಿಯ ಮೃದು ಸ್ವಭಾವ ಪ್ರತಿಯೊಂದೂ ಅವಳ ಹೃದಯದ ಮೇಲೆ ತಮ್ಮ ಮುದ್ರೆ ಒತ್ತಲು ಪ್ರಾರಂಭಿಸಿದ್ದವು. ಮುಖ್ಯವಾಗಿ ಗೌರವ್ ಹಾಗೂ ಸಿರಿಯರ ನಡುವೆ ಇದ್ದ ಒಂದು ರೀತಿಯ ಅನುಬಂಧ, ಗೌರವ್‌ನ ಸಂಯಮದ ನಡವಳಿಕೆ ಅವಳ ಮನಸ್ಸಿನಲ್ಲಿ ಕಸಿವಿಸಿ ಉಂಟು ಮಾಡುತ್ತಿದ್ದವು. ಹರ್ಷನ ತಾಳಕ್ಕೆ ಕುಣಿಯದೆ, ತಾನೂ ಮದುವೆಗೆ ಒತ್ತಾಯಿಸಿದ್ದರೆ ಚೆನ್ನಾಗಿರುತ್ತಿತ್ತೇನೋ ಎನ್ನುವ ಭಾವನೆಯೊಂದು ಅವಳ ಹೃದಯದಲ್ಲಿ ಆಗಾಗ್ಗೆ ಮೂಡಿ ಮಾಯವಾಗುತ್ತಿತ್ತು ತಾನು ಹರ್ಷನ ಆದೇಶದಂತೆ ಬಿಸಿನೆಸ್ ಮಾಡುವ ಮೊದಲು ಹರ್ಷನನ್ನು ಮದುವೆಯಾಗಿಬಿಟ್ಟಿದ್ದಲ್ಲಿ ಈಗ ಈ ರೀತಿ ಕೊರಗುವ ಪ್ರಮೇಯವೇ ಬರುತ್ತಿರಲಿಲ್ಲ ಎಂದುಕೊಳ್ಳುತ್ತಿದ್ದಳು.

ಹರ್ಷನಿಲ್ಲದೆ ಬಾಳುವುದು ಅದೆಷ್ಟು ಕಷ್ಟವೆಂದು ಅವಳಿಗೆ ಈಗೀಗ ಅರ್ಥವಾಗತೊಡಗಿತ್ತು. ಬೆಳಗ್ಗೆ 8 ರಿಂದ ರಾತ್ರಿ 11.30-12 ಗಂಟೆಯವರೆಗೆ ಅವರು ಜೊತೆಯಾಗಿರುತ್ತಿದ್ದರು. ಅವಳಿಗೆ ಅವನ ಹುಚ್ಚು ನೋಡುವವರ ಕಣ್ಣಿಗೆ ಲಹರಿಯೇ ಜೋರೆನ್ನಿಸುವಂತೆ ಕಂಡರೂ, ಬೇರೆಯವರೆದುರು ಹುಲಿಯಂತೆ ವರ್ತಿಸುತ್ತಿದ್ದ ಲಹರಿ, ಹರ್ಷನ ಎದುರಿಗೆ ಕುರಿಮರಿಯಂತಿರುತ್ತಿದ್ದಳು ಅವಳ ಚೂಡಿದಾರ್ ಆರಿಸುತ್ತಿದ್ದವನು ಅವನೇ ! ಅವಳ ಕಾಸ್ಮೆಟಿಕ್ಸ್ ಆರಿಸುತ್ತಿದ್ದವನ. ಅವನೇ. ಅವನಿಗಾಗಿ ಬಾಬ್ ಮಾಡಿಸಿಕೊಂಡಿದ್ದಳು. ಅವನಿಗಿಷ್ಟವೆಂದು ವಿಡಿ ಹಾಕುತ್ತಿದ್ದಳು. ಊಟ-ತಿಂಡಿಗಳ ಅಭ್ಯಾಸವೂ ಅವನ ಇಚ್ಛೆಯಂತೆ ಬದಲಾಗಿತ್ತು. ಅವನು ಇಷ್ಟಪಟ್ಟ ಸಿನಿಮಾ ನೋಡುತ್ತಿದ್ದರು ಇತ್ತೀಚೆಗೆ ಅವನೊಮ್ಮೆ "ಲಹರಿ, ನೀನು ಕೂದಲು ಬೆಳೆಸಿಕೋ, ಹೆಚ್ಚಾಗಿ

ಸೀರೆಗಳನ್ನು ಉಡು" ಎಂದಿದ್ದ. ಅವಳು ಅದರಂತೆ ಕೂದಲು ಬೆಳೆಸಿಕೊಂಡಿದ್ದಳು. ಹೆಚ್ಚಾಗಿ ಸೀರೆಯನ್ನೇ ಉಡುತ್ತಿದ್ದಳು. ಅವಳು ಅವನಿಗಾಗಿ ಉಸಿರಾಡುತ್ತಿದ್ದಳು. ಅವನಿಗಾಗಿ ಬದುಕಿದ್ದಳು. ಒಂದು ವೇಳೆ ಅವನೇನಾದರೂ "ಲಹರಿ ಈ ಕ್ಷಣ, ಈಗಲೇ ಮದುವೆಯಾಗೋಣ" ಎಂದಿದ್ದರೆ ತಾಳಿ ಕಟ್ಟಿಸಿಕೊಳ್ಳಲು ಅವಳು ಸಿದ್ಧಳಾಗಿದ್ದಳು. ಅವಳ ಹಣ ಧಾರಾಳವಾಗಿ ಖರ್ಚಾಗುತ್ತಿತ್ತು. ಹರ್ಷ ಪ್ರತಿಸಲವೂ ತನ್ನ ತಾಪತ್ರಯ ಹೇಳಿಕೊಂಡು, ಅವಳ ಕರುಣೆಗೆ ಪಾತ್ರನಾಗಿ, ಹಣ ಖರ್ಚು ಮಾಡದೆ ಸುಮ್ಮನಿದ್ದುಬಿಡುತ್ತಿದ್ದ. ಅವನ ಹುಟ್ಟಿದ ಹಬ್ಬದ ದಿನ, ಜನವರಿ 1ನೇ ತಾರೀಖು ಯುಗಾದಿ ಇತ್ಯಾದಿ ದಿನಗಳಲ್ಲಿ ಅವಳು ಅವನಿಗೆ ಭಾರೀ ಉಡುಗೊರೆಗಳನು ನೀಡುತ್ತಿದ್ದಳು. ಆದರೆ ಅವನು ಅವಳ ಹುಟ್ಟಿದ ಹಬ್ಬಕ್ಕೆ 10 ರೂಪಾಯಿಯ ಒಂದು ಕ್ಲಿಪ್ ಕೂಡ ಕೊಡುತ್ತಿರಲಿಲ್ಲ. ಲಹರಿಗೆ ಮೊದಲೆಲ್ಲಾ ಒಂದು ತರಹ ವೆನ್ನಿಸುತ್ತಿತ್ತು. ಆದರೆ ಕ್ರಮೇಣ ಅವಳು ಅದಕ್ಕೆ ಪ್ರಾಮುಖ್ಯತೆ ಕೊಡುವುದನ್ನು ಬಿಟ್ಟಿದ್ದಳು.

ಒಂದು ಸಲ ಅವಳು ತನ್ನ ಹುಟ್ಟಿದ ಹಬ್ಬದ ದಿನ ರಾತ್ರಿ 'ಪಂಚತಾರ' ಹೋಟೆಲೊಂದರಲ್ಲಿ ಹರ್ಷನಿಗೆ ಪಾರ್ಟಿ ಕೊಟ್ಟಿದ್ದಳು. ಸಿಹಿ ತಿನ್ನುತ್ತಾ ಅವನು ಅವಳನ್ನು ಕೇಳಿದ್ದ.

"ಲಹರಿ, ನಿನಗೆಷ್ಟು ವರ್ಷ ?"

"ಇಪ್ಪತ್ತೆರಡಾಯಿತು "

"ನನಗೇನೋ ನೀನಿನ್ನೂ ಪುಟ್ಟ ಮಗು ತರಹ ಅನ್ನಿಸತ್ತೆ."

"ಯಾಕೆ ?"

"ಮನುಷ್ಯ ಒಂದೊಂದು ವರ್ಷ ಹೆಚ್ಚಾದಂತೆ, ಹೊಸ ಹೊಸ ಅನುಭವಕ್ಕೆ ಹಾತೊರೆಯುತ್ತಾನೆ-ಆದರೆ ನೀನು ಹಾಗಿಲ್ಲವಲ್ಲಾ ?"

"ನನಗೆ ನಿನ್ನ ಮಾತು ಅರ್ಥವಾಗ್ತಿಲ್ಲ."

"ಈ ವಾರದ ಕೊನೆಯಲ್ಲಿ ನಾವಿಬ್ಬರೇ ಎಲ್ಲಿಗಾದ್ರೂ ಹೋಗಿಬರೋಣ"

"ನಾವಿಬ್ಬರೇನಾ ?"

"ಯಾಕೆ ನನ್ನ ಜೊತೆ ಬರಕ್ಕೆ ಭಯಾನಾ ? ನೀನು ಬೇರೆ ಹುಡುಗಿಯರ ತರಹ ಅಲ್ಲ ಅಂದ್ಕೊಂಡಿದ್ದೆ."

"ಛೆ, ಖಂಡಿತ ಭಯವಿಲ್ಲ. ಎಲ್ಲಿಗೆ ಹೋಗೋಣ ?"

"ಗೋವಾಗೆ ಹೋಗೋಣವಾ ?"

"ಓಕೆ ಬಾಬಾ, ನಾನೂ ಗೋವಾ ನೋಡಿಲ್ಲ,"

"ಗೋವಾದಲ್ಲಿ ನಿನಗೆ ಹೊಸ ಪ್ರಪಂಚದ ಅನುಭವ ಮಾಡಿಕೊಡ್ತೀನಿ.

"ಮನೇಲ್ಲಿ ಏನು ಹೇಳಲಿ ?"

"ಏನಾದ್ರೂ ಸುಳ್ಳು ಹೇಳು. ಚೆನ್ನಾಗಿ ದುಡ್ಡು ತೆಗೆದುಕೊಂಡು ಬಾ."

ಅವಳು ಅಳಿದೂ ಸುರಿದೂ ಒಪ್ಪಿದ್ದಳು. ತಾಯಿಯ ಜೊತೆ ಜಗಳ ವಾಡಿ 10,000 ರೂ. ತಂದಿದ್ದಳು. ಹರ್ಷ ಗೆಳೆಯನ ಕಾರ್ ತಂದಿದ್ದ. ಇಬ್ಬರೂ ಶನಿವಾರ ಸಾಯಂಕಾಲ ಕಾರ್‌ನಲ್ಲಿ ಹೊರಟಿದ್ದರು. ಗೋವಾದ ಪ್ರಸಿದ್ಧ ಹೋಟೆಲ್‌ನಲ್ಲಿ ಅವರಿಗೆ ರೂಂ ಬುಕ್ ಆಗಿತ್ತು. ಮರುದಿನ ಬೆಳಗ್ಗೆ ಗೋವಾ ಸುತ್ತಾಡಿ ಬಂದಿದ್ದರು. ಅಂದು ರಾತ್ರಿ ಅವಳು ಕಾಯಾ, ವಾಚಾ, ಮನಸಾ ತನ್ನನ್ನು ಅವನಿಗೆ ಅರ್ಪಿಸಿಕೊಂಡಿದ್ದಳು. ಅವನ ಅಪ್ಪುಗೆ, ಬಿಸಿ ಚುಂಬನ, ಲಲ್ಲೆ ಮಾತುಗಳು ಅವಳಿಗೆ ವಿಶಿಷ್ಟ ಅನುಭವ ನೀಡಿದ್ದವು. ಅವನು ಅವಳಿಗೆ ಹೊಸ ಪ್ರಪಂಚದ ಅನುಭವ ಮಾಡಿಕೊಟ್ಟಿದ್ದ.

ಅವಳು ಅವನ ಅಪ್ಪುಗೆಯಲ್ಲಿರುವಾಗಲೇ ಕೇಳಿದ್ದಳು.

"ಹರ್ಷ, ನೀನು ತುಂಬಾ ಸಲ ಇಲ್ಲಿಗೆ ಬಂದಿದ್ದೀಯಾ ?"

"ನಾಲ್ಕು ಸಲ ಬಂದಿದ್ದೇನೆ."

"ಯಾರ ಜೊತೆ ?"

"ನಾನು ಬಿ.ಇ. ಮಾಡುವಾಗ ಗೋವಾ ಹುಡುಗಿಯೊಬ್ಬಳು ಪರಿಚಯ ವಾಗಿದ್ದಳು. ತುಂಬಾ ಚೆಲುವೆ ಮರ್ಲಿನ್ ಅಂತ ಅವಳ ಹೆಸರು, ಆಂಗ್ಲೋ ಇಂಡಿಯನ್. ಅವಳು ನನ್ನನ್ನು ಮೊದಲ ಸಲ ಗೋವಾಗೆ ಕರೆದುಕೊಂಡು ಬಂದಿದ್ದಳು. ನಾನವಳ ಮನೆಯಲ್ಲೇ ಒಂದು ವಾರವಿದ್ದೆ."

"ಇನ್ಯಾರ ಜೊತೆ ಬಂದಿದ್ದೆ ?"

"ಎರಡನೆಯ ಸಲ ಕಾವೇರಿ ಅನ್ನುವ ಕೊಡಗಿನ ಹುಡುಗಿ ಜೊತೆ ಬಂದಿದ್ದೆ. ಅವಳಿಂದಲೇ ನಾನು ಕುಡಿಯೋದು ಕಲಿತದ್ದು."

"ಆಮೇಲೆ ?"

"ನಮ್ಮ ಜೊತೆ ಒಬ್ಬಳು ಮಧು ಅಂತ ಓದ್ತಾ ಇದ್ದಳು. ಅವಳು 2ನೇ ಸೆಮಿಸ್ಟರ್‌ನಲ್ಲಿರುವಾಗಲೇ ಅವಳಿಗೆ ಮದುವೆಯಾಗಿತ್ತು. ಅವಳ ಗಂಡ ಅಮೇರಿಕಾದಲ್ಲಿದ್ದ. ಅವಳು ನನ್ನನ್ನು ಇಲ್ಲಿಗೆ ಕರೆತಂದಿದ್ದಳು."

"ನಾಲ್ಕನೆಯ ಸಲ ಯಾರ ಜೊತೆ ಬಂದಿದ್ದೆ ?"

"ನಾವೆಲ್ಲಾ ಟೂರ್ ಬಂದಿದ್ದೆವು."

"ಆಗ ಯಾವ ಫ್ರೆಂಡ್ ಸಿಗಲಿಲ್ವಾ ?"

"ಜಲಸ್ ಆಗಬೇಡ ನಾನು ಅವರ್‍ಯಾರನ್ನೂ ಪ್ರೀತಿಸಲಿಲ್ಲ. ನಮ್ಮ ಮಾವನ ಮಗಳು ರಾಧಾಂತ ಮದ್ರಾಸ್‌ನಲ್ಲಿದ್ದಳು ಅವಳ ತಂದೆ ಲಕ್ಷಾಧೀಶ್ವರರು. ನಾನು ಒಪ್ಪಿದ್ರೆ ನಾಳೇನೇ ಮದುವೆ ಮಾಡಿಕೊಡ್ತಾರೆ ಆದರೆ ನನಗೆ ಮದುವೆಯಲ್ಲಿ ಆಸಕ್ತಿ ಇಲ್ಲ ನಿನಗೂ ಮದುವೆ ಬಗ್ಗೆ ಆಸಕ್ತಿ ಇಲ್ಲಾಂತ ಅರ್ಥವಾದ ಮೇಲೆ ನಿನ್ನನ್ನು ಇಲ್ಲಿಗೆ ಕರ್ಕೊಂಡು ಬಂದೆ."

"ನೀನು ನನ್ನನ್ನು ಪ್ರೀತಿಸ್ತೀಯಾ ?"

"ಪ್ರೀತಿ ಇರೋದ್ರಿಂದಲೇ ನಾನಾಗಿ ನಿನ್ನನ್ನು ಕರ್ಕೊಂಡು ಬಂದಿರೋದು."

"ನೀನು ರಾಧಾನ್ನ ಪ್ರೀತಿಸಲ್ವಾ ?"

"ಅವಳೂ ಬಿ.ಇ. ಮಾಡಿದ್ದಾಳೆ. ಆದರೆ ತುಂಬಾ ಕಪ್ಪು. ಅವಳನ್ನು ನೋಡ್ತಿದ್ರೆ ಒಂದು ಕರೀ ಕಲ್ಲಿನ ವಿಗ್ರಹಾನ್ನ ನೋಡಿದಂತಾಗತ್ತೆ. ಇನ್ನು ಪ್ರೀತಿ ಎಲ್ಲಿಂದ ಹುಟ್ಟುತ್ತೆ ಹೇಳು."

"ನಿನಗ್ಯಾಕೆ ಮದುವೆಯಲ್ಲಿ ಆಸಕ್ತಿ ಇಲ್ಲ ?"

"ಮದುವೆಯಾದ ಮೇಲೆ ಹೀಗೆಲ್ಲಾ ಇರಕ್ಕಾಗಲ್ಲ. ಕಟ್ಟಿಕೊಂಡ ಹೆಂಡತಿಗೆ ನಿಷ್ಠೆಯಿಂದಿರಬೇಕು ಮಕ್ಕಳು, ಸಂಸಾರ ಎಲ್ಲಾ ಹೊಸ ಹೊಸ ಸಮಸ್ಯೆಗಳನ್ನು ತರುತ್ತವೆ ಅದಕ್ಕೋಸ್ಕರ ನಾನು ಮದುವೆಯಾಗೋದೆ ಬೇಡಾಂತ ತೀರ್ಮಾನಿಸಿದ್ದೇನೆ."

"ನಾನೂ ಮದುವೆಯಾಗಲ್ಲ. ನಾವಿಬ್ರೂ ಹೀಗೇ ಇದ್ದುಬಿಡೋಣ." ಅವಳು ಅವನನ್ನಪ್ಪಿ ಹೇಳಿದ್ದಳು.

ಅಂದಿನಿಂದ ಅವಳು ಮದುವೆಯ ಬಗ್ಗೆಯಾಗಲಿ, ಬೇರೆ ಗಂಡಸರ ಬಗ್ಗೆಯಾಗಲಿ ಯೋಚಿಸಿರಲಿಲ್ಲ.

ಹರ್ಷ ಹೊರಟುಹೋದ ಮೇಲೆ ಲಹರಿ ಅವನ ಸವಿನೆನಪಿನಲ್ಲೇ ಕಾಲ ಕಳೆಯುವಂತಾಯ್ತು. ಅವಳಿಗೆ ಇತ್ತೀಚೆಗೆ ಅವನ ಮೇಲಿದ್ದ ನಂಬಿಕೆ ಕರಗ ತೊಡಗಿತ್ತು. ಅವನಾಗೇ ಎಂದೂ ಫೋನ್ ಮಾಡಿರಲಿಲ್ಲ. ಅವಳಾಗಿ ಫೋನ್ ಮಾಡಿದರೂ ಅವನು ಸಿಗುವುದು ಅಪರೂಪವಾಗಿತ್ತು. ಅಪರೂಪಕ್ಕೆ ಸಿಕ್ಕಿದರೂ ತುಂಬಾ ಕೆಲಸ ಎನ್ನತೊಡಗಿದ್ದ. ದಿನಕಳೆದಂತೆ ಅವಳು ಕೊರಗ ತೊಡಗಿದಳು. ಯಾವುದರಲ್ಲೂ ಆಸಕ್ತಿ ಉಳಿಯಲಿಲ್ಲ. ಏನು ಮಾಡಲು ಕುಳಿತರೂ ಒಂದು ರೀತಿಯ ಆತಂಕ ಅವಳನ್ನು ಕಾಡತೊಡಗಿತು. ಅರಿಯದ ಭಯ ಅವಳ ಮನಸ್ಸನ್ನು ಹಿಂಡತೊಡಗಿತು.

"ಲಹರಿ, ಇತ್ತೀಚೆಗೆ ನೀನು ಒಂದು ರೀತಿಯಾಗಿಬಿಟ್ಟಿದ್ದೀಯ ಯಾಕೆ? ಏನು ಯೋಚನೆ ನಿನಗೆ? ನಿನ್ನ ಕೆಲಸದಲ್ಲಿ ಏನಾದರೂ ತೊಂದರೆಯಾಗಿದೆಯಾ?" ಮಂಜುಳ ಮಗಳನ್ನು ಒಂದು ದಿನ ಪ್ರಶ್ನಿಸಿದಳು.

"ಏನಿಲ್ಲ ಮಮ್ಮಿ, ಹಾಗೇನಿಲ್ಲ."

"ಹರ್ಷನಿಂದ ಏನಾದ್ರೂ ಸುದ್ದಿ ಬಂದಿತ್ತಾ?"

ತಾಯಿಯ ಪ್ರಶ್ನೆಯನ್ನು ಕೇಳಿ ಅವಳಿಗೆ ಕಸಿವಿಸಿಯಾಯಿತು.

"ಹೇಳಮ್ಮ, ಅವನ ಸಮಾಚಾರ ಏನು?"

"ಮಮ್ಮಿ, ಹರ್ಷ ಇತ್ತೀಚೆಗೆ ಸರಿಯಾಗಿ ಫೋನ್ ಮಾಡ್ತಾನೇ ಇಲ್ಲ. ದಿವ್ಯಾ ಅವನನ್ನು 4-5 ಸಲ ಬೆಂಗಳೂರಿನಲ್ಲಿ ನೋಡಿದ್ದಾಳೆ. ಇದರಲ್ಲಿ ನಿಜಾಂಶ ಎಷ್ಟೋ ಏನೋಂತ ತಿಳಿಯದು. ನನಗೇನು ಮಾಡಬೇಕೋ ತೋಚುತ್ತಿಲ್ಲ ಮಮ್ಮಿ."

"ಅವನ ಮದ್ರಾಸ್ ಅಡ್ರೆಸ್ ಇದೆಯೇನಮ್ಮ?"

"ಇದೆ ಮಮ್ಮಿ."

"ಅದನ್ನು ಕೊಡು, ವಿಚಾರಿಸೋಣ."

"ಬೇಡ ಮಮ್ಮಿ, ನಾನೇ ವಿಚಾರಿಸ್ತೇನೆ" ಎಂದಳು. ಆದರೆ ಮಂಜುಳ ಸುಮ್ಮನೆ ಕೂರಲಿಲ್ಲ. ಅವ್ಯತಾಗೆ ಫೋನ್ ಮಾಡಿದಳು.

"ಏನು ವಿಷಯ ಮಂಜು?"

"ನೀನು, ಅಲೋಕ ಯಾವಾಗ ಸಿಗ್ತೀರಾ ?"

"ಯಾಕೆ ?"

"ನಾನು ಬರಬೇಕೊಂತಿದ್ದೇನೆ."

"ಸಾಮಾನ್ಯವಾಗಿ ಸಾಯಂಕಾಲ ನಾನೆಲ್ಲಿಗೂ ಹೋಗಲ್ಲ. ಅಲೋಕ ನಿಗೆ ಬೆಳಗ್ಗೆ ಮಾತ್ರ ಟ್ಯೂಷನ್ಸ್ ಇರತ್ತೆ. ಸಾಯಂಕಾಲ ಇರಕ್ಕೆ ಹೇಳ್ತೀನಿ, ನೀನು ಬಾ."

ಸಾಯಂಕಾಲ ಮಂಜುಳ ಒಬ್ಬಳೇ ಅಮೃತಳ ಮನೆಗೆ ಹೊರಟಳು. ಅಮೃತ, ಶೇಖರ್ ಮನೆಯಲ್ಲೇ ಇದ್ದರು. ಅಲೋಕ ಇರಲಿಲ್ಲ.

"ಅಲೋಕ ಎಲ್ಲಿ ?"

"ಕಂಪ್ಯೂಟರ್ ಕ್ಲಾಸ್‌ಗೆ ಸೇರಿದ್ದಾನೆ. ನೀನು ಫೋನ್ ಮಾಡಿದಾಗ ನಾನು ಆ ವಿಚಾರನ್ನೇ ಮರತುಬಿಟ್ಟಿದ್ದೆ. ವಿಷಯ ಏನು ಹೇಳು, ನಾನು ಅಲೋಕಂಗೆ ಹೇಳ್ತೀನಿ."

"ನಮ್ಮನೆ ವಿಚಾರ ಎಲ್ಲರಿಗೂ ಗೊತ್ತಿದೆ. ನಮ್ಮ ಲಹರಿಯ ಜೊತೆ ಓಡಾಡ್ತಿದ್ದ ಹುಡುಗ 'ಹರ್ಷ' ಮದ್ರಾಸ್‌ನಲ್ಲಿ ಈ ವಿಳಾಸದಲ್ಲಿದ್ದಾನೆ. ಅವನ ಬಗ್ಗೆ ಮಾಹಿತಿ ಬೇಕು. ಅಲೋಕ ಮದ್ರಾಸ್‌ಗೆ ಹೋಗಿ ಬರಕ್ಕಾಗು ತ್ತದೆಯಾ ?"

"ಅಲೋಕ ಹೋಗಿ ಹರ್ಷನ ಭೇಟಿ ಮಾಡಬೇಕಾ ?"

"ಹುಂ"

"ನನಗೇನೋ ಅಲೋಕನ ಬದಲು ಯಾರಾದ್ರೂ ದೊಡ್ಡವರು ಹೋದರೆ ಒಳ್ಳೆಯದು ಅನ್ನಿಸತ್ತೆ."

"ಹಾಗೆ ಹೋಗೋರು ಯಾರಿದ್ದಾರೆ ?"

"ನಾವಿಬ್ರೇ ಹೋಗಿಬರ್ತೀವೆ" ಅಮೃತ ಗಂಡನ ಕಡೆ ನೋಡಿ ಹೇಳಿದಳು.

"ಅಮ್ಮನ್ನ ಬಿಟ್ಟು ಹೇಗೆ ಹೋಗೋದು ?"

"ನಿಮ್ಮಾಯೀನ್ನ ನಾನು ನೋಡಿಕೊಳ್ತೀನೆ. ನೀವು ಹೋಗುವ ಮೊದಲು ನಾನೇ ಕಾರ್‌ನಲ್ಲಿ ಬಂದು ನಿಮ್ಮ ತಾಯೀನ್ನ ಕರ್ಕೊಂಡು

ಹೋಗ್ತೀನಿ. ಆದ್ರೆ ಒಂದು ವಿಷಯ-ನೀವು ಲಹರಿ 'ಅಂಕಲ್-ಆಂಟಿ' ಅಂತ ತಿಳಿದರೆ ನಿಜವಾದ ವಿಷಯ ಹೊರಗೆ ಬರಲ್ಲ...."

"ಅದರ ಬಗ್ಗೆ ನಿನಗೆ ಯೋಚನೆ ಬೇಡ. ಹರ್ಷನ ಅಂಕಲ್‌ಗೆ ಒಬ್ಬಳು ಮಗಳಿದ್ದಾಳಲ್ಲಾ? ಅವಳ ಜಾತಕ್ಕೆ ಕೇಳಕ್ಕೆ ಹೋಗ್ತೀನಿ."

"ಹಾಗೆ ಮಾಡಿ" ಎಂದಳು ನೆಮ್ಮದಿಯಿಂದ.

ಈ ಕಡೆ 'ಲಹರಿ' ತಾನೇ ಮದ್ರಾಸ್‌ಗೆ ಹೋಗುವ ತಯಾರಿ ನಡೆಸಿದ್ದಳು. ಆದರೆ ದಿವ್ಯಾ ಅವಳನ್ನು ಈ ವಿಚಾರದಲ್ಲಿ ಪ್ರೋತ್ಸಾಹಿಸಲಿಲ್ಲ.

"ನೀನು ಹೋಗಿ ಬರೋದು ನನಗಿಷ್ಟವಿಲ್ಲ ಲಹರಿ. ನಿನಗೆ ತಾಳ್ಮೆ ಕಡಿಮೆ. ನೀನು ಹೋಗಿ ಅವನ ಜೊತೆ ಜಗಳವಾಡಿಕೊಂಡು ಬಂದ್ರೆ ಚೆನ್ನಾಗಿರಲಿಲ್ಲ, ಬೇರೆ ಯಾರನ್ನಾದ್ರೂ ಕಳುಹಿಸು."

"ಬೇರೆ ಯಾರಿದ್ದಾರೆ ಹೋಗಿ ವಿಚಾರಿಸಕ್ಕೆ? ನಮ್ಮ ಡ್ಯಾಡಿಯನ್ನಂತೂ ಕೇಳುವ ಹಾಗೇ ಇಲ್ಲ. ಮಮ್ಮಿ ಮನಸ್ಸು ತುಂಬಾ ಮೃದು ಜೊತೆಗೆ ಅಷ್ಟು ದೂರ ಒಬ್ಬರನ್ನೇ ಕಳುಹಿಸಲು ನನಗೆ ಧೈರ್ಯವಿಲ್ಲ."

"ಮುಂದಿನ ಶುಕ್ರವಾರ ರವಿ ಕಸಿನ್ ಮದುವೆ 'ಮದ್ರಾಸ್'ನಲ್ಲಿದೆ. ನಾವು ಹೋಗೋದೋ ಬೇಡವೋಂತ ಯೋಚಿಸ್ತಿದ್ದೆವು. ನಿನ್ನ ಒದ್ದಾಟ ನೋಡಿದ್ರೆ ನಾವು ಹೋಗಿ ಬರೋದೇ ಒಳ್ಳೆಯದು ಅನ್ನಿಸತ್ತೆ. ಹಾಗೆ ಹರ್ಷನ ಭೇಟಿ ಮಾಡಿ ವಿಷಯ ಏನೂಂತ ತಿಳಿದುಕೊಂಡು ಬರ್ತೀವಿ."

"ಥ್ಯಾಂಕ್‌ಯು ದಿವ್ಯ. ದಯವಿಟ್ಟು ನನಗಾಗಿ ಈ ಕೆಲಸ ಮಾಡಿಕೊಂಡು ಬಾ. ಮದ್ರಾಸ್ ಪ್ರಯಾಣದ ಖರ್ಚು ನಾನು ಕೊಡ್ತೀನಿ."

"ಒಂದು ಚಾರ್ಜ್ ನೀನು ಕೊಡು. ಸ್ವಕಾರ್ಯ ಸ್ವಾಮಿ ಕಾರ್ಯ ಎರಡೂ ಮುಗಿಸಿಕೊಂಡು ಬರ್ತೀವಿ."

"ವಿಷಯ ತಿಳಿದ ತಕ್ಷಣ ಫೋನ್ ಮಾಡು. ನೀನು ಯಾವಾಗ ಅವನನ್ನು ಭೇಟಿ ಮಾಡ್ತೀಯ?"

"ಶುಕ್ರವಾರ ಮದುವೆ ಇರೋದಿಂದ್ರ ಆ ದಿನ ಹೋಗಕ್ಕಾಗಲ್ಲ. ಶನಿವಾರ ಅವನನ್ನು ಭೇಟಿ ಮಾಡಿ, ಸಾಯಂಕಾಲ ಅಥವಾ ರಾತ್ರಿ ಫೋನ್ ಮಾಡ್ತೀನಿ."

"ಹಾಗೇ ಮಾಡು" ಎಂದಳು ಲಹರಿ.

ಅವಳ ಮನಸ್ಸಿಗೆ ಕೊಂಚ ಸಮಾಧಾನ ಸಿಕ್ಕಿತು.

ಅಮೃತ, ಶೇಖರ್ ಮದ್ರಾಸ್‌ಗೆ ಹೋಗುವುದಾಗಿ ಹೇಳಿದ್ದರು. ಆದರೆ ಅಮೃತ ಹಠಮಾಡಿ ಗಂಡನನ್ನು ಬುಧವಾರವೇ ಹೊರಡಿಸಿದಳು. ಹೋಟೆಲ್‌ನಲ್ಲಿ ಇಳಿದುಕೊಂಡು,ಟ್ಯಾಕ್ಸಿ ಮಾಡಿಕೊಂಡು ಮದ್ರಾಸ್ ನೋಡಿ ಬಂದರು. ಮರುದಿನ ಕಂಚಿಗೆ ಹೋಗಿ ಬಂದರು. ಮಹಾಬಲಿಪುರಂ ಶುಕ್ರವಾರ ನೋಡಿದರು. ಶನಿವಾರ ಬೆಳಗ್ಗೆ ಶೇಖರ್, ಅಮೃತ ಮಂಜುಳ ಕೊಟ್ಟಿದ್ದ ಮನೆ ಹುಡುಕಿಕೊಂಡು ಹೊರಟರು. ಶೇಖರ್‌ಗೆ ತಮಿಳು ಚೆನ್ನಾಗಿ ಗೊತ್ತಿದ್ದರಿಂದ ಯಾವ ತೊಂದರೆಯೂ ಆಗಲಿಲ್ಲ.

"ಯಾರು ಬೇಕು ?"

"ಜಯ ಪ್ರಕಾಶ್ ಅವರನ್ನು ನೋಡಬೇಕು."

ಅವರನ್ನು ಸ್ವಾಗತಿಸಿದ ಆ ವ್ಯಕ್ತಿ ಅವರು ಬಂದಿರುವ ವಿಚಾರ ಒಳಗೆ ತಿಳಿಸಿದ. ಜಯಪ್ರಕಾಶ್‌ಗೆ ಹೊರಗೆ ಬಂದರು. ಬಿಳಿ ಮಲ್ ಪಂಚೆ ಜುಬ್ಬ ಶಲ್ಯ, ಹಣೆಯಲ್ಲಿ ಕುಂಕುಮ, ಬಿಳಿ ಕಪ್ಪು ಮಿಶ್ರಿತ ಕೂದಲು,ಕಣ್ಣಿಗೆ ಚಿನ್ನದ ಕಟ್ಟಿನ ಕನ್ನಡಕ-ಆತ ಮದ್ರಾಸಿಯಂತೆ ಕಂಡರು. ಆದರೆ ಕನ್ನಡದಲ್ಲೇ ಮಾತನಾಡಿಸಿದರು.

"ನೀವು ಯಾರು ? ಏನು ಬಂದಿದ್ದು ? ಬೆಂಗಳೂರಿಂದ ಬಂದಿದ್ದೀರಾಂತ ಕಾಣತ್ತೆ. ನಿಮ್ಮ ಮಾತು-ಕಥೆ ಕೇಳಿ ಹಾಗನ್ನಿಸಿತು."

"ಹೌದು, ಸ್ವಾಮಿ, ನಾವು ಬೆಂಗಳೂರಿನವರು. ನನ್ನ ಮಗ ಇಂಜಿನಿಯರ್. ನಿಮ್ಮ ಮಗಳೂ ಇಂಜನಿಯರ್ ಅಂತ ತಿಳಿಯಿತು. ನಮ್ಮ ಮಗನಿಗೆ ವಿಚಾರಿಸೋಣಾಂತ ಬಂದೆವು."

"ತಾವು ತುಂಬಾ ತಡವಾಗಿ ಬಂದಿದ್ದೀರಿ. ಕಳೆದ ವಾರ ನನ್ನ ಹುಗಳ ಮದುವೆ ನಡೆಯಿತು. ಹುಡುಗ ಬೆಂಗಳೂರಿನವನೇ. ನನ್ನ ತಂಗಿ ಮಗ ಹರ್ಷ ಕುಮಾರ್ ಅಂತ ಹೆಸರು. ಅವನೂ ಇಂಜಿನೀಯರ್."

"ಓ.....ಸಂತೋಷ ಸ್ವಾಮಿ. ನಿಮ್ಮ ಪರಿಚಯವಾಗಿದ್ದು ಸಂತೋಷ. ನಿಮ್ಮ ಮಗಳು ನಮ್ಮೂರು ಸೇರಿದ್ದಾರೆ. ಬೆಂಗಳೂರಿಗೆ ಬಂದಾಗ ನಮ್ಮನೆಗೂ ಬನ್ನಿ."

"ಹುಡುಗಿ ಬೆಂಗಳೂರು ಸೇರಿಲ್ಲ. ಹುಡುಗಾನೇ ಮದ್ರಾಸ್ ಸೇರಿದ್ದಾನೆ.

ಮನೆ ಅಳಿಯನಾಗಿರಬೇಕು ಅನ್ನುವ ಕಂಡೀಷನ್‌ಗೆ ಒಪ್ಪಿದ ಮೇಲೆ ಈ ಮದುವೆ ನಡೆದಿದ್ದು."

"ಹೌದೇ,ಒಳ್ಳೆಯದಾಯ್ತು ಬಿಡಿ."

ಅಷ್ಟರಲ್ಲಿ ಅಡಿಗೆಯವರು ತಿಂಡಿ ತಂದರು.

"ತಿಂಡಿ ತಿನ್ನಿ. ನನ್ನ ಮಗಳು-ಅಳಿಯ ಸಿಂಗಪೂರ್‌ಗೆ ಹನಿಮೂನ್‌ಗೆ ಹೋಗಿದ್ದಾರೆ. ಅವರಿದ್ದಿದ್ರೆ ಪರಿಚಯ ಮಾಡಿಸ್ತಿದ್ದೆ."

"ತಿಂಡಿಯಾಗಿದೆ. ಕಾಫಿ ಕೊಡಿ ಸಾಕು."

ಕಾಫಿ ಕುಡಿದು, ಅವರು ಕೊಟ್ಟ ಮದುವೆ ತಾಂಬೂಲ ತೆಗೆದುಕೊಂಡು ದಂಪತಿಗಳು ಹೊರಗೆ ಬಂದರು.

"ರೀ, ಲಹರಿಗೆ ಈ ವಿಚಾರ ತಿಳಿದರೆ ಏನಾಗತ್ತೋ ಏನೋ ? ಹರ್ಷ ಸಿಕ್ಕಿದ್ರೆ ಮದುವೆ ವಿಚಾರ ಪ್ರಸ್ತಾಪಿಸೋಣಾಂತಿದ್ದೆ. ಆದ್ರೆ ಅವನು ಯಾರಿಗೂ ತಿಳಿಯದೆ ಮದುವೆ ಮಾಡಿಕೊಂಡುಬಿಟ್ಟಿದ್ದಾನಲ್ಲಾ ?"

"ನಿಮ್ಮ ಮಂಜುಳಾ ಗಂಡ ಕೊಂಚ ಆಸಕ್ತಿ ತೋರಿದ್ದಿದ್ರೆ ಹೀಗೆಲ್ಲಾ ಆಗ್ತಿರಲಿಲ್ಲ. ಮಗಳನ್ನು ತಮ್ಮ ಹಾಗೆ ಸ್ವೇಚ್ಛೆಯಾಗಿ ಬಿಟ್ಟುಬಿಟ್ರು. ನೀನು ಮಂಜುಳಾಗೆ ಧೈರ್ಯ ಹೇಳು" ಎಂದ ಶೇಖರ್ ಮಾತಿಗೆ ಮುಕ್ತಾಯ ಹಾಡುವವನಂತೆ.

ಮಂಜುಳ ಅಮೃತ-ಶೇಖರ್ ಹೇಳಿದ್ದ ವಿಚಾರ ನೆನಪು ಮಾಡಿಕೊಂಡು ನಿಟ್ಟುಸಿರು ಬಿಟ್ಟಳು. ಶುಕ್ರವಾರ ಬೆಳಗ್ಗೆಯೇ ಅಮೃತ ಫೋನ್ ಮಾಡಿ ವಿಷಯ ತಿಳಿಸಿದ್ದಳು. ಆದರೆ ಈ ವಿಚಾರವನ್ನು ಮಗಳಿಗೆ ತಿಳಿಸುವ ಧೈರ್ಯ ಮಂಜುಳಾಗೆ ಇರಲಿಲ್ಲ. ಹೇಳಲೋ ಬೇಡವೋ ಎಂಬ ಜಿಜ್ಞಾಸೆಯಲ್ಲಿ ಮುಳುಗಿದ್ದ ಮಂಜುಳಾಗೆ ಮಕ್ಕಳು ಕೂಗಿದ್ದು ಕೇಳಿಸಲಿಲ್ಲ.

"ಮಮ್ಮೀ, ತಿಂಡಿ ಕೊಡು" ಲಹರಿ ಮತ್ತೊಮ್ಮೆ ಕೂಗಿದಾಗ ಅವಳು ತನ್ನ ಪ್ರಪಂಚದಿಂದ ಹೊರಗೆ ಬಂದಳು.

ಅವಳು ಇಡ್ಲಿ, ಚಟ್ನಿ, ಸಾಂಬಾರ್ ತಂದಿಟ್ಟಳು.

"ಮಮ್ಮಿ, ರಾತ್ರಿ ದಿವ್ಯಾ ಫೋನ್ ಮಾಡಿದ್ಲಾ ?"

"ಇಲ್ಲವಲ್ಲಾ....."

"ಅಮ್ಮ ಬೆಳಗ್ಗೆ ಯಾರ ಫೋನ್ ಬಂದಿದ್ದಿದ್ದು ?" ಸಿರಿ ಕೇಳಿದಾಗ ಅವಳಿಗೆ ಹೃದಯವೇ ಬಾಯಿಗೆ ಬಂದಂತಾಯಿತು.

"ಅವ್ಳು ತಾದು ...ಅವಳು ಅವಳ ಗಂಡ ಬಾಂಬೆಗೆ ಹೋಗಿದ್ದಾರೆ. ಮನೆಗೆ ಫೋನ್ ಮಾಡಿದ್ದಳಂತೆ. ಅಲೋಕ್ ರಿಸೀವ್ ಮಾಡಲಿಲ್ಲವಂತೆ. ನಂಗೆ ಫೋನ್ ಮಾಡಿ 'ಭಾನುವಾರ ಬರ್ತೀವಿ' ಅಂತ ಅಲೋಕ್‌ಗೆ ಹೇಳೂಂತ ಹೇಳಿದಳು.

ಅಂದು ಲಹರಿ ಬೇಗ ಆಫೀಸ್‌ಗೆ ಹೊರಟಳು. ಅಂದು ಶುಕ್ರವಾರ ದಿವ್ಯ ಹರ್ಷನನ್ನು ಭೇಟಿ ಮಾಡಿರುವುದಿಲ್ಲವೆಂದು ತಿಳಿದಿದ್ದರೂ ಒಂದು ರೀತಿಯ ಆತಂಕ ಅವಳ ಮನದಲ್ಲಿ ತುಂಬಿತ್ತು. ಆ ದಿನ ಹಾಗೇ ಕಳೆಯಿತು. ಶನಿವಾರ, ಭಾನುವಾರ ಕಳೆದರೂ ದಿವ್ಯಳಿಂದ ಫೋನ್ ಬರಲಿಲ್ಲ. ಲಹರಿ ಅವರ ಮನೆಗೇ ಹೋಗಿ ನೋಡಿದಳು. ಬೀಗ ಹಾಕಿತ್ತು.

ಸೋಮವಾರ ಬೆಳಗ್ಗೆ ಒಂಭತ್ತು ಗಂಟೆಗೇ ಅವಳು ಆಫೀಸ್‌ಗೆ ಹೋದಳು. ದಿವ್ಯ ಅವಳಿಗಾಗಿ ಕಾಯುತ್ತಾ ಕುಳಿತಿದ್ದಳು.

"ದಿವ್ಯಾ, ಯಾವಾಗ ಊರಿಗೆ ಬಂದೆ ?"

"ನೆನ್ನೆ ರಾತ್ರಿ."

"ನೀನು ಯಾಕೆ ನನಗೆ ಮದ್ರಾಸ್‌ನಿಂದ ಫೋನ್ ಮಾಡಲಿಲ್ಲ ?"

"ನನಗೆ ಹರ್ಷ ಸಿಗಲಿಲ್ಲ"

"ನೀನು ಅವರ ಮನೆಗೆ ಹೋಗಿದ್ದೆಯಾ ?"

"ಹೌದು. ನೆನ್ನೆ ಬೆಳಗ್ಗೆ ಹೋಗಿದ್ದೆ."

"ಹರ್ಷ ಊರಿನಲ್ಲಿರಲಿಲ್ವಾ ?"

"ಇಲ್ಲ. ಹೆಂಡತಿ ಜೊತೆ ಹನಿಮೂನ್‌ಗೆ ಸಿಂಗಪೂರಿಗೆ ಹೋಗಿದ್ದ."

"ವ್ಹಾಟ್ !" ಅವಳು ತನ್ನ ಕಿವಿಗಳನ್ನೇ ನಂಬಲಿಲ್ಲ.

"ಹೋದ ವಾರ ರಾಧಿಕಾನೋ, ಚಂದ್ರಿಕಾನೋ ಯಾರೋ ಇದ್ದಾಳಲ್ಲ ಅವಳ ಮಗಳು-ಅವಳ ಜೊತೆ ಮದುವೆ ಮದ್ರಾಸ್‌ನಲ್ಲೇ ನಡೆಯಿತಂತೆ.

ಅವಳು ತುಂಬಾ ಶ್ರೀಮಂತರು. ಹರ್ಷ ನಿನಗೆ ಮೋಸ ಮಾಡಿಬಿಟ್ಟ. ನೀನು ಅವನೊಬ್ಬನನ್ನೇ ಮದ್ರಾಸ್‌ಗೆ ಕಳುಹಿಸಬಾರದಿತ್ತು."

ವಿಷಯ ತಿಳಿದ ಮೇಲೂ ಲಹರಿ ಶಿಲೆಯಂತೇ ಕುಳಿತೇ ಇದ್ದಳು. ಅವಳ ಕಣ್ಣಿನಲ್ಲಿ ಒಂದು ಹನಿ ನೀರಿಂಲಿಲ್ಲ. ಅವಳು ಅತ್ತು-ಕರೆದು ರಾಮಾಯಣ ಮಾಡಬಹುದು, ಕೂಗಾಡಬಹುದು ಎಂದೆಲ್ಲಾ ನಿರೀಕ್ಷಿಸಿದ ದಿವ್ಯಳಿಗೆ ಅವಳ ಮೌನ ಕಂಡು ಆಶ್ಚರ್ಯವಾಯಿತು.

"ಲಹರಿ, ನೀನು ಮನೆಗೆ ಹೋಗುವುದಾದ್ರೆ ಹೋಗು. ನಾನೇ ಇವತ್ತು ನೋಡಿಕೊಳ್ತೀನಿ."

ಲಹರಿ ಅರ್ಧ ಗಂಟೆ ಅಲ್ಲಿದ್ದು ಮನೆಗೆ ಹೊರಟಳು. ಆಫೀಸ್‌ನಿಂದ ಬೇಗ ಹಿಂದಿರುಗಿದ ಮಗಳನ್ನು ನೋಡಿ ಮಂಜುಳಾಗೆ ಆಶ್ಚರ್ಯವಾಯಿತು. ಹರ್ಷನ ವಿಚಾರ ಯಾರಿಂದಾದರೂ ತಿಳಿದಿರಬಹುದೇನೋ ಎಂದು ಆತಂಕವೂ ಆಯಿತು.

"ಯಾಕೆ ಲಹರಿ, ಇಷ್ಟು ಬೇಗ ವಾಪಸ್ಸು ಬಂದುಬಿಟ್ಟೆ ? ಹುಷಾರಾಗಿದ್ದೆಯೋ ಇಲ್ವೋ ?"

"ಯಾಕೋ ತುಂಬಾ ತಲೆನೋವಮ್ಮ. ಸ್ಟ್ರಾಂಗಾಗಿ ಒಂದು ಕಪ್ ಕಾಫಿ ಮಾಡಿಕೊಡು, ಮಾತ್ರೆ ತೆಗೆದುಕೊಂಡು ಮಲಗ್ತೀನಿ."

"ಹಾಗೇ ಮಾಡಮ್ಮ" ಎಂದವಳು ಹತ್ತು ನಿಮಿಷಗಳಲ್ಲಿ ಕಾಫಿ ತಂದಳು. ಕಾಫಿ ಹೀರುತ್ತಾ ಲಹರಿ ಕೇಳಿದಳು "ಅಮ್ಮ , ನೀನು ಸಿರಿಯನ್ನು ಎಷ್ಟು ಪ್ರೀತಿಸ್ತೀಯೋ ನನ್ನನ್ನೂ ಅಷ್ಟೇ ಪ್ರೀತಿಸ್ತೀಯಾ ?"

"ಇದೆಂತಹ ಪ್ರಶ್ನೆ ನಿನ್ನದು ? ನೀವಿಬ್ಬರೂ ನನ್ನ ಎರಡು ಕಣ್ಣುಗಳಿದ್ದ ಹಾಗೆ. ನೀವಿಬ್ಬರೂ ನನ್ನ ಮಕ್ಕಳು. ನಾನು ನಿಮ್ಮಲ್ಲಿ ಭೇದ ಮಾಡ್ತೀನೇನಮ್ಮಾ ?"

"ನಾನು ಸಿರಿಯಷ್ಟು ಒಳ್ಳೆಯವಳಲ್ಲ."

"ನೀನು ಒಳ್ಳೆಯವಳೇ ಆಗಿರು, ಕೆಟ್ಟವಳೇ ಆಗಿರು, ಅದು ನಿನಗೆ ಸಂಬಂಧಿಸಿದ್ದು. ನೀನು ನನ್ನ ಮಗಳು. ನೀನು ಸುಖವಾಗಿ ಸಂತೋಷದಿಂದ ಇರುವಂತೆ ನೋಡಿಕೊಳ್ಳುವುದಷ್ಟೇ ನನ್ನ ಕೆಲಸ. ಹುಚ್ಚು ಹುಡುಗಿ, ಏನೇನೋ ಯೋಚಿಸಿ ತಲೆಕೆಡಿಸಿಕೊಳ್ಳಬೇಡ. ಮಲಗಿ ರೆಸ್ಟ್ ತೊಗೋ."

ಲಹರಿ ಅವಳನ್ನಪ್ಪಿ ಹೇಳಿದಳು "ನೀನು ತುಂಬಾ... ಒಳ್ಳೆಯವಳು "ಮಮ್ಮಿ."

ಮಂಜುಳ ನಕ್ಕು ಅವಳ ಕೆನ್ನೆ ತಟ್ಟಿದಳು. ಅವಳು ಕೆಳಗಿಳಿದು ಬಂದು ಅರ್ಧ ಮಾಡಿದ್ದ ಅಡಿಗೆ ಪೂರೈಸಿ ಪೇಪರ್ ಹಿಡಿದು ಕುಳಿತಿದ್ದಾಗ ಫೋನ್ ರಿಂಗಾಯಿತು.

"ಹಲೋ....."

"ಹಲೋ ಆಂಟಿನಾ....ನಾನು ದಿವ್ಯ"

"ಓ....ನೀನಾ ? ಏನಮ್ಮಾ ವಿಷಯ ?"

"ಲಹರಿ ಮನೆಗೆ ಬಂದ್ಳಾ ?"

"ಹುಂ. ತಲೆನೋವೂಂತ ಕಾಫಿ ಕುಡಿದು ಮಲಗಿದ್ದಾಳೆ. ಎಬ್ಬಿಸ ಬೇಕಾ ?"

"ಬೇಡ ಆಂಟಿ. ಆದ್ರೆ ನೀನವಳನ್ನು ಕೊಂಚ ಎಚ್ಚರಿಕೆಯಿಂದ ನೋಡಿಕೊಳ್ಳಿ"

"ಯಾಕೆ ?"

"ನಾನು ಕಳೆದ ವಾರ ಮದ್ರಾಸ್‌ಗೆ ಹೋಗಿದ್ದೆ. ನೆನ್ನೆ ಹರ್ಷನ ಮಾವನ ಮನೆಗೆ ಹೋಗಿದ್ದೆ ಹರ್ಷ ಮದುವೆ ಮಾಡ್ಕೊಂಡು ಹನಿಮೂನ್‌ಗೆ ಸಿಂಗಪೂರ್‌ಗೆ ಹೋಗಿದ್ದಾನೆ. ಈ ವಿಚಾರನ್ನ ಲಹರಿಗೆ ಹೇಳಿಬಿಟ್ಟೆ."

"ಓ ದೇವರೆ, ಅವಳಿಗೆ ವಿಷಯ ಗೊತ್ತಾಗಿಬಿಡ್ತಾ ? ಅದಕ್ಕೇ ಅವಳು ಅಷ್ಟು ಪೆಚ್ಚಾಗಿದ್ದಳು."

ಏನೋ ಅನುಮಾನ ಮೂಡಿಬಂದು, ಮಂಜುಳ ರಿಸೀವರ್ ಕೆಳಗಿಟ್ಟು ಲಹರಿಯ ರೂಂಗೆ ಧಾವಿಸಿದಳು. ಲಹರಿ ಮಲಗಿದ್ದಳು. ಪಕ್ಕದಲ್ಲಿ ಒಂದು ಕಾಗದವಿತ್ತು. ಪಕ್ಕದಲ್ಲಿ ನಿದ್ರೆ ಮಾತ್ರೆಗಳ ಬಾಟಲ್ ಖಾಲಿಯಾಗಿ ಬಿದ್ದಿತ್ತು.

"ಜೀವನದಲ್ಲಿ ಜಿಗುಪ್ಸೆಗೊಂಡು ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ ನನ್ನ ಸಾವಿಗೆ ಯಾರೂ ಕಾರಣರಲ್ಲ.

—ಲಹರಿ"

ಮಂಜುಳ "ಅಯ್ಯೋ ಲಹರಿ, ಇದೇನು ಮಾಡಿಕೊಂಡುಬಿಟ್ಟೆ ?"

ಎಂದು ಚೀರಿದಳು. ತಕ್ಷಣ ರಂಗನ ಕೈಯಲ್ಲಿ ಟ್ಯಾಕ್ಸಿ ತರಿಸಿ ಹತ್ತಿರವೇ ಇದ್ದ ಲಕ್ಷ್ಮಿ ನರ್ಸಿಂಗ್ ಹೋಂಗೆ ಸೇರಿಸಿದಳು ಡಾ|| ಶಾಂತಲಾ ಅವಳನ್ನು ಟ್ರೀಟ್ ಮಾಡಿದರು.

"ಜೀವಕ್ಕೇನೂ ಅಪಾಯವಿಲ್ಲ. ತುಂಬಾ ಸುಸ್ತಾಗಿದ್ದಾಳೆ. ಇವತ್ತೊಂದು ದಿನ ಇಲ್ಲಿರಲಿ."

"ನಾವು ಅವಳನ್ನು ನೋಡಬಹುದಾ ?"

"ಬೇಡ, ಅವಳು ಯಾಕೋ ಯಾರನ್ನು ನೋಡಕ್ಕೆ ಇಷ್ಟಪಡ್ತಿಲ್ಲ ಡ್ರಿಪ್ಸ್ ಹಾಕಿದ್ದೇನೆ. ನೀವು ಮನೆಗೆ ಹೋಗಿ ಆಗಾಗ್ಗೆ ಫೋನ್ ಮಾಡಿ ವಿಚಾರಿಸಿಕೊಳ್ಳಿ. ಸಾಯಂಕಾಲ ಬನ್ನಿ."

ಮಂಜುಳ ನೆಮ್ಮದಿಯ ನಿಟ್ಟುಸಿರು ಬಿಟ್ಟಳು.

ಸಾಯಂಕಾಲ ಅವಳೊಬ್ಬಳೇ ಲಹರಿಯನ್ನು ನೋಡಲು ಹೋದಳು. ಲಹರಿಗೆ ಎಚ್ಚರವಿತ್ತು. ತಾಯಿಯನ್ನು ನೋಡಿದೊಡನೆ ಕೂಗಾಡಿದಳು. "ಮಮ್ಮಿ, ನೀನು ಯಾಕೆ ನನ್ನನ್ನು ಬದುಕಿಸಿದೆ ? ಹರ್ಷ ಇಲ್ಲದೆ ನನಗೆ ನನಗೆ ಬದುಕಕ್ಕಾಗಲ್ಲಾಂತ ನಿನಗೆ ಗೊತ್ತಿಲ್ವಾ ?"

"ಈಗ ಆ ವಿಚಾರ ಯಾಕಮ್ಮ ? ನಾವು ಯಾರಿಗೋಸ್ಕರಾನೂ ಹುಟ್ಟಿಲ್ಲ, ಯಾರಿಗೋಸ್ಕರಾನೂ ಬದುಕಲ್ಲ. ಅದೆಲ್ಲಾ ಒಂದು ರೀತಿ ಭ್ರಮೆ ಅಷ್ಟೆ. ನೀನೀಗ ಹರ್ಷನ ವಿಚಾರ ಮಾತಾಡಬೇಡ, ಸುಮ್ಮನೆ ಮಲಗು."

ಮರುದಿನ ಬೆಳಗ್ಗೆ ಹತ್ತುಗಂಟೆಗೆ ಅವಳನ್ನು ಡಿಸ್ಚಾರ್ಜ್ ಮಾಡಿದರು. ಸಿರಿ-ಗೌರವ್ ಅವಳನ್ನು ನೋಡಲು ಬರುತ್ತೇನೆಂದರೂ,ಮಂಜುಳ ಅವರನು ಕರೆದೊಯ್ಯಲಿಲ್ಲ. ಡಾ|| ಮೋಹನ್‌ಗೆ ಈ ವಿಚಾರ ತಿಳಿಯಲೇ ಇಲ್ಲ.

ಲಹರಿ ಈಗ ಮಲಗಿದ್ದಲ್ಲೇ ಮಲಗಿರುತ್ತಿದ್ದಳು. ಅವಳಿಗೀಗ ಜೀವದ ಮೇಲೆ ಆಸೆಯೇ ಇರಲಿಲ್ಲ. ಅವಳ ಜೀವನೋತ್ಸಾಹ ಬತ್ತಿಹೋಗಿತ್ತು. ಚೈತನ್ಯದ ಚಿಲುಮೆಯಂತೆ ಇದ್ದ ಲಹರಿ ಈಗ ಜೀವಂತ ಶವದಂತಿದ್ದಳು. ದಿವ್ಯಳೇ ಅವಳ ಕಂಪ್ಯೂಟರ್ ಸೆಂಟರ್ ನೋಡಿಕೊಳ್ಳುತ್ತಿದ್ದರು. ಒಂದು ತಿಂಗಳ ನಂತರ ದಿವ್ಯಾ ಅವಳನ್ನು ನೋಡಲು ಬಂದಳು. ಲಹರಿ ತುಂಬಾ ಬದಲಾಗಿರುವಂತೆ ಅವಳಿಗೆ ತೋರಿತು.

"ಏನು ವಿಷಯ ದಿವ್ಯ ?"

"ಕಂಪ್ಯೂಟರ್ ಸೆಂಟರ್ ಯಾರ ಹೆಸರಿನಲ್ಲಿದೆ ?"

"ನಮ್ಮಿಬ್ಬರ ಹೆಸರಿನಲ್ಲೂ ಇದೆ."

"ಡಾಕ್ಯುಮೆಂಟ್ ಯಾರ ಹತ್ತಿರವಿದೆ ?"

"ಹರ್ಷನ ಹತ್ತಿರವಿದೆ"

"ಹರ್ಷನ ಬಗ್ಗೆ ನನಗಿದ್ದ ಅನುಮಾನ ನಿಜವಾಯ್ತು"

"ಯಾಕೆ ಏನಾಯ್ತು ?"

"ಹರ್ಷ ಕಂಪ್ಯೂಟರ್ ಸೆಂಟರ್‌ನ ಷಣ್ಮುಗಸ್ವಾಮಿ ಅನ್ನುವವರಿಗೆ ಮಾರುವ ಸನ್ನಾಹದಲ್ಲಿದ್ದಾನೇಂತ ಕಾಣತ್ತೆ. ಅತ ಬೆಳಗ್ಗೆ ಬಂದಿದ್ರು."

"ಹೌದಾ ?" ಅವರು ಏನು ಹೇಳಿದ್ರು ?"

"ನಾನು ಈ ಸೆಂಟರ್ ಕೊಂಡುಕೊಳ್ತಾ ಇದ್ದೇನೆ. ನಾನು ವರ್ಕರ್ಸ್ ಯಾರನ್ನೂ ಬದಲಾಯಿಸಲ್ಲ. ಅದೇ ಸಂಬಳ ಕೊಡ್ತೀನಿ. ನಿಮ್ಮಲ್ಲಿ ಯಾರಿಗಾದರೂ ಕೆಲಸ ಮಾಡಕ್ಕೆ ಇಷ್ಟವಿಲ್ಲದಿದ್ರೆ ರಾಜೀನಾಮೆ ಕೊಡಬಹುದು ಅಂದ್ರು."

"ಹರ್ಷ ಈ ಮಹಾಕಾರ್ಯ ಬೇರೆ ಮಾಡಕ್ಕೆ ಹೊರಟಿದ್ದಾನಾ ? ನನ್ನ ಹೃದಯಕ್ಕೆ ಎಷ್ಟು ರೀತಿಯಲ್ಲಿ ಚೂರಿ ಹಾಕಿದರೂ ಅವನಿಗೆ ನೆಮ್ಮದಿ ಇಲ್ಲಾಂತ ಕಾಣತ್ತೆ."

ದಿವ್ಯ ಮಾತಾಡಲಿಲ್ಲ.

"ಮ್ಯಾನೇಜ್‌ಮೆಂಟ್ ಬದಲಾವಣೆಯಿಂದ ನಿನಗೇನೂ ತೊಂದರೆಯಾಗಲ್ಲವಲ್ಲಾ ? ನೀನು ರಾಜೀನಾಮೆ ಕೊಡಬೇಡ."

"ನನಗೆ ಅಲ್ಲಿ ಕೆಲಸ ಮಾಡಕ್ಕೆ ಇಷ್ಟವಿಲ್ಲ ಲಹರಿ. ಬೇರೆ ಕೆಲಸ ಸಿಗುವವರೆಗೂ ಅಲ್ಲಿ ಮಾಡ್ತೀನಿ" ಎಂದಳು ದಿವ್ಯ.

ಅವಳು ಹೊರಟಾಗ ಮಂಜುಳ ಹೇಳಿದಳು "ಆ ಷಣ್ಮುಗಸ್ವಾಮಿ ಇನ್ನೊಮ್ಮೆ ಬಂದ್ರೆ ಫೋನ್ ಮಾಡಮ್ಮ."

"ಯಾಕೆ ಆಂಟಿ ?"

"ಕಾರಣವಿಲ್ಲದೆ 8–10 ಲಕ್ಷ ಯಾಕೆ ಹರ್ಷಂಗೆ ಬಿಡಬೇಕು ? ನಾನೂ ನಮ್ಮ ಲಾಯರ್‌ನ ಕನ್‌ಸಲ್ಟ್ ಮಾಡ್ತೀನೆ."

"ಹಾಗೇ ಮಾಡಿ ಆಂಟಿ" ಎಂದಳು ದಿವ್ಯ.

ಒಂದೆರಡು ದಿನ ಕಳೆದಿರಬಹುದು. ಒಂದು ಸಾಯಂಕಾಲ ಅಮೃತ ಮಗನ ಜೊತೆ ಬಂದಳು.

"ಬಾಪ್ಪ ಅಲೋಕ. ನೀನು ಬರೋದೇ ಅಪರೂಪ. ಇವತ್ತೇನು ಗಾಳಿ ಈ ಕಡೆಗೆ ಬೀಸಿದ್ದು?"

"ಅಲೋಕ ಲಹರೀನ್ನ ಕೆಲಸ ಕೇಳಕ್ಕೆ ಬಂದಿದ್ದಾನೆ."

"ನಾನು ಕೆಲಸ ಕೊಡೋದಾ?" ಲಹರಿ ಬಿದ್ದು ಬಿದ್ದು ನಕ್ಕಳು. ನಂತರ ಅಳುತ್ತಾ ಒಳಗೆದ್ದು ಹೋದಳು.

"ಯಾಕೆ ಮಂಜು, ಏನಾಯ್ತು?"

"ಹರ್ಷನ ಮದುವೆ ವಿಚಾರ ಅವಳಿಗೆ ಅವಳ ಫ್ರೆಂಡ್‌ನಿಂದ ತಿಳಿಯಿತು. ಕಂಪ್ಯೂಟರ್ ಸೆಂಟರ್‌ಗೆ ಹಣ ಹಾಕಿರೋದು ಇವಳು. ಆದರೆ ಅವನು ಮಾರುವ ಪ್ರಯತ್ನದಲ್ಲಿದ್ದಾನಂತೆ. ಡಾಕ್ಯುಮೆಂಟ್ಸ್ ಅವನ ಹತ್ತಿರ ಇದೆ. ಇವಳಿಗೆ ಏನೂ ಸರಿಯಾಗಿ ನೆನಪಿಲ್ಲ. ಒಂದು ಸಲ 'ಎಲ್ಲಾ ನನ್ನ ಹೆಸರಲ್ಲಿವೆ' ಅಂತಾಳೆ. ಮತ್ತೊಂದು ಸಲ 'ಅವನ ಹೆಸರಲ್ಲಿದೆ' ಅಂತಾಳೆ. ತುಂಬಾ ಒತ್ತಾಯಿಸಿದ್ರೆ 'ಇಬ್ಬರ ಹೆಸರಲ್ಲೂ ಇದೆ ನಾವಿಬ್ರೂ ಪಾರ್ಟನರ್ಸ್' ಅಂತಾಳೆ ಕೆದಕಿ ಕೆದಕಿ ಪ್ರಶ್ನೆ ಕೇಳಕ್ಕೆ ನಂಗೆ ಭಯ."

"ಮುಂದೇನ್ಮಾಡ್ತೀಯ?"

"ಹರ್ಷ 'ಷಣ್ಮುಗಸ್ವಾಮಿ' ಅನ್ನುವವರಿಗೆ ಮಾರಬೇಕೂಂತ ಯೋಚಿಸಿದ್ದಾನೆ. ನಾನು ನಮ್ಮ ಲಾಯರ್‌ನ ಸಲಹೆ ಪಡೆದು ಷಣ್ಮುಗಸ್ವಾಮಿನ್ನ ಭೇಟಿ ಮಾಡೋಣಾಂತಿದ್ದೇನೆ."

"ಅದೆಲ್ಲಾ ಯಾಕೆ ಆಂಟಿ? ಲಾಯರ್, ಕೋರ್ಟ್ ಅಂತ ಹೋಗೋದು ಬೇಡ. ಈ ಸಮಸ್ಯೆ ನಾನು ಪರಿಹರಿಸ್ತೇನೆ. ಲಹರಿಗೆ ಅನ್ಯಾಯವಾಗದಂತೆ ನೋಡಿಕೊಳ್ತೀನೆ. ಆದರೆ ಒಂದು ಕಂಡಿಷನ್...."

"ಏನಪ್ಪಾ ಅದು?"

"ಲಹರಿ, ನನ್ನನ್ನು ಪಾರ್ಟನರ್ ಆಗಿ ತೆಗೆದುಕೊಳ್ಳಬೇಕು."

"ನೀನೂ, ಲಹರಿ ಸೇರಿ ಕೆಲಸ ಮಾಡಿ, ನಾನು ಬೇಡ ಅನ್ನಲ್ಲ. ಆದರೆ ಹರ್ಷನ ನೀನು ನೋಡಿಲ್ಲ. ಅವನು ತುಂಬಾ ಕೆಟ್ಟವನು ಅವನಿಂದ 'ಕಂಪ್ಯೂಟರ್ ಸೆಂಟರ್' ತೆಗೆದುಕೊಳ್ಳುವುದು ಅಷ್ಟು ಸುಲಭವಲ್ಲ."

"ನಾನು, ನನ್ನ ಫ್ರೆಂಡ್ಸ್ ಸಮಯಬಂದ್ರೆ ಹರ್ಷನಿಗಿಂತ ಕೆಟ್ಟವ ರಾಗ್ತೀವೆ. ನೀವು ಅವನ ಮದ್ರಾಸ್ ವಿಳಾಸ, ಫೋನ್ ನಂಬರ್ ಕೊಡಿ ಸಾಕು" ಎಂದ.

ಮಂಜುಳ ಜಯಪ್ರಕಾಶ್ ವಿಳಾಸ, ಫೋನ್ ನಂಬರ್ ಕೊಟ್ಟಳು.

ಮಾವನ ಜೊತೆ ಮಾತಾಡಿ, ಮಲಗಲು ಒಳಗೆ ಬಂದ ಹರ್ಷ. ನೈಟಿ ಧರಿಸಿ ಹಾಲು ತಂದ ಹೆಂಡತಿಯತ್ತ ಮುಗುಳ್ನಗೆ ಬೀರಿದ.

"ಹರ್ಷ ಒಂದ್ಸಲ ಬೆಂಗಳೂರಿಗೆ ಹೋಗಿ ಬರೋಣ. ನನಗೆ ಅತ್ತೆ-ಮಾವನ ಜೊತೆ ಸ್ವಲ್ಪ ದಿನ ಇರಕ್ಕೆ ಆಸೆ."

"ಬೇಡ ಚಿನ್ನ ನಿನಗೆ ಬೆಂಗಳೂರು ಸರಿಹೋಗಲ್ಲ."

"ನನಗೆ ಮದ್ರಾಸ್‌ಗಿಂತ ಬೆಂಗಳೂರೇ ಇಷ್ಟ. ನಾವು ಬೆಂಗಳೂರಲ್ಲೇ ಇರೋಣ."

ಅಷ್ಟರಲ್ಲಿ ಫೋನ್ ರಿಂಗಾಯಿತು.

"ಹಲೋ, ಫೋನ್ ಕೆಳಗಿಡಬೇಡ. ಬೆಳಗ್ಗೆಯಿಂದ ಐದು ಸಲ ಮಾಡಿದ್ದೇನೆ 'ರಾಂಗ್‌ನಂಬರ್' ಅಂತ ಸುಳ್ಳು ಹೇಳಿದ್ದೀಯ. ನೀನೇನಾದ್ರೂ ಫೋನ್ ಕೆಳಗಿಟ್ರೆ ನಿಮ್ಮಾವನಿಗೆ ಫೋನ್ ಮಾಡ್ತೀನಿ."

"ಧಾರಾಳವಾಗಿ ಮಾಡಿ"

"ನಿನ್ನ-ಲಹರಿ ಕಥೆ ನಿಮ್ಮಾವನಿಗೆ, ನಿನ್ನ ಹೆಂಡತಿಗೆ ತಿಳಿಸ್ತೀನೆ. ನೀನು ಲಹರಿಯ ಜೊತೆ ಇಟ್ಕೊಂಡಿದ್ದ ಸಂಬಂಧ ಎಂತಹದ್ದೂಂತ ನಿಮ್ಮಾವನಿಗೆ ತಿಳಿಯದು. ಆದರೆ ನಮಗೆ ಚೆನ್ನಾಗಿ ತಿಳಿದಿದೆ."

"ನಾನೀಗ ಏನ್ಮಾಡಬೇಕು ?"

"ನಾಳೆ ಬೆಳಗ್ಗೆ ಹತ್ತುಗಂಟೆಗೆ ಹೋಟೆಲ್ ಹೊಯ್ಸಳಕ್ಕೆ ಬಾ. ನಿನಗಾಗಿ ಕಾಯ್ತಿರ್ತೀವೆ. ಹೆದರ್ಕೋಬೇಡ. ನಿನ್ನ ಜೀವಕ್ಕೆ ಏನೂ ಅಪಾಯವಿಲ್ಲ."

"ನಾನು ನಿಮ್ಮನ್ನು ಗುರುತಿಸೋದು ಹೇಗೆ ?"

"ನಾವೇ ನಿನ್ನನ್ನು ಗುರುತಿಸ್ತೀವೆ. ನಿನಗೆ ಆ ತೊಂದರೆ ಕೊಡಲ್ಲ."

ಸಂಭಾಷಣೆ ಕನ್ನಡದಲ್ಲಿ ನಡೆದಿದ್ದರಿಂದ ಅವನ ಹೆಂಡತಿಗೆ ಏನೂ ಅರ್ಥವಾಗಲಿಲ್ಲ.

"ಯಾರದು ಫೋನ್ ?" ಎಂದು ಕೇಳಿದಳು.

"ನನ್ನ ಸ್ನೇಹಿತರು ಬೆಂಗಳೂರಿನಿಂದ ಬಂದಿದ್ದಾರೆ, ಅವರದು"

"ಮನೆಗ್ಯಾಕೆ ಬರಲಿಲ್ಲವಂತೆ ?"

"ಕರೆದರಾಯ್ತು ಬಿಡು" ಎಂದ.

ಮರುದಿನ ಹತ್ತುಗಂಟೆಗೆ ಸರಿಯಾಗಿ ಅವನು 'ಹೋಟೆಲ್ ಹೊಯ್ಸಳ' ತಲುಪಿದ. ಅಲೋಕ ಅವನನ್ನು ತನ್ನ ರೂಂಗೆ ಕರೆದೊಯ್ದು ಕೂಡಿಸಿದ.

"ಮಿ|| ಹರ್ಷ ನಿಮಗೆ ನನ್ನ ಪರಿಚಯವಿಲ್ಲಾಂತ ಕಾಣತ್ತೆ. ನಾನು ಲಹರಿ ತಮ್ಮ"

"ಸಂತೋಷ, ನನ್ನನ್ನು ಇಲ್ಲಿಗ್ಯಾಕೆ ಕರೆಸಿದ್ದು ?"

"ಲಹರೀನ್ನ ಮದುವೆಯಾಗೂಂತ ನಿಮ್ಮನ್ನು ಕೇಳಕ್ಕಲ್ಲ. ನೀವು ನಿಮ್ಮ ಕಂಪ್ಯೂಟರ್‌ಸೆಂಟರ್‌ಗೆ ಎಷ್ಟು ಬಂಡವಾಳ ಹಾಕಿದ್ರೀ ?"

"ನಾನು...."

"ಹತ್ತು ಲಕ್ಷ ಹಾಕಿರಬಹುದಾ, ಹದಿನೈದು ಲಕ್ಷ ಹಾಕಿರಬಹುದಾ ?"

"ಆ ವಿಚಾರ ನಿಮಗ್ಯಾಕೆ ?"

"ಲಹರಿ ಆ ಕಂಪ್ಯೂಟರ್‌ಸೆಂಟರ್ ನನಗೆ ಮಾರ್ತಿದ್ದಾಳೆ. ನೀವು ಹಣ್ಮಗಸ್ವಾಮಿ ಅನ್ನುವವರಿಗೆ ಮಾರುವ ಸನ್ನಾಹದಲ್ಲಿದ್ದೀರಾಂತ ತಿಳಿಯಿತು. ಆ ಸೆಂಟರ್ ಮೇಲೆ ನಿಮಗೆ ಮೂರು ಕಾಸಿನ ಅಧಿಕಾರವಿಲ್ಲಾಂತ ನಿಮಗೂ ಗೊತ್ತು, ನಮಗೂ ಗೊತ್ತು."

"ಅಧಿಕಪ್ರಸಂಗತನದ ಮಾತು ಬೇಡ....." ಹರ್ಷ ಕಿರುಚಿದ.

"ನಾನು ಅಧಿಕ ಪ್ರಸಂಗತನ ಮಾಡ್ತಿಲ್ಲ. ನೀವು ಈ ವ್ಯವಹಾರಕ್ಕೆ ಬರಕೂಡದು. ನೀವೆಂದುಕೊಂಡಷ್ಟು ಸುಲಭವಾಗಿ ನೀವು ಸೆಂಟರ್‌ನ ಮಾರಕ್ಕಾಗಲ್ಲ. ನೀವು ತಲೆಹರಟೆ ಮಾಡಿದ್ರೆ ನಾವು ಕೋರ್ಟ್‌ಗೆ ಹೋಗ್ತೀನಿ. ನಿಮ್ಮ-ಲಹರಿ ಸಂಬಂಧ ನಿಮ್ಮತ್ತೆ-ಮಾವ, ಹೆಂಡತಿಗೆ ಅನಿವಾರ್ಯವಾಗಿ ತಿಳಿಸಬೇಕಾಗತ್ತೆ."

"ನೀವು ಹೇಳಿದ್ರೆ ಅವರು ನಂಬಬೇಕಲ್ಲಾ ?"

"ನೀವು ಲಹರಿಯ ಜೊತೆ ಗೋವಾ, ಊಟಿ, ಕೊಡೈಕೆನಾಲ್‌ನಲ್ಲಿ ತೆಗೆಸಿಕೊಂಡ ಫೋಟೋಗಳು ನಮ್ಮ ಹತ್ತಿರ ಇವೆ. ಲಹರಿಗೆ ನಿನ್ನನ್ನು ಮದುವೆಯಾಗದಿರುವುದಕ್ಕೆ ಖಂಡಿತಾ ದುಃಖವಿಲ್ಲ. ಅವಳು ನಿನ್ನ ತಂಟೆಗೆ ಬರದಂತೆ ನಾನು ನೋಡಿಕೊಳ್ತೀನೆ. ನೀನೂ 'ಆ ಕಂಪ್ಯೂಟರ್ ಸೆಂಟರ್' ಮಾರುವ ಯೋಚನೆ ಕೈಬಿಟ್ಟು ನಾಳೆ ಇಷ್ಟು ಹೊತ್ತಿಗೆ ನಿನ್ನ ಹತ್ತಿರವಿರುವ ಡಾಕ್ಯುಮೆಂಟ್ಸ್ ನಮಗೆ ಕೊಡಬೇಕು. ಇಲ್ಲದಿದ್ರೆ ನಾನೇ ಬಂದು ನಮ್ಮ ಮಾವನ್ನ ವಿಚಾರ್ ಮಾಡ್ತೀನಿ."

ಹರ್ಷನಿಗೆ ಮಾತನಾಡಲು ಏನೂ ಉಳಿದಿರಲಿಲ್ಲ. ಅವನು ಹೊರಗೆದ್ದು ಬಂದ. ಅವನು 'ಕಂಪ್ಯೂಟರ್ ಸೆಂಟರ್' ಬಗ್ಗೆ ರಾತ್ರಿಯ ವೇಳೆಗೆ ತೀರ್ಮಾನಕ್ಕೆ ಬಂದ. ಬೆಳಗ್ಗೆ ಹತ್ತು ಗಂಟೆಗೆ ಡಾಕ್ಯುಮೆಂಟ್ ಅಲೋಕನ ಕೈಸೇರಿತು. ಅಲೋಕ ಖುಷಿಯಿಂದ ಬೆಂಗಳೂರು ತಲುಪಿದ.

ಹರ್ಷ ತನ್ನಿಂದ ದೂರವಾದ ಮೇಲೆ ಸದಾ ಅವನ ಯೋಚನೆಯಲ್ಲೇ ಮುಳುಗಿರುತ್ತಿದ್ದ ಲಹರಿ ಒಮ್ಮೆ ಹೇಳಿದಳು "ಅಲೋಕ ಹರ್ಷನ್ನ ಭೇಟಿ ಮಾಡಿದ್ದು ಒಳ್ಳೆಯದಾಯ್ತು ಮಮ್ಮಿ. ಕಂಪ್ಯೂಟರ್ ಸೆಂಟರ್ ನಮ್ಮದಾಗಿ ಉಳಿಯಿತು."

"ಹೌದಮ್ಮ. ಉಂಡಾಡಿಗುಂಡನಂತಿದ್ದ ಅಲೋಕನಿಗೆ ಇಷ್ಟೊಂದು ಬುದ್ಧಿವಂತಿಕೆ ಇದೇಂತ ನನಗೇನು, ಅವರಮ್ಮನಿಗೂ ಗೊತ್ತಿರಲಿಲ್ಲ. ಅವನೀಗ ತುಂಬಾ ಒಳ್ಳೆಯವನಾಗಿಬಿಟ್ಟಿದ್ದಾನೆ."

ಫಳಕ್ಕೆಂದು ಲಹರಿಯ ಕಣ್ಣುಗಳಿಂದ ನೀರು ಚಿಮ್ಮಿತು.

"ಲಹರಿ ಅಳುವುದರಿಂದ ಏನೂ ಪ್ರಯೋಜನವಾಗಿಲ್ಲಮ್ಮ. ಕೆಲವರು ಮೋಸಮಾಡಕ್ಕೆ ಬದುಕ್ತಾರೆ. ಹರ್ಷ ಅಂತಹ ಜನರ ಗುಂಪಿಗೆ ಸೇರಿದವನು. ನೀನಿನ್ನು ಅವನನ್ನು ಮರೆತುಬಿಡಬೇಕು. ಅವನು ಮೋಸ ಮಾಡಿದಾಂತ ಯೋಚಿಸುವುದರಿಂದ ಏನೂ ಪ್ರಯೋಜನವಾಗಲ್ಲ."

"ಮಮ್ಮಿ, ನೀನು ಆಗೆಲ್ಲಾ ಹೇಳಿದಂತೆ ನಾನವನನ್ನು ಮದುವೆಯಾಗಿದಿದ್ರೆ ಇವೆಲ್ಲಾ ನಡೆಯುತ್ತಿರಲಿಲ್ಲವೇನೋ ?"

"ಅದೆಲ್ಲಾ ನಮ್ಮ ಭ್ರಮೆ ಅಷ್ಟೆ. ಹಣೆಬರಹ ತಪ್ಪಿಸಕ್ಕೆ ಯಾರಿಂದಲೂ ಸಾಧ್ಯವಿಲ್ಲ. ಮದುವೆಯಾದ ಮೇಲೆ ಹರ್ಷ ಮೋಸ ಮಾಡಿದ್ದಿದ್ರೆ ನೀನೇನು

ಮಾಡ್ತಿದ್ದೆ ? ನಿಮ್ಮಿಂದೇನ್ನ ನಾನು ಮದುವೆಯಾಗಿದ್ರಿಂದ ಅವರ ಚಾಳಿ ಬಿಟ್ಟುಹೋಯಿತೆ ? ಮದುವೆಯಾದ ಮೇಲೂ ನನ್ನ ಒಂಟಿತನ ನೀಗಲಿಲ್ಲ. ಈ ಮನೆಯಲ್ಲಿ ನಾನು ಬಿಟ್ಟ ನಿಟ್ಟುಸಿರುಗಳಿಗೆ ಲೆಕ್ಕವಿಲ್ಲ. ನನ್ನ ಅಳುವಿಗೆ ಕೊನೆಯಿಲ್ಲ. ನನ್ನೆದುರಿಗೆ ನಿಮ್ಮ ತಂದೆ ಬೇರೆಯುವಳ ಜೊತೆ ಸುತ್ತುವಾಗ ಅವಳನ್ನು ನನ್ನೆದುರು ಹೊಗಳಿದಾಗ, ನನ್ನ ಹೃದಯ ಹಿಂಡಿದಂತಾಯಿತು. ಎಷ್ಟೋ ಸಲ ಸಾಯಬೇಕು ಅನ್ನಿಸ್ತಿತ್ತು. ನಾನು ಸತ್ತುಹೋದರೆ ಮಕ್ಕಳು ಅನಾಥರಾಗ್ತಾರಲ್ಲಾಂತ ಬದುಕಿದೆ. ನಾನು ಬದುಕಿರೋದೇ ನಿಮಗಾಗಿ. ನಿಮ್ಮನ್ನು ಸುಖವಾಗಿಡಬೇಕು ಅನ್ನುವುದೇ ನನ್ನ ಬದುಕಿನ ಗುರಿ. ಈ ಮನೆ ಆಸ್ತಿ, ಈ ಹಣ ಯಾವುದೂ ನನಗೆ ಸಂತೋಷ ಕೊಡಲ್ಲ ಲಹರಿ ನಿಮ್ಮ ಪ್ರೀತಿ-ವಿಶ್ವಾಸಾನೇ ನಂಗೆ ದೊಡ್ಡ ಆಸ್ತಿ"

"ನೀನು ಮಕ್ಕಳು ಸುಖವಾಗಿರಲೀಂತ ಏನೆಲ್ಲಾ ಮಾಡ್ತಿದ್ದೀಯ. ಆದ್ರೆ ಸುಖ ಅನ್ನುವುದು ನನ್ನ ಹಣೆಯಲ್ಲೇ ಬರೆದಿಲ್ಲಮ್ಮ. ಒಮ್ಮೊಮ್ಮೆ ನಾನು ಯಾಕೆ ಬದುಕಿರಬೇಕು ಅನ್ನಿಸತ್ತೆ"

"ಹರ್ಷನಂತಹ ಕ್ಷುಲ್ಲಕವ್ಯಕ್ತಿಗೋಸ್ಕರ ನೀನು ಪ್ರಾಣ ಕಳೆದುಕೊಳ್ಳ ಬಾರದು. ನೀನು ನಿನಗಾಗಿ ಬದುಕು. ಹತ್ತು ಜನಕ್ಕೆ ನಿನ್ನಿಂದ ಉಪಯೋಗವಾಗುವಂತಹ ಕೆಲಸ ಮಾಡು. ಮದುವೇನೇ ಬಾಳಿನ ಗುರಿಯಲ್ಲ. ಆದ್ರೆ ಒಂಟಿತನ ನೀಗುವುದಕ್ಕೆ 'ಸಂಗಾತಿ'ಯ ಅಗತ್ಯ ಇದೇಂತ ಅನ್ನಿಸಿದಾಗ, ನಿನ್ನ ಹಿಂದಿನ ಕಥೆ ಕೇಳಿಯೂ ನಿನ್ನನ್ನು ಕ್ಷಮಿಸಿ. ಕೈ ಹಿಡಿಯಲು ಬಯಸುವ ಉದಾರ ಮನಸ್ಸಿನ ವ್ಯಕ್ತಿಯ ಕೈಹಿಡಿ."

"ಮಮ್ಮಿ, ಹಿಂದೆಲ್ಲಾ ನಾನು ನಿನಗೆ ಅದೆಷ್ಟು ತೊಂದ್ರೆ ಕೊಡ್ತಿದ್ದೆ ? ಡ್ಯಾಡಿ ಜೊತೆ ಸೇರಿಕೊಂಡು, ನಿನಗೆ ಅವಮಾನ ಮಾಡಿ, ಆಡಿಕೊಂಡು ನಗ್ತಿದ್ದೆ. ಆದ್ರೆ ನೀನು ದೇವತೆ, ನನ್ನನ್ನು ನೋಡಿ ನಗುವ ಅವಕಾಶ ಸಿಕ್ಕಿದ್ರೂ, ನನ್ನ ತಪ್ಪನ್ನೆಲ್ಲಾ ಕ್ಷಮಿಸುವಷ್ಟು ಔದಾರ್ಯ ತೋರಿಸ್ತಿದ್ದೀಯ"

"ಸಂಬಂಧ ಅನ್ನುವುದು ನೂಲಿನ ಎಳೆಯಲ್ಲಮ್ಮ. ಅದೊಂದು ರೀತಿ ಯಲ್ಲಿ ಬಿಡಿಸಲಾಗದ ಬಂಧ. ಅದರಲ್ಲೂ ತಾಯಿ-ಮಕ್ಕಳ ಸಂಬಂಧ ಬದುಕಿರು ವವರೆಗೂ ಶಾಶ್ವತವಾಗಿರೋದು. ಇನ್ನು ನೀನು ಅಳಬಾರದು. ಬದುಕನ್ನು ಸವಾಲಾಗಿ ಸ್ವೀಕರಿಸು. ಆಲೋಕ ನಿನ್ನ ಜೊತೆ ಇದ್ದಾನೆ. ಹೆಚ್ಚಿನ ಬಂಡವಾಳ ಹಾಕಕ್ಕೆ ಅಮೃತ ಸಿದ್ಧವಾಗಿದ್ದಾಳೆ"

"ಅಮ್ಮ, ಒಂದ್ಮಾತು ಹೇಳಲಾ ?"

ಮೊದಲ ಬಾರಿಗೆ ಅವಳ 'ಅಮ್ಮಾ' ಎನ್ನುವ ಕರೆ ಕೇಳಿ ಮಂಜುಳೆಯ ಹೃದಯ ಪುಳಕಿತವಾಯಿತು.

"ಹೇಳಮ್ಮ"

"ಆದಷ್ಟು ಬೇಗ 'ಸಿರಿ'ಗೆ ಮದುವೆ ಮಾಡಮ್ಮ. ಈ ಮನೆಯಲ್ಲಿ ನಗು, ಸಂಭ್ರಮ ಕಂಡು ತುಂಬಾ ದಿನಗಳಾಗಿವೆ. ಇಲ್ಲಿ ಎಲ್ಲಿ ನೋಡಿದರೂ ನಮ್ಮ ನೋವು, ನಿಟ್ಟುಸಿರುಗಳೇ ತುಂಬಿವೆಯೇನೋ ಅನ್ನಿಸುತ್ತದೆ. ಗೌರವ್ ಮದುವೆಯಾದ ಮೇಲೆ ಹೆಚ್ಚಿನ ಓದು ಓದುವುದಕ್ಕೆ ಅಮೇರಿಕಾಕ್ಕೆ ಹೋಗಲಿ. ಆದರೆ ಮದುವೆ ಮುಂದೆ ಹೋಗಬಾರದು...."

"ನಿಮ್ತಂದೆ ಒಪ್ಪಬೇಕಲ್ಲಾ ?"

"ಒಪ್ಪದೆ ಏನ್ಮಾಡ್ತಾರೆ? ಲಗ್ನಪತ್ರಿಕೆಯಲ್ಲಿ ತಮ್ಮ ಹೆಸರು ಇರುವು ದನ್ನು ನೋಡಿ ಪ್ರೆಸ್ಟೀಜ್ ಉಳಿಸಿಕೊಳ್ಳುವುದಕ್ಕೋಸ್ಕರವಾದ್ರೂ ಮದುವೆಗೆ ಬರ್‍ತಾರೆ. ಈ ಬಂಗಲೆಯಲ್ಲೇ ಮದುವೆ ಮಾಡೋಣ. ಸುತ್ತಲೂ ದೊಡ್ಡ ದಾಗಿ ಶಾಮಿಯಾನ ಹಾಕಿಸೋಣ."

ಮಂಜುಳ ಅವಳ ಮಾತು ಕೇಳಿ ಸಮಾಧಾನದ ಉಸಿರೆಳೆದುಕೊಂಡಳು.

ಐದು ವರ್ಷ ಉರುಳಿತು. ಲಹರಿ ತಿಂಡಿ ತಿಂದು ಕಾಫಿ ಕುಡಿದು ಪಕ್ಕ ದಲ್ಲಿದ್ದ ಮಗುವಿಗೆ ಹೇಳಿದಳು. "ಅಮಿತ್, ಅಮ್ಮ-ಅಣ್ಣ ಇವತ್ತು ಊರಿಗೆ ಹೋಗ್ತಾರೆ. ನೀನು ಅಳಬಾರದು."

"ಉಹುಂ, ನಾನು ಜಾಣ ಅಳಲ್ಲ. ಅಮ್ಮ ಅಣ್ಣ ಹೋಗಿ ಬರಲಿ, ನಾನು ನೀನು ಅಜ್ಜ ಇಲ್ಲೇ ಇರೋಣ."

ಸಿರಿ, ಗೌರವ್ ಅವನ ಮಾತು ಕೇಳಿ ನಕ್ಕರು. ಗೌರವ್ ಎಂ.ಎಸ್. ಮಾಡಲು ಅಮೇರಿಕಾಕ್ಕೆ ಹೊರಟಿದ್ದ. ಅವನ ಜೊತೆ ಸಿರಿಯೂ ಹೊರಟಿ ದ್ದಳು. ಪುಟ್ಟ ಅಮಿತ್ ಮೊಡ್ಡಮ್ಮ, ಅಜ್ಜಿಯರ ಜೊತೆ ಇಂಡಿಯಾದಲ್ಲೇ ಉಳಿಯುವವನಿದ್ದ.

"ನನ್ನ ಎಂ.ಎಸ್. ಮುಗಿಯುತ್ತಲೂ ನಾನು ಇಲ್ಲಿಗೇ ಬಂದು 'ನರ್ಸಿಂಗ್ ಹೋಂ' ಓಪನ್ ಮಾಡ್ತೀನೆ" ಎಂದಿದ್ದ ಗೌರವ್.

ಸಿರಿ, ಗೌರವ್ ಹೊರಗೆ ಹೊರಟರು. ಅಂದು ರಾತ್ರಿಯೇ ಅವರು ಹೊರಡಬೇಕಿತ್ತು. ಲಹರಿ ಅಲೋಕ್‌ಗೆ ಫೋನ್ ಮಾಡಿದಳು.

"ಅಲೋಕ್, ನಾನಿವತ್ತು ಸೆಂಟರ್‌ಗೆ ಬರಲ್ಲ. ನೀನು ಅಲ್ಲಿಗೆ ಹೋಗುವುದಕ್ಕೆ ಮೊದಲು ಇಲ್ಲಿಗೆ ಬಾ"

"ನಾನೂ ಇವತ್ತು ಬೆಳಗ್ಗೆ ಹೋಗ್ತಿಲ್ಲ. ಜೀವನ್‌ಗೆ ಫೋನ್ ಮಾಡಿ ಹೋಗಕ್ಕೆ ಹೇಳಿಬಿಡು"

"ನೀನು ಸಾಯಂಕಾಲ ಹೋಗಕ್ಕೆ ಮುಂಚೆ ಬಾ. ಸಿರಿ ಗೌರವ್ ಇವತ್ತು ರಾತ್ರಿ ಹೊರಡ್ತಿದ್ದಾರೆ.

"ಓಕೆ, ಅಮಿತ್ ಹೇಗಿದ್ದಾನೆ ?"

"ಚೆನ್ನಾಗಿದ್ದಾನೆ. ಅಮ್ಮ-ಅಣ್ಣನ ಜೊತೆ ಹೋಗಲ್ಲ ಅಂತಿದ್ದಾನೆ"

"ಅಮ್ಮನಿಗಿಂತ ಚೆನ್ನಾಗಿ ನೋಡಿಕೊಳ್ಳುವ ದೊಡ್ಡಮ್ಮ ಇರುವಾಗ ಅಮ್ಮ ಯಾಕೆ ಬೇಕು ಹೇಳು ?"

ಲಹರಿ ತೃಪ್ತಿಯಿಂದ ನಕ್ಕಳು. ಎದುರಿಗೆ ತಿಂಡಿ ತಿನ್ನುತ್ತಾ ಕುಳಿತಿದ್ದ ಮಂಜುಳ ಅವಳತ್ತ ಬೆರಗಿನಿಂದ ನೋಡಿದಳು. ಲಹರಿ ತುಂಬಾ ಬದಲಾಗಿದ್ದಳು. ಒಂದು ಪುಟ್ಟ ಜಡೆ ಹೆಣೆದುಕೊಂಡು, ಹಣೆಯಲ್ಲೊಂದು ಬಿಂದಿ ಇಟ್ಟಿದ್ದಳು. ಪಿಂಕ್ ಬಣ್ಣದ ಚೂಡಿದಾರ್. ಅವಳ ಬಣ್ಣಕ್ಕೆ ಒಪ್ಪಿತು. ಈಗವಳು ಪೌಡರ್ ಕೂಡ ಹಚ್ಚುತ್ತಿರಲಿಲ್ಲ. ಅವಳ ಪ್ರಪಂಚವನ್ನು ಈಗ ಸಂಪೂರ್ಣವಾಗಿ ಅಮಿತ್ ಆಕ್ರಮಿಸಿದ್ದ.

ಅಲೋಕ್ ಜೊತೆ ಕೆಲಸ ಮಾಡಲು ಆರಂಭಿಸಿ ನಾಲ್ಕು ವರ್ಷಗಳಾಗಿದ್ದವು. ಅವಳ ಸ್ವಭಾವದಲ್ಲೂ ಸಾಕಷ್ಟು ಬದಲಾವಣೆಯಾಗಿತ್ತು. ಒಂದು ರೀತಿಯ ಗಾಂಭೀರ್ಯ ಅವಳ ಮುಖದಲ್ಲಿ ಮನೆ ಮಾಡಿತ್ತು. ಅವಳೀಗ ಅಲೋಕನ ಜೊತೆ ಹೊಸ ಬಿಸಿನೆಸ್ ಆರಂಭ ಮಾಡುವ ಯೋಚನೆಯಲ್ಲಿದ್ದಳು.

ಅಂದು ಸಾಯಂಕಾಲ ಅಲೋಕ ಸಿಹಿ ಹಿಡಿದುಕೊಂಡು ಬಂದ.

"ಏನೋ ವಿಶೇಷ ? ಸಿಹಿ ಹಂಚ್ತಿದ್ದೀಯಲ್ಲಾ ?"

"ನನ್ನ ಮದುವೆ ಸೆಟ್ಲ್ ಆಯ್ತು"

"ಅಭಿನಂದನೆಗಳು. ಹುಡುಗಿ ಏನ್ಮಾಡ್ತಿದ್ದಾಳೆ ?"

"ಬಿ.ಎಸ್‌ಸಿ. ಮಾಡಿ ಮನೆಯಲ್ಲಿದ್ದಾಳೆ. ಡ್ಯಾಡಿ 'ಹುಡುಗಿಗೆ

ಇಷ್ಟವಿದ್ರೆ ಮುಂದೆ ಓದಿ ಕೆಲಸಕ್ಕೆ ಸೇರಲಿ' ಅಂದ್ರು. ಆದ್ರೆ ಅಮ್ಮ ಒಪ್ಪಲಿಲ್ಲ. 'ನಮಗೆ ಕೆಲಸದಲ್ಲಿ ಇಲ್ಲದೇ ಇರುವ ಸೊಸೆ ಬೇಕು, ಅವಳು ಕೆಲಸಕ್ಕೆ ಸೇರದಿದ್ರೆ ಮಾತ್ರ ನಾನು ನಮ್ಮನೆ ಸೊಸೆ ಮಾಡಿಕೊಳ್ತೀನೆ' ಅಂತ ಹೇಳಿದ್ರು"

ಆ ನಿರ್ಧಾರದ ಹಿನ್ನಲೆ ಅರಿತಿದ್ದ ಎಲ್ಲರ ಮುಖದಲ್ಲೂ ನಗೆ ತೇಲಿತು. ಅಲೋಕ ಹೊರಟ. ಸಿರಿ, ಗೌರವ್ ಮಗನ ಜೊತೆ ರೂಮು ಸೇರಿದರು. ಫೋನ್ ರಿಂಗಾಯಿತು. ಲಹರಿ ರಿಸೀವ್ ಮಾಡಿದಳು.

"ಡ್ಯಾಡಿ ಫೋನ್. ಈದಿನ ಅವರಿಗೆ ಏರ್‌ಪೋರ್ಟ್‌ಗೆ ಬರಕ್ಕಾಗಲ್ಲ ವಂತೆ, ತುಂಬಾ ಕೆಲಸವಿದೆಯುಂತೆ"

ಮಂಜುಳೆಯ ಮುಖದಲ್ಲಿ ನಗೆ ತೇಲಿತು. ನಗೆ ನೂರು ಅರ್ಥ ಹೇಳಿದವು. ಅವಳ ತಲೆಯಲ್ಲಿ ನೂರೆಂಟು ಪ್ರಶ್ನೆಗಳು ಮೂಡಿದವು. 'ಯಾರು ಬದಲಾದರೂ ತನ್ನ ಗಂಡ ಬದಲಾಗಲಾರನೇನೋ' ಅನ್ನಿಸಿತು. ಅರವತ್ತರ ಆಯಸಿನಲ್ಲಿದ್ದರೂ ಹೆಣ್ಣುಮಕ್ಕಳ ಗೀಳು ತಪ್ಪಿರಲಿಲ್ಲ. ಅಲಂಕಾರಕ್ಕೂ ಮಹತ್ವ ಹೆಚ್ಚಾಗಿತ್ತು. ಮನೆಯಲ್ಲಿ ಯಾರ ಮೇಲೂ ಪ್ರೀತಿ ಅಭಿಮಾನಗಳಿರಲಿಲ್ಲ. ಅಪರೂಪದ ಮಗು 'ಅವಿತ್' ಕೂಡ ಅವನಿಗೆ ಬೇಕಿರಲಿಲ್ಲ. ಲಹರಿ ಮಗುವಿನ ಕೈಯಿಂದ 'ತಾತ' ಎಂದು ಕೂಗಿಸಿದ ಕೆಂದು ಲಹರಿಯ ಜೊತೆ ಮಾತು ಆಡುವುದನ್ನೇ ನಿಲ್ಲಿಸಿದ್ದನಾತ. ತಾಯಿಯ ಮನಸ್ಸನ್ನು ಅರಿತವಳಂತೆ ಲಹರಿ ಅವಳ ಭುಜ ಹಿಡಿದು ಹೇಳಿದಳು.

"ಡ್ಯಾಡಿ ಬರಲ್ಲಾಂತ ಚಿಂತಿಸಬೇಡ. ಅವರು ಬದಲಾಗುವಂತಿದ್ದರೆ ಎಂದೋ ಬದಲಾಗ್ತಿದ್ದರು. ಕೈಕಾಲು ಗಟ್ಟಿಯಿರುವವರೆಗೂ ಹೊರಗೆ ಹೋಗ್ತಾರೆ. ಆಮೇಲೆ ಯಥಾ ಪ್ರಕಾರ ನಿನ್ನನ್ನೇ ಆಶ್ರಯಿಸ್ತಾರೆ"

'ಈಗವರು ಬದಲಾಗಿ ಏನು ಪ್ರಯೋಜನ ? ಅವರು ನಾನು ಹೆಸರಿಗೆ ಮಾತ್ರ ದಂಪತಿಗಳು. ಅವರಿಲ್ಲದೆ ಬದುಕುವುದು ಅಭ್ಯಾಸವಾಗಿಬಿಟ್ಟಿದೆ. ಇನ್ನು ಉಳಿದಿರುವುದು ನಿಟ್ಟುಸಿರಿನ ನೆನಪು ಮಾತ್ರ' ಎಂದುಕೊಂಡಳು ಮಂಜುಳ. ಲಹರಿಯ ಬೆರಳುಗಳು ತಾಯಿಯ ಭುಜ ಸವರಿದವು.

# ನಮ್ಮ ಜನಪ್ರಿಯ ಕಾದಂಬರಿಗಳು

| | | |
|---|---|---|
| ಶಾಂತಲಾ | ಕೆ.ವಿ. ಅಯ್ಯರ್ | 100-00 |
| ಲೀನಾ | " | 15-00 |
| ಮಧುರ ವೀಣಾ ಲೋಲ | ಹೆಚ್.ಜಿ. ರಾಧಾದೇವಿ | 50-00 |
| ಬೀಸಿ ಬಂದ ತಂಗಾಳಿ | " | 50-00 |
| ಚೈತ್ರ ರಾಗದ ಹಾಡು | " | 45-00 |
| ಹೇಮಂತದ ಮಧುಪಾನ | " | 40-00 |
| ಲಾವಣ್ಯ ಲಹರಿ | " | 40-00 |
| ಬಣ್ಣದ ರಂಗೋಲಿ | " | 35-00 |
| ಸ್ವಪ್ನಸಿರಿ ಕೈಗೆ ಬಂತು | " | 35-00 |
| ಒಲವಿನ ಪೂಜೆ | " | 35-00 |
| ಆಕಾಶದಿಂದ ಹೂಮಳೆ | " | 35-00 |
| ಮನ ನಿನ್ನ ಬಯಸಿತ್ತು | " | 35-00 |
| ನೂರು ದೀಪ ಬೆಳಗಿತು | " | 35-00 |
| ಸುಂದರ ಸುಮಧುರ | " | 35-00 |
| ಪಡೆದಷ್ಟೂ ಭಾಗ್ಯ | " | 35-00 |
| ಜೋಡಿ ಹಕ್ಕಿ ಹಾರಿತು | " | 30-00 |
| ರಾಗಜ್ವಾಲೆ | " | 30-00 |
| ಕಲ್ಲರಳಿ ಹೂವಾಯ್ತು | " | 30-00 |
| ಬೆಳಕಾಗಿ ಬಂದವಳು | " | 28-00 |
| ಕನಸಿನ ಕಿರೀಟ | " | 28-00 |
| ಬಯಸಿದ ಸಿರಿ ಸಿಕ್ಕಿತು | " | 28-00 |
| ಬಾಳಿನ ಭಾಗ್ಯ ನಿಧಿ | " | 32-00 |
| ವಿಜಯ ಧ್ವನಿ | " | 28-00 |
| ಹಾಲಿನಲ್ಲಿ ಚಂದ್ರಬಿಂಬ | " | 24-00 |
| ಮನೆ ಬೆಳಕಾಯ್ತು | " | 26-00 |
| ನೈದಿಲೆ ನಕ್ಕಿತು | " | 30-00 |

| | | |
|---|---|---|
| ಸುರಪುಷ್ಪ ಅರಳಿತು | ಹೆಚ್.ಜಿ. ರಾಧಾದೇವಿ | 26-00 |
| ಕಾಂಚನಾ ಧಾರಾ | ” | 25-00 |
| ಹಾಲು ಕೊಳದ ಹಂಸ | ” | 16-00 |
| ಶುಭ ವಸಂತ | ” | 20-00 |
| ಮನೋಲಹರಿ | ಸಿ.ಎನ್. ಮುಕ್ತಾ | 50-00 |
| ಮನಸು ಮಂದಾರ | ” | 45-00 |
| ಜೀವ ಜೀವದ ನಂಟು | ” | 50-00 |
| ಸುಪ್ತ ಸ್ವರಗಳು | ” | 40-00 |
| ಚಿತ್ತಾರ-ದರ್ಪಣ | ” | 40-00 |
| ಭೂಮಿ ಕೊರೆದ ಬೇರು | ” | 40-00 |
| ಸಂಸಾರದಲ್ಲಿ ಸ.....ರಿ....ಗ.....ಮ | ” | 30-00 |
| ಅನುರಾಗ ತಂದ ಅನುಬಂಧ | ” | 45-00 |
| ಅಪರಿಚಿತರು | ” | 35-00 |
| ಮೂರು ಮನಸು ನೂರು ಕನಸು | ” | 35-00 |
| ಅಂತರಂಗದಾ ಮೃದಂಗ | ” | 25-00 |
| ಅಸ್ವೀಕೃತರು | ” | 25-00 |
| ಇದುವೇ ಜೀವ ಇದು ಜೀವನ | ” | 25-00 |
| ಚಿಗುರಿದ ಕನಸುಗಳು | ” | 30-00 |
| ಶೃತಿ ಸೇರಿದ ಹಾಡು | ” | 30-00 |
| ಅಪರಾಜಿತೆ | ” | 25-00 |
| ಪರಿವಾದಿನಿ | ” | 26-00 |
| ನನಸಾಗದ ಕನಸುಗಳು | ” | 15-00 |
| ಗೆಲುವಿನ ಹೆಜ್ಜೆ | ” | 15-00 |
| ಬದುಕಿನ ಬಲೆಯಲ್ಲಿ | ” | 15-00 |
| ಬಿಡಿಸಲಾಗದ ಬಂಧ | ” | 24-00 |
| ಹೊಸ ರಾಗ | ಉಷಾ ನವರತ್ನರಾಮ್ | 40-00 |
| ಮೊದಲು ಮಾನವನಾಗು | ” | 45-00 |
| ಕ್ಷಮೆಯಿರಲಿ ತಂದೆ | ” | 35-00 |
| ನಮ್ಮ ಮನೆ ಬೆಳಕು | ” | 30-00 |
| ಶುಭ ಹಾರೈಕೆ | ” | 30-00 |

| | | |
|---|---|---|
| ಕರುಣಾಳು ಬಾ ಬೆಳಕೆ | ಉಷಾ ನವರತ್ನರಾವ್ | 30-00 |
| ದಿಸೆಗಳು ನೂರಾರು | ” | 18-00 |
| ಬಂತು ಶೃಂಗಾರ ಮಾಸ | ವಿಜಯಶ್ರೀ | 50-00 |
| ಅಸೀಮ ಕಿರಣ | ” | 50-00 |
| ಸಂಗಾತಿ | ಎಂ.ಸಿ. ಪದ್ಮಾ | 26-00 |
| ಪರಕೀಯರು | ” | 15-00 |
| ಕಪ್ಪು ಕೊಳ | ಅಶ್ವಿನಿ | 16-00 |
| ಬಿಂದಿಯಾ | ” | 16-00 |
| ಪ್ರೇಮ ಸೋಪಾನ | ” | 12-00 |
| ಬಾಲ್ಯ ಸಖಿ | ” | 10-00 |
| ಮುಂಜಾನೆಯ ಮಂಜು | ಈಚನೂರು ಜಯಲಕ್ಷ್ಮಿ | 20-00 |
| ಹಿಮ ತೊಳೆದ ಹೂ | ” | 15-00 |
| ಚಿತ್ತಪಾವನ | ” | 10-00 |
| ಬಾಳಿಗೆ ನೀನಾಗು ಆಸರೆ | ಪದ್ಮಜಾ ಸುಂದರೇಶ್ | 35-00 |
| ಜೀವನ ಸಂಘರ್ಷ | ” | 50-00 |
| ನೂರು ನೆನಪು ಮನದಲ್ಲಿ | ” | 30-00 |
| ಅಂಟಿದ ಅಪರಂಜಿ | ಡಾ|| ಶಿವರಾಮ ಕಾರಂತ | 20-00 |
| ಕುಡಿಯರ ಕೂಸು | ” | 30-00 |
| ಇದ್ದರೂ ಚಿಂತೆ | ” | 20-00 |
| ಚಂದನದ ಗೊಂಬೆ | ತ.ರಾ.ಸು. | 15-00 |
| ರಾಜ್ಯಪ್ರಾಪ್ತಿ | ಮ.ನ. ಮೂರ್ತಿ | 10-00 |
| ಕಂಕಣ ಪರಿಣಯ | ದಾಶರಥಿ ದೀಕ್ಷಿತ್ | 25-00 |

ನಿಮಗೆ ಬೇಕಾದ ಕನ್ನಡ ಪುಸ್ತಕಗಳಿಗೆ ನಮ್ಮಲ್ಲಿಗೆ ಬನ್ನಿರಿ
ಅಥವಾ ಬರೆಯಿರಿ

ಗೀತಾ ಏಜನ್ಸೀಸ್
(ಸಗಟು ಪುಸ್ತಕ ವ್ಯಾಪಾರಿಗಳು)
ಬಳೇಪೇಟೆ ಚೌಕ, ಬೆಂಗಳೂರು-53 ✆ 2864226

## ಬರಲಿರುವ ಕಾದಂಬರಿಗಳು

| | |
|---|---|
| ನಿನಗಾಗಿ ನಾನೋಡಿ ಬಂದೆ ! | ಉಷಾ ನವರತ್ನರಾಮ್ |
| ತಲ್ಲಣಿಸದಿರು ಮನವೇ | |
| ಶ್ರಾವಣ ಸಿರಿಸಂಜೆ | ಹೆಚ್.ಜಿ. ರಾಧಾದೇವಿ |
| ರಾಗ ರಂಗೋಲಿ | ಸಿ.ಎನ್. ಮುಕ್ತಾ |
| ಜನುಮದ ಬಂಧ | ವಿಜಯಶ್ರೀ |

ರಾಜಲಕ್ಷ್ಮಿ ಪ್ರಕಾಶನ
ಬಳೇಪೇಟೆ ಚೌಕ, ಬೆಂಗಳೂರು–560 053

# ನಮ್ಮಲ್ಲಿ ದೊರೆಯುವ ಕನ್ನಡ ಪುಸ್ತಕಗಳು

ಕಾದಂಬರಿಗಳು —— (ಸಾಮಾಜಿಕ, ಐತಿಹಾಸಿಕ, ಪೌರಾಣಿಕ)
ಸಣ್ಣ ಕಥೆಗಳು
ಕವನ ಸಂಗ್ರಹಗಳು
ನಾಟಕಗಳು
ಆಧ್ಯಾತ್ಮಿಕ ಮತ್ತು ಪೌರಾಣಿಕ ಗ್ರಂಥಗಳು
ವಿಶ್ವವಿದ್ಯಾಲಯದ ಪ್ರಕಟಣೆಗಳು
ಸಂಗೀತ ಪುಸ್ತಕಗಳು
ಕಿರು ಸಾಹಿತ್ಯ
ಪ್ರಬಂಧ ಹಾಗೂ ಪ್ರೌಢಗ್ರಂಥಗಳು
ಜ್ಯೋತಿಷ್ಯ ಶಾಸ್ತ್ರಗ್ರಂಥಗಳು
ವೈಜ್ಞಾನಿಕ ಪುಸ್ತಕಗಳು
*ಹಾಗೂ ಇತರ ಪುಸ್ತಕಗಳಿಗಾಗಿ ಒಮ್ಮೆ ಭೇಟಿಕೊಡಿ*

*ಅಥವಾ*

*ಪುಸ್ತಕಗಳ ಪಟ್ಟಿಗಾಗಿ ಇಂದೇ ಬರೆಯಿರಿ*

ಗೀತಾ ಏಜೆನ್ಸೀಸ್